ತಾ ಗಿನಿನೆ ದಿನ ಪ್ರಧಾನ ಅಮಾತ್ಯರೂ ಸರ್ ಸಾಮುವೇಲ್ ಹೋರರೂ ಖಾಸಗಿ ಮಾತುಕತೆಗಳನ್ನು ನಡೆಸಿದರು. ಬೇಗನೇ ಜರಗಲಿರುವ ಪರಿಷತ್ತು ಮತ್ತು ಮುಂದಿನ ರಾಜ್ಯಧಾರ ಸೂತ್ರಗಳೇ ಅವರ ಸಂಧಾಷಣೆಯ ತಾತ್ಪರ್ಯ; ತಿಗೀಗ ಬಂದ ವಾರ್ತೆಯಿಂದಾಗಿ, ರೌಂಡ್‌ಟೇಬಲ್ ಪರಿಷತ್ತಿನ ಪ್ರತಿನಿಧಿಗಳ ಹೆಸರುಗಳು ತೀಲ್ಪುದಲ್ಲೇ ಪ್ರಕಟವಾಗುವುದೆಂದೂ ಈ ತಿಂಗಳಾತ್ಯದೊಳಗೆ ಪ್ರತಿನಿಧಿಗಳು ಇಹಜನ್ನು ಚಕ್ಷಲಿಯರುವರೆಂದೂ ತಿಳಿದುಬಂದಿದೆ.

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.



ಮಿತವಿರೋಧಿಗಳಿಗೆ ಉಪದೇಶ

ಕ್ರೈಸ್ತ ಮತದೋಧಕರು ನಮ್ಮ ದೇಶದಲ್ಲಿ ಹಿಂದೂ ಮುಸ್ಲಿಮರನ್ನು ಮತಾಂತರಗೊಳಿಸಲು ಪ್ರಯತ್ನ ಪಡುವ ರಷ್ಟೆ ಅವರಿಗೆ ರೆವರೆಂಡ್ ಪೋಪ್ಲಿಯೆಂಬವರು ಹೀಗೆ ಉಪದೇಶ ನೀಡಿದರು. "ಹಿಂದೀಯರೆಲ್ಲರೂ ಒಂದೇ ಜನಾಂಗವೆಂಬುದನ್ನು ತಿಳಿದು, ಮಿಷನರಿಗಳಿಗೆ ಅದರಲ್ಲಿ ಯಾವ ಸ್ಥಾನವೆಂಬುದನ್ನು ಅವರು ಗೊತ್ತುಮಾಡಿಕೊಂಡರೆ, ತಾವು ಪರದೇಶೀಯರು ಎಂಬುದನ್ನೂ ಪರಕೀಯ ಧಾವನೆ ವ್ಯವಹಾರಗಳನ್ನೂ ಮರೆತರೆ ಮಾತ್ರ ಇಲ್ಲಿ ಕ್ರೈಸ್ತಮತವನ್ನು ಬೋಧಿಸುವುದು ಸುಲಭ. ನಮ್ಮ ಮತವೇ ಶ್ರೇಷ್ಠವೆಂದು ಹೇಳದೆ, ಆಳುವವರ ಮತವೇ ನಮ್ಮದೆಂದು ನಾವೂ ಆಳತೊಡಗದೆ, ಕ್ರೈಸ್ತ ಸದ್ಗುಣಗಳನ್ನು ರೂಢಿಸುವುದಕ್ಕೆಜ್ಜೆಹಾಕಿದರೆ ನಾವು ಜಯಶೀಲರೆಂದೇ ಧಾವನ ಬೇಕು. ನಮ್ಮ ಮತವು ಶ್ರೇಷ್ಠವೆಂದು ವೃಥಾ ಕೂಚ್ಚಿಕೊಳ್ಳುವುದಕ್ಕಿಂತ ಪ್ರತ್ಯಕ್ಷವಾಗಿ ನಾವು ವರ್ತಿಸುವುದುತ್ತಮ. ಇತರ ಧರ್ಮಗಳನ್ನು ಬೈದು ಫಲವಿಲ್ಲ. ಬೋಧಿಸುವುದಕ್ಕಿಂತಲೂ ಸೇವೆ ಮಾಡುವುದು ನಮ್ಮ ಸದ್ಗುಣವಾಗಿರಬೇಕು. ನಿಷ್ಕಾಮ ಕರ್ಮದಿಂದಲೇ ಕ್ರೈಸ್ತ ಧರ್ಮತತ್ವಗಳನ್ನು ಬೋಧಿಸುವುದು ಸುಲಭ. ಮತದ ಶ್ರೇಷ್ಠತೆಗಿಂತ ಮತವನ್ನೆ ಅಡರಿಸೋಣ. ಎಲ್ಲ ಸಮಾಜಗಳನ್ನು ಒಂದಾಗಿಸಲು ಯೆಹ್ಸಿಸ ಹೆಳ್ಳಿಗಳ ಉದ್ಧಾರಕ್ಕೆ ತೊಡಗುವುದೇ ನಮ್ಮ ಸದ್ಯ ಕರ್ತವ್ಯ." ಜಾತ್ರೆ, ಸಂತೆಕಟ್ಟೆಗಳ ಸಂದರ್ಭದಲ್ಲಿ ಮಿಷನರಿಗಳು ಇದನ್ನು ನೆನಪಿನಲ್ಲಿಟ್ಟುಕೊಂಡಲ್ಲಿ ಅವರಿಗೂ ಕೀರ್ತಿಕೃತಾರ್ಥತೆಗಳು ಒದಗಿದಿರವು. ಇದು ಸಾಧ್ಯವಾಗದಿದ್ದಲ್ಲಿ ಅವರಿಗೆ ಸ್ವರಾಜ್ಯದಲ್ಲಿ ಸ್ಥಾನವಿಲ್ಲವೆಂದು ಮಹಾತ್ಮಾಜೀಯವರು ಎಂದಂತೆಯೆ ರೆವರೆಂಡ್ ಪೋಪ್ಲಿಯವರೂ ಬರೆದಿರುವರು.

ಕ್ರಾಂತಿಕಾರಕರ ಬೆಂಬಲವೆಲ್ಲಿಂದ?

ಕೊಂಗ್ರೆಸ್ ಪಕ್ಷದವರು ಯಾವಾಗಲೂ ಸರಕಾರಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆಯಲು ಜನರಿಗೆ ಬೋಧಿಸಿದುದರಿಂದಲೇ ಕ್ರಾಂತಿಕಾರರ ಹಿಂಸೆಗಳು ಹೊರಟುವು ಎಂದು ಆಗಾಗ ಸಾರುವವರಿಗೆ, 'ಲೀಡರ್' ಪತ್ರಿಕೆ ಕೇಳುತ್ತಿದೆ:– ಕೊಂಗ್ರೆಸಿನ ತತ್ವಗಳು ಸರ್ವತ್ರವೂ ಹರಡಿರುವಾಗ, ಬಂಗಾಳದಲ್ಲಿ ಮಾತ್ರವೆ ಕ್ರಾಂತಿಕಾರರ ಹಾವಳಿಯುಂಟಾಗಲು ಕಾರಣ ಗಳೇನು? ಬೇರೆ ಕಾರಣಗಳಿಂದ ಎಂದೇ ಇದರಿಂದ ಸ್ಪಷ್ಟವಾಗುವುದಿಲ್ಲವೆ? ಅಹಿಂಸೆಯೇ ಪ್ರಾಣವೆಂದು ನಂಬಿರುವ ಕೊಂಗ್ರೆಸ್ ಪಕ್ಷದವರಾಗಲಿ, ಅವರ ಮುಖಂಡರಾಗಲಿ ಇಂತಹ ಹಿಂಸಾತ್ಮಕ ರನ್ನು ಜರೆಯದಿರುವ ನಿಂದಿಸದಿರುವ ಇಲ್ಲ. ಇವೇ ಹಲವು ವರ್ಷಗಳಿಂದ ಬೊಂಬಾಯಿ ನಗರವು ಕೊಂಗ್ರೆಸ್ ಚಳವಳದ ಪ್ರಾಮುಖ್ಯಕೇಂದ್ರವಾಗಿದೆ; ಆದರೂ ಅಲ್ಲೀಕೆ ರಾಜಕೀಯ ಹಿಂಸೆಗಳುಂಟಾಗುವ ಹಾಗೆ ಕ್ರಾಂತಿಕಾರರು ತಲೆ ಎತ್ತುದಿಲ್ಲ!– ಎಲ್ಲ ಹಾವಳಿಗೂ ಕೊಂಗ್ರೆಸೇ ಕಾರಣವೆನ್ನುವವರು, ಇತರ ಕಾರಣಗಳನ್ನು ಹುಡುಕಲು ಉಪಾಯವಿಲ್ಲದವರೇ? ಅಥವಾ ಮೂಢರೇ?

ವಿಷಪ್ರಯೋಗದ ಗುಟ್ಟು.

'ಗಾಂಧೀಜೀಯವರ ಉಪವಾಸದಿಂದ ಅಸ್ಪೃಶ್ಯರ ರಾಜಕೀಯ ಅಭ್ಯುದಯವು ಕೊನೆಗಾಣುವಂತಾಗಿದೆ, ಅಯ್ಯೋ!' ಎಂದು 'ಬಂಗಾಳದ ಅಸ್ಪೃಶ್ಯನಮಾಜದ ನುಂದಾಳುಗಳು' ಎಂಬವರು ಬರೆದರೆಂದು ಪ್ರಕಟವಾದ ಪತ್ರವೊಂದು ಸ್ವೇಚ್ಛ್ಸ್‌ಮೇನ್ ಪತ್ರಿಕೆಯಲ್ಲಿದೆ! ಆದರೆ, ಗಾಂಧೀಜೀಯವರು ಅಸ್ಪೃಶ್ಯರಿಗಾಗಿ ಮುಖ್ಯಮಂತ್ರಿಗಳು ಕೊಟ್ಟ ಎರ್ಡೊನ್ನೆ ಅಸ್ಪೃಶ್ಯರಿಗಾಗಿ ತಿದ್ದಿಕೊಂಡಿರುವ ಬಗೆ ತಿಳಿದು ಧಯಂಕರವಾಗಿ ರೇಗಿದ ಈ ಮುಖಂಡರೆಂಬವರ ಹೆಸರುಗಳೇ ಪ್ರಕಟವಾಗಿಲ್ಲ. ಮುಖ್ಯಮಂತ್ರಿಗಳ ಎಷಾರ್ಡಿನಂತಾದಲ್ಲಿ ಅಸ್ಪೃಶ್ಯರ ಸಂಖ್ಯೆಯು ಕೌನ್ಸಿಲುಗಳಲ್ಲಿ ಕಡಿಮೆಯಾಗಿದ್ದು, ಅವರು ಇತರ ಹಿಂದೂಗಳಿಂದ ದೇರೆಯಾಗಿದೆ ಉಳಿಯುತ್ತಿದ್ದರು; ಈಗ ಅವರ ಸಂಖ್ಯೆ ಹಚ್ಚಾಗುವುದಾದರೂ, ಅವರು ಸಮಸ್ತರ ಮಿತ್ರರಾಗಿಯೇ ಇರಬೇಕಾಗುವುದು,–ಎಂದೀ ವಿಷಯವನ್ನು ತಿಳಿದು, ಎಂಗ್ಲೊ ಇಂಡಿಯನ್ ಪತ್ರಿಕೆಗಳು ಕೆಲವು ಅಸ್ಪೃಶ್ಯ ಲೀಡರುಗಳನ್ನು ಅಗತ್ಯ ತೋರಿದಂತೆ ಸೃಷ್ಟಿಸಿರಬಹುದೆಂದೇ ತೋರುತ್ತಿದೆ

ಅಲ್ಪ ಸಂಖ್ಯಾತರು

ಪಾರ್ಲಿಮೆಂಟ್ ರಾಜಕೀಯಾಂತರ ಜಸ್ಟಿಸ್ ಪಕ್ಷದ ಮುಖಂಡನವು ಇನ್ನೂ ನಿಶ್ಚಿತವಾಗಿಲ್ಲ. ಅವಿಚ್ಛಾರರೇ ಮುಖಂಡರಾಗಬೇಕೆಂದು ಪ್ರಯತ್ನಗಳು ಸಾಗುತ್ತಿವೆ. ಆದ ಕ್ಕಾಗಿ ತೆಗಾ ಮಂತ್ರಿಕಳುದಿಂದ ದಿವಾನ ಬಹದ್ದೂರ ಮುನಿ ಸಾಮಿ ನಾಳುಡುರವರಲ್ಲಿ ವಿಶ್ವಸವಿಲ್ಲವೆಂದು ಶರಾಯಿಸ ಬೇಕೆಂದೂ ಶ್ರೀ ರಾಜನ್ ಅಥವಾ ದೊಡ್ಡಿಲಿಯ, ರಾಜರೇ ಮುಖಂಡರಾಗಬೇಕೆಂದೂ ಒಂದು ಪಕ್ಷವೂ, ಶ್ರೀ ನಾಯಿಡುರ ವರೇ ಮುಖಂಡರಾಗಿರಬೇಕೆಂದು ಮತ್ತೊಂದು ಪಕ್ಷವೂ ಸಾಧಿಸಿ ಬಹಳ ರಗಳೆಗಿಟ್ಟಿದೆ. ತಂಜಾವೂರದಲ್ಲಿ ತಾ. ೪ರಲ್ಲಿ ಸೇರಿದ ಪರಿಷತ್ತಿಗೂಬುದರಲ್ಲಿ ಇತ್ತಂಡಗಳ ವಾದವು ವಿಕಾರಿದುದರಿಂದ ಪೋಲೀಸರೂ ನುಗ್ಗಿ, ಯಾವ ಕೆಲಸವೂ ನಡೆಯದೆ ಪರಿಷತ್ತು ಪರಿಸಮಾಪ್ತಿ ಹೊಂದಿದೆ. ಹಿಂದುಳಿದ ತರಗತಿಗಳಿಗೆ ನ್ಯಾಯ ಪಾಲನೆ ಮಾಡಿಕೊಡುವುದೆಂಬ ತಪ್ಪಿನಿಂದ ಪನಗಲ್ ರಾಜರ ಕೆಳಗೆ ಉಂಟಾದ ಈ ಜಸ್ಟಿಸ್ ಪಂಗಡವು ಈಗ ಜಮೀನ್ದಾರರ ನಾಯಕತ್ವದಲ್ಲಿರಬೇಕಾಗಿ ಸಾಧಿಸುವವರಿದ್ದಾರೆ. ಪರೋಪ ಕಾರಕ್ಕೆಂದು ಹೊರಟು ಸ್ವಾರ್ಥಸಾಧನೆ ಮಾಡುವುದಕ್ಕಾದಲ್ಲಿ ಅದಕ್ಕೊಂದು ಪಂಗಡವೂ ಅಗತ್ಯವಿದೆಯೇ! ಅಂಥದನ್ನು ಜಸ್ಟಿಸ್ ಪಕ್ಷವೆಂದು 'ನ್ಯಾಯ'ದ ಹೆಸರನ್ನು ಕಡಿಸುವುದೇಕೆ?

ಹಿಂದೂ ಮುಸ್ಲಿಮರೊಳಗೆ ಒಪ್ಪಂದ

ಆಗುವ ಹಾಗೆ ಪ್ರಯತ್ನಮಾಡುವೆನೆಂದು ಮೌಲಾನಾ ಕೌಕತ್ ಅಲಿಯವರು ವೈಸರಾಯರಿಗೆ ತಿಳಿಸಿ, ಗಾಂಧೀಜೀಯ ವರನ್ನು ಬಿಡುಗಡೆಮಾಡಬೇಕೆಂದೂ, ಅಥವಾ ಅವರೊಡನೆ ಸಂಭಾಷಣೆಮಾಡಲು ತೊಡಕು ಇರಬಾರದೆಂದೂ ಅಪೇಕ್ಷೆಯಾ ಗುವಂತೆ ಪ್ರಾರ್ಥಿಸಿಕೊಂಡುದಿಲ್ಲ ವೃಥವಾಯಿತು. ಇಷ್ಟೇ ಇದ್ದಲ್ಲಿ ಮೃಥೆ ಇರಲಿಲ್ಲ. ವೈಸರಾಯರು,–"ನೀವು ನಿಮ್ಮ ಕರಾರನ್ನು ಮಾಡಿಕೊಳ್ಳಲು ಮುಂದಡಿಯಿಡುವ ಮೊದಲು ಎಲ್ಲ ಮುಸ್ಲಿಮರ ಅಭಿಪ್ರಾಯವೂ ನಿಮ್ಮ ಬೆಂಬಲಕ್ಕಿದೆಯೇ ಎಂದು ಅಖಿಲಭಾರತದ ಮುಸ್ಲಿಮ ಲೀಗಿನವರ ನಿರ್ಣಯಗ ಳನ್ನು ಓದಿ ನೋಡುವುದುತ್ತಮ" ಎಂದು ಶೌಕತ್ ಅಲಿಯವ ರಿಗೆ ತಿಳಿಸಿರುವರು. ಇದು ಅತಿ ಜೋರ್ದವಾಗಿದೆ. ಮುಸ್ಲಿ ಮರು ಒಂದಾಗಲು ಪ್ರಯತ್ನಗಳಾಗುವಾಗ, ಅವರೊಳಗೆ ಸಂದೇಹವುಂಟಾಗುವ ಹಾಗೆ ಒಕ್ಕಡೆಯ ಅರ್ಥಮಾಡಿಕೊಳ್ಳ ವವರೂ ಇರಬಹುದು. ಅನನುಕೂಲತೆಗಳನ್ನು ಮಾಡಿಕೊಡುವ ಬದಲಾಗಿ, ಈ ಉತ್ತರವು ಅನುಕೂಲತೆಗಳನ್ನು ಹೆಚ್ಚಿಸುವುದೋ ಎಂದು ಬೆದರಬೇಕಾಗಿದೆ. ಹೇಗಿದ್ದರೂ, ವಿವೇಕವಿದ್ದವರು ಒಂದಾಗದೆ ಹಿಂದುಳಿಯರು ಎಂದು ಪತ್ರಿಕೆಗಳು ಧಂವಸೆ ತೋರಿಸಿವೆ.

ಇಂಗ್ಲೆಂಡಿನ ಗೌರವ ವರ್ಧನೆಗಾಗಿ!

ಹೊಸ್ಪನರೆಂಬ ಕೋಟ್ಯಾಧೀಶರೊಬ್ಬರು ಮೃತ್ಯುಮುಖ ರಾಗುವ ಮೊದಲೇ, ಇಂಗ್ಲೆಂಡಿನಿಂದ ಹೊರದಿದ್ದು ಒಂದು ದ್ವೀಪ ದಲ್ಲಿ ವಾಸಮಾಡಿ ಅಲ್ಲಿ ಸತ್ತರು. ಕಾರಣವೇನೆಂದರೆ, ಇಂಗ್ಲೆಂಡಿನಲ್ಲಿದ್ದು ಮಡಿದರೆ, ಮರಣಾನಂತರ ವಾರಿಸ್ ಸರ್ವಿ ಫೀಟಿಗೆ ಬಹಳ ಹಣವು ಸರಕಾರಿ ಖಜಾನೆಗೆ ಸೇರುವುದೆಂದು. ಆವರ ವಿಧವೆ ಲೇಡಿ ಹೊಸ್ಪನರು ಇಂಗ್ಲಿಷ ಜನರಲ್ಲಿ ನಿಜ ದ್ವೇಗವುಂಟಾಯಿತ್ತೆಂದು, ಒಂದು ಲಕ್ಷ ಪವನನ್ನು ಇವರು ತೆತ್ತು, ಆ ಹಣದಿಂದ ಯುದ್ಧ ನನ್ನಾಹವನ್ನು ಹೆಚ್ಚಿಸಬೇಕೆಂದಿದ್ದರು. ಯುದ್ಧಮಂತ್ರಿಯವರು ಈ ಹಣವನ್ನು ತುಚ್ಛೀಕಾರ ದೃಷ್ಟಿಯಿಂದ ತಿರಸ್ಕರಿಸಿದರು. ಈಗ ಈ ಲೇಡಿಯು ಹಿಮಾ ಲಯದ ಕೈಲಾಸ ಶಿಖರವನ್ನು ವಿಮಾನ ಮೂಲಕ ದಾಟುವವ ರಿಗೆ ಕೊಡಬೇಕಾಗಿ ನಿಶ್ಚಯಿಸಿರುವಳು. ಇದಕ್ಕೆ ಕಾರಣ ವೇನು? ಹೀಗೆ ಮಾಡಿದರೆ, ಹಿಂದೀಯರ ಮನಸ್ಸಿನಲ್ಲಿ ಬ್ರಿಟಿ ಷರ ಪರಾಕ್ರಮ, ಸಾಹಸ, ಪ್ರತಾಪಗಳು ಮೂಡಿ, ಬ್ರಿಟಿಷರ ಗೌರವವು ಹೆಚ್ಚಾಗುವುದೆಂದು ಇವರ ವಿಶ್ವಾಸವಿದೆ. ನಿಜ ಗುಟ್ಟು ದೇರೆ; ಹೇಗೂ ಮಾಡಿ ಪತ್ರಿಕೆಗಳಲ್ಲಿ ಹೆಸರು ಮೆರೆ ಯಿಸಬೇಕೆಂಬ ಆಕಾಂಕ್ಷೆ!

ಬೋರ್ಡು ಕೌನ್ಸಿಲು ಮೊದಲಾದುವುಗಳಲ್ಲಿ

'ಪಾರ್ಟಿ'ಗಳೆಂಬ ಪಕ್ಷಗಳನ್ನು ನಿರ್ಮಿಸಿಕೊಂಡು, ತಮ್ಮ ತಮ್ಮ ಹಿತ ಸಾಧಿಸುವವರಿಗೆ, ಕೆಲವು ಮಾತುಗಳನ್ನು ಹೇಳಬೇಕಾಗುತ್ತಿದೆ. ಪಾರ್ಟಿಗಳಾದ ಬಳಿಕ, ಪಂಗಡಕ್ಕೆ ಸೇರುವ ಪ್ರತಿಯೊಕ್ಕೆಯ ಸ್ವಾತಂತ್ರ್ಯವು ಉಳಿಯುವುದೇ ಇಲ್ಲ. ಮೊದಲೇ ನಿಶ್ಚಿತವಾದಂತೆ, ತಲೆಯಲ್ಲಾಡಿಸುವುದೂ, ಕೈಯೆತ್ತು ವುದೂ ಎಂದಷ್ಟೆ ಖುಡ್ಡಿಗಳಿಸಿದ ಜನವನ ಪಾರ್ಟಿಗೆ ಸೇರಿದವನದು. ಹೊರಗೆ ಕೇಳಿಸುವ ಹಾಗೆ ಧಾವಣ ಮಾಡು

NOTE S

ದಸರೆ ಮುಗಿಯಿತು. ಕರ್ನಾಟಕ ಸಾಮ್ರಾಜ್ಯದಲ್ಲಿ ಪ್ರಖ್ಯಾತವಾಗಿರ್ಪ (ತಿ. ಮಜೋತ್ಸವವು ಎಷ್ಟೋ ಕಡೆ ಹುಲಿ ಕರಡಿಗಳ ವೇಷಗಳಲ್ಲೇ ಮುಗಿಯಿತು. ಇವುಗಳ ಬಾಧೆಗಂಜಿದ ಇವುಗಳೊಳಗಣ ಹೊಡೆದಾಟವೂ ಒಂದು ಬಗೆಯ ಉತ್ಸವವೇ.

* * * *

ಸತ್ತವರನ್ನು ಇನ್ಯೂರ್ ಮಾಡಿದವರಿದ್ದಾರೆ ಎಂದು ವರ್ತಮಾನ. ಈ ಇನ್ಯೂರನ್ನು ಸತ್ತವರು ಸ್ವರ್ಗದಲ್ಲಿ ಸುಖವಾಗಿರದೆ ಭೂಮಿಯ ಮೇಲೆಯೆ ಇರುವ ಹಾಗೆ ಇನ್ಯೂರು ಮಾಡಿದ್ದಿರಬಹುದು. ಅಥವಾ ಹಾಗೆ ಸತ್ತವರಿಗೆ ಅವರ ವಿಮಾ ಹಣವನ್ನು ಸ್ವರ್ಗದಲ್ಲೇ ಪಾವತಿಮಾಡಿ, ಸ್ವರ್ಗೀಯ ಸರ್ಟಿಫಿಕೇಟು ತರಿಸಿಬಹುದು!

* * * *

ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಕೊಡಲು ಮನಸ್ಸಿಲ್ಲ ದವರು ಎಂಬ ಪ್ರಾಮುಖ್ಯ ಕಾರಣ ಹೇಳುವರು,—ಗಿ. ಆಗ ಮಗಳ್ಳಿ ಇದು ನಿಷಿದ್ಧವಾಗಿದೆ; ಇದರಿಂದಾಗಿ ಇನ್ನು ಹೊಸಾ ಗಮೆ ಸ್ಥಳಗಳನ್ನೇ ದೇವಾಲಯಗಳನ್ನು ಕಟ್ಟಿಸಲು ಹುಡುಕ ಬೇಕಾಗಿದೆ.

* * * *

೨. ಎಂಡೌಮೆಂಟ್ ಕಾನೂನು ಪ್ರಕಾರ ವಾಡಿಕೆ ಬಿಡಲು ಮೊಕ್ತೇಸರರಿಗೆ ಅಧಿಕಾರವಿಲ್ಲ; ಇದಕ್ಕಾಗಿ ಈ ಕೆಸೊವಿನಲ್ಲಿ ತಿದ್ದುಪಡಿಯಾಗದೆ ಅಸ್ಪೃಶ್ಯರ ದಾರಿಗೆ ಮುಳ್ಳು ತುಂಬಿದೆ.

* * * *

ದೇವರಿಗೆ ಭಕ್ತರಲ್ಲಿ ಭೇದವಿಲ್ಲೆಂದು ಗೀತೆಯಲ್ಲಿದ್ದರೂ, ಭಕ್ತರಿಗೆ ದೇವರಲ್ಲಿ ಭೇದವಿಲ್ಲೆಂದು ಮಾತ್ರ ಅದರಲ್ಲಿಲ್ಲದ ಕಾರಣ,–ದೇವರೆಲ್ಲಾ ಭಕ್ತರಲ್ಲಾ ವೈಮನಸ್ಸು ಉಂಟಾಗಿದೆ.

* * * *

ಅಗಮ ಬಲ್ಲವರು ಇದನ್ನು ಗೀತೆಯಲ್ಲಿ ಸೇರಿಸಿದರೆ, ಗೀತೆಯ ಆಧಾರ ಕೊಟ್ಟು ಯಾವ ಸಾಮಾಜಿಕ ಪ್ರಶ್ನೆಯನ್ನೂ ಮುರಿಯಬಹುದು. ಮೊಕ್ತೇಸರರಿಗೆ ಆಗ ಗೀತೆ ಒಂದು ಕೈ ಪಿಡಿಯಾಗುವುದು.

* * * *

ಮಹಾತ್ಮರ ಉಪವಾಸದಿಂದ ಮಾತ್ರವೆ ಅಸ್ಪೃಶ್ಯರ ಉದ್ಧಾರವು ಸಾಗಿದುದಲ್ಲ; ಕ್ರೈಸ್ತಧರ್ಮದ ಪ್ರಚಾರದಿಂದ ಅವರ ತತ್ವಗಳನ್ನು ಒತ್ತಿದುದರಿಂದ ಎಂದು ಲೋರ್ಡ್ ಅರ್ವಿನರ ಧಾರಣ

* * * *

ಇದಕ್ಕಾಗಿ ಮಿಷನರಿಗಳಿಗೆ ಅಸ್ಪೃಶ್ಯರೂ ಎಂದೇಕೆ, ಮಹಾತ್ಮರೂ 'ಸಲಾಂ' ಮಾಡುವರು. ಆದರೆ ಇತರ ದೇಶೀ ಯರನ್ನು ಅಸ್ಪೃಶ್ಯರಂತೆ ಪರಿಗಣನೆಗೆ ತಂದುಕೊಳ್ಳಬೇಕೆನ್ನುವ ಇಂಗ್ಲಿಷ ಪಾರ್ಲಿಮೆಂಟಿನೊಳಗಣ ಕ್ರೈಸ್ತರನ್ನು ಸ್ವಲ್ಪ ಉದ್ಧಾರ ಮಾಡಲು ಮಿಷನರಿಗಳು ಪ್ರಯತ್ನಪಡುವುದುತ್ತಮ.

* * * *

ನಮ್ಮಲ್ಲಿ ಬಸ್ಸು ದರಗಳು ಇಳಿದುದೇ ತಡ; ಮುಂಬಾಯ್ಗಿ ಯಲ್ಲಿ ಪೆಟ್ರೋಲ್ ದರವು ಸರಾಗ ಇಳಿದಿದೆ. ಆದರೆ, ಆ ಮುಂಬಾಯಿ ಪೆಟ್ರೋಲು ಮಾತ್ರ ಇತ್ತ ಬಾರದೆ ಪೀಡೆಯಾ ಗಿದೆ. ಈ ಬಸ್ಸುಗಳನ್ನು ಮುಂಬಾಯಿಗೆ ಕಳುಹಿಸಿ, ಆ ಪೆಟ್ರೋಲ್ ತರಿಸಿಕೊಂಡರೆ ಹೇಗಾಗುವುದು?

ವುದು, ತಮ್ಮೊಳಗೆ ಅಧಿಕಾರ ಹಚ್ಚಿಸಿಕೊಳ್ಳುವುದು ಇವೆಲ್ಲೇ ಪಾರ್ಟಿಗಳಿಗೆ ಸೇರಿದವರ ಕೆಲಸ. ಆದರೂ, ಈ ಪಾರ್ಟಿಗಳ ಬದಲಾಗಿ ಬೇರೇನು ಕ್ರಮ ಜಾರಿಗೆ ತರೋಣ? ಪ್ರತಿಯೆಬ್ಬನು ರಾಜಕೀಯ ಪಕ್ಷವನ್ನು ಕೌನ್ಸಿಲುಗಳಲ್ಲೂ ವಿಹಿಸಬಹುದಾ ದರೂ, ಸ್ಥಳೀಯ ಸಂಸ್ಥೆಗಳಲ್ಲಿ 'ಫೊಲಿಟಿಕ್ಸ್' ತಂದಿಕ್ಕಲೇ ಬಾರದು. ಸ್ವತಂತ್ರವಾಗಿದ್ದರೆ ಅವನ ಅಭಿಪ್ರಾಯಕ್ಕೆ ಬೆಲೆ ಯಿದೆ. ರಾಜಕೀಯ ಪಾರ್ಟಿಗೆ ಸೇರಿದವರು ಮುನಿಸಿಪಾಲಿಟಿ ಗಳಲ್ಲಿ ಕೆಲಸಕ್ಕೆ ಬಿದು ಸ್ವಾತಂತ್ರ್ಯವನ್ನು ಕಳೆದುಕೊಂಡುದುಂಟು. ಹೀಗಾಗಿ ಯಥಾರ್ಥವೂ ಉಪಯೋಗಕ್ಕೆ ಬೀಳುವ ಉತ್ತಮರನ್ನು ರು ಪಾರ್ಟಿಕ್ರಮವು ಹೊರಗೇ ಇಡುತ್ತದೆ–ಎಂಬ ಅಭಿಪ್ರಾಯ ವನ್ನು ಲಿವರ್‌ಪೂಲಿನ ವೈದಿಕರೊಬ್ಬರು ವಿವರಿಸಿದ್ದಾರು.

ಕೆಲವು ಸುದ್ದಿಗಳು.

ಖಾದಿ ಖಾದಿ ಖಾದಿ—ವಿಧವಾ ವಿವಾಹಗಳು ಹೆಚ್ಚಾಗುವುದು—ರಷ್ಯಾದಲ್ಲಿ ಮಹಿಳೆಯರ ಏಳ್ಗೆ—ಫಾದರ್ ಎಲ್ವಿನರ ಮೇಲೆ ದಾವೆ—ಮಹಾತ್ಮಾ ಗಾಂಧಿಯವರು—

ಖಾದಿ ಖಾದಿ ಖಾದಿ.

"ಇಂದು ನಾವು ಸಮರದಲ್ಲಿದ್ದೇವೆ. ನಾಳೆ ಶಾಂತರಾಗುತ್ತೇವೆ. ತಾಸಿನ ಧಂಗ ಚಳವಳವು ಇಂದು ಬರುತ್ತದೆ ನಾಳೆ ಹೋಗುತ್ತದೆ. ಆದರೆ ಖಾದೀ ಪ್ರಚಾರವು ಮಾತ್ರ ಕಾಲ ಕಾಲದ ತನಕವೂ ನಡೆಯಬೇಕು ಅದೇ ನಮ್ಮ ರಾಷ್ಟ್ರದ ಪಡಜಾಂಗ—ಧರತ ವರ್ಷದ ದಾರಿದ್ರ್ಯನಾಶಕ್ಕೆ ಖಾದಿಯೆಂಬುದೇ ರಾಮಬಾಣ ದೀನ ಜನರನ್ನು ಕಾಪಾಡುವ ರಾಮಬೀಜವು ಅದೊಂದೇ. ಈಗ ಧಂಡಾರಗಳಲ್ಲಿ ಸಿದ್ಧವಿರುವ ಖಾದಿಯ ಮೂಟೆಯನ್ನೀಜೆಗೆ ತೆಗೆದು ವಿಕ್ರಯಸಬೇಕಾಗಿದೆ ಜನರು ಖಾದಿ, ಖಾದಿ ಖಾದಿಯನ್ನೇ ಧರಿಸುವ ಪ್ರತಿಜ್ಞೆಯನ್ನುಳ್ಳವರಾಗಬೇಕು." ಎಂದು ಟ್ರಿಪ್ಲಿಕೇನಿನಲ್ಲಿ ಬಾಬು ರಾಜೇಂದ್ರ ಪ್ರಸಾದರು ಮಹಾಜನರೊಡನೆ ಅರಿಕೆಮಾಡಿಕೊಂಡರು ಶ್ರೀ ಸಿ ರಾಜಗೋಪಾಲಾಚಾರ್ಯರೂ ಈ ವಿಷಯವಾಗಿ ಮಾತನಾಡಿದರು

ವಿಧವಾ ವಿವಾಹಗಳು ಹೆಚ್ಚಾದುವು

ಕಳೆದ ವರ್ಷ ಒಟ್ಟು ವಿಧವಾ ವಿವಾಹಗಳು ೨೧—ಈ ವರ್ಷದಲ್ಲಿ ಒಂಭತ್ತು ತಿಂಗಳುಗಳು ದಾಟುತ್ತಿರುವಾಗಲೇ ೩೩ ವಿಧವಾ ವಿವಾಹಗಳು ನೆರವೇರಿದುವು ೧೩ ವಿವಾಹಗಳು ಮದ್ರಾಸಿನ ವಿ ವಿ ಎಸ್ ಸಭೆಯ ನೇತೃತ್ವದಲ್ಲಿ ಜರಗಿತು ಇತರ ಇಪ್ಪತ್ತು ವಿವಾಹಗಳು ಪ್ರಾಂತ್ಯದ ಇನ್ನಿತರ ಕಡೆಗಳಲ್ಲಿ ನಡೆದುವು ಇನ್ನೂ ಅನೇಕ ವಿವಾಹಗಳು ಪತ್ರಿಕೆಗಳಿಗೆ ಅಥವಾ ಸಾರ್ವಜನಿಕರಿಗೆ ತಿಳಿಸಲ್ಪಡದೆ ನಡೆದುವು ವಿಧವಾ ವಿವಾಹದ ಈ ಸುಧಾರಣೆಗೆ ದೀಪದ ಪ್ರಕಿಕಡೆಗಳಲ್ಲೂ ವಿಧವಾ ವಿವಾಹ ಸಂಘಗಳು ಸ್ಥಾಪನೆಯಾದುದೇ ಕಾರಣವೆಂದು ತಿಳಿದು ಬಂದಿದೆ. ಬೆಂಗಳೂರಿನ ಬಚ್ಚಮ್ಮನ ವಿಧವಾಗ್ರಹದ ಅಡಳಿತ ದಾರರ ಸಹಾಯದಿಂದಾಗಿಯೂ ಹಲಕೆಲವು ವಿವಾಹಗಳಾಗಿವೆ ಕೋಕನಾಡಿನಲ್ಲಿನ ಆಂಧ್ರ ಕನ್ಯಾವಿತಂತು ಮಂದಿರದಲ್ಲೂ ಮುಸಲೀಪಟ್ಟಾಮಿನ ವಿಧವಾ ವಿವಾಹ ಸಂಘದಿಂದಲೂ ಕೆಲವು ವಿವಾಹಗಳು ನಡೆದಿವೆ ಈ ವಿಷಯದ ಸುಧಾರಣೆಗಾಗಿ ಇನ್ನೂ ಅಲ್ಲಲ್ಲಿ ಸಾಧನೆಯಾಗುತ್ತಿದೆ

ರಷ್ಯಾದಲ್ಲಿ ಮಹಿಳೆಯರ ಏಳ್ಗೆ.

ರಷ್ಯಾದಲ್ಲಿನ ಸ್ವರಾಜ್ಯಸೂತ್ರಗಳು ಲೋಕವಿಖ್ಯಾತವಾದುದು ರಷ್ಯಾದ ಸರಕಾರವು ಜ್ಞಾನಿಗೆ ತಂದಿರುವ ಕಾನೂನು ಕ್ರಮಗಳನ್ನೂ ಅವುಗಳಿಂದಾಗಿ ಜನಸಮುದಾಯವು ಅನುಭವಿಸುತ್ತಿರುವ ಸುಖ ಆನಂದಗಳನ್ನೂ, ಸ್ವಾತಂತ್ರ್ಯವನ್ನೂ ಕಂಡು ಇನ್ನಿತರ ರಾಷ್ಟ್ರಗಳು ಬಾಯಿಬಾಯಿ ಹೊಡೆದುಕೊಳ್ಳುತ್ತಿವೆ ಅಲ್ಲಿಯ ಸ್ತ್ರೀಯರು ಪುರುಷರಂತೆಯೇ ವಿದ್ಯಾಬುದ್ಧಿಗಳಲ್ಲಿ ಮುಂದರಿದಿರುವರು ಸ್ತ್ರೀಯರಿಲ್ಲದ ಉದ್ಯೋಗವೇ ಇಲ್ಲ ದಂತಾಗಿದೆ ಈಗೀಗ ಅಲ್ಲಿಯ ಗಣಿಗಳಲ್ಲೂ ಸ್ತ್ರೀಯರು ಕೆಲಸಕ್ಕೆ ನೇಮಕ ಹೊಂದಿದ್ದು, ಪುರುಷರನ್ನೂ ಕೂಡಾ ಕೆಲಸದಲ್ಲಿ ನೋಲಿಸುತ್ತಿರುವರು ಇನ್ನು ಕೆಲವು ವರ್ಷಗಳಲ್ಲೇ ಅಲ್ಲಿಯ ಸ್ತ್ರೀಯರು ಎಲ್ಲಾ ರಾಷ್ಟ್ರಗಳ ಸ್ತ್ರೀಯರಿಗಿಂತ ಪ್ರಥಮ ಶ್ರೇಣಿಯಲ್ಲಿ ನಿಲ್ಲುವರೆಂದು ಅಂದಾಜು ಮಾಡಲಾಗಿದೆ. ಜನಾಂಗದ ಉನ್ನತಿ ಅಧೋಗತಿಗೆ ಸರಕಾರವೇ ಕಾರಣವೆಂದು ರಷ್ಯಾದ ಶಾಪದಿಂದ ತಿಳಿಯಲಾಗುತ್ತದೆ.

ಫಾದರ್ ಎಲ್ವಿನಕ ಮೇಲೆ ದಾವೆ.

ಫಾದರ್ ಎಲ್ವಿನರೆಂದರೆ ದೀನ ಬಂಧು ಸಿ ಎಫ್. ಎಂಡ್ರೂಸರಂತೆ ಹಿಂದೂದೇಶದ ಪರಮಾಪ್ತ ಬಂಧುಗಳು ಆರು ತಿಂಗಳ ಹಿಂದೆ ಅವರು ಹಿಂದೂದೇಶದಲ್ಲಿ ಸಂಚರಿಸಿ ಕಾಯಿದೆ ಧಂಗದ ಪರಿಣಾಮವಾಗಿ ದೇಶವು ಒಳಗಾದ ಸಂಕಷ್ಟವನ್ನು ಅವರು ಸಂಪೂರ್ಣ ಮನಗಂಡಿದ್ದರು ತಾನು ಇಲ್ಲಿ ಕಂಡ ಸರ್ವ ವಿಷಯಗಳನ್ನೂ ಅವರು ಲಂಡನಿಗೆ ಹೋಗಿ ಪ್ರಚುರಪಡಿಸಿದರು. ಪಶ್ಚಿಮೋತ್ತರದ ಗಡಿನಾಡಿನ ಪ್ರದೇಶದಲ್ಲಿ ನಡೆದ ಅನೇಕ ವಿಪರೀತತೆಗಳನ್ನೂ ಅವರು ಲಂಡನ್ನಿನವರಿಗೆ ತಿಳುಹಿಸಿದರು ಗಡಿನಾಡಿನಲ್ಲಿ ಜರಿ ಹೊಡೆಯುತ್ತಾರೆಂದೂ, ಪೋಲೀಸರ ದಬ್ಬಾಳಿಕೆಯು ವಿಶೇಷವಿದೆಯೆಂದೂ ಅವರು ಲಂಡನಿನಲ್ಲಿ ಹೇಳಿದರು ಅವರ ಈ ವಿವರಗಳನ್ನು ಕೇಳಿದ ಬ್ರಿಟಿಷ ಸರಕಾರವು ಅಂತಹ ಅರೋಪಣೆಯು ತೀರ ಅಸಂಗತವೆಂದೂ, ಅಂತಹ ವಿಷಮಾವಸ್ಥೆಯು ಬಂದೊದಗಲಿಲ್ಲವೆಂದೂ ಪ್ರತಿಪಾದಿಸಿದರು ಮತ್ತು ಫಾದರ್ ಎಲ್ವಿನರು ಉತ್ಪ್ರೇಕ್ಷಕ ಮತ್ತು ಅಬದ್ಧಗಳನ್ನೇ ಹೇಳಿರುತ್ತಾರೆಂಬ ಆರೋಪಣೆಯ ಮೇಲೆ ಬ್ರಿಟಿಷ ಸರಕಾರವು ಅವರ ಮೇಲೆ ದಾವೆ ಹೂಡಲಿರುವುದು ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಹರ್ಷ ನಡೆಯುತ್ತಿದೆ ಫಾದರ್ ಎಲ್ವಿನರು ತನ್ನ ಮೇಲಿನ ಈ ಆಪಾದನೆಯ ಸಂಬಂಧವಾಗಿ ಹಿಂದೂದೇಶಕ್ಕೆ ಹೊರಟಿರುವರು ಸರ್ ಸಾಮುವೇಲ್ ಹೋರರೂ ಈ ತಕ್ಷೀರಿನ ಸಂಬಂಧವಾಗಿ ಸಿಮ್ಲಾದವರೊಡನೆ ಮಂತ್ರಾಲೋಚನೆ ಪಡಕೊಂಡಿರುವರು

ಮಹಾತ್ಮಾ ಗಾಂಧಿಯವರು.

ಉಪವಾಸ ವ್ರತದಿಂದ ಇವರಿಗೆ ಪ್ರಾಣಭಯ ಉಂಟಾಗುವುದೆಂದು ಆನೇಕರು ಭಯಪಟ್ಟಿದ್ದರು ಇವರು ಸಾಯಲೆಂಬುದಾಗಿ ಕೆಲವು ಜನಗಳು ಎದುರು ನೋಡುತ್ತಲೂ ಇದ್ದರು ದೇವರ ದಯೆಯಿಂದ ಇವರಿಗೆ ಆರೋಗ್ಯವಾಗುತ್ತಲಿದೆ ಇಂಡಿಯಾ ದೇಶಕ್ಕೆ ಪೂರ್ಣಸ್ವರಾಜ್ಯವು ಬರುವಂತೆ ಮಾಡಿ ಸದರಿ ಸಂತೋಷವನ್ನನುಭವಿಸುವ ಪುಣ್ಯವು ಇವರಿಗಿರುವಂತೆ ತೋರುತ್ತದೆ. ದುರಾತ್ಮರು ಒಂದು ವಿಧವಾಗಿ ಯೋಚಿಸಿದರೆ ಮಹಾತ್ಮರೂ ದೇವರೂ ಇನ್ನೊಂದು ವಿಧವಾಗಿ ಯೋಚಿಸುವುದುಂಟು ಅದಕ್ಕೆ ಗಾಂಧಿಯವರ ಆರೋಗ್ಯಧಾರ್ಢ್ಯವೇ ಸಾಕ್ಷಿ ಅವರ ಇಚ್ಛಾರ್ಥಗಳು ಸ್ವಕೀಯವಾದವಲ್ಲ ತಮ್ಮ ಶತ್ರುಗಳೂ ಕೂಡ ಸುಖವಾಗಿರಲೆಂಬ ಮನೋಧಾರವು ಅವರಿಗಿರುತ್ತದೆ ಆದ್ದರಿಂದ ದೇವರ ಪ್ರಸನ್ನತೆಯು ಅವರಿಗೆ ತಪ್ಪಲಾರದು ದೇವರ ಅಭಿಮಾನಕ್ಕೆ ಪಾತ್ರರಾದವರನ್ನು ಮೂಲೋತ್ಪಾಟನ ಮಾಡುವುದು ಯಾರಿಗೂ ಸಾಧ್ಯವಲ್ಲ ದೇವರ ಪ್ರೀತಿಯುಳ್ಳ ವರನ್ನು ಸಜ್ಜನರು ಪ್ರೀತಿಯಿಂದ ಸೇವಿಸುವರು ದುರ್ಜನರು ದ್ವೇಷದಿಂದ ದ್ವೇಷಿಸುವರು Die-hardಗಳು ಅನ್ಯಾಯ ಮಾಡಬೇಕೆಂದು ಮಾಡತಕ್ಕ ಪ್ರಯತ್ನಗಳೆಲ್ಲಾ ನ್ಯಾಯವಾಗಿ ಪರಿಣಮಿಸುವುದೇ ಸಾಕ್ಷಿ ಜಾನ್ ಸಿಕಲ್ಸ್ ಮೊದಲಾದವರು ನಿರಂಕುಶಪ್ರವರ್ತನದ ತಿಪ್ಪರವನ್ನೇರಬೇಕೆಂದು ಪ್ರಯತ್ನ ಮಾಡಿ ನಾಮಾವಶೇಷರಾದದ್ದೇ ಇದಕ್ಕೆ ಸಾಕ್ಷಿ ಎಲಾಯತಿಯಲ್ಲಿ ಕ್ಯಾಬಿನೆಟ್ ಮಂತ್ರಿಗಳಿಗೆ ಆಟ್ಟಾವಾ ವಿಪ್ಲಾಡಿನ ವಿಷಯದಲ್ಲಿ ಭೇದಧಾವಗಳುಂಟಾಗಿ ಹೋರ್ಡ್ ಪ್ರಿವಿಸೀಲ್ ಹೋಮ್ ಎಫೇರ್ಸ್‌ಗಳೂ ಸಕ್ಕಟೆರಿಗಳೂ ಸ್ಕಾಟ್‌ಲೆಂಡ್ ಸೆಕ್ರೆಟರಿಗಳೂ ತಮ್ಮ ಮಂತ್ರಿ ಪದವಿಗಳಿಗೆ ರಾಜೀನಾಮೆಯನ್ನು ಕೊಟ್ಟಿರುವರು. ಸರ್ ರಾಬರ್ಟ್ ಹ್ಯಾಮಿಲ್ಟನ್‌ರವರೂ, ಮೆಸ್ಸಿ ಗ್ರೇ ಹೇಮ್ ವೈಟರವರೂ ಸರ್ ಮೆಕೆಂಜಿ ವುಡ್ ರವರೂ, ಮೆಸ್ಸಿ ಹಾರ್ ಕೋರ್ಟ್‌ಜೀನ್ಸನ್‌ರವರೂ, ಮೆಸ್ಸಿ ವಾಲ್ಟರ್ ರೀ ರವರೂ ತಮ್ಮ ಮಂತ್ರಿ ಪದವಿಗಳಿಗೆ ರಾಜೀನಾಮೆಯನ್ನು ಕೊಟ್ಟಿರುವರು ಈಗಿನ ಗವರ್ನಮೆಂಟಿನವರ ಪ್ರವರ್ತನವು ಬ್ರಿಟಿಷ್ ಜಕ್ರಾಧಿಪತ್ಯಕ್ಕೆ ವಿರೋಧವಾಗಿರುವುದೆಂಬ ಧಾವನೆಯೇ ಈ ರಾಜೀನಾಮೆಗಳಿಗೆ ಮುಖ್ಯ ಕಾರಣವಾಗಿರುವಂತೆ ತಿಳಿಯಬರುತ್ತದೆ. ಲೋರ್ಡ್ ಲೋಥಿಯನ್‌ರವರು ತಮ್ಮ ರಾಜೀನಾಮೆಯಲ್ಲಿ "ಆಟ್ಟಾವಾ ತೀರ್ಮಾನದಿಂದ ಬ್ರಿಟಿಷ್ ಜಕ್ರಾಧಿಪತ್ಯಕ್ಕೆ ತೊಂದರೆಯಾಗಬಹುದು ಈ ವಿಷಯದಲ್ಲಿ ಗವರ್ನಮೆಂಟಿನ ಅಭಿಪ್ರಾಯವು ಸರಿಯಾದದ್ದಲ್ಲವೆಂದು ನನಗೆ ತೋರುತ್ತದೆ ನನ್ನ ರಾಜೀನಾಮೆಗೆ ಇದೇ ಮುಖ್ಯ ಕಾರಣ ಇತರ ವಿಷಯಗಳಲ್ಲಿ ನನಗೂ ಗವರ್ನಮೆಂಟಿಗೂ ಭೇದಧಾವಗಳಿರುವುದಿಲ್ಲ" ಎಂದು ಅಪ್ಪನೆಕೊಡಿಸಿರುವರು ರಾಜೀನಾಮೆಯನ್ನು ಕೊಟ್ಟವರಿಗೆ ಬದಲಾಗಿ ಹೊಸಮೆಂಬರುಗಳು ನಿಯಮಿಸಲ್ಪಟ್ಟಿರುವರು ಇತರ ಎಲ್ಲಾ ವಿಷಯಗಳಲ್ಲಿಯೂ ಏಕಮತ್ಯದಿಂದ ಕೆಲಸವು ನಡೆಯುತ್ತಲಿರುವುದು ಈ ಧರತಖಂಡದ ರಾಜಕೀಯ ಚಳವಳಿಗಳ ವಿಷಯದಲ್ಲಿ ಭಿನ್ನಾಭಿಪ್ರಾಯವು ಹುಟ್ಟಿರುವಂತೆ ತೋರುವುದಿಲ್ಲ ಆದರೆ ಶೀಘ್ರದಲ್ಲಿಯೇ ಇಂಡಿಯಾ ದೇಶವೂ ಬ್ರಿಟಿಷ್‌ರಾಜ್ಯವೂ ವರಸ್ಪರ ಪ್ರೀತಿಯಿಂದ ವೃದ್ಧಿಗ ಬರುವುದು, ಇಲ್ಲವೆ ಪರಸ್ಪರ ದ್ವೇಷದಿಂದ ಉಭಯ ಪಂಗಡದವರೂ ನಾಶವಾಗುವ ಅವಸ್ಥೆಗೆ ಬರುವುದಕ್ಕೆ ಉಪಕ್ರಮಿಸುವುದು ಒಂಗಕಾದ ಜನಗಳಲ್ಲಿ ಅನೇಕರಿಗೆ ರಾಜಕೀಯವಾದ ಹುಚ್ಚು ಹಿಡಿದಿದೆ ಇದು ಸಾಂಕ್ರಾಮಿಕ ರೋಗದಂತೆ ಈ ಧರತ ಖಂಡಕ್ಕೆಲ್ಲಾ ವ್ಯಾಪಿಸುವ ಸಂಧವವು ಖಂಡರೂಢಬಲಹುದು ಬ್ರಿಟಿಷ್ Die-hardಗಳು ಸಾಂಕುಶ ಶ್ರವರ್ತಕರಾಗಿ ಗಾಂಧಿ ಮೊದಲಾದ ಕಾಂಗ್ರೆಸ್ ಪಂಗಡದವರನ್ನು ಜೈಲಿನಿಂದ ಖುಲಾಸ ಮಾಡಿ ಅವರ ಪ್ರೀತಿಗೂ ಸಹಕಾರಕ್ಕೂ ಪಾತ್ರರಾಗಿ ಇಂಡಿಯಾ ದೇಶೀಯರೂ ಬ್ರಿಟಿಷ್ ಜನಗಳೂ ವರಸ್ಪರ ಪ್ರೀತಿಯಿಂದ ವೃದ್ಧಿಗ ಬಾವಂತಿರದೂ ಆಗಬಹುದು ಈ ರಾಜಕೀಯವಾದ ಪ್ಲೇಗು ನಿಂತರೂ ನಿಲ್ಲಬಹುದು ಧಾರಕೀಯರಿಗೂ ಬ್ರಿಟಿಷ್ ಜನಗಳಿಗೂ ಕಾಂತಿಯುಂಟಾದ ಹೊರತು ಈ ಪ್ಲೇಗು ನಿಲ್ಲುವುದಿಲ್ಲ ಜಗದೀಶ್ವರನ ದಯೆಯಿಂದ ಇದು ನಿಲ್ಲದೇಕಾಗಿದೆ. ಹಾಗೆ ನಿಲ್ಲುವಂತೆ ದೇವರು ಅನುಗ್ರಹಿಸಲೆಂದು ನಾನು ಕೋರುತ್ತೇನೆ ಎಂ ವೆಂಕಟಕೃಷ್ಣಯ್ಯ,
ಮೈಸೂರು

ಝೆನಿಥ್ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು

Zenith Life Assurance Company, Limited, Mangalore.

ಹಿಂದೀಯರ ಧನದಿಂದ ಹಿಂದೀಯರಿಗಾಗಿ ಹಿಂದೀಯರಿಂದಲೇ ಸ್ಥಾಪಿಸಲ್ಪಟ್ಟಿತು

1918ನೇ ಇಸವಿ ಅಕ್ಟೋಬರ ತಿಂಗಳಲ್ಲಿ ಆಸ್ತ್ರಕ್ಕೆ ಬಂದ ನಮ್ಮ ಕಂಪೆನಿಯ ಬೆಳವಣಿಗೆಯನ್ನು ಪರೀಕ್ಷಿಸಿರಿ —
ಅಧಿನಂದಿಸಿದ ಪತ್ರಿಕೆಗಳು — ಹಿಂದೂ, ಸ್ವರಾಜ್ಯ ಟೈಮ್ಸ್ ಆಫ್ ಇಂಡಿಯಾ, ಸ್ಟೇಟ್ಸ್‌ಮೆನ್ — ಇವಲ್ಲದೆ ಇನ್ನೂ ಕೆಲವು ನಮ್ಮ ೧ ವರ್ಷಗಳ ಅಭಿವೃದ್ಧಿಯನ್ನು ಕೊಂಡಾಡಿವೆ

ಹತ್ತು ವರ್ಷಗಳಲ್ಲಿ ವಾರ್ಷಿಕ — ಮುನಾಫೆ ೨೦ರಷ್ಟು ಸಲ ಹೆಚ್ಚಿತು ಲೈಫ್ ಫಂಡ್ ೨೦ರಷ್ಟು ಸಲ ಹೆಚ್ಚಿತು ಭದ್ರತೆಗಳು ೨೦ರಷ್ಟು ಸಲ ಹೆಚ್ಚಿತು ಆಸ್ತಿಯು ೨೦ರಷ್ಟು ಸಲ ಹೆಚ್ಚಿತು

ಇದರ ಶಾಖೆಗಳು — ಕಲ್ಕತ್ತಾ, ಮದ್ರಾಸು, ಲಾಹೋರು, ಕರಾಚಿ, ಮಂಗಳೂರು, ಕಲ್ಲಿಕೋಟೆ, ಧಿಲ್ಲಿ, ಗೋವಾ, ಅಹಮ್ಮದಾಬಾದ್ ಪೂನಾ ಒಕ್ಕೋ, ಬೆಳಗಾಂ, ಸೂರತ್, ಜಾಗಪುರ, ಕೊಚ್ಚಿನ್, ಬರೋಡಾ, ಜೆನಾಂಸ್ — ಏಜೆಂಟರು ಹಿಂಯರ ಹುಟ್ಟು ಕಿರಿಯರ ರಕ್ಷಣಾರ್ಥವಾಗಿ ಅಪಘಾತವಿದ ಬಂಧವೆಂಬ ಭಾವನಿ ಪೋಲಿಸಿಯೊಂದನ್ನು ಅತ್ಯಗತ್ಯವಾಗಿ ಪಡಕೊಳ್ಳಿರಿ

ಒಬ್ಬ ಉದ್ಯೋಗಸ್ಥನು ತನ್ನ ಸಂಬಳದ ಉಳಿತಾಯದಿಂದ ಜೀವ ವಿಮೆ ಮಾಡುತ್ತಾನೆ, ಕಂತು ಕಟ್ಟಿದ ಕೆಲವು ಸಮಯದಲ್ಲೇ ಮರಣಹೊಂದುತ್ತಾನೆ, ದೇಹದೌರ್ಬಲ್ಯಕ್ಕೊಳಗಾಗುತ್ತಾನೆ, ಕೆಲವು ವರ್ಷಗಳ ತನಕ ಪ್ರೀಮಿಯಮ್ ಕಟ್ಟಿಲು ಅಶಕ್ತನಾಗುತ್ತಾನೆ, ಆಗ ಅವನು ಕಟ್ಟಿದ ಕಂತುಗಳು ನಷ್ಟವಾಗಬಾರದು ಅವನ ಪೂಲಿಸಿಯು ಕಂಪೆನಿಯವರ ವಶವಾಗಿ ಪೂಲಿಸಿಯನ್ ಪಿಡ್ಡು ಹೋಗಬಾರದು, ಆದಕ್ಕಾಗಿಯೇ - ದಿ ಸ್ವರಾಜ್ಯ ಪೂಲಿಸಿ, (The Swaraja Policy) ಎಂಬುದು ನಮ್ಮಿಂದ ರಚಿತವಾಗಿದೆ ಇದು ವರ್ಷಂಪ್ರತಿ ಬಾಳ ಸಂದಾಯಿಸುತ್ತದೆ, ಆಗಕ್ಕೆ ಪಿಕ್ಷರೆ ಸಣ್ಣರಿಯಾದ ಸ್ಥಾಲ್ಪವು ಸಿಗುತ್ತದೆ. ಇದನ್ನು ಕಂತುಸ್ಕಾರ ಹಿಂದೆ ತೆರಬೇಕು

ಹಿಂದೂದೇಶದಲ್ಲಿನ ವಿಮಾಕ್ರಮಗಳಲ್ಲಿ ಈ ಕ್ರಮವು ಅತ್ಯಂತ ಪ್ರಶಸ್ತವಾದುದು ನವೀನವಾದುದು ಇಂದೇ ಪೂಲಿಸಿ ಪಡೆಯಿರಿ

Wanted Agents everywhere on liberal terms

ZENITH OFFICE, ಬಂದರ ರಸ್ತೆ, ಮಂಗಳೂರು.

ಸಂಪಾದಕೀಯ ಲೇಖನಗಳು ೩
ಜಾತೀಯ ಚರ್ಚೆಯಾಗಲಿ ೫
ಒಳ್ಳೆಯ ಚರ್ಚೆಯಾಗಲಿ ೫
ಶ್ರೀಮತಿ ಲಕ್ಷ್ಮಿ – ಹುಂಗಳೂರು, ಕಾವಳಕಟ್ಟೆ, ಬಂಟ್ವಾಳ, ಭರತನೆಲೇಪ್ಪಿ, ಪ್ರಕಟಣೆ ೪
ವಿವಿಧ ಸಮಾಚಾರಗಳು ೧೧
ಮುಸಲಿಯೋ ಮುಚ್ಚಲೇ? ೫
ಶಕ್ತಿಯ ಲಕ್ಷಣವಲ್ಲ ದೇಶಸ್ಥಾನ ಪ್ರದೇಶವಾಯಿತೇ? ೧೫
ಪತ್ರಿಕೆಯವರಿಗೆ ೧೬
ಗಾಂಧೀಜಿಯವರ ಬಿಡುಗಡೆಯ ಪ್ರಸ್ತಾಪ ೪
ಕೆಲವು ಸುದ್ದಿಗಳು ೭

ಸ್ವದೇಶಾಭಿಮಾನಿ.

ತಾ. ೧೫ನೇ ಶುಕ್ರವಾರ ಅಕ್ಟೋಬರ ೧೯೨೩

ಇದರ ಅರ್ಥವೇನು ?

ಒಂದೂಗಳು ಅಸ್ಪೃಶ್ಯರೊಡನೆ ಒಪ್ಪಂದಮಾಡಿ ಅವರನ್ನು ತಮ್ಮೊಳಗೆ ಸೇರಿಸಿದುದರ ಸತ್ಪರಿಣಾಮವು ಈಗ ಹೊರಕ್ಕೆ ಬೀಳ ಆರಂಭಿಸಿಯಿದೆ. ಡಾ॥ ಅಂಬೆಡ್ಕರರು ಒಮ್ಮಿಂದೊಮ್ಮೆ ತೀವೀ ಹಿಂದೂಸ್ಥಾನದ ಮಿಲಿಯಾವಧಿ ಅಸ್ಪೃಶ್ಯರ ಧುರೀಣರಾಗಿ ಹೋದುದರ ಅಂತರ್ಯವೇನೆಂಬ ಸಂದೇಹವನ್ನು ನಾವು ಈ ಮೊದಲೇ ಸೂಚಿಸಿದ್ದೇವೆ ಅಸ್ಪೃಶ್ಯರುಹಿಂದೂಸ್ಥಾನದಲ್ಲಿ ಜನ್ಮರಿಗೆ ತರಲಿಚ್ಛಿಸಿದ ಭೇದೋಪಾಯದ ಪ್ರಮುಖ ಆಧಾರವಾಗಿದ್ದರು ಅಸ್ಪೃಶ್ಯರನ್ನು ಮಹಾತ್ಮಾಜಿಯವರು ತಮ್ಮ ಮಹಾ ಉಪವಾಸದಿಂದ ಹಿಂದುಗಳೊಡನೆ ಸಮ್ಮಿಳಿಸಿದ ಮೇಲೆ ಭೇದೋಪಾಯದ ಈ ಆಧಾರವು ಕುಸಿದುಹೋಯಿತು. ಇನ್ನು ಮುಂದೆ ಎಂತಹ ಘಟನೆಗಳಾಗಬಹುದೂ ಎಂಬ ಹೆದರಿಕೆಯಿಂದ, ಕ್ರಾಯಸಕಃ ಸರಕಾರವು ಮಹಾತ್ಮಾಜಿಯವರ ಬಂಧನ ಬಿಗುಗೊಳಿಸಿತು.

ಈಗಿನ ಹಿಂದೂ ಮುಸಲ್ಮಾನ ಒಪ್ಪಂದದ ಪ್ರಯತ್ನಗಳು ಹಿಂದೂ ಅಸ್ಪೃಶ್ಯರ ಒಪ್ಪಂದದ ಒಂದು ಉತ್ತಮ ಪರಿಣಾಮವಾಗಿದೆ ಪ್ರಾಯಶಃ ಈ ಪರಿಣಾಮದ ಸೂಚನೆಗಳನ್ನು ಕಂಡೇ ಸರಕಾರದವರು ಮಹಾತ್ಮಾಜೀಯವರೊಡನೆ ಹೊರಗಿನ ಮುಖಂಡರಿಗೆ ಕೊಡುತ್ತಿದ್ದ ಭೇಟಿಗಳನ್ನು ನಿಲ್ಲಿಸಿ, ಈ ವಿಕ್ಯಕ್ಕೆ ಮಹಾತ್ಮಾಜೀಯವರ ಸಹಾಯವು ನಿಸ್ಯದಂತೆ ಮಾಡಿರಬಹುದೆಂದು ಈಗ ಊಹಿಸಬೇಕು.

ಹಿಂದೂ-ಮುಸಲ್ಮಾನ ವಿಕ್ಯದ ಈ ನೂತನ ಪ್ರಯತ್ನಗಳಿಗೆ ಹಲವು ಪ್ರಮುಖ ಮುಸಲ್ಮಾನರು ಮಾತ್ರವಲ್ಲದೆ ಹಿಂದೂಗಳ ಕಡು ವಿರೋಧಿಯೆನಿಸಿದ್ದ ಮೌ॥ ಶೌಕತಾಲಿಗಳು ಕೂಡ ಸೇರಿರುದು ಸಂತೋಷದ ವಿಷಯ ಈ ಮೊದಲು, ಶೌಕತಾಲಿಗಳಿಗೆ, ಅವರು ಹಿಂದೂಗಳ ವಿರೋಧವಾಗಿ ಗುಲ್ಲೆದಿಸುತ್ತಿದ್ದಾಗ, ಸರಕಾರವು ಸೌಕರ್ಯಗಳನ್ನು ಒದಗಿಸುತ್ತಿತ್ತು. ಆದರೆ ಎಲ್ಲರನ್ನೂ ವಿಕ್ಯಮಾಡುವ ಈಗಿನ ಅವರ ಸತ್ಪ್ರಯತ್ನಗಳಲ್ಲಿ, ಸರಕಾರವು ಬಾಯಿಂದ ಎಲ್ಲರೂ ವಿಕ್ಯವಾಗಬೇಕೆಂದು ಜಯಸಿದರೂ, ಕಾರ್ಯದಲ್ಲಿ ಶೌಕತಾಲಿಗಳಿಗೆ ಸರಕಾರವು ಯಾವ ಸಹಾಯವನ್ನೂ ಕೊಡುವಂತೆ ಕಂಡು ಬರುವುದಿಲ್ಲ

ಶೌಕತಾಲಿಯವರು ಹಿಂದೂ-ಮುಸಲ್ಮಾನ ಒಪ್ಪಂದಕ್ಕಾಗಿ ಪಂಡಿತ ಮಾಲವೀಯರೊಡನೆ ಮಾತು ನಡೆಸುತ್ತಿದ್ದಾರೆ ಇತ್ತ, ಕ್ರಿಸ್ತೀಯರೂ ಪ್ರತ್ಯೇಕ ಮತದಾನದ ತಮ್ಮ ಹಕ್ಕನ್ನು ಬಿಟ್ಟು ಕೊಟ್ಟು, ಹಿಂದೀ ಜನಾಂಗದವರು ಅಖಂಡ ಮಾಡಲು ಹವಣಿಸುತ್ತಿದ್ದಾರೆ ಹಿಂದೀ ಜನಾಂಗವು ಹಿಂದಾಗಿ ಹಿಂದೂಸ್ಥಾನವು ಉದ್ಧಾರವಾಗಬೇಕೆಂದು ಬ್ರಿಟಿಷರು ಪೂರ್ತಿವರ್ತಕವಾಗಿ ಒಯಸುವರಾದರೆ ಅವರು ಈ ಪ್ರಯತ್ನಗಳಿಗೆ ಪ್ರೋತ್ಸಾಹ ಕೊಡಬೇಕಿತ್ತು. ಬದಲಿಗೆ ಅವರು ಮಾಡುವುದೇನು?

ಹಿಂದೂ-ಮುಸಲ್ಮಾನ ವಿಕ್ಯಕ್ಕಾಗಿ ಮೌ॥ ಶೌಕತಾಲಿಯವರೂ, ಪಂ॥ ಮಾಲವೀಯರಿಗೂ ಮಾತುಗಳನ್ನು ನಡೆದು, ಮಹಾತ್ಮಾಜೀಯವರು ಈ ಮಾತುಗಳಿಗೆ ಈಗ ಸೇರಿದರೆ ಚಿಟ್ಟನೆ ಪ್ರಯೋಜನವಾಗಬಹುದೆಂದೂ, ಮಹಾತ್ಮಾಜೀಯವರು ಸ್ವಾತಂತ್ರ್ಯಾಧಿಕಾರಿಯವರಿಗೆ ಕಳುಹಿಸಿರುವ ಪತ್ರದಲ್ಲಿ ಬರೆದಿರುವ ಕೆಲವು ಮಾತುಗಳಿಂದ ಸ್ಪಷ್ಟವಾಗಿ ಕಂಡು ಬರುತ್ತದೆ.

"ಪ್ರಧಾನ ಮಂತ್ರಿಗಳ ಜಾತೀಯ ತೀರ್ಮಾನವನ್ನು ಬದಲಾಯಿಸುವ ಬಗ್ಗೆ ಎಲ್ಲಾ ಜಾತಿಗಳು ತಮ್ಮೊಳಗೇನೇ ತೀರ್ಮಾನಕ್ಕೆ ಬರಲು ಪ್ರಯತ್ನಗಳನ್ನು ನಡಿಸುವ ನಿಮ್ಮ ಉದ್ದೇಶವನ್ನು ನಾನು ಪ್ರಶಂಸಿಸುತ್ತೇನಾದರೂ, ನಿಮ್ಮ ಪ್ರಯತ್ನಗಳಲ್ಲಿ ಇದೇ ಮುಸಲ್ಮಾನ ಜಾತಿಯ ಪುಷ್ಟೀಕರಣವಿದೆಯೆಂದು ನೋಡಿಕೊಳ್ಳುವುದು ನಿಮ್ಮ ಮೊದಲಿನ ಕೆಲಸವಾಗಿದೆಯೆಂದು ನಾನು ಭಾವಿಸುತ್ತೇನೆ ಈ ವಿಷಯದಲ್ಲಿ, ಒಳ್ಳೇವರ ತಾ. ೭ರಲ್ಲಿ ಒಲ್ ಇಂಡಿಯಾ ನೊನ್ಪೆಮ್ ಕಾನ್ಫರೆನ್ಸು ಮತ್ತಿತರರು ಜ್ಞಾಪಿಸಿರುಮಾಡಿದ ಪ್ರಕಟಣೆಗಳನ್ನು ನಿಮ್ಮ ಲಕ್ಷ್ಯಕ್ಕೆ ತರೋಣವಾಗಿಯದೆ"

ಇದರ ಅರ್ಥವೇನು? ಕೆಲವು ಮುಸಲ್ಮಾನರು ಮೌ॥ ಶೌಕತಾಲಿಯವರ ಪ್ರಯತ್ನಗಳ ವಿಷಯದಲ್ಲಿ ತಮ್ಮ ಅಭಿಪ್ರಾಯ ಭೇದಗಳನ್ನು ವ್ಯಕ್ತಗೊಳಿಸಿದ್ದಾರೇನೋ ನಿಜ, ಆದರೆ ಅವರು ಕೂಡ ವಿಕ್ಯಕ್ಕೆ ಬರಲಾರೆವೆಂದು ಹೇಳಲ್ಲ ವಿಕ್ಯದ ಪ್ರಯತ್ನಗಳನ್ನು ನಡೆಸುವಾಗ, ವಿಕ್ಯವಾಗುತ್ತದೋ ಎಂದು ನೋಡುವ ಬದಲಿಗೆ ಒಡಕುಗಳ ನೆನಪನ್ನೇ ವ್ಯಾಸರಾಯರು ಮಾಡುವರೇಕೆ? ವ್ಯಾಸರಾಯರು ಹಿತಾಕಾಂಕ್ಷಿಗಳಾದರೆ, ಅಭಿಪ್ರಾಯ ಭೇದ ಸೂಚಿಸಿದ ಮುಸಲ್ಮಾನರಿಗೆ—"ನೀವೂ ಶೌಕತಾಲ್ಲಿಯವರ ಪ್ರಯತ್ನಗಳೊಡನೆ ಸೇರಿ ವಿಕ್ಯಸಾಧ್ಯವಿದೆಯೇ? ಎಂದು ನೋಡಿ' ಎಂದು ವಿಕೆ ಪ್ರೋತ್ಸಾಹಿಸಬಾರದು?

ವ್ಯಾಸರಾಯರ ಈ ಪ್ರತ್ಯುತ್ತರವು ಸರಕಾರದ ತಂತ್ರದ ಮೂಲಧೋರಣೆಯನ್ನು ಪ್ರತಿಬಿಂಬಿಸುವುದಿಲ್ಲವೇ? ಮುಸಲ್ಮಾನ ಬಂಧುಗಳು ಈ ತರದ ತಂತ್ರಕ್ಕೆ ಬಲಿ ಬೀಳುವರೇ?

ವಿದೇಶ ವರ್ತಮಾನ.

—ರಕ್ಕಾದಲ್ಲಿ ಕ್ರಾಂತಿಕಾರರಾಗಿದ್ದು ಸರಕಾರದ ವಿರುದ್ಧವಾಗಿ ಚಳವಳನ್ನು ಹೂಡುತ್ತಿದ್ದ ೩೦ ಮಂದಿಗಳನ್ನು ಗಡಿಪಾರು ಮಾಡಿರುವರು.

—ಬ್ರಿಟಿಷ ಮಂತ್ರಿ ಮಂಡಲವು ನಿನ್ನೆ ಸೇರಿ ರಾಜ್ಯಭಾರದ ಕುರಿತು ದೀರ್ಘ ಮಾತುಕತೆಗಳನ್ನು ನಡೆಸಿತು.

—ಹಿಂದೂಸ್ಥೀಕರ ಮೇಲೆ ಇಗರ್ಜಿಯು ಬಿಸಪರೇ ನೊದಲಾದವರು ಸಹಾನುಭೂತಿಯನ್ನು ತೋರಿಸುವಂತೆ ಸಿ ಎಫ್ ಎಂಡ್ರೂಸರು ಅಲ್ಲಲ್ಲಿ ಸಭೆಗಳಿಗೆ ಪ್ರಾರ್ಥಿಸಿಕೊಳ್ಳುತ್ತಿರುವರು. ಎಲ್ಲಾ ಚರ್ಚ್‌ಗಳು ಹಿಂದೂ ದೇಶದ ಮೇಲೆ ಕರುಣೆಯಿಟ್ಟಿರಲಿ ಗಾಂಧೀಜಿಯವರ ಬಿಡುಗಡೆಯನ್ನು ನಿರಾಯಾಸವಾಗಿ ಮಾಡಿಸಬಹುದೆಂದು ಅವರ ಹೇಳಿಕೆ

ಒಳದೇಶ ವರ್ತಮಾನ

—ಮುಂಬಾಯಿಯ ವಿದ್ಯಾವಾಯಿನಿ ಸ್ಟೂಡೆಂಟ್ಸ್ ಕ್ಲಬ್ಬಿನ ಉತ್ಸುಕ ಮೆಂಬರರಾಗಿದ್ದ ಶ್ರೀ ಸಂಜೀವ ಸೆಟ್ಟು ಇವೇ ತಿಂಗಳ ತಾ. ೧೫ನೇ ಭಾನುವಾರ ಸಂಜೆ ಕ್ಲಬ್ಬಿನ ಜೆ ಮತ್ತು ಜಿ ಪಂಗಡಗಳು ವಿದ್ಯಾಪೂರ್ ಟೋರ್ ಪಂದ್ಯಾಟನವನ್ನು ಆಡುತ್ತಿದ್ದಾಗ ಜಖಂ ಹೊಂದಿ ತಾ ೧೯ನೇ ದಿನ ಆಸ್ಪತ್ರೆಯಲ್ಲಿ ದೈವಾಧೀನರಾದರು. ಸಜ್ಜಿಯವರ ಅಕಾಲ ಮರಣಕ್ಕಾಗಿ ಸಂತಾಪಗೊಂಡು ಕಳೆದ ತಾ. ೨೩ರಲ್ಲು "ಸೌತ್ ಕೆನರಾ ಸ್ಪೋರ್ಟಿಂಗ್ ಎಸೋಸಿಯೇಶನ ನೇತೃತ್ವದಲ್ಲಿ ದಿ ಬೋಂಬೆ ಫೋರ್ಟ್ ಫ್ರೀ ಸ್ಕೂಟ್ ಸ್ಕೂಲಿನ ಮಂದಿರದಲ್ಲಿ ಒಂದು ಸಭೆಸೇರಿ ದುಃಖಸೂಚನೆಯಾಯಿತು.

—ಮೈಸೂರಿನ ದಸರಾ ಮಹೋತ್ಸವದ ಲಹರ್ ವಿಕ್ಯಂಥಜೆಯಿಂದ ನಡೆಯಿತು. ೧೯ನೇ ರಾತ್ರಿ ಮಹಾರಾಜರು ಅನೆಯ ಮೇಲಿನ ಅಂಬಾರಿಯ ನ್ನೇರಿ ಮೆರವಣಿಗೆ ಹೊರಟಾಗ ಒಬ್ಬ ತರುಣನಾಗಿ ಪೋಲೀಸರು ವಿಕೇ ಹೊಡೆದರು. ಗಲಾಟೆಯಾಯಿತು. ಜನಸಮುದಾಯವು ಆ ಹುಡುಗನ್ನು ಮಹಾರಾಜರಿಗೆ ಆಲ್ಲಿ ತೋರಿಸಲು ಸಾಧಿಸಿತು. ಜನಸಾಗರವು ಅಲ್ಲೋಲಕಲ್ಲೋಲವಾಗುತ್ತಿರುವಾಗ ಮಹಾರಾಜರ ಅನೆಯು ಬೆದರಿತು. ಅದು ಮುಂದೆ ನಡೆಯಲಸಮರ್ಥವಾದ್ದನ್ನು ಕಂಡು ಜನರು ಶಕ್ಯಾಬ್ಯಕ್ಕಿಯಾಗಿ, ಆ ಅನೆಗೆ ಹುಚ್ಚು ತಗಲಿದೆಯೆಂದು ದಿಗಿಲುಪಟ್ಟರು. ಜನ ಜಯವು! ಕಂಡಕಂಡಲ್ಲಿಗೆ ಓಡಲಾರಂಭಿಸಿ, ಬೆದ್ದು, ಅನೇಕರು ಘಾಸಿ ಗೊಂಡರು. ಅರಮನೆಯ ಬಳಿಯಿಂದ ಜನಕಂಡದ ಮೇಲೆ ಸವಾರರೂ ಪೋಲೀಸರೂ ಲಾಠಿ ಪ್ರಹಾರ ಮಾಡಿ ಜನರನ್ನು ಚದರಿಸಿದರು

—ಪಂಡಿತ ಮದನ ಮೋಹನ ಮಾಲವೀಯರೂ ಲಾಲಾ ರಾಜೇಂದ್ರ ಪ್ರಸಾದರೂ ಮತ್ತು ಸಿ ರಾಜಗೋಪಾಲಾಚಾರ್ಯ ಇವರು ಅಸ್ಪೃಶ್ಯತಾ ನಿವಾರಣೆಗಾಗಿ ದಕ್ಷಿಣ ಕ್ರಾಂತಿಕ್ಷೇತ್ರದಲ್ಲಿ ಸಂಚರಿಸಲಿರುವರೆಂದು ತಿಳಿದುಬರುತ್ತದೆ.

—ಶ್ರೀ ಸುಭಾಷ್‌ಚಂದ್ರಬೋಸರನ್ನು ಸಂಯುಕ್ತ ಪ್ರಾಂತ್ಯದ ಫೈಜಾಬಾದ್ ಎಂಬಲ್ಲಿಯ ಸರಮಸೆಗೆ ಮದ್ಯಸ್ಥಾಂದ ಪರ್ಗಾಮಿಸಿರುವರು. ಶ್ರೀಯುತರು ಬಹು ಕ್ಷೀಣವಾಗಿರುವರೆಂದು ತಿಳಿದುಬಂದಿದೆ.

—ಶ್ರೀ ಜಮ್ನಾದಾಸ್ ದ್ವಾರಕಾದಾಸರು ಒಂದು ಬೀಗಸೆಯನ್ನು ಮಾಡಿಸಲಿರುವುದರಿಂದ ಒಂದು ತಿಂಗಳ ಪರೋಪಿ ಮೇಲೆ ಎರವಾಣಿ ಸೆರೆಮನೆಯಿಂದ ಬಿಡುಗಡೆ ಹೊಂದಿರುವರು.

Latest News.

ಈಗ ಬಂದ ಬಿಸಿ ಬಿಸಿ ವಾರ್ತೆ.

—ಕಳ್ಳತ್ವದಲ್ಲಿ ೯ ಮಂದಿ ಬಂಗಾಳಿ ತರುಣರು ಸ್ವೆಲಳ್ ಪೋಲೀಸ್, ರಾಗಿ ಕೆಲಸಮಾಡಬೇಕೆಂದೂ ಅವರು ಕೂಡಲೇ ಕೆಲಸಕ್ಕೆ ಹಾಜರಾಗ ಬೇಕೆಂದೂ ಅವರಿಗೆ ನೋಟೀಸು ಹೋಗಿದೆ.

—ಮುಂಬಾಯಿಯಲ್ಲಿ ಈಸ್ಟ್ ಇಂಡಿಯಾ ಕೊಟನ್ ಎಸೊಸಿಯೇಶನ ಅಧ್ಯಕ್ಷರಾದ ಶ್ರೀ ಮಾಧವದಾಸ್ ಹರಿದಾಸರೆಂಬವರು ತಮ್ಮ ಸಂಘದ ಬಳಿ ಪಿಕೆಟ್ ಮಾಡುವ ಸ್ವಯಂಸೇವಕರನ್ನು ಹಿಡಿಸಬೇಕೆಂದು ಒಬ್ಬ ಪಕ್ಷಾಗಾಣಿಗೆ ಹೇಳಿದುದರಿಂದಾಗಿ ಸ್ವಯಂಸೇವಕರು ಗುಂಪುಗುಂಪಾಗಿ ಬಂದು ಸೆಪ್ಪಿ ಕೊಟನ್ ಮಾರ್ಕೆಟ್‌ನ್ನು ಪಿಕೆಟ್‌ಮಾಡಿದರು. ಗಲಾಟೆಯಲ್ಲಿ ಹರಿದಾಸರ ಮುಂಡಾಸು ಕೂಡಾ ಹಾರಿಸಲ್ಪಟ್ಟಿತೆಂದು ತಿಳಿದು ಬಂದಿದೆ

—ಮುಂಬಾಯಿಯಲ್ಲಿ ಸರ್ ಪುರುಷೋತ್ತಮದಾಸ್ ಥಾಕೂರ್ ದಾಸರ ವಸತಿಯನ್ನು ಸ್ವಯಂಸೇವಕರು ಪಿಕೆಟ್‌ಮಾಡುತ್ತಿರುವರು. ಯುರೋಪಿಯನರೊಡನೆ ವ್ಯಾಪಾರ ನಡೆಸಲು ಅನುಮತಿ ಕೊಟ್ಟುದೇ ಇದಕ್ಕೆ ಕಾರಣವೆಂದು ತಿಳಿಯಲಾಗುತ್ತದೆ

—ಬೆಳಗಾಂವಿಯ ಶ್ರೀ ಶಿವಲಿಂಗಪ್ಪರೆಂಬವರು ಕರ್ತಾರದ ದಿನ ತನ್ನ ಅಂಗಡಿಗೆ ಬಾಗಿಲುಹಾಕಿದರು. ಆವರು ಕಾಯಿದೆಬಾಹಿರಸಭೆಗೆ ಸಹಾನುಭೂತಿಯನ್ನು ತೋರಿಸಿದರೆಂದು ಅವರನ್ನು ಕೈದುಮಾಡಿದರು ನ್ಯಾಯ ವಿಚಾರಣೆಯಾಗಿ ಬರೇ ಬಾಗಿಲು ಮುಚ್ಚುವುದೊಂದು ಕಾನೂನುಲ್ಲಂಘನೆಯಲ್ಲವೆಂದು ನ್ಯಾಯಾಧೀಶರು ತೀರ್ಮಾನಿಸಿದರು.

—ಬೆನಾರಿಸ್ಸಿನ ಪ್ರಮುಖ ಮುಂದಾಳುಗಳಾದ ಶ್ರೀ ತಾರಪಾದ ಭಟ್ಟಾಚಾರ್ಯರೊಬ್ಬರು ಕಾನೂನುಲ್ಲಂಘನೆಮಾಡಿದುದಕ್ಕಾಗಿ ಕೈದು ಗೊಳಗಾಗಿರುವರು.

—ಬಾಮೋರಿನಲ್ಲಿ ಕಳ್ಳಾಟಿಕೆಯು ನಾನ್ಕಾಗಳನ್ನು ಮಾಡುತ್ತಿದ್ದ ಕೆಲವು ಯುವಕರನ್ನು ಒಂದು ಮನೆಯಲ್ಲಿ ಸೆರೆಹಿಡಿದಿಂಬರು.

—ದಿಲ್ಲಿಯಲ್ಲಿ ಕ್ರಾಂತಿಕಾರರೊಡನೆ ಕೂಡಿಕೊಂಡು ಪಿತೂರಿ ನಡೆಸಿದನೆಂದು ದಸ್ತಗಿರಿಮಾಡಲ್ಪಟ್ಟಿ ಶ್ರೀ ಯಶಪಾಲನು ಪೊಲಾಸ್ ಹೊಂದಿರುವನು.

—ಮೈಸಿಥ್ ಲೈಫ್ ಇನ್ಶೂರೆನ್ಸ್ ಕಂಪನಿಯಲ್ಲಿ ವಿನು ತೆಗೆದ ದಿವಂಗತ ಪಂಡಿಮಾಲ ಗುಣಪತಿ ಕಟ್ಟು (ಪಂಡಿಮಾಲ ನರಸಿಂಹ ಕಮ್ಮಾರ ಸಹೋದರ) ಯರ ಬಾಬ್ತು ಇದೇ ತಿಂಗಳ ೧೯ನೇ ತಾರೀಖಿಗೆ ಸಲ್ಲಿಸಲ್ಪಟ್ಟ ಕ್ಲೈಮ್ ಪತ್ರಗಳು ಕಾಪನಿಯವರಿಂದ ಸ್ವೀಕರಿಸಲ್ಪಟ್ಟು, ದಿವಂಗತರ ವಾರಸುದಾರರಿಗೆ ಸಲ್ಲಿ ಹಣವನ್ನು ಬೇಗನೇ ಪಾವತಿಮಾಡಬೇಕಾಗಿ ಇಲ್ಲಿಯ ಆಫೀಸಿಗೆ ನಿನ್ನೆ ದಿವಸ ಸಾಯಂಕಾಲ ಪೆಡ್ ಆಫೀಸಿನಿಂದ ತಂತಿ ಬಂದಿರುತ್ತದೆ

(Advt.)

—ಕರಾಚಿಯಲ್ಲಿ ಕ್ವೌರಿಕರು ಅಸ್ಪೃಶ್ಯರ ಕ್ವೌರಮಾಡುವುದಿಲ್ಲವೆಂದು ಹಠಹಿಡಿದರು ಕೆಲವು ಅಸ್ಪೃಶ್ಯರನ್ನು ಬೈದು ಹೊಡೆದು ಹಿಂದಕ್ಕೆ ಕಳುಹಿಸಿದರು. ಈ ವಾರ್ತೆಯನ್ನು ಕೇಳಿದ ಹಿಂದೂ ಮಹಾ ಸಭೆಯ ಅಧ್ಯಕ್ಷರು ಕ್ವೌರಿಕರ ಸಭೆಯೊಂದನ್ನು ಸೇರಿಸಿ ಅವರನ್ನು ಸಮ್ಮಾರಿಗೆ ತಂದರು ಈಗ ಅಲ್ಲಿ ಅಸ್ಪೃಶ್ಯರ ಕ್ವೌರವನ್ನು ಸ್ವೀಕರು ಮಾಡುತ್ತಿದ್ದಾರೆ

—ಬೆಟ್ಟಿಗೋಂಗಿನಲ್ಲಿ ಅನೇಕರ ಮೇಲೆ ನೋಟೀಸು ಜಾರಿಯಾಗಿ ಅವರು ಒಂದು ತಿಂಗಳ ತನಕ ತಮ್ಮ ನಿವಾಸ ವಿಕಾಶವನ್ನು ಬಿಡಬಾರದೆಂದು ಆಜ್ಞಾಪಿಸಲಾಗಿದೆ. ಕ್ರಾಂತಿಯ ಏರ್ಪಾಡಕ್ಕಾಗಿ ಇಂತಹ ಕಾಸನವೆಂದು ತಿಳಿದುಬರುತ್ತದೆ.

—ಲಕ್ನೋವಿನಲ್ಲಿ ಹಿಂದೂ ಮುಸಲ್ಮಾನ ತೀರ್ಮಾನಕ್ಕಾಗಿ ತಾ. ೧೫ರಲ್ಲಿ ಜರಗಲಿರುವ ಪರಿಷತ್ತಿಗೆ ಸರ್ ಎಂ ಇಕ್ಬಾಲ್‌ರವರು ಹೋಗಿರುವುದಿಲ್ಲ ಶೌಕತಾಲಿಯವರ ಸೂತ್ರಗಳಿಗೆ ತಮ್ಮ ಅಸಮ್ಮತಿಯಿದೆ ಎಂದು ಇವರ ಸೂಚನೆಯಿಂದ ತಿಳಿದು ಬರುತ್ತದೆ.

—ಮುಂಬಾಯಿಯ ಹತ್ತಿ ವ್ಯಾಪಾರದ ಮಾರ್ಕೆಟ್ಟಿನಲ್ಲಿ ಸ್ವಯಂಸೇವಕರಿಂದ ಪಿಕೆಟ್‌ಮಾಡಲ್ಪಡುತ್ತಿದ್ದು ಸ್ಥಗಿತವಾಗಿದೆ. ವ್ಯಾಪಾರಕ್ಕಾಗಿ ಇರುವ ಒಟ್ಟಿನಲ್ಲಿರು ಯುರೋಪಿಯನರು ಬಂದ ಹಾಗೆ ಹೊಯಿಸುಗುತಿರುವರು.

ವಿಜಯ ಕನ್ನಡ

ಸ್ವೀಕಾರ

ಮಂಗಳೂರು ಮುನಿಸಿಪಾಲಿಟಿಯ ೧೯೩೧–೩೨ರ ಆಡಳಿತ ವರದಿಯ ಪ್ರತ್ಯೇಕ ಪ್ರತಿಗಳು ನಮಗೆ ಸಿಕ್ಕಿವೆ. ಅದನ್ನು ಆದರದಿಂದ ಸ್ವೀಕರಿಸಿದ್ದೇವೆ

ತಿದ್ದುಪಡಿ

ಕಳೆದ ಭಾನುವಾರದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ ಅತ್ತೂರು ವೈಕುಂಠ ಪ್ರಭು ಬೇಂಕ್ ಇವರ ಜಾಹೀರಾತಿನಲ್ಲಿ, ಆಡಿಟ್ಟರ್ ತಾ. ೩–೧೦–೩೧ ಮೋನ್ ನಂಬ್ರ ೬೫೫/೩೧, ಸಾಲಗಾರರಿಗೆ ಹೆಸರು–ರಾಮ ಶೇರಿಗಾರ, ಮಂಗಳೂರು ಪಹಾರ್ ಹಿಂದೂಸ್ಥಾನ ಸಿನೆಮಾದಲ್ಲಿ ಕೆಲಸ, ಅಸ್ಸು ರೂ. ೨೦೦ ಎಂದು ಪ್ರಕಟವಾದದ್ದನ್ನು ಅಸ್ಸು ರೂ. ೨೭ ಎಂದು ಓದಿಕೊಳ್ಳಬೇಕು.

ಮಂಗಳೂರು: — ಈ ಸಲ (ಟಿ ಯಸ್ ಎಲ್ ಸಿ) ಟ್ರೈನಿಂಗ್ ಪಬ್ಲಿಕ್ ಪರೀಕ್ಷೆಯು ೧೯೩೨ನೇ ಇಸವಿ ಮಾರ್ಚಿ ತಾರೀಖು ೧೭, ೧೮ ನೇ ದಿನಗಳಲ್ಲಿ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುತ್ತದೆ. ಹಳೇ ಸ್ಕೀಮಿಗೆ ಪರೀಕ್ಷೆಗೆ ಈ ಸಲ ಭೂಗೋಳದಲ್ಲಿ ಪರೀಕ್ಷೆಯಿದೆ ಹೊಸ ಸ್ಕೀಮಿನವರಿಗೆ ಕಳೆದ ವರ್ಷದಂತೆ ಎಲ್ಲಾ ಪಾಠಗಳಲ್ಲಿ ಪರೀಕ್ಷೆ ಇದೆ ಒಂದು ಯಾ ಎಲ್ಲಾ ವಿಷಯಗಳಲ್ಲಿ ಪರೀಕ್ಷೆ ಕೊಡುವವರು ೩ ರೂಪಾಯಿಗಳನ್ನು ಸಮಿಾಪದ ಖಜಾನೆಗೆ ಕಟ್ಟಿ ಖಜಾನೆ ಚಲನನ್ನೂ ಈ ಕೆಳಗಿನ ವಿವರವನ್ನೂ ಸದ್ರಿ ಶಾಲೆಯ ಹೆಡ್ ಮಾಸ್ಟರರಿಗೆ ಇದೇ ನವಂಬರ್ ತಾ ೧೫ ಒಳಗೆ ತಿಳಿಸಿಕೊಳ್ಳತಕ್ಕದ್ದು. ೧ ತರಬೇತಿಯಾದ ವರ್ಷ ೨ ಈ ವೆರೆದಲು ಪರೀಕ್ಷೆ ಕೊಟ್ಟ ವರ್ಷ ೩ ವರ್ಷಗಳ ರಿಜಿಸ್ಟರ್ಡ್ ನಂಬ್ರಗಳು ೪ ಈ ಸಲ ಪರೀಕ್ಷೆ ಕೊಡುವ ವಿಷಯಗಳು ೫ ಅರ್ಜಿದಾರರ ಗ್ರೇಡುಗಳು ೫ ಅವರ ವಿಳಾಸ. ಈ ಸಂಗತಿಗಳನ್ನು ತಿಳಿಸದಿದ್ದಲ್ಲಿ ಪರೀಕ್ಷೆಗೆ ಅರ್ಜಿಯನ್ನು ಅಂಗೀಕರಿಸಿಕೊಳ್ಳಲಿಕ್ಕಿಲ್ಲವೆಂದು ಸದ್ರಿ ಶಾಲಾ ಹೆಡ್ ಮಾಸ್ಟರರು ತಿಳಿಸುತ್ತಾರೆ

ಮಂಗಳೂರು ಮುನಿಸಿಪಾಲಿಟಿ ಕೌನ್ಸಿಲಿನ ಒಂದು ಸಭೆಯು ತಾ ೧೬–೧೧–೩೨ನೇ ದಿನ ಸಂಜೆ ಘಂಟೆ ೫ ೩೦ಕ್ಕೆ ಅದರ ಆಫೀಸಿನಲ್ಲಿ ಜರಗಲಿರುವುದು.

ಕಳೆದ ತಾ ೭ರಲ್ಲಿ ಜರಗಿದ ಹರಿಜನಸೇವೆ ಸಂಘ ಈ ಸಂಘದ ಸಭೆಯಲ್ಲಿ ನಿರ್ಣಯಿಸಿದ ಪ್ರಕಾರ ಇದೇ ಬರುವ ತಾ ೧೩ನೇ ಆದಿತ್ಯವಾರ ಅಪರಾಹ್ನ ಗಂಟೆ ೪ಕ್ಕೆ ಥಿಯೊಸೋಫಿಕಲ್ ಸೊಸೈಟಿಯಲ್ಲಿ ಒಂದು ವಿಶೇಷೋಪಹಾರವು ಜರಗುವುದು ಅದಕ್ಕೆ ಸೇರಲು ಅಪೇಕ್ಷಿಸುವವರು ೦–೪ ೦ ದಂತೆ ಗೆಯನ್ನು ಈ ಕೆಳಗೆ ಸಹಿ ಹಾಕಿದವರ ಪಕಾ ಕೊಡತಕ್ಕದ್ದು. ಆನಂತರ ಆದೇ ರೋಜಿನಿಂದ ಸಣ್ಣ ಸಣ್ಣ ಪಂಗಡಗಳಿಂದ ಬೆಸರಜೆಗೆ ಹೊರಟು ಜೈಲ್ ರೋಡ್ ಕದ್ರಿಸ್ಕ್ರೂ, ಬೆಂಡೂರು ರಸ್ತೆ, ಬಲ್ಮಠ ರಸ್ತೆಗಾಗಿ ಹಂಪನ್‌ಕಟ್ಟೆ ವರೆಗೆ ಹೋಗುವುದು ಹರಿಜನರನ್ನು ತಮ್ಮ ಮನೆಗೆ ಬರಲಿಕ್ಕೆ ಬಿಡಲು ಸಿದ್ಧರಿದ್ದವರು ಈ ಕೆಳಗಿನವರಿಗೆ ಸೂಚಿಸಿದಲ್ಲಿ ಆಂತಹ ಮನೆಗಳಿಗೆ ಹೋಗಿ ಸ್ವಲ್ಪ ಕುಳಿತು ಮೆರವಣಿಗೆ ಮುಂದೆ ಹೋಗುವುದು ಮಹಾಜನರು ಸಹಕರಿಸಬೇಕಾಗಿ ವಿನಂತಿ ಎಂದು ಶ್ರೀ ಯಂ. ಮಾಧವ ರಾವ್ ಇವರು ತಿಳಿಸುತ್ತಾರೆ

ತಾ ೧೫ರಲ್ಲಿ ಇಲ್ಲಿಯ ಕೆಪಿಗುಡ್ಡೆ ಬೀದಿ ವ್ಯಾಪಾರಿ ಪುತ್ತು ವೈಕುಂಠ ಶೇಟಿರವರ ಬೀದಿಕಟ್ಟುತ್ತಿರುವ ಕಣ್ಣನ್ನೂರಿನ ಶಂಕರಾಚಾರಿ ಎಂಬವನು ಹಿಂದಿನ ದಿನ ಸಂಜೆಯ ತನಕವೂ ಕೆಲಸಮಾಡಿತೊಂಡಿದ್ದನು. ಮರುದಿನ ಬೆಳಿಗ್ಗೆ ಆತನ ಕಳೇಬರವು ನೇಣುಹಾಕಿಕೊಂಡು ಹೋಗಾಡುತ್ತಿತ್ತು ಆತ್ಮಹತ್ಯೆಯೋ ಏನೆಂಬುವು ಗೊತ್ತಾಗಿಲ್ಲ

ಇದೇ ಆಕ್ಟೋಬರ್ ತಾ ೨೮ನೇ ದಿನ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ವಿದ್ಯಾದಶಮಿ ದಿನ ಹಳೇ ವಿದ್ಯಾರ್ಥಿ ದಿನಾಚರಣೆಯೂ ಜರಗಿತು ಮಧ್ಯಾಹ್ನ ವಲ್ಲಿ ಮಹಾಭೋಜನ ದಿವಾನ್ ಬಹದೂರ್ ಎನ್ ಕುಟ್ಟರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೈಜ್‌ಗಳ್ನ ಕೊಟ್ಟನಂತರ, ಕೈತಪಿಸಿಯವರು ತಮ್ಮ ಎಸೋಸಿಯೇಶನ್‌ನ ಚಟುವಟಿಕೆಗಳ ಕುರಿತು ರಿಪೋರ್ಟ್‌ನ್ನು ಓದಿದರು ಅಧ್ಯಕ್ಷರ ಭಾಷಣಾನಂತರವೂ, ಟೋಥ್ ಪ್ರದವೂ ಆದ ಭಾಷಣವು ನಡೆದು ವರ್ಷಾಚ್ಯಾರಂಭದಲ್ಲಿ ನಡೆಯುತ್ತಿದ್ದ ಹಳೆ ವಿದ್ಯಾರ್ಥಿ ಸಹಭೋಜನವನ್ನು ವಿಜಯ ದಶಮಿಸಮಯ ಹಳೇ ವಿದ್ಯಾರ್ಥಿ ದಿನವೇ ನೆರವೇರಿಸಬೇಕೆಂದು ನಿರ್ಧಾರವಾಯಿತು.

ತಾ ೨೮ನ್ನು ಗಣಪತಿ ಹೈಸ್ಕೂಲಿನಲ್ಲಿ ವಿಜಯದಶಮಿ ಮಹಾ ಸಭೆಯೂ, ನಾಟಕವೂ ಡಾ. ವಿಟ್ಟಲ್‌ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರಿಲ್ ಮಾಸ್ಟರರಿಂದ ಮಿ ಎಂ ಸ್ವಾರಬ್ಬರೆವರು ತರಬೇತಿ ಮಾಡಿದ ಹುಡುಗರ ಮನೋಹರ್ಕಿಕ ಪಿರಮಿಡ್ಡುಗಳೂ, ಒಂದೆರಡು ಸಣ್ಣ ನಾಟಕಗಳೂ ಜರಗಿದುವು. ಕೆನ್ನಡ ನಾಟಕದಲ್ಲಿ ಸುಧಾರಕನ ಭಾಗ ವಹಿಸಿದ್ದ ಶ್ರೀ ಶಾಸ್ತ್ರಿಗಳ ಅಭಿನಯವೂ ಮೂಕ ಪ್ರಾಣಿಸಾದೃಶವಾಗಿತ್ತು

ಶ್ರೀಯುತ ಕೆ ನಾರಾಯಣ ಕಿಣಿ, ಎಂ. ಎ. ಪಿ. ಎಚ್ ಡಿ ಇವರ ಪ್ರಯೋತ್ಸಾಹದ ಮಂಗಳೂರಿಗೆ ಮೊನ್ನೆ ಬಂದಿದ್ದು, ಈ ದಿನ ಸಂಜೆ ೬.೩೦ಕ್ಕೆ ಇಲ್ಲಿನ ಕೆನರಾ ಹೈಸ್ಕೂಲಿನ ಭವನೀಂದ್ರ ಹೋಲಿನಲ್ಲಿ ಶ್ರೀ ಎ. ಪಿ. ಶೆಟ್ಟಿ, ಎಂ. ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ಜರಗಲಿರುವ ಸಭೆಯಲ್ಲಿ(Students' Life in America) ಅಮೆರಿಕಾದಲ್ಲಿ ವಿದ್ಯಾರ್ಥಿ ಜೀವನ" ಎಂಬುದರ ಕುರಿತು ಮಾತನಾಡಲಿರುವರು.

ಇದೇ ತಾ ೨೯ನೇ ದಿನ ಜರಗಿಸಬೇಕೆಂದಿದ್ದ ಸ್ವದೇಶೀ ಸಪ್ತಾಹ ಪ್ರತಿ ಮಳೆಯ ದೆಸೆಯಿಂದಾಗಿ ಹಿಂದಕ್ಕಿರಿಸಲ್ಪಟ್ಟು ಇದೇ ಆದಿತ್ಯವಾರ ೨೩ನೇ ದಿನ ಜರಗಿಸಲ್ಪಡುವುದು. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಪುತ್ತೂರಿನ ಸುಪ್ರಸಿದ್ಧ ವಕೀಲರೂ, ಸಿ. ಪಿ. ಸಿ ಕಾಂಗ್ರೆಸಿನ ಜಿಲ್ಲಾ ಕಾರ್ಯದರ್ಶಿಗಳೂ ಆಗಿದ್ದ ಶ್ರೀ. ಬೆಳ್ಳೆ ಶೇಷಗಿರಿಪ್ಪ ರಾಯರು ಇದೇ ತಾ. ೭ರಲ್ಲಿ ಕೋರ್ಟಿನಲ್ಲಿ ಹೃದಯಸಂಸ್ತಂಭದಿಂದಾಗಿ ದೈವಾಧೀನರಾದರೆಂದು ತಿಳಿಸಿಸಲು ತುಂಬಾ ವಿಷಾದಿಸುತ್ತೇವೆ. ದಿವಂಗತರು ಬಹು ಗುಣಾಢ್ಯರೂ ಪರೋಪಕಾರಿಗಳೂ ಮತ್ತು ದೀನಬಂಧುಗಳೂ ಆಗಿದ್ದರು ಅವರ ಅಗಲುವಿಕೆ ಮನಃ ಶಾಂತಿಯೂ ಶ್ರೀಯುತರ ಆತ್ಮಕ್ಕೆ ಚಿರ ಶಾಂತಿಯೂ ಇರಲೆಂಬು ಪ್ರಾರ್ಥನೆ

ಕಾವೆಳಕಟ್ಟೆ: — ಇಲ್ಲಿ ೨೬ನೇ ತಾರೀಖು ಸೋಮವಾರ ತಾಲೂಕು ಬೋರ್ಡು ಆಸ್ಪತ್ರೆ ನಡೆಯಿತು, ಸುಮಾರು ೬೦೦ ಪೇಟೆರಲ್ಲಿ ಸುಮಾರು ೪೫೦ ಮಂದಿ ಹಿಟು ತೊಟ್ಟಿರುವರು. ಸುಮಾರು ೧೬೦ ಮಂದಿ ಸ್ತ್ರೀ ಪೇಟೆರಲ್ಲಿರು ಎರಡೂ ಕಡೆಯ ವಿಜಂಟರುಗಳೂ ಬಹಳ ಸಾಹಸದಿಂದ ಕೆಲಸ ನಡೆಸುತ್ತಿದ್ದರು ವಿಜಂಟರು ಗಳೊಳಗೆ ಜಗಳ ಹೆಚ್ಚಿಬ್ಬಾಗುತ್ತಾ ಬಂದು ಲಾಠಿ ಚಾರ್ಜು ಆಗುವ ಸಂಧರವು ಮಧ್ಯಾಹ್ನದ ಸಂಕಾರ ಕೈಗೂಡಿತು ಎರಡೂ ಕಡೆಳ ಟೀಕ್ಸಿಗಳಿದ್ದರೂ ನಡೆದು ಬಂದವರೆ ಸಂಖ್ಯೆ ಹೆಚ್ಚು ಒಟ್ಟಾರೆ–ಚಾನ್ಸ್ ರಾ ವಕೀಲ ರಾಮ ಭಟ್ಟ ಬಿ ಎ ಬಿ ಎಲ್ ರವರಿಗೆ ಎಂದು ಸಾಯಂಕಾಲ ಕೋರಿಬಂತು

ಬಂಟ್ವಾಳ — ಇಲ್ಲಿಯ ಎಸ್ ವಿ ಎಸ್ ಶಾಲೆಗಳಲ್ಲಿ ಮೂಮೂಲ ಪ್ರಕಾರ ನಡೆಯುತ್ತಿದ್ದ ಶಾರದಾ ಪೂಜೆಯು ಈ ವರ್ಷ ಸಪ್ತಮಿ ಇಲ್ಲವಂತೆ ದೇವಸ್ಥಾನದಿಂದ ನಡೆಸಿ ಬರುವ ಹಿಂದೂ ಶಾಲೆಯ ಅವಸ್ಥೆ ಹೀಗೆ.

ಫರಂಗಿಪೇಟೆ — ವರ್ಷಂಪ್ರತಿ ನಡೆಯತಕ್ಕ ಶ್ರೀ ಶಾರದಾ ಪೂಜೆಯು ತಾರೀಖು ೩–೧೦–೩೨ರಿಂದ ೯–೧೦–೩೨ರ ವರೆಗೆ ಇಲ್ಲಿಯ ಶ್ರೀ ರಾಮ ಹಾ ಎ ಶಾಲೆಯಲ್ಲಿ ವಿಧಿಪೂರ್ವಕ ನಡೆಯಿತು ತಾ ೭ನೇ ದಿನ ಸಾಯಂಕಾಲ ಮ ರಾ ೦ ಮಂಗಳೂರು ರೇಂಜ್ ಜೂನಿಯರ್ ಡಿಪ್ಟಿಟಿ ಇನ್ಸ್‌ಪೆಕ್ಟರವರ ಪ್ರೋತ್ಸಾಹದಿಂದ ಮಾಯಾಲಾಂದ್ರ ಪ್ರದರ್ಶನವು ಜರಗಿತು

ಪುತ್ತೂರಿನಲ್ಲಿ ದಸರಾ ಮಹೋತ್ಸವ

ಈ ವರ್ಷ ಈ ತಿಂಗಳ ೧೮ನೇ ತಾರೀಖು ವರೆಗೆ ನಡೆಯುತು ಎ೦ಬಾ೦ ಪ್ರದರ್ಶನವು ಪ್ರತಿದಿನದ ಕಾರ್ಯ ಕ್ರಮದಲ್ಲಿ ಮೊದಲನೆಯದಾಗಿ ಆಡಿಸಲ್ಪಡುತ್ತಿತ್ತು. ಈ ಕಾರ್ಯದಲ್ಲಿ ರಾ ಬಿ ಯಂ ಪಾಳಿಗರೂ ಹಾಯರ ಎಲಿಮೆಂಟರಿ ಶಾಲಾ ಮಕ್ಕಳೂ ತುಂಬಾ ಶ್ರಮಪಟ್ಟು ಕೆಲಸಮಾಡಿದ್ದಾರೆಂದರೆ ಅತ್ಯುಕ್ತಿಯಲ್ಲ ಬಗೆಬಗೆಯ ಅಂಗಸಾಧನೆ ಮಾಡುವುದು ದೇಹದ ವಿಳಗೆಯ ಒಂದಂಗವೆಂದೂ, ಅವುಗಳನ್ನು ಹೇಗೆ ಚಮತ್ಕಾರದಿಂದ ಮನಸ್ಸಿಗೆ ಬೇಸರವಾಗದಂತೆ ಸಾಧಿಸಬಹುದೆಂಬೂ ಮಂದಟ್ಟಾಗುವಂತೆ ಪ್ರದರ್ಶನ ಏರ್ಪಾಡಾಗಿತ್ತು

ಇನ್ನು ಪ್ರತಿದಿನವೂ ಜಿಲ್ಲೆಯೊಳಗಿನ ಮತ್ತು ಜಿಲ್ಲೆಯ ಹೊರಗಿನ ಪ ಹನೀಯರಿಂದ ವಿವಿಧ ವಿಷಯಗಳ ಕುರಿತು ಭಾಷಣಸಂಗೀತಗಳ ರೂಪದಿಂದ ಕಲೋಪಾಸನೆಯ ಕಾಯಾ೯ವು ನಡೆದಿತ್ತು. ರಾ ಶಂಕರ ಮಂಗೇಶರಾಯರು ಭಾರತದೊಳಗಿನ ಕರ್ಣ"ನ ಕುರಿತು ಅತ್ಯಂತ ತನ್ಮಯತೆಯಿಂದ ರಸವತ್ತಾಗಿ ಭಾಷಣ ಮಾಡಿದ್ದರು ರಾ ಯಂ ಎನ್ ಕಾಮತರು ಹರಿಬಿ" ಎಂಬ ವಿಷಯವನ್ನೆತ್ತಿಕೊಂಡು ೩ ದಿನ ದಿನಗಳಲ್ಲಿ ಗಂಡುಹೆಣ್ಣು, ಪಂಡಿತ ಪಾಮರರಿಗೆ, ರುಚಿಸುವ ತಮ್ಮ ಅಮೊಂದು ನವೀನರೀತಿಯಿಂದ ಭಾಷಣಕೊಟ್ಟರು ಅನಾವಶ್ಯಕವಾಗಿ ಹರಟೆ ಕೊಚ್ಚುತ್ತಾ ಅಮೂಲ್ಯವಾದ ಸಮಯವನ್ನು ಕೊಲ್ಲುವಾರದಂದೇ ಅವರ ಭಾಷಣದ ತಾತ್ಪರ್ಯ ರವೀಂದ್ರನಾಥ ಠಾಗೂರರ ಗೀತಾಂಜಲಿಯನ್ನು ಓದಿ ಅದರ ರಸವನ್ನು ಸಭಿಕರಿಗೆ ಉಡಿಸಿದವರೂ ಇವರೇ ಶ್ರೀ ಉಗ್ರಾಣ ಮಂಗೇಶರಾಯರು ಜಗನ್ನಾಥ ವಿಜಯದಿಂದ ಕೆಲವು ಕಾವ್ಯಭಾಗಗಳನ್ನು ಸ್ವಾರಸ್ಯವಾಗಿ ಓದಿ ಸಭಿಕರನ್ನು ಆಹ್ಲಾದಗೊಳಿಸಿದರು ಶ್ರೀ ಮಂಜೇಶ್ವರ ಗೋವಿಂದ ಪೈಗಳು ಕವಿರಿ ದೇವಸ್ಥಾನದ ಇತಿಹಾಸವನ್ನು ಸಾಂಗವಾಗಿ ಓದಿ ಹೇಳಿದರು. ಶ್ರೀ. ಕಡೆಗೋಡ್ಲು ಶಂಕರ ಭಟ್ಟರು ಕಾವ್ಯಕ್ಕೂ ಜನಜೀವನಕ್ಕೂ ಇರುವ ನಿಕಟ ಸಂಬಂಧವನ್ನು ತಮ್ಮ ಮನಸ್ಸಿಗೆ ಹೊಳೆದಂತೆ ಸ್ವತಂತ್ರವಾಗಿ ವಿಚಾರಿಸಿ ಸ್ವಾರಸ್ಯವಾಗಿ ವಿವರಿಸಿದರು ಜಿಲ್ಲೆಯೊಳಗಣ ಈ ಮಹಾನುಭಾವರುಗಳಲ್ಲದೆ ಬೆಂಗಳೂರಿನಿಂದ ಬಂದಿದ್ದ ಶ್ರೀ ಟಿ ಟಿ ಶರ್ಮರು ಗತವೈಭವದ ಸೌಂದರ್ಯರಾಶಿಯನ್ನು ತಮ್ಮ ಸರ್ವತೋಭದ್ರ ಮಾತುಗಳಿಂದ ಚಿತ್ರಿಸಿ ಚಿತ್ರಿಸಿದರು. ಇವರಲ್ಲದೆ ಶ್ರೀಮತಿ, ತಿರುಮಲೆ ರಂಜಮ್ಮನವರು ತಮ್ಮ ಕೋಮಲವಾದ ಕಂಠಮಾಧುರ್ಯದಿಂದಲೂ ಮಧುರವಾದ ವೀಣಾನಾದದಿಂದಲೂ ಕೂಡಿದ ಜನರನ್ನು ಮಂತ್ರಮುಗ್ಧರಾಗಿ ಸಿದರು ಧಾರವಾಡದಿಂದ ಬಂದಿದ್ದ ಶ್ರೀ. ಜಹಗೀರದಾರರು ನಾಟ್ಯ ಕಲೆಯ ವಿಷಯವಾಗಿ ತಮ್ಮ ಸಾಶಾಸ್ತ್ರ ಜ್ಞಾನಾನುಭವದಿಂದ ಅತ್ಯಂತ ಉಪಯುಕ್ತವೂ ರೀತಿಯಲ್ಲಿ ಭಾಷಣಮಾಡಿದರು ರಾಮಕೃಷ್ಣ ಮಿಷನಿನ ಸ್ವಾಮಿಜಿಯವರು ಭಕ್ತವಿಜಯದ ತತ್ವವನ್ನು ಚಲೋ ರೀತಿಯಿಂದ ವರ್ಣಿಸಿ ಮಾತಾಡಿದರು ಶ್ರೀ ಕೃಷ್ಣ ಕರ್ಮ ಬೆಟಗೇರಿಗಳು ಜನಪದ ಸಾಹಿತ್ಯವನ್ನು ಸಭಿಕರಿಗೆ ಓದಿ ಹೇಳಿದ್ದಲ್ಲದೆ, ಸಾಹಿತ್ಯದಲ್ಲಿ ಅದರ ಸ್ಥಾನ ಮತ್ತು ಅವಶ್ಯಕತೆಯ ಕುರಿತಾಗಿ ಹೇಳಿದರು ಸೈಕಾಲಿನ ಶ್ರೀ ಆನಂತಕೃಷ್ಣ ಕರ್ಮರು ತ್ಯಾಗರಾಜರ ಜೀವನ ಚರಿತ್ರೆಯನ್ನು ಲಲಿತವಾದ ಭಾಷೆಯಿಂದ ಸೊಗಸಾಗಿ ಹೇಳಿದರು. ಪ್ರಮುಖರುಕೆ ಉದಾಹರಣೆಗಾಗಿ ರಾಜರ ಕೃತಿಗಳನ್ನು ಹಾಡಿ, ಅರ್ಥವಿಶೇಷ್ಯವಿರುವ ಭಾಷೆಯ ಗಾಂಭೀರ್ಯವನ್ನು ಮತ್ತಷ್ಟು ಮಿನ್ನಾಗಿಸಿತು. ಈ ಮಹಾಜನರೆಲ್ಲರೂ ಕರೋಪಾಸನಾ ಗಾರ್ಡ್ ಪುತ್ತೂರಲ್ಲಿ ನೆರವೇರಿಸಿದರು. ಕಡೆಯ ದಿನ ಶ್ರೀ ಎ ಪಿ. ಶೆಟ್ಟಿ ಎಂ.ಎಲ್.ಸಿ ಯವರ ನೇತೃತ್ವದಲ್ಲಿ ಶಾಲಾ ಬಾಲಕರ ಪಿ ರಾಗಿಯ ಆರ್ಯಾಳಂಬವು ನಡಿದು ಶ್ರೀ ಸಿ ಎಸ್. ಶಾಸ್ತ್ರಿಗಳ ಅಧಿಪತ್ಯದಲ್ಲಿನಿಂತ ಬಳಿಕ ಈ ಸಮಾರಂಭವು ತೊನಿಗೊಂಡಿತು ಇದು ವಿಜಯಕ್ಕೆ ಇಲ್ಲಿಯ ತಾಲೂಕು ಬೋರ್ಡು ಸೈನಿಂಟಿಂಡಾಂಟ್ ಶ್ರೀ ಶಿವರಾಯರೇ ಆಗಿರುತ್ತಾರೆ ಈ ಮಹೋತ್ಸವ ಕಾಲದಲ್ಲಿ ೫ನೇ ದಿವಸ ಒಂದು ಕುಟುಂಬವನ್ನು ಎರಡು ಮಾಡಿದ ವನ್ನೂ ಗೊತ್ತಿಲ್ಲದವರಂತೆ ಸುಮ್ಮನೇ ಕುಳಿಸಿ ಹೊರಗೆ ಕೋಲುಸೆಕ್ಕಿಸಿ ಎಬ್ಬಿಸಲ್ಪಟ್ಟ ತಾನೇತಾನಾಗಿ ಸುಧಾರಿಸಿದರು ಶ್ರೀ. ಕೋ. ಶಿ ಕಾರಂತರದರ ಉತ್ಸಾಹ, ಉಲ್ಲಾಸ, ಪರಿಶ್ರಮ, ಉದ್ಯಮಗಳೂ ಈ ಸಂದರ್ಭದಲ್ಲಿ ಸ್ಮರ್ತವ್ಯವೆಂದು ಹೇಳುವುದಕ್ಕೆ ಬರುವುದಿಲ್ಲ ಇಂಥ ನಾಡಹಬ್ಬಗಳನ್ನು ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಎಲ್ಲಾ ದೇವಾಲಯಗಳಲ್ಲಿಯೂ ಜನನೋಪಕಾರ್ಥ, ದೇಶೋನ್ನತಿಗಾಗಿ ದೃಷ್ಟಿಯಿಂದ ಮಾಡಿಸಿ ಕರ್ನಾಟಕದಲ್ಲಿ ಒಮ್ಮೆ ಶಿಥಿಲವಾದ ದೈವಭವನ್ನು ಪುನಃ ಬೆಳೆಯಿಸುವ ಉದ್ಯಮ ವನ್ನು ಕೈಕೊಳ್ಳಬೇಕಾಗಿ ಮಹಾಜನರಲ್ಲಿ ವಿಜ್ಞಾಪನೆ

ಮಟ್ಟಿಮಲೆ, ಕಂಕರ ನಾರಾಯಣ ರಾವ್.

ಕಾಸರಗೋಡು — ತಾರೀಖು ೩–೧೧–೩೨ರಲ್ಲಿ ಇಲ್ಲಿಂದ ಸುಮಾರು ೧೩ ಮೈಲು ದೂರ, ಅಡಿಪಿದು ಪೋಲೀಸ್ ಠಾಣೆಯ ಜಿಕ್ ಬಂದಿಯಲ್ಲಿರುವ ಕುಂಡಲ ಎಂಬ ಸ್ಥಳದಲ್ಲಿ ಅಂದರೆ ಬೆಳೆ ಕಟುವಿನ ಬಗ್ಗೆ ತಮ್ಮತಮ್ಮೊಳಗೆ ಕಡಿದಾಟವಾಗಿ, ಎರಡು ಮೂಲು ಜನರಿಗೆ ಪೆಟು ಆಗಿ ಒಬ್ಬನು ಮೃತಪಟ್ಟರುವನಾಗಿಯೂ ಕಾಸರಗೋಡಿನಿಂದ ಪೋಲೀಸು ಅಧಿಕಾರಿಗಳು ಒಂದೆರಡು ದಿನ ತಡ್ಡ ಮಾಡಿ, ಇಂದು ಸದ್ರಿ ಸ್ಥಳದಿಂದ ಮಲ್ಲಿಸ್ಪರ್ಧೆ ರಾಮಜಾಡ್ಡೆ, ಬಿಲ್ಲ ಅಬ್ಬು, ಬಿಲ್ಲ ಬಂಬಾ ಬಿಲ್ಲ ಪೊಳ್ಳಳ ಬಿಲ್ಲ ಚಂದು, ಕುಪಾರನ್, ಸುಬ್ಬಪ್ಪ, ಸುಬ್ಬೇಟಿ, ಮಾಲೋಜಿ, ಇಬ್ರಾಹಿಮ್‌ಬ್ಯಾರಿ ಗಂಗೋಜಿ, ಬಿಲ್ಲ ಪಕ್ಕೀರ ಕೂಡಾ ೧೪ ಜನರನ್ನು ದಸ್ತಗಿರಿಮಾಡಿ, ಸಿ ಪಿ ಸಿ ಬಟ್ಟಿನಲ್ಲಿ ತಂದಿರುತ್ತಾರಾಗಿಯೂ ತಿಳಿದುಬರುತ್ತದೆ

ತಾ ೬–೧೧–೩೨ರಲ್ಲು ಇದರ ಮೊದಲು ಇಲ್ಲಿಯ ಪೂಜಿ ಸಬ ಇನ್‌ಸ್ಪೆಕ್ಟರ ಸಿಲ್ಮರು ಮೇಟರು ಮೂಲ್ಕಿಕರ ಮೇಲೆ ಹೂಡಿದ ಮೊಕದ್ದಮೆಯು ಬಾಲ್ಕ ಏದು ತಿಂಗಳುಗಳಿಂದ ಮುಂದರಿಸಿ ಬಂದರೂ ಇಂದು ಇಲ್ಲಿಯ ಬೆಂಚಿನಿಂದ ತೀರ್ಪು ಹಾತ ಬಂಡುಗಡೆ ವಾಡಿತೋಷಾಯಿತ್ಕ ಇನ್ನು ಸದ್ರಿಯವರ ಮೇಲೆ ಇಲ್ಲಿಯ ವರ್ತಕರಾದ ನಾರಾಯಣ ನಾಯ್ಕರ ಮೊಕದ್ದಮೆಯು ಬಾಕಿಬುಲ್ಲಿದೆ

ಇದೇ ತಿಂಗಳ ತಾ ೨೬ನೇ ಆದಿತ್ಯವಾರ ಇಲ್ಲಿಯ ತರುಣರಿಗೂ ಮಂಜೇಶ್ವರದವರಿಗೂ ಕ್ರಿಕೇಟಿನಲ್ಲಿ ಪಂದ್ಯಾಟವು ನಡೆಯಿತು ಮಂಜೇಶ್ವರದವರು ಎಷ್ಟು ಸಾಹಸಪಟ್ಟರೂ ಕಡೆಗೆ ಇನಿಂಗ್ ರೌಟಾಗಿ ಒಂಕೆ ರಳ ಜೇಕಾಯಿತು

ಈ ಮುಂಚೆ ತಾರೀಖು ೩ಕ್ಕೆ ಡಿಪ್ಪೆನ್ಸರಿಗೆ ಮುಂದರಿಸಿಟ್ಟ ಪಬ್ಲಿಪಟೀಲ ವಿಷ್ಣು ಕಡಂಬಳಿತ್ತಾಯರ ನೇಲೆ ಮಾಡಿದ ಮೊಕದ್ದಮೆಯಾಗಿ ಮಂಗಳೂರು ಸಬ್ ಜೈಲಿನ ಸುಪರಿಂಟಿಂಡೆಂಟರು ಶಿವರಾಮಪ್ಪ, ಮಂಗಳಪ್ಪ ಶೆಟ್ಟಿ, ರಾಮಪ್ಪಾಯಪ್ಪ ಎಂಬವರನ್ನು ಇಲ್ಲಿಗೆ ಕೆಂದು ಡಿಪ್ಪೆನ್ಸು ಆಗಿ ಸದ್ರಿ ಮೊಕದ್ದಮೆಯನ್ನು ಇದೇ ೧೯ಕ್ಕೆ ಮುಂದರಿಸಿಟ್ಟಿದೆ

ಉಡುಪಿ — ಸ್ಥಳೀಯ ಶ್ರೀಮದನಂತೇಶ್ವರ ಪ್ರಾಥಮಿಕ ಶಾಲೆಯ 'ಶ್ರೀ ಲಕ್ಷ್ಮೀ ನಾರಾಯಣ ಲೈಬ್ರೆರಿ'ಯ ವಾರ್ಷಿಕೋತ್ಸವ ವು, ಶಾರದಾ ಪೂಜೆಯೂ ತಾ ೯ರಲ್ಲಿ ಯಥಾಸಂಗವಾಗಿ ನಿರಿಂಡಿ ಬರವಾಗಿ ನೆರವೇರಿತು ಇಂದಿನ ಸಮಾರಂಭವು ಸ್ವಾವಲಂಬನೆಯ ಸುಬೆನ್ನೆಯಿಂದ ಒಪ್ಪಿತ್ತು. ಈ ಪುಸ್ತಕ ಭಂಡಾರಕ್ಕೆ ಅತ್ಯುದಾರ ಪುನಸ್ಸಾನಿಂದ ಸಹಾಯ ಮಾಡಿದ ಈ ಕೆಳಗಿನ ಸಕಲ ವಿದ್ಯಾಭಿಮಾನಿಗಳಿಗೂ ಅಂತಃಕರಣಪೂರ್ವಕ ಅಭಿವಂದನೆಗಳು ೧೩ ಲಂಬೆ ಶ್ರೀ. ಸೋದೆಶ್ರೀಪಾದಂಗಳವರು, ೧೫ ತರಂತೆ ಶ್ರೀ ಪೇರೂರು ಶ್ರೀಪಾದಂಗಳವರು, ೧೫ ತರಂತೆ ಶ್ರೀ ಕೃಷ್ಣಾಪುರ ಮತ್ತು ಶ್ರೀ ಕಾಣಿಯೂರು ಶ್ರೀಪಾದಂಗಳವರು, ಶ್ರೀಗಳಾದ ಸ

ಮುಖ್ಯ ಕಾರ್ಯಾಲಯ ಎಂ ಪಟ್ಟಣಗೆರೆಯ ಸರಸ್ವತಿಗೆ ಸ್ಥಳಾಂತರಿಸಲಾಗಿದೆ.

ಶ್ರೀ ಮದನಮಸ್ತ ಪಾಕ ಔಷಧಿ

ಇತರೆಲ್ಲ ಸ್ತ್ರೀಯಾಪಕ್ಷಿಗಳಿಗಿಂತಲೂ ಮುಖ್ಯ ಜಾಸ್ತಿರಿಂತಲೂ ಧಾತು ಹೋಗುವುದು ಬಲ್ಲವಿಷ್ಟರೆ ಹೊರಬಿದ್ದು ಹೆಣ್ಣನ್ನು ಪಡಿಯ ಕಳ್ಳುವುದು ಬಿಟ್ಟು ಸ್ತ್ರೀಯರಿಗೆ ಬಹಳ ಕೃಶಿಯುಂಟಾಗುವುದು, ಅಂ ಸ್ತ್ರೀಯರುಗಳಿಂದಲೂ ಬಹಳ ಸಮಯಕ್ಕೆ ಧಾತುಸ್ರಾವ ಅಸ್ವಸ್ಥತೆ ಉಂಟಾಗಿ ಮೈಯೆಲ್ಲ ಸುಸ್ತು ಮಂಡೆ ಪೀಡೆಯಾಗಿರುವುದು, ಗರ್ಭಾಶಯ ಪರಿಹಾರ, ಎಂಥದಾದರೂ ಪರಿಹಾರ, ಮೈಸೂಡಿಸಿರಲಿ, ಇನ್ನಾದಿ ರೋಗಗಳು ಬಾಧಿಸಿದಾಗ ಕೌಶಲ್ಯ ಸಾಧಾರಣವಾಗಿದೆ. ಪಸಿಸಿ ಪಥ್ಯ ಮತ್ತು ಕೂಳ ಔಷಧಿಸ್ತವೆ. ೨೧ ದಿವಸ ಸಾಲುವ ಆ ಔಷಧಿಯ ಪೂರ್ಣ ಗುಣಪಡಿಸುವ ಪಥ್ಯಿಯ ಕಿಮ್ಮತ್ತು ರೂ. ೫, ಟಿ ಖ ರೂ ೧ ಪೆಳೆ ರೋಗದ ಸಲುವಾಗಿ ೨ ಪಥ್ಯಿಗೆ ಖರ್ಚು ಸಹಿತ ರೂ ೦೦ ಮೂರು ಪಥ್ಯಿಗೆ ರೂ. ೧೫೫ ಮೂಕ್ತ ಪತ್ಯವಿಲ್ಲ. ಅನುಪಾನವು ಪಥ್ಯಿಯೊಡನೆ. ಸಾವಿರಾರು ಜನರು ಈ ಔಷಧದ ಸ್ವತಂತ್ರಯನ್ನು ಅತ್ಯಪಯೋಗ ಮಾಡಿದ್ದಾರೆ. ಅದರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜಸೇವೆಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಬಟ್ಟಿಬಿ, ಎಲ್ ಎಮ್. ಎಂಡ್. ಎಸ್., ಜೆ ಪಿ, ಮುಂಬಯಿ:— ಈ ಔಷಧ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರ್ಭ, ಪರಿಹಾರ ಇವುಗಳನ್ನು ನಾಶ ಮಾಡುವುದು ಈ ಔಷಧವನ್ನು ಸೇವಿಸುವುದರಿಂದ ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ ಎನ್. ದತ್ತ, ಎಮ್ ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ.— ಈ ಔಷಧವನ್ನು ಧಾತುಪೌಷ್ಟಿಕ, ಸ್ತಂಭಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರಯೋಜಿಸಿ ಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ರ —ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಗುಣಬಾರದಿದ್ದರೆ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತತೆಯಾಗುತ್ತದೆ ಬಹಳ ಓಡಾಡನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ದೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣ ವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೆ ಪೂರಾ ವಿಚಾರ ಮಾಡಿ ಔಷಧಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೆಳವಾಮಾಹಿಮ ಶಾನೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕೆ ಳ ರೂ ೨ ಪಿ ಖರ್ಚು ೦॥೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು, ಬೆಳ ಶರಿಗೆ ಶಕ್ತುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ ಕ್ಷೀಣ, ಮೈಯಲ್ಲಿ ನೋವು ಉಷ್ಣತಾ ಪ್ರಮಾಣ, ಗರ್ಭಾಶಯದಲ್ಲಿ ಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನಿಷ್ಟುಗಾಗಿ ಗರ್ಭಕೋಶವು ಸ್ವಸ್ಥವಾಗುವದು ಮಕ್ಕಳಾಗುವುದಿಲ್ಲವೆಂದು ಎಡವನೇ ಲಗ್ನವಾಗಿ ಕೊಳ್ಳುವ ಮೊದಲು ಗೃಹಪೀಡಕಿಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ ಮುಖ್ಯ ಸರ್ಟಿಫಿಕೇಟ ಮೆ ರಾ ಎ ಎಮ್ ಇನ್ಸಪೆಕ್ಟರ ಬೆಳಗಾಂವ —ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು ನನ್ನ ಮಿತ್ರನ ಹೆಂಡತಿಯು ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೨ ಟಿ ಖ ಆಣೆ ೮

ನಿವಾಸ— ಸಂಜೀವಿನೀ ಔಷಧಾಲಯ. ಮು ಪೊ. ಮಿರಜ, S M C

ಡಿ ಇಂಡಿಯಾ ಫ್ಲೋರ್ ಮಿಲ್ಸ್ ಲಿಮಿಟೆಡ್, ಕರಾಚಿ

— ಇವರು ತಮ್ಮ ಲೋಕ ವಿಖ್ಯಾತವಾದ ರೋಸ್ ಬ್ರೇಂಡ್ ಮತ್ತು ಇಂಡಿಯಾ ಬ್ರೇಂಡ್ ಗೋದಿ ಹುಡಿ, ಪಜ್ಜಿಗೆ ರವೆ, ಸಪೂರ ಪಜ್ಜಿಗೆ ಛೋರ ಪಜ್ಜಿಗೆ, ಹೌಸ್‌ಹೋಲ್ಡ್, ಅಟ್ಟು, ಬ್ರಾನ್, ಪೊಲ್ಲಾರ್ಡ್ ಮೊದಲಾದವುಗಳನ್ನು ವಿಕ್ರಯಿಸಲು ಮೆಸರ್ಸ್ ಆರ್ ಬಿ ಜೆಸ್ಸಾರಾಮ್ ಠಾಕೂರ್ ದಾಸ್, ಪೋಸ್ಟ್ ಬಾಕ್ಸ್ ನಂಬ್ರ 164, ಕರಾಚಿ—ಇವರನ್ನು ಸೋಲ್ ಏಜಂಟರನ್ನಾಗಿ ನೇಮಿಸಿರುತ್ತಾರೆ

ನಮ್ಮ ಸರಕು ಸಾಮಗ್ರಿಗಳ ಉತ್ತಮತೆಯೇ ನಮ್ಮ ಅಸ್ತಿಯೆಂಬ ಸಂಗತಿಯನ್ನು ದೇರೆ ತಿಳಿಸಬೇಕಾಗಿಲ್ಲ ನಮ್ಮ ಹಿಟ್ಟುಗಳು ಪಂಚನದಿಗಳು ಹರಿಯುವ ಪಂಜಾಬದ ಫಲವತ್ತಾದ ಭೂಮಿಯಲ್ಲಿ ದೆಳೆಯಿಸಲ್ಪಟ್ಟ ಉತ್ಕೃಷ್ಟಗೋದಿಯಿಂದಲೇ ತಯಾರಿಸಲ್ಪಡುವಂತಹುದು ಕರಾಚಿಯ ಸ್ಥಳೀಕ ಮಿಲ್ಲುಗಳು ಕೆಮಿಕಲ್ ಮತ್ತು ವಿದ್ಯುಚ್ಛಕ್ತಿಯನ್ನು ಪಯೋಗಿಸಿ ಹಿಟ್ಟನ್ನು ಮಡಿ(ಬ್ಲೀಚ್) ಮಾಡುವಂತೆ ನಾವು ಮಾಡುವುದಿಲ್ಲ ಕಾರಣ, ಈ ರೀತಿ ಮಾಡುವುದರಿಂದ ಪೋಷಕತೆಯ ಸತ್ವವೇ (ವಿಟಾಮಿನ್) ನಾಶವಾಗುತ್ತದೆ. ಆದುದರಿಂದ ಯೂರೋಪು ಮತ್ತು ಅಮೇರಿಕಾಗಳ ವೈದ್ಯಕೀಯ ಅಧಿಕಾರಿಗಳು ಬ್ಲೀಚ್ ಮಾಡಿದ ಹಿಟ್ಟುಗಳನ್ನು ಪಯೋಗಿಸಬಾರದೆಂದೂ, ಅದು ಆರೋಗ್ಯಕ್ಕೆ ಹಾನಿಕರವೆಂದೂ ನಿರ್ಧರಿಸಿರುವರು

ಶ್ರೀಯ ಮತ್ತು ಇತ್ಯಾದರ ವಿಚಾರಗಳಿಗೆ ನಮ್ಮ ಈ ಕೆಳಗಿನ ವಿಳಾಸಕ್ಕೆಗಳಿಗೆ ಬರೆಯಿರಿ

ಮೆಸರ್ಸ್ ಕರವಾರ್ ಎಂಡ್ ಕೋ,
ಮಂಗಳೂರು, ಮದ್ರಾಸ್, ಮಧುರೆ, ಕಲ್ಲಿಕೋಟೆ, ಕೊಚ್ಚಿನ

The India Flour Mills Ltd., of Karachi have pleasure to announce that they have appointed Messrs R B Jessaram Thakurdas, Post Box No 164, Karachi, as their Sole Agents for the sale of their world renowned Rose Brand and India Brand wheat products, Sooji Rawa, Superfine, Household, Atta, Bran, Pollard etc.

It is needless to say that our asset has been the quality of our products Our products are manufactured from the choicest wheat grown in the Plains of the Panjab, the Land of the five rivers **The Flour is not Chemically or Electrically bleached as some of the local Mills are doing as this kills the vitamin, the source of Nourishment** and therefore all the Medical Authorities in Europe & America are agitating strongly against the bleached flour, as they find it injurious to health

For prices and other particulars write to Agents— **Messrs. Kerwar & Co,**
Mangalore, Madras, Madura, Calicut, & Cochin

O. S. No. 350/32 ಸ್ಮಿ ಜ್ಯಾ ಮು, R. T. A. No. 499/32

ಮೈದಿನ ಸಾಹೇಬ ಕಡಿಪಾ—ವಾದಿರು.
ಮತ್ತು
ಮೈದಿನ ಸಾಹೇಬ ಕೂಡಾ—ಪ್ರತಿವಾದಿರು.
ಇವರೊಳಗೆ

ಸದ್ರಿ ವ್ಯಾಜ್ಯದ 5ನೆ ಪ್ರತಿವಾದಿರು ಮೆರಿಯಾಂದಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿರಿಗೆ ಕಳೆದ ಕ್ಷಯ ಸಂ|ರದಿಂದ ಪ್ರಜೋತ್ಪತ್ತಿ ಸಂ|ರದ ವರೆಗೆ ಬರತಕ್ಕ ಮೂಲಗೇಣಿ ವ ಬಡ್ಡಿ ಕೂಡಾ ರೂ 296-9-6ಕ್ಕೆ ಪ್ರತಿವಾದಿರ ಮೇಲೆ ಸದ್ರಿ ವ್ಯಾಜ್ಯ ದಾಕ್ಲು ಮಾಡಿದ್ದಲ್ಲದೆ ಸೈಟ್ ಮೆಂಟ್ ಮುಂಜೆ R. I A. 499/32ನೇ ಅರ್ಜಿ ಹುಕುಂ ಪ್ರಕಾರ ಸ್ಥಿರ ಆಸ್ತಿ ಜಪ್ತಿ ಕೂಡಾ ಮಾಡಿರುತ್ತಾರೆ. ಸದರಿ ವ್ಯಾಜ್ಯ ವ ಜಪ್ತಿ ಅರ್ಜಿ ಕೂಡಾ ತಾ 26—10—32ಕ್ಕೆ ಇಟ್ಟುದೆ ಸದ್ರಿ 5ನೇ ಪ್ರತಿವಾದಿ ಮರಿಯಾಂದಿಯ ಅಕ್ಷೇಪ ಇದ್ದರೆ ಆ ದಿವಸ ಹಗಲು 10 ಘಂಟೆಗೆ ಕೋರ್ಟಿಗೆ ಸ್ವತಹಾ ಯಾ ಪ್ಲೀಡರರ ಮೂಲಕ ಬಂದು ಜಾಹೀರುಮಾಡಿಕೊಳ್ಳುವದು ತಪ್ಪಿದರೆ ಆವರನ್ನು ಗೈರಹಾಜರು ಮಾಡಿ ವ್ಯಾಜ್ಯ ವ ಸದರಿ ಅರ್ಜಿ ಸಕ ತೀರ್ಮಾನಿಸಲಾಗುವುದೆಂತು ಎಂಬ ಸಂಗತಿ ಈ ಮೂಲಕ ಪ್ರಕಟಿಸೋಣವಾಗಿಯದೆ

ಉಡುಪಿ
ತಾ 1—10—32 } M VITTAL KAMATH,
Pleader for Plaintiffs

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ
O S No 296/32

ಎಚ್ ವೆಂಕಟಗಿರಿ ಕೂಡಾ— ವಾದಿರು
ಮತ್ತು
ದೇವಪಾಲ ಸೋನ್ಸ— ಪ್ರತಿವಾದಿ
ಇವರೊಳಗೆ

ಸದ್ರಿ ಪ್ರತಿವಾದಿಗೆ ತಿಳಿಸುವದೇನೆಂದರೆ—

ವಾದಿರಿಗೆ ತಾ 7-5—31ರಲ್ಲಿ ಪ್ರತಿವಾದಿಯು ರೂಪ್ಯಾ 110—0—0ಕ್ಕೆ ಬರಿಸಿಕೊಟ್ಟ ಪ್ರೊಮಿಸರಿ ನೋಟಿನ ಅಸಲು ವ ಸೇರತಡಾ 12½ರ ಸಲ ಬಡ್ಡಿ ದಿಜಿಸ್ಟ್ರಿ ನೋಟೀಸು ಖರ್ಚು ಕೂಡಾ ರೂ 118—6—9ಕ್ಕೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 29—10—32ಕ್ಕೆ ಇಟ್ಟಿದೆ ಪ್ರತಿವಾದಿಯ ಅಕ್ಷೇಪ ಇದ್ದರೆ ಆ ದಿವಸ ಹಗಲು 10 ಗಂಟೆಗೆ ಕೋರ್ಟಿಗೆ ಸ್ವತಹ ಯಾ ಪ್ಲೀಡರರ ಮುಖಾಂತರ ಒಂದು ಜಾಹೀರುಮಾಡಿಕೊಳ್ಳುವದು ತಪ್ಪಿದರೆ ಪ್ರತಿವಾದಿಯ ಗೈರಹಾಜರಿಯಲ್ಲಿ ವ್ಯಾಜ್ಯ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲ ಪ್ರಕಟಿಸೋಣವಾಗಿಯದೆ.

ಉಡುಪಿ
1 10—32 } M VITTAL KAMATH
Pleader for Plaintiff

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.
ಕ್ರಮ ನಂಬ್ರ 657/1932

ಮಿಂಗಲ್ ಡಿ ಸೋಜ— ವಾದಿ
ಮತ್ತು
ಪಟೇಲ ಎಂ ತೊಡಸೆಟ್ಟಿ ಕೂಡಾ —ಪ್ರತಿವಾದಿರು
ಇವರೊಳಗೆ

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿಯಾದ ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದಲ್ಲಿರುವ ಸುಬ್ರಾಯ ಶೆಟ್ರಿ ಆಳಿಯ ಪಟೇಲ ಎಂ ತೊಡಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —ಸದ್ರಿ ವ್ಯಾಜ್ಯದ ವಾದಿ ಮತ್ತು 2, 3ನೇ ಪ್ರತಿವಾದಿರ ಜಾಮೀನಿನ ಮೇಲೆ 1ನೇ ಪ್ರತಿವಾದಿಯು "ದಿ ಪಾಂಗಾಳ್ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ" ಬೇಂಕಿನಿಂದ ಕಡೆದ ಸಾಲದ ಬಗ್ಗೆ ಸದ್ರಿ ಬೇಂಕಿನವರು ವಾದಿ ಪ್ರತಿವಾದಿರ ಮೇಲೆ ಮಾಡಿದ ಸದ್ರಿ ಕೋರ್ಟು ಕ್ರಮ ನಂಬ್ರ 74/32ನೇ ವ್ಯಾಜ್ಯದಲ್ಲಿ ಆದ ಡಿಕ್ರಿ ಮೇಲೆ ನಡೆಸಿದ *R E P* ನಂಬ್ರ 475/32ನೇ ಅಮಲ್ಕಾಯಿಯಲ್ಲಿ ವಾದಿಗಾದ ಕೈಹಿಡಿವಾರಂಟು ಪ್ರಕಾರ ವಾದಿಯು ತಾ 29—7—32ರಲ್ಲಿ ಸಲ್ಲಾಸಿದ ವಜೇಜು ವ ಇದರ ಮೇಲಣ ಬಡ್ಡಿ ಕೂಡಾ ರೂಪಾಯಿ 388—8—6ನ್ನು ಪ್ರತಿವಾದಿಂದ ಬರಮಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಸದ್ರಿ ದಾವೆಯು ಅಷ್ಟೂರ ತಪ್ಪಿ ಬಗ್ಗೆ ತಾ 24—10—32ಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಗೆ ಉದಾಹರಣೆ ಕೊಡುವ ಬಗ್ಗೆ 1ನೇ ಪ್ರತಿವಾದಿಯು ಖುದ್ದಾಗಿ ಯಾಗಲೀ, ಯಾ ಪ್ಲೀಡರ್ ಮೂಲಕವಾಗಿಯಾಗಲೀ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಲೆಕ್ಕೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು 1ನೇ ಪ್ರತಿವಾದಿಯ ಗೈರಹಾಜರಿಯಲ್ಲಿ ಕೇಳಿ ಫೈಸಲ್ ಮಾಡೋಕಾದೀತೆಂತ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣವಾಗಿಯದೆ.

Udipi, S. K.
4—10—1932 } **H. Keshava pai,**
Vakil for Plaintiff.

ಸುಸಂಧಿ! ಕೆಲವೇ ಕ್ರಿಮಿಗಳು!
ಕಾಲ್ಸಾ ಕೊರೇಜು, ಲ್ಯಾಬ್ರಂಗಳಿಗೂ, ಗ್ರೆಂಥರ್ಕರಿಂಗೂ ನಮ್ಮ ಜಲ್ಲೆಯ ಅನುಭವನ್ನು ಮಾಡಲಿಚ್ಛಿಸುವವರಿಗೂ, ಬೇಕಾಗಿರುವ ಕ್ಲಾನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಇತಿಹಾಸ' ಎಂಬ ಗ್ರಂಥ! ಬೆಲೆ ಪ್ರತಿಯೊಂದಕ್ಕೆ ೬ ರೂ. ಸಹಿತ ರೂ. ೭.
ಶಾರದಾ ಭಾಷಾಪಾನಿ,
ಮಂಗಳೂರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಹೇಗೆ?

ಗಾಂಧಿಜೀಯವರ ಒಡನಾಡಿಗಳಲ್ಲೊಬ್ಬರ ಮರಣ. ಮೌಲಾನಾ ಶೌಕತಾಲಿಯವರ ತಂತಿ! ಕ್ರೂರ ಶಿಕ್ಷೆ. ಪಾತಿವೃತ್ಯ ರಕ್ಷಣೆಗಾಗಿ ಬೆಲ್ಟು – ಫ್ರಾನ್ಸಿನಲ್ಲಿ ಒಬ್ಬ ಗಂಡನ ಗತಿ ಗುರುವಯ್ಯೂರಿನಲ್ಲಿ ಕೇಳಪ್ಪನವರ ಉಪವಾಸದ ಅಂತ್ಯ. ಭೋಪಾಲದ ನವಾಬರ ನಿಸ್ವಾರ್ಥ ದಾನ! ಗನಿಯ ಕೆಲಸಗಾರರ ಅಪಮೃತ್ಯು! ಎವರೆಸ್ಟ್ ಪರ್ವತಾರೋಹಣ ಸಾಧನೆ!

ವ್ಯಾಪಾರಕ್ಕಿಂಗಿ ಸುಸಂಧಿ!
ದೀಪಾವಳಿಯು ಸಮೀಪಿಸಿತಲ್ಲವೇ? ನಿಮಗೆ ಬೇಕಾಗುವ ವರ್ಗ, ಊಗಿ, ಪುಸ್ತಕಗಳೂ, ಅಮಂತ್ರಣ ಪತ್ರಿಕೆಗಳೂ ಅಗ್ಗದಲ್ಲಿ, ಅನುಕೂಲಾನುಸಾರವಾಗಿ, ಕ್ಲುಪ್ತ ಸಮಯಕ್ಕೆ ಸಿಗಬೇಕಾದರೆ, ಒಮ್ಮೆ ನಮ್ಮಲ್ಲಿಗೆ ಬರ್ಸ್ಸಿರಿ. ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ.
ಶಾರದಾ ಭಾಷಾಪಾನಿ,
ಮಂಗಳೂರು.

ಗಾಂಧಿಜೀಯವರ ಒಡನಾಡಿಗಳೊಬ್ಬರ ಮರಣ!
ಮಿ। ಆರ್ ಕೆ ಖಾನ್

"ಮಹಾತ್ಮಾ ಗಾಂಧಿಯವರು ದಕ್ಷಿಣಾಫ್ರಿಕದಲ್ಲಿದ್ದಾಗ ಅವರ ಒಡನಾಡಿಗಳಾಗಿ ಅವರಿಗೆ ಬಹಳ ಸಹಾಯವನ್ನಿತ್ತಿದ್ದ ಮಿ ಆರ್ ಕೆ ಖಾನ್ ಎಂಬವರು ತಾ. ೧೯ ನೇ ದಿನ ದಕ್ಷಿಣಾಫ್ರಿಕದ ಮರಿಟ್ಸ್‌ಬರ್ಗ್ ಎಂಬಲ್ಲಿ ಮರಣಹೊಂದಿದರು ಮಹಾತ್ಮರ ಬೋರ್ ಯುದ್ಧದ ಸಮಯದಲ್ಲಿ ಬ್ರಿಟಿಷ ಎಂಬುಲೆನ್ಸ್ ಕೋಪ್ಸ್‌ರ್‌ನಲ್ಲಿ ಕೆಲಸಮಾಡುತ್ತಿದ್ದ ಖಾನರಿಗೆ ಕ್ಯಾಪ್ಟನ್‌ವಾದ ಸಹಾಯವನ್ನು ನೀಡಿದ್ದರು ಇವರು ನೇಟಾಲಿನ ಇಂಡಿಯನ್ ಕೊಂಗ್ರೆಸ್ಸಿನ ಸೆಕ್ರೆಟರಿಗಳಾಗಿದ್ದು ಅಲ್ಲಿಯ ಡರ್ಬನ್ ಎಂಬಲ್ಲಿ ವಕಾಲತು ನಡೆಸುತ್ತಿದ್ದರು. ತನ್ನ ಮರಣ ಕಾಲದಲ್ಲಿ ಆದಾರವಾದ ಹಣವನ್ನು ತನ್ನ ಮತಸಂಬಂಧವಾದ ಕೆಲಸಗಳ ವಿನಿಯೋಗಾರ್ಥವಾಗಿ ಇವರು ಪ್ರತ್ಯೇಕವಿಟ್ಟಿರುವರು ಅಲ್ಲದೆ ೫೦,೦೦೦ ಪೌಂಡುಗಳನ್ನು ಅಲ್ಲಿಯ ಆಸ್ಪತ್ರೆಗಳಿಗಾಗಿಯೂ, ದಿಸ್ಪೆನ್ಸರಿಗಳಿಗಾಗಿಯೂ ಪ್ರತ್ಯೇಕವಿಟ್ಟಿರುವರು. ಇವರು ಜಾತಿಭೇದವಿಲ್ಲದೆ ದೀನರಿಗೆ ದಾನಮಾಡಿದ್ದರು ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಧ್ವನಿಯು ಕೇಳಬರುವಂತೆ ಮಾಡಿದ ಸಾಹಸದಲ್ಲಿ ಇವರು ಹೆಚ್ಚಿನ ಭಾಗಿಗಳಾಗಿರುವರು

ಮೌಲಾನಾ ಶೌಕತಾಲಿಯವರ ತಂತಿ — ಗಾಂಧಿಜೀಯವರ ಬಿಡುಗಡೆಗಾಗಿ ಪ್ರಾರ್ಥನೆ

ಮೌಲಾನಾ ಶೌಕತಾಲಿಯವರು ವೈಸರಾಯ ರಿಗೆ ಒಂದು ತಂತಿಯನ್ನು ಬಿಟ್ಟು 'ನಾನು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಡಾಕ್ಟರ್ ಸಯ್ಯದ್ ಮಹಮದ್ ಮತ್ತು ಪಂಡಿತ ಮಾಲವೀಯರನ್ನು ಕಂಡು ಹಿಂದೂ ಮುಸಲ್ಮಾನರೊಳಗಣ ಸಂಧಿಗಾಗಿ ಪ್ರಸ್ತಾಪವನ್ನೆತ್ತಿರುವೆನು ಆದರೆ ಗಾಂಧಿಜೀಯವರಿಲ್ಲದೆ ಯಾವ ಇತ್ಯರ್ಥವೂ ಸಂಪೂರ್ಣವಾಗಿ ಕೈಗೂಡಿ ಬರುವುದಸಾಧ್ಯವೆಂದು ನನಗೆ ತೋರುತ್ತದೆ ಆಲ್ಲದೆ ಶಾಶ್ವತವಾದ ಶಾಂತಿಯು ಇಂಡಿಯಾ ಬ್ರಿಟನುಗಳೊಳಗೆ ಆಗುವಂತೆಯೂ ತೋರುವುದಿಲ್ಲ ಗಾಂಧಿಜೀಯವರನ್ನು ಬಿಡುಗಡೆ ಮಾಡುವುದು ಸರಕಾರದ ಹಿತದೃಷ್ಟಿಯಿಂದಾಗಿ ವಿಹಿತವೆಂದೇ ನನಗನಿಸುತ್ತದೆ ಒಂದು ವೇಳೆ ಅವರನ್ನು ಬಿಡುಗಡೆ ಮಾಡಲು ಅಸಾಧ್ಯವೆಂದಾದರೆ, ಅವರನ್ನು ಭೇಟಿಯಾಗಬೇಕೆಂದಿರುವ ಮುಂದಾಳುಗಳಿಗೆ ನಿರಾತಂಕವಾದ ದರ್ಶನವಾದರೂ ದೊರೆಯುವಂತೆ ಮಾಡಬೇಕು' ಎಂದು ತಿಳಿಸಿಹಿಸಿದ್ದರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಹೇಗೆ?

ಬಾಬು ರಾಜೇಂದ್ರ ಪ್ರಸಾದರೂ, ಶ್ರೀ ಸಿ ರಾಜಗೋಪಾಲಾಚಾರ್ಯರೂ ಕೆಳಗಿನ ಪ್ರಕಟಣೆಯನ್ನು ಅಸ್ಪೃಶ್ಯತಾನಿವಾರಣೆಗಾಗಿ ಮಾಡಿರುವರು.

"ಅಸ್ಪೃಶ್ಯತಾನಿವಾರಣೆಯ ಸಾಹಸದಲ್ಲಿ ದೇವಸ್ಥಾನ ಪ್ರವೇಶವು ಅತ್ಯಗತ್ಯವಾದ ಪ್ರಥಮ ವಿಷಯವೆಂದು ನಮಗೆ ತಿಳಿದಿರುವುದಾದರೂ ಈ ವಿಷಯವಾಗಿ ನಮ್ಮ ಅನುಭವಕ್ಕೆ ಬಂದ ವಿರುದ್ಧಭಾವವು ಈಗ ನಮ್ಮನ್ನು ಅಸ್ಪೃಶ್ಯತಾ ನಿವಾರಣೆಯ ಇನ್ನೊಂದು ರೀತಿಯ ಕಾರ್ಯಕ್ರಮಕ್ಕೆ ಕೈಹಚ್ಚುವಂತೆ ಮಾಡುತ್ತಿದೆ ಅದೇನೆಂದರೆ ನಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಅಸ್ಪೃಶ್ಯರನ್ನು ಸ್ಪರ್ಶಿಸುವಂತಹದ್ದು ಅಸ್ಪೃಶ್ಯರನ್ನು ಸಶ್ರಯಿಸುವ ಪ್ರಸಂಗದಲ್ಲಿ ಅವರನ್ನು ಇನ್ನಿತರ ಜಾತಿ ಹಿಂದೂಗಳಂತೆಯೇ ಮನೆಗೆ ಕರೆದು ಅದರಸತ್ಕರಿಸುವುದು ಇಂಗಲಿ, ಮನೆ ಮಂಚಗಳಿಗೆ ಇವರು ಬರಬಾರದೆಂಬುದಾಗಿ ಅಡ್ಡಿಮಾಡಬಾರದು ಎಲ್ಲಾ ಸಮಯದಲ್ಲೂ ಅವರು ಅಸ್ಪೃಶ್ಯರಲ್ಲವೆಂದೇ ತಿಳಿದು ಅವರನ್ನು ಗೌರವಿಸತಕ್ಕದ್ದು ಈ ಕ್ರಮವನ್ನು ಮುಂದಾಳುಗಳು ಕಾರ್ಯಕ್ಕೆ ತರಬಹುದು ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಅಸ್ಪೃಶ್ಯರ ಉಪಯೋಗಕ್ಕೆ ಸಿಗುವಂತಾಗಬೇಕು ಮತ್ತೊಂದೇನೆಂದರೆ– ಸತ್ಕಾರ್ಯವಾದಿಗಳು ಅಸ್ಪೃಶ್ಯತಾನಿವಾರಣೆಯ ಈ ಕಾರ್ಯಪಥ್ಥಿ ವಿಶ್ವಾಸವನ್ನುಂಟುಮಾಡದಿರಬೇಕು ಪಂಡಿತ ಮಾಲವೀಯರೇ ಮೊದಲಾದವರು ಬಯಸುತ್ತಿರುವುದು ಇತ್ಯನ್ನೇ"

'ಸ್ವದೇಶಾಭಿಮಾನಿ' ಪತ್ರಿಕೆಗೆ ಇಂದೇ
ಚಂದಾದಾರರಾಗಿರಿ.

ಕ್ರೂರ ಶಿಕ್ಷೆ!

ಶಾಖ್ಕೆ ನಗರದಲ್ಲಿ ೧೦ ವರ್ಷದ ಹುಡುಗನೊಬ್ಬನು ಒಂದು ಜತೆ ಕೈಚೀಲಗಳನ್ನು ಕಳವು ಮಾಡಿದನು ಇದಕ್ಕಾಗಿ ಅವನ ತಂದೆತಾಯಿಗಳು ಅವನನ್ನು ಸರಪಣಿಯಿಂದ ಕಟ್ಟಿ ಒಂದು ಕೋಣೆಯಲ್ಲಿರಿಸಿದರು ಈ ಶಿಕ್ಷೆಯನ್ನು ಅವನು ಎರಡು ವರ್ಷಗಳ ತನಕ ಅನುಭವಿಸಿದನು. ಯಾರ್ಕ್ಕಾರು ವಿನೇನೆಂದರೂ ತಂದೆತಾಯಿಗಳು ಮಗನ ಮೇಲೆ ಕರುಣೆಯಿಡಲಿಲ್ಲ ಹುಡುಗನಿಗೆ ಕುಳಿತಲ್ಲಿಯೇ ಜಲಮಲ ವಿಸರ್ಜನೆಯೂ ಆಹಾರ ಸೇವನೆಯೂ ನಡೆಯುತ್ತಿತ್ತು. ಈ ಕಠಿಣ ಶಿಕ್ಷೆಯಿಂದಾಗಿ ಬಾಲಕನ ಬ್ಯುಗಿಯು ಕೆಟ್ಟು ಹೋಯಿತು ಅವನು ಸಂಪೂರ್ಣ ನಿಶಕ್ತನಾದನು ಈಗ ಈ ಸುದ್ದಿಯು ಅಲ್ಲಿಯ ಸರಕಾರಕ್ಕೆ ತಿಳಿದುಬರದು, ತಂದೆತಾಯಿಗಳು ಅಲ್ಲಿಯ ಮ್ಯಾಜಿಸ್ಟ್ರೇಟರಿಂದ ವಿಚಾರಸಲ್ಪಟ್ಟು ೨ ವರ್ಷಗಳ ಕಠಿಣ ಸಜೆಗೊಳಗಾಗಿರುವರು ಇದೀ ಜಪಾನ ದೇಶದೇ ಆ ತಂದೆತಾಯಿಗಳನ್ನು ದೂಷಿಸುತ್ತಿರುವುದು

ಪಾತಿವೃತ್ಯ ರಕ್ಷಣೆಗಾಗಿ 'ಬೆಲ್ಟು' ಫ್ರಾನ್ಸ್‌ನಲ್ಲಿ ಒಬ್ಬ ಗಂಡನ ಗತಿ

ಅರ್ವಾಚೀನ ಕಾಲದಲ್ಲಿ ಪಾಲೆಸ್ತೀನ ದೇಶದಲ್ಲಿ ಯುದ್ಧ ನಡೆಯುತ್ತಿದ್ದಾಗ ಆ ಯುದ್ಧದಲ್ಲಿ ಭಾಗವಹಿಸುತ್ತಿದ್ದ ಕ್ರೂಸೇಡರು ತಮ್ಮ ಪತ್ನಿಯರ ಪಾತಿವೃತ್ಯರಕ್ಷಣೆಗಾಗಿ ಸೊಂಟಕ್ಕೊಂದು 'ಬೆಲ್ಟು (ಪಟ್ಟಿ) ಹಾಕಿ ಅದನ್ನು ಬೀಗದಿಂದ ಬಿಗಿದು ಆ ಬೀಗವನ್ನು ತಮ್ಮ ಎಕದಲ್ಲಿ ಜಾಗ್ರತೆಯಿಂದಿಡುತ್ತಿದ್ದರೆಂದು ಚರಿತ್ರೆಯಿಂದ ಕಂಡ ಬರುತ್ತದೆ

ಫ್ರಾನ್ಸ್ ದೇಶದ ಪೆರಿಂ ನಗರದಲ್ಲಿ ಒಬ್ಬ ಕೂಲಿಗಾರನು ಸುಂದರಿಯಾದ ತನ್ನ ಪತ್ನಿಯ ಪಾತಿವೃತ್ಯದ ಮೇಲೆ ಸಂಶಯಗ್ರಸ್ತನಾದನು ಅವಳನ್ನು ಬಗೆಬಗೆಯಿಂದ ಕಾಡಿ ಧಂಗಿಸಿ ಅವಳು ಅನ್ಯ ಪುರುಷರನ್ನು ಕಾಣದಂತೆ ಮಾಡಬೇಕೆಂದಿದ್ದನು ಅದರೆ ದುಸ್ಸಾಧ್ಯವಾಯಿತು. ಕೊನೆಗೆ ಒಬ್ಬ ವ್ಯಾಪಾರಿಯ ಬಳಗೆ ಹೋಗಿ ಕ್ರೂಸೇಡರು ಉಪಯೋಗಿಸುತ್ತಿದ್ದ ನಮೂನೆಯ ಬೆಲ್ಟ್ ಒಂದನ್ನು ಸಶ್ಮಿಯ ಕೆಚ್ಚಿದಿಂದಲೇ ಪಡೆದು ಅದನ್ನು ಅವಳ ಸೊಂಟಕ್ಕೆ ಬಿಗಿದು ಬೀಗದ ಕೈಯನ್ನು ತನ್ನ ವಶದಲ್ಲಿ ಜಾಗ್ರತೆಯಿಂದಿಟ್ಟುಕೊಂಡನು ಈ ಪಟ್ಟಿಯನ್ನು ಬಿಗಿದ ಮೇಲೂ ತನ್ನ ಪತ್ನಿಯು ಸುಮ್ಮನಿರಿಂದ ಚಿಚ್ಚೆಯು ಕಂಡುಬರದಿರಲು, ಅವನು ಅವಳನ್ನು ರ್ತಾತಿಂದಲೂ ಶಿಕ್ಷಿಸತೊಡಗಿದನು. ಹಾಗೆ ಹೊಡೆಯುತ್ತಿರುವಾಗ ಒಂದು ದಿನ ಅವಳು ತಪ್ಪಿಸಿಕೊಂಡು ಪೋಲೀಸರ ಬಳಿ ಹೋಗಿ ದೂರುಕೊಟ್ಟು ಈ ವಿಷಯವನ್ನೆಲ್ಲಾ ಬಯಲುಗೊಳಿಸಿದಳು. ಇಂತಹ ೭ ಬೆಲ್ಟುಗಳು ಪೆರಿಂ ನಗರದಲ್ಲಿ ಮಾರಾಟವಾಗಿವೆಯೆಂದು ತಿಳಿದುಬರುತ್ತದೆ

ಗುರುವಯ್ಯೂರಿನಲ್ಲಿ ಕೇಳಪ್ಪನವರ ಉಪವಾಸ! ಗಾಂಧಿಜೀಯವರ ತಂತಿ. ಉಪವಾಸದ ಅಂತ್ಯ

ಮಲಬಾರಿನ ಗುರುವಯ್ಯೂರಿನ ದೇವಸ್ಥಾನಕ್ಕೆ ಅಸ್ಪೃಶ್ಯರನ್ನು ಪ್ರವೇಶಿಸಿಬಿಡುತ್ತಿದ್ದಿಲ್ಲ ಇದನ್ನು ಕಂಡ ಗಾಂಧಿ ಶಿಷ್ಯರಾದ ಶ್ರೀ ಕೇಳಪ್ಪನೆಂಬವರು ಸತ್ಯಾಗ್ರಹವನ್ನು ತೊಟ್ಟು, ಅಸ್ಪೃಶ್ಯರನ್ನು ದೇವಸ್ಥಾನದೊಳಗೆ ಪ್ರವೇಶಿಸಿಬಿಡುವುದಲ್ಲಿವರಾದರೆ ತಾನು ಸಾಯುವ ತನಕ ಉಪವಾಸವನ್ನು ಕೈಕೊಳ್ಳುವೆನೆಂದು ಪ್ರತಿಜ್ಞೆಮಾಡಿದ್ದರು ಸಪ್ತಂಬರ ಅಂತ್ಯದ ತನಕ ಅವರು ಹತ್ತು ಹದಿನಾರು ದಿನಗಳ ಉಪವಾಸವನ್ನು ಮಾಡಿದರು. ಮಹಾತ್ಮಾ ಗಾಂಧಿಯವರು ಉಪವಾಸವ್ರತವನ್ನು ಕೈಕೊಳ್ಳಲು ನಿರ್ಧರಿಸುವ ಮೊದಲೇ ಇವರು ನಿರಶನವ್ರತಧಾರಣೆಗೆ ಕಂಕಣಬದ್ಧರಾಗಿದ್ದರು ಇವರ ೮ ಉಪವಾಸದಿಂದಾಗಿ ಇವರ ವಕ್ಷಬಾರು ಸ್ಥಾಂತ್ಯವೇ ಕಂಗಾಲಾಯಿತು ಪಂಡಿತ ಮಾಲವೀಯರು ಕೂಡಾ ಸನಾತನ ಹಿಂದೂವಲ್ಲವೆಂದುಕೊಂಡಿದ್ದ ಮಳಯಾಳಿಗಳು ಕೇಳಪ್ಪನವರ ಸತ್ಯಾಗ್ರಹದಿಂದಾಗಿ ಎದೆಗರಿಸಿಕೊಂಡರು ಸಾವಿರಾರು ಜನರು ಬಂದು ಅವರನ್ನು ದಿಕ್ಕಾರವಿಮುಖನನ್ನಾಗಿ ಮಾಡಬೇಕೆಂದು ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ದೇಶಭಂಧಿಗಳಿಗೆ ಗಳೂ ಅಂಜಿಕೆಮಾಡಿಕೊಂಡರು ಅವರೂ ಕೇಳಪ್ಪನವರು ತನ್ನುಪವಾಸವನ್ನಂತ್ಯಗೊಳಿಸಲಿಲ್ಲ ಬದಲಿಗೆ ಸಾಯುವುದೇ ತನ್ನ ಧರ್ತವ್ಯವೆಂದು ನಿರ್ಧರಿಸಿಕೊಂಡರು. ಕೊನೆಗೆ ಗಾಂಧಿಜೀಯವರು ಕೇಳಪ್ಪನಿಗೊಂದೆ ವೈಯಕ್ತಿಕ ನಡೆಸಿದರು ಗಾಂಧಿಜೀಯವರ ಪ್ರಾರ್ಥನೆ ಯನ್ನು ಕೇಳಪ್ಪನವರು ಮನ್ನಿಸುವಂತಿರಲ್ಲಿ ಅವರೂ ತಮ್ಮ ತತ್ಪತಿಗೆ ಗಾಂಧಿಜೀಯವರು ವಿಷಮೂರ್ಛೆಯೊಡಗೂವ ಚಿಚ್ಚೆಯನ್ನು ತಂತ್ಕು. ಕೇಳಪ್ಪನವರು ತನ್ನ ಉಪವಾಸವನ್ನು ವಿಡಲೇಬೇಕೆಂದು ಅಂಗಲಾಚಿ ಬೇಡಿಕೊಂಡರು ತನ್ನಂತೆ ಕೇಳಪ್ಪನವರು ಮೂರು ತಿಂಗಳ ನೋಟೀಸು ಏಕೆ ಕೊಡಲಿಲ್ಲ? ಅಲ್ಲದೆ ಇಂತಹ ಸತ್ಕಾರ್ಯಹವನ್ನಾರಂಭಿಸುವ ಮೊದಲು ತನ್ನೊಡನೆ ಏಕೆ ವಿಚಾರವಿನಿಕೊಳ್ಳಲಿಲ್ಲವೆಂದು ಗಾಂಧಿಜೀಯವರು ಕೇಳಪ್ಪನವರೊಡನೆ ಪ್ರಶ್ನಿಸಿ ಅವರು ತನ್ನ ಉಪವಾಸವನ್ನು ವಿಡುವಂತೆ ಮಾಡಿದರು ಕೇಳಪ್ಪನವರು ಉಪವಾಸವನ್ನು ವಿಡುತ್ತಾ ಇನ್ನು ಮಲಬಾರನ್ನು ಸ್ಪೃಶ್ಯಾಸ್ಪೃಶ್ಯತಾ ಭೇದದಿಂದ ತಪ್ಪಿಸುವ ಸಕಲ ಭಾರವು ಗಾಂಧಿಜೀಯವರ ಮೇಲೆಂದರು ಈಗ ಕೇಳಪ್ಪನವರನ್ನು Hero of Guruvayur ಎಂದು ಜನರು ಕರೆಯುತ್ತಿದ್ದಾರೆ ಕೇಳಪ್ಪನವರು ಮುಂದಾಯಿಯಲ್ಲಿ ವಕಾಲತು ಕೆಲಸ ರಾಜಕೀಯ ವಿಚಾರದಿಂದಾಗಿ ವಿಧಿವ್ಯಾಸಂಗವನ್ನು ಅರ್ಧದಲೇ ಬಿಟ್ಟು ಗಾಂಧಿಜೀಯವರೊಡನೆ ಕೂಡಿಕೊಂಡು ಸೇವೆಗೈ ಮಾಡಿದವರು ಅನೇಕ ಸಲ ಸೆರೆಮನೆಗೆ ನಡೆದವರು

ಭೂಪಾಲದ ನವಾಬರ ನಿಸ್ವಾರ್ಥ ದಾನ. ೫೦೦೦ ರೂಪಾಯಿ

ಸ್ವೋಪ್ಜಾಸ್ಪೃಶ್ಯತೆ ನಿವಾರಣೆಗಾಗಿ ಗಾಂಧಿಯವರ ಪ್ರಾರ್ಥನೆಯಾಯಿತಷ್ಟೆ ಅವರ ಪ್ರಾರ್ಥನೆಯು ಒಂದು ಕಡೆಯಿಂದ ಅದೊಡನೆ ಇನ್ನೊಂದು ಕಡೆಯಿಂದ ಪಂಡಿತ ಮಾಲವೀಯರು ಈ ವಿಷಯಕ್ಕೂ ಮೂಲೋತ್ಪಾಟನೆಕ್ಕೆ ಕೈಹಚ್ಚಿದರು ೨೫ ಲಕ್ಷ ರೂಪಾಯಿಗಳನ್ನು ಸಂಚಯಿಸಿ ತಾನು ಅಸ್ಪೃಶ್ಯತಾ ನಿವಾರಣಾ ಕಾರ್ಯವನ್ನು ಕೈಕೊಳ್ಳುವೆನೆಂದು ಪಂಡಿತ ಮಾಲವೀಯರು ಹೇಳಿದ್ದರು ತನ್ನ ಕಿಂಚಿತ್ ಕಾರ್ಯದಲ್ಲಿ ಶ್ರುತಿಯೊಬ್ಬ ಭಾರತೀಯನೂ ಕೊಡುಗೈಯಿಂದ ಭಾಗವಹಿಸಬೇಕೆಂದೂ ವಿನಂತಿಸಿಕೊಂಡರು. ಇವರ ಈ ವಿನಂತಿಯಾದ ಮೂರು ದಿನಗಳಲ್ಲೇ ಭೋಪಾಲದ ನವಾಬರು ಪಂಡಿತ ಮಾಲವೀಯರಿಗೆ ಅಸ್ಪೃಶ್ಯತಾ ನಿವಾರಣಾ ಚಳವಳಿಗನ್ನು ಮುನ್ನಡಿಸಲು ೫೦೦೦ ರೂಪಾಯಿಯ ಒಂದು ಚೆಕ್ಕನ್ನು ರವಾನಿಸಿ ಉದಾರ ಸಹಾಯವನ್ನು ಕ್ರರು ಮಾಲವೀಯರು ಈ ನಿಧಿಯನ್ನು ಬೇಗನೇ ಪೂರ್ತಿಸಿಕೊಳ್ಳುವ ಮಹಾ ಸಾಧನೆಯಲ್ಲಿರುವರು.

ಗನಿಯ ಕೆಲಸಗಾರರ ಅಪಮೃತ್ಯು! ೧೯ ಮಂದಿಗಳ ಮರಣ!

ಲಂಕೆಯಲ್ಲಿನ ಲೈಗ್ ಎಂಬಲ್ಲಿನ ಗನಿಯೊಂದರಲಿ ನಿತ್ಯದಂತೆ ಕೆಲಸ ಮಾಡಲು ೨೦ ಮಂದಿ ಕೂಲಿಗಳು ತತ್ಕಡಿಯ ಮೂಲಕ ಕೆಳಗಿಳಿಯುತ್ತಿದ್ದರು ತತ್ಕಡಿಯು ಹತ್ತಡಿಗಳಷ್ಟು ಕೆಳಗಿಳಿಯುತ್ತಲೇ ಅದರ ಸಂಕೋಲೆಯು ಕಡಿದು, ೨೦ ಮಂದಿಗಳೂ ತತ್ಕಡಿಯ ಸಮೇತವಾಗಿ ಕೆಳಬಿದ್ದರು ಅವರಲ್ಲಿ ೧೯ ಮಂದಿಗಳು ಕೂಡಲೇ ಮೃತರಾದರು ಒಬ್ಬನು ಮಾತ್ರ ಅರೆಜೀವದಲ್ಲುಳಿದನು. ಈ ಘಟನೆಯು ನಡೆದ ಕೂಡಲೇ ಅಲ್ಲಿಗೆ ಮೂವರು ಡಾಕ್ಟರರು ಕೆಳಗಿಳಿದು ಪರಿಶೋಧನೆಯನ್ನು ನಡೆಸಿದರು ಈ ಅನಾಹುತದಿಂದಾಗಿ ಅಲ್ಲಿಯ ಎಲ್ಲಾ ಗನಿಗಳ ಕೆಲಸಗಳು ಸದ್ಯಕ್ಕೆ ನಿಲ್ಲಿಸಲ್ಪಟ್ಟವು ೨೦೦೦ ಕೆಲಸಗಾರರು ಸುಮ್ಮನಿರುವರು. ಈ ಘಟನೆಗೆ ಆಹುತಿಯಾದವರ ಶವಗಳನ್ನು ಹೊರತರುವಾಗ ಅವರ ಕುಟುಂಬಿಕರು ಎಬ್ಬಿಸಿದ ಹಾಹಾಕಾರವು ಹೃದಯಭೇದ್ಯವಾಗಿತ್ತು ತತ್ಕಡಿಯು ತೂಗುತ್ತಿದ್ದ ಇಡೀ ಕಂಭವೇ ಕೆಡವಿ ಬೀಳುವುದರಲ್ಲಿದೆಯೆಂದು ತಿಳಿದುಬಂದಿದೆ

ಎವರೆಸ್ಟ್ ಪರ್ವತಾರೋಹಣಕ್ಕೆ ಸಾಧನೆ! ಚಕ್ರವರ್ತಿಯವರ ೧೦೦ ಪೌಂಡ್ ವಂತಿಗೆ

ಪ್ರಪಂಚದಲ್ಲಿ ಅತ್ಯುನ್ನತವಾದ ಮೌಂಟ್ ಎವರೆಸ್ಟ್ ಶಿಖರವನ್ನೇರಬೇಕೆಂದು ಅಂಗ್ಲರ ಸಾಹಸವು ಅನೇಕ ವರ್ಷಗಳಿಂದ ನಡೆಯುತ್ತಿದೆ ಕೆಲವರು ಅದನ್ನು ಅರ್ಧದ ತನಕ ಏರಿ ಸೋತು ಹಿಂತಿರುಗಿರುವರು ಈಗ ಇಂಗ್ಲಾಂಡಿನಲ್ಲಿ ಮಿ। ರಾಲೆಟ್ ಎಂಬವರ ಮುಂದಾಳುತನದಿಂದ ೧೩ ಜನರು ಈ ಶಿಖರವನ್ನೇರಲು ಹೊರಟಿರುವರು. ಇವರ ವಂತಿಗೆ ಚಕ್ರವರ್ತಿಯವರು ನೂರು ಪೌಂಡ್‌ಗಳನ್ನು ಕೊಟ್ಟು ಸಾಹಸಗಾರರನ್ನು ಹರಿಸಿರುವರು ಈ ಸಲವ ಸಾಹಸವು ಜಯಪ್ರದವಾಗಬಹುದೆಂದು ಸಾಹಸಿಗಳಿಗೆ ದೃಢವಿಶ್ವಾಸವಿದೆ.

(ಸಾವಿರದು ಸಂಖ್ಯೆ—ಬಾಕಿಯಾ)

ತಾರೀಖು	ಮಾಲು	ಸೇರು	ಬಂಡಿಗಳು	ಕೊಟ್ಟವರು	ಹೆಸರು	ಗುಮಾಸ್ತರು	ಸೂಚ್ಯಂಕ. ಅ	ಆ
15	ಹತ್ತಿ	೦	೬೬. ೨	ಅಚ್ಚುತ	ಆರ	ಎಸ್	6.23	6.12
16	ರಶಿ	೨	೪೨. ೦	ಭರಮೇ	ಜಜ ೧೬	ಟ್ಟಿ	6.23	6.11
17	ಹೊಟ್ಟು	೪	೪೭ ೧೪	ಕೃತ್ತಿಕಾ	೬೦ ೦	೦	6.23	6 1
18	ಭತ್ತ	೪	೩೨.೧೬	ಕೃತ್ತಿಕಾ	೧.೪೬	೨	6.23	6.10
[illegible]	ಭ	೩	೫೫ ೬೦	ಪೋಹಿಣೀ	೭ ೪೪	೭	6.23	6 10
20	ಗುರು	೬	೪೯.೬೫	ಮೃಗಶಿರಾ	೧೭	೨	6.23	6 9
21	ಹುಳ್ಳ	೭	೬೦. ೦	ಆರ್ದ್ರಾ	೧೭.೦೪	೫	6 24	6 9

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ(ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಜುಮುಲಾ ಮಳೆ.
6	85— 7	76— 9	—	—
7	87— 4	76— 6	—	—
8	89— 2	74— 4	2—75	—
9	83— 9	74— 1	0—36	—
10	86— 6	75— 8	0—15	—
11	86— 7	75 6	—	—
12	88— 6	75— 3	0—20	100—82

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ರಾಶಿ ಅಕ್ಕಿ	2 – 12	3 4
ಸುಗ್ಗಿ ..	4 – 0	4 – 8
ಸೆಣ್ಣು ...	3 – 4	4 – 2
ಸುಗ್ಗಿ ...	3 – 0	3 – 4
ಊರ ಅವ್ವಲ್ ಬೆಳ್ತಿಗೆ ..	4—10	5 – 0
ರಂಗೂನು ಬೆಳ್ತಿಗೆ ಗೋಡೆ ಗಳ್ಳೆ ..	7 – 0	7 – 4
ಎಲ್ಲಾರು ಬೆಳ್ತಿಗೆ ಮುಡಿ ಗಳ್ಳೆ ..	4 – 12	4 – 14
ಗೋಡೆ ಗೋಡೆ ಗಳ್ಳೆ ..	10 – 8	12 – 8
ಹೊಗರಿ ಗೋಡೆ ಗಳ್ಳೆ ..	10 – 8	12 – 0
ಹುರುಳಿ ಗೋಡೆ ಗಳ್ಳೆ ...	6 – 12	7 – 4
ಕಡಲೆ ಗೋಡೆ ಗಳ್ಳೆ	8 – 8	11 – 0
ಹೊಗರುಬೇಳೆ ಗೋಡೆ ಗಳ್ಳೆ	13 – 8	21 – 0
ಉದ್ದು ಗೋಡೆ ಗಳ್ಳೆ ...	11 – 8	13 – 0
ಹೆಸರು ಗೋಡೆ ಗಳ್ಳೆ ..	10 – 4	11 –
ಊರುಬೆಲ್ಲ ಖಂಡಿ ಗಳ್ಳೆ ..	33 – 12	36 – 4
ಉಪ್ಪು ಗೋಡೆ ಗಳ್ಳೆ .	6 – 0	6 – 4
ಪೊಲ್ಲ ಖಂಡಿ ಗಳ್ಳೆ	65–	72–
ಪೊಲ್ಲ ಹಿಂಡಿ ಖಂಡಿ ಗಳ್ಳೆ ...	32 – 0	—
ಎಳ್ಳಿಂಡಿ ಖಂಡಿ ಗಳ್ಳೆ .	22 – 8	—
ಪೊಲ್ಲ ಎಳ್ಳೆ ಪುಡಿ ಗಳ್ಳೆ	5 – 10	6 – 10
ಎಳ್ಳೆಣ್ಣೆ ಮಾಮ ಗಳ್ಳೆ	6 – 12	7 – 0
ಹುಣಸೆಹಣ್ಣು ಬೆಳ್ತಿಗೆ ಗಳ್ಳೆ ..	4 – 7	8 – 12
ಮೂರಿಂಡಿ ಸಕ್ಕರೆ ಮುಡಿ ಗಳ್ಳೆ ...	4 – 1	4 – 2
ಪೊಡಿ ಮೂಸು ...	4 – 0	5 – 0
ಸಾಸವೆ ಮುಡಿ ಗಳ್ಳೆ .	5 – 4	5 – 8
ತೇಪಿಜ್ ಕಾಫಿ ಖಂಡಿ ಗಳ್ಳೆ .	275– 0	300 –
ಕಾಳುಮೆಣಸು ಖಂಡಿ ಗಳ್ಳೆ .	170– 0	180–
ಯೇಲಕ್ಕಿ ಮಾಮ ಗಳ್ಳೆ	27 – 0	28 –
ಗೇರುಬೀಜ ಮುಡಿ ಗಳ್ಳೆ ..	3 – 6	3 – 8
ಅಕ್ಕಸಾಲಿ ಖಂಡಿ ಗಳ್ಳೆ ...	25 – 0	25 – 8
ಕಾಯಿ ತೆಂಗು ಮಾಮ ಗಳ್ಳೆ ...	11 – 0	11 – 8
ಕಾಯಿ ಕಾಪ್ರಗಳು ಮಾಮ ಗಳ್ಳೆ ..	15 – 0	16 – 0
ಪೀಪಳಕ್ಕಿ ಸೇರು ಗಳ್ಳೆ	14 – 4	14 – 12
ಕಿತ್ತಾಳೆ ಹಣ್ಣು ಮಾಮ ಗಳ್ಳೆ ...	11 – 8	13 – 0
ಬಮ್ಮು ಗಳ್ಳೆ ...	17 – 14	18 – 0
ಮಾಳೆ ಮುಳೆ ಖಂಡಿ ಗಳ್ಳೆ ...	40 –	—
ಬೆಣ್ಣೆರಿ ಕಾಫಿ ಖಂಡಿ ಗಳ್ಳೆ. ...	350 –	355 –
ಹಳೆ ಅಕ್ಕಿ ...	150 –	205 –
ಪೊಸ ಅಕ್ಕಿ ...	140 –	145 –

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೊಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಿಂದರೆ ಪ್ರತಿದಿನವೂ ನಾವು ಸಾವಿ ಕಂಚಿಳಿ ಮಾರ್ಗವಾಗಿಯೂ, 4 ಸಾವಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ತುಳಿಸಿ ನಾಡ್ಪೆ ತಾಪುಗಳಲ್ಲಿ ಇಳಿದು ಸಲಪಿರಿ. ಇಂದೇ ಶಿಲೆಗಳಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಲೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಒಟಿಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಸ್ವಾಭೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ನೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹಿತ್ತಲು ಸುಲಭವಾಗುವುದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd Mangalore

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಉಡುಪಿ ತಾಲೂಕು ಇನಂಜೆ ಗ್ರಾಮದ ಕಟ್ಟಿನ್ಗ ಶೆಟ್ರಿ ಮಗ ನಾಗಯ್ಯ ಶೆಟ್ರಿ ಬಾಬು ಇವರಿಗೆ ಗ್ರಾಮದಲ್ಲಿರುವ ಮನೆಯಾದ ೪೦ ನುಡಿ ಆಕ್ಕ ವನಗಿ ರೂಪಾಯಿ ೧೦೦ ಹುಟ್ಟುವಳೆಯಿರುವ ಉಳ್ಳ್ಯವಾದ ಆಸ್ತಿ ಇದರಲ್ಲಿರುವ ಕಟ್ಟಿಣಗಳು ವಗೈರೆ ಇದೇ ನವಂಬರ ತಾ ೧೬ರಲ್ಲು ಮಂಗಳೂರು ಸಬ್ ಕೋರ್ಟಿನಲ್ಲಿ R P L ನಂಬರ 43/1932ರಲ್ಲು ಬಹಿರಂಗವಾಗಿ ಪಿಬ್ಲಂ ಮಾಡಲ್ಪಡತ ಪ್ಪದು ಒಳ್ಳೆಯ ಆಸ್ತಿಯನ್ನು ಬೆಲಭಕ್ಕಯದಲ್ಲಿ ಪಡಕೊಳ್ಳುವರೆ ಇದಾಧೆ ಇದ್ದವರಿಗೆ ಇದು ಒಳ್ಳೇ ಸಂದರ್ಭವಾಗಿರುತ್ತದೆ ಹೆಚ್ಚಿನ ಅಮಖಿವ ವಿವರಕ್ಕೆ ಸಬ್ ಕೋರ್ಟಿನಲ್ಲಿ ಪ ಈ ಕೆಳಗೆ ದಸ್ಕತುಮಾಡಿದವರ ಕೂಡ ತಿಳಿಪಡಕೊಳ್ಳಬಹುದು

ಮಂಗಳೂರು
ತಾ ೧೦ ೧೧ ೩೨

M N Prabhu B A B L
Advocate

ನೋಟೀನು.

ಕಾರ್ಕಳ ತಾಲೂಕು ಕಾರ್ಕಳ ಕಸಬೆಯಲ್ಲಿರುವ ಹನುಮಾನ್ ಟ್ರೇನ್ಸ್ ಪೋರ್ಟ್ ಕಂಪೆನಿ ಬಸ್ಸು ಡ್ರೈವರ್ ಸೇಖ್ ಮಹಮ್ಮದ್ ಇಸ್ಮಾಯಿಲ್ ಸಂತೋಷನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ — ನನ್ನಿಂದ ಮಂಗಳೂರು ತಾಲೂಕು ಬಜಪೆ ಗ್ರಾಮ ದಲ್ಲಿರುವ ದೀಪ ಅಂಗಡಿ ಅಬ್ದುಲ್ ಕರೀಮು ಸಾಹೇಬರು ಮತ್ತು ಸದ್ರಿ ಕಸಬೆಯಲ್ಲಿರುವ ಬ್ರೈಂಜ್ ಪೋಸ್ಟು ಮಾಸ್ಟರ್ ಕೂಡಾ ವಿಶ್ವಾಸ ಘಾತಕ ಪಡಿಸಿ ನನ್ನಿಂದ ದಸ್ತತು ಪಡಕೊಂಡು ದಿವಾಂಡ್ ನೋಟು ವಗೈರೆ ಮಾಡಿರುತ್ತಾರೆಂಕ ಸದ್ರಿ ಅಬ್ದುಲ್ ಕರೀಮು ಸಾಹೇಬರ ಕಿಡಿಪ್ಪಿ ನೋಟಿನಿಂದ ತಿಳಿದುಬರುತ್ತದೆ ಆ ರೀತಿ ಅವರು ಮಾಡಿದ ಯಾ ಮಾಡುವ ಯೊವತ್ತು ದಾಳ್ಲೆ ರಿಕಾರ್ಡು ನನಗೆ ಬಾರಿಸತಕ್ಕದ್ದಲ್ಲಾ ಅಲ್ಲದೆ ಯೊರಾದರೂ ಟ್ರೇನ್ಸ್‌ಫರ್ ವಗೈರೆ ಮಾಡಿಕೊಂಡರೆ ಅವರಿಂದ ನನಗೆ ಆಗುವ ಎಲ್ಲಾ ನಷ್ಟಕ್ಕೆ ಹಕ್ಕು ಪಡಕೊಂಡವರೆ ನೆ ರಾಜಿನಿಕಕ್ಕದ್ದು ಈ ಕುರಿತು ನನ್ನ ಕಡೆಯಿಂದ ದಕ್ಷಿಣ ಕನ್ನಡ ಜಿಲ್ಲಾ I ಕ್ಲಾಸ್ ಮೆಜಿಸ್ಟ್ರೇಟ್ ದೊರೆಗಳವರಲ್ಲಿ ಏನಾದಿ ಶಿಕ್ಷೆಗೆ ಇರುತ್ತದೆ ತಿಳಿದಿರಲಿ

ಸೇಖ್ ಮ

ಸೃಷ್ಟಿ ರೋಗಕಾರಕಾಣುಗಳ ಅತ್ಯಂತ ಧಾರುಣಶಕ್ತಿಯ, ಕಷ್ಟಸಹ್ಯ ಮತ್ತು ಅಪಮೃತ್ಯುಕರ
ಮಾರಣಾಂತಿಕ ಅಮೃತ್ಯುವಾದ ೬೦ ವನಸ್ಪತಿಗಳಿಂದ ಸತ್ವಾತ್ಮಕವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕ ಲೇ. ರಿಜಿಸ್ಟರ್ಡ್.

ಇದರಿಂದ ಸ್ವಾಸಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕೊಡಿಸುವ ಬಗ್ಗೆ. ಹೆಸ್ತ ಕೃಶತೆಯಿಂದಲೂ, ಆತ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅತಿಕೃತ. ಕಾಮೇಚ್ಛೆ ಯಾಗಿ ಕೂಡಲೇ ವೀರ್ಯಸ್ಖಲನವಾಗಿಹೋಗಿ, ಗರ್ಭಿಣಿಯು ಪರಿಹಾರವು, ಎಂಥವರಿದರೂ ಪರಿಹಾರವು, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಮಾಗುತ್ತದೆ ಹಾಗೂ ಶಕ್ತಿ, ಮತ್ತು ತೂಕ ಹೆಚ್ಚುತ್ತದೆ. ೨೦ ದಿವಸ ಸಾಲುವ ಲೇ ಕೊಲೆಯ ಪೂರ್ಣ ಗುಣಕಾರಿಯಾದ ಡಬ್ಬಿಯ ಕಿಮ್ಮತ್ತು ರೂ ೩. ಟಿ ಖ ರೂ ೧ ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೦೧ ಮೂರು ಡಬ್ಬಿಗೆ ರೂ. ೧೫೫ ಮಾತ್ರ ಪಕ್ಕಾವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜಸೈನ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್. ಆಯ್ ಬಟಮಿಟ್, ಎಲ್ ಎಮ್. ಎಂಡ್. ಎಸ್., ಜೆ. ಪಿ, ಮುಂಬಯಿ — ಈ ಪಾಕವು ಧಾತುಪುಷ್ಟಿಕ, ಕಫ್ತವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು. ಈ ಔಷಧಸಮುಸ್ಕಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ ಪ್ರಿನ್ಸಿಪಾಲ ಫೆಡಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ.— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾನಸ್ಕ್ಯ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅತಿಕೃತ ಈ ರೋಗಗಳ ವೇಳೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ವಿಮುಕ್ತರಾಗಿರಿ

ಪತ್ರ:—ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾನು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ನಾರಿ ಹಡೆಯುವುದರಿಂದ ಹೆಂಗಸರಿಗೆ ಅತಿಶಯ ಆಶಕ್ತಿಯಾಗುತ್ತದೆ. ಬಹಳ ಒಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ದೇರೆ ಕಾರಣದಿಂದಲೂ ಮಕ್ಕಳನು ಹಡೆಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೆ ಫೋರಾ ವಿಚಾರ ಮಾಡಿ ಔಷಧದೇದಿರಿ ಮುಖ್ಯ ಸರ್ಟಿಫಿಕೇಟ್ ವೈದ್ಯ ಡಾಕ್ಟರ ಪಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಮಾಹಿಮ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕೆ. ೪ ರೂ ೩ ಪಿ ಖರ್ಚು ೦೫೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವುದು. ಆನಂಯಮಿತನದಿಂದ ಮುಟ್ಟುಗುವಿಕೆ, ಕ್ಷೀಣ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಸಂಸನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಿಗಾಗಿ ಗರ್ಭಕೋಶವು ಶುಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿ ಕೊಳ್ಳುವ ಮೊದಲು ಗೃಹಚಿಕಿತ್ಸೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ ಮುಖ್ಯ ಸರ್ಟಿಫಿಕೇಟು, ಮೀ ರಾ ಎ ಎಮ್. ಇನ್ಸಪೆಕ್ಟರ ಬೆಳಗಾವಿ ಈ ಚೂರ್ಣದಿಂದ ನನ್ನ ಕುಟುಂಬದ ಹೆಚ್ಚಿಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಚೇಷವಾದುವು ನನ್ನ ಮಿತ್ರನ ಹೆಂಡತಿಯು ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ ೩ ಟಿ ಖ ಆಣೆ ೪

ವಿಳಾಸ— ಸಂಜೀವಿನೀ ಔಷಧಾಲಯ. ಮು. ಪೊ. ಮಿರಜ, S M C

ಆಗ್ರಹ.

ಬೆಂಗಳೂರು ಯುನಿವರ್ಸಿಟಿ ಯೂನಿಯನ್‌ರವರು ಆಗ್ರಹದಿಂದ ಉಂಟಾಗತಕ್ಕ ಅನರ್ಥಗಳನ್ನು ನಿವಾರಿಸಲ್ಲಿ ಅಭಿನಯಿಸಿ ತೋರಿಸಬೇಕೆಂದು ಪ್ರಯತ್ನ ಮಾಡಿರುವರು ಈ ಅನರ್ಥಗಳನ್ನು ಸೆಕಲ ವೇದಶಾಸ್ತ್ರ ಪುರಾಣೇತಿಹಾಸಗಳು ತೋರಿಸಿವೆ. ಸಕಲ ಚರಿತ್ರೆಗಳು ಈ ಅನರ್ಥದ ಹದರಿಕೆಗಳಾಗಿರುವುವು ಲೋಕದಲ್ಲಿ ಅಗಿರತಕ್ಕ ಪ್ರಳಯಗಳೆಲ್ಲಾ ಮುಖ್ಯ ಕಾರಣವೇ ಕೋಪ ಕೋಪದಿಂದ ಆಗಿದ ಅನರ್ಥಗಳು ಒಹಳ ಆಪೂರ್ವ ಆದುದುಂಟು ನನ್ನ ದೇಹದೊಳ್ಗೆ ಅಂತರ್ಗತನಾಗಿರ ತಕ್ಕ ಆರು ಶತ್ರುಗಳಲ್ಲಿ ಕೋಪವು ಬಂದಾಗಿ ನಿವಾಪಿಸಿಲ್ಲುಟ್ಟಿದುವುದು ಕೋಪವನ್ನು ಗದ್ದವರು ಮಹಾ ಲೋಕಗಳನ್ನು ಗೆಲ್ಲುವರು ಸಕಲ ಸನ್ಮಂಗಳಗಳನ್ನು ಹೊಂದುವರು ಕೋಪವನ್ನು ಗೆಲ್ಲುವ ವರೆಗೂ ಮನೋವಾ ರ್ಮಗಳ್ ಪರಿಶುದ್ಧರಾಗುವುದು ಕಷ್ಟ ಮನೋವಾ ರ್ಮಗಳ ಪರಿಶುದ್ಧತೆಯೇ ನಿಜವಾದ ದೇವತಾರಾಧನೆ ಮಿಕ್ಕ ಆರಾಧನೆಗಳಲ್ಲಾ ಲೋಕ ನಿಡಂಬನಾರ್ಥವಾದ ಆರಾಧನೆಗಳು ಅವುಗಳನ್ನು ದೇವರು ಮೆಚ್ಚುವುದಿಲ್ಲ ಕೋಪ ಬಂದಾಗ ಹೆತ್ತು ನಿಮಿಷಗಳು ಯಾವ ಕೆಲಸವನ್ನು ಮಾಡದೆಯೇ ಇರುವುದು ಶ್ರೇಯಸ್ಕರವೆಂದು ದೇವರ್ಷಿಗಳು, ಬ್ರಹ್ಮಶ್ರಿಗಳು ಹೇಳಿರುತ್ತಾರೆ ಇದನ್ನನುಸರಿಸಿ ಬಾಲಕರಿಗೆ ಉಪದೇಶಿಸಿವಾಡತಕ್ಕ ಪಾಠದಲ್ಲಿ "Ten when ever you are angry" ಎಂದು ಹೇಳುವರು ಕೋಪದ ವೇಳೆಯಲ್ಲಿ ನೀರೋ ಎಂಬ ಚಕ್ರವರ್ತಿಯು ಮಾತೃಹತ್ಯನನ್ನು ಮಾಡಿಸಿದನು "ನಮಾತುಃ ಶರದೇವತಾ" ಎಂಬಂತಾಗಿ ಮಹಾತ್ಮರು ಹೇಳಿರುವರು ಕೋಪ ಒಂದಾಗ ಪರಮ ಧರ್ಮವೂ ಕೂಡ ಮರೆಯಲ್ಪಡುವುದು ಬೆಂಗಳೂರು ಯುನಿವರ್ಸಿಟಿ ಯೂನಿಯನ್‌ನವರು ಈ ವಿಷಯವನ್ನು ಅಭಿನಯಿಸಿ ತಮ್ಮ ನ್ಯಾಟಕಗಳನ್ನು ನೋಡುವುದಕ್ಕೆ ಬಂದವರಲ್ಲಿ ಒಬ್ಬರಿಗಾದರೂ ಕೋಪವಾರದಂತೆ ಮಾಡಿದರೆ ಇವರು ಮಾಡಿದ ಪ್ರಯತ್ನ ಸಫಲವಾಯಿತೆಂದು ಹೇಳಬಹುದು ಕೋಪ, ನಿಶಾದ್ರವ್ಯ ಸೇವನೆ, Over proof ಸಾರಾಯನ ಸೇವನೆ, ಕಾಮ, ಲೋಭ, ಮೋಹ, ಮದ, ಮಾತ್ಸರ್ಯ ಇವೇ ಮೊದಲಾದವುಗಳು ಜನರ ಕೈಯಲ್ಲಿ ಮಾಡಬಾರದ ಕೆಲಸಗಳನ್ನು ಮಾಡಿಸಿ ಅನೇಕ ಸ್ತ್ರೀಪುರುಷರನ್ನು ಹೇಗೆ ಅಧೋಗತಿಗೆ ತರುವುವೋ ಅದನ್ನು ಈ ಯೂನಿಯನ್ ಮೆಂಬರುಗಳು ಸರಿಯಾಗಿ ಅಭಿನಯಿಸಿದರೆ ತುಂಬ ಪ್ರಯೋಜನವಾಗುವುದರಲ್ಲಿ ಸಂದೇಹ ನೇನೂ ತೋರುವುದಿಲ್ಲ

ಸಿ. ವಿ. ವೈದ್ಯೇಶ್ವರಯ್ಯರ

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O, P No 127/1932

ಸಪ್ಪುರ ಶ್ರೀನಿವಾಸರಾವ್, ಮ್ಯಾನೇಜರ ಗಾರ್ಡಿಯನ್ ಮಾವ ಕೆ ಬಿ ಸುಂದರ ರಾವ್—ಅರ್ಜಿದಾರ

ಅರ್ಜಿದಾರನ ತಂದೆ ಹಾಲ್ ವ್ಯತಪಟ್ಟ ದತ್ತಾತ್ರೆಯ ನವರಿಗೆ ಅರ್ಜಿಯಲ್ಲಿ ತಿಳಿಸಿರುವಂತೆ ಹೊರಗಿನಿಂದ ಬಹಳ ಸಾಲಗಳ ವಸೂಲಿ ಹಕ್ಕಿನ ಕುರಿತು ತನಗ ವಾರಿಕೆ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ದಾಖಲು ಮಾಡಿದ ನೋಟ್ಟೀಸಿನ ಅರ್ಜಿಯು ಇದೇ ನವೆಂಬ್ರ ತಾರೀಕು 18-1932ಕ್ಕೆ ಈ ಕೋರ್ಟು ಮುಂದೆ ತನ್ನಿಗೆ ಇಟ್ಟಿರುವದೆ ಆ ಕುರಿತು ಆಕ್ಷೇಪ ಕುಳ್ಳನರು ಸರಿ ನ್ಯಾದೆಯ ದಿವಸ ಹಗಲು ಗಂಟ 10ಕ್ಕ ಈ ಕೋರ್ಟು ಮುಂದೆ ಖುದ್ದು ಆಗಲೀ ವಕೀಲರ ಮುಖಾಂತರ ವಾಗಲೀ ಹಾಜರಾಗಿ ತನ್ನ ಆಕ್ಷೇಪಗಳನ್ನು ಜಾಹೀರು ಮಾಡಿ ಕೊಳ್ಳತಕ್ಕದ್ದು

ಪುತ್ತೂರು ತಾ ೭—೧೧—೩೭ } M Shiva Rao, *Pleader for Petitioner*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 460/1932 R I A 679/1932

ಸುಬ್ರಾಯ ವಾರಂಬಳ್ಳಿ—ವಾದಿ

ಕೃಷ್ಣಯ್ಯ ವಾರಂಬಳ್ಳಿ, ಶೇಷ ವಾರಂಬಳ್ಳಿರ ಮಗ, ವಾರಂಬಳ್ಳಿ ಗ್ರಾಮದಲ್ಲಿರುವವ ಪ್ರತಿವಾದಿ

ಮೇಲ್ಕಂಡ ವ್ಯಾಜ್ಯವು ವರ್ಜಿಯು ಕೂಡಾ ತಾರೀಕು 12—11—1932ಕ್ಕೆ ಕನ್ನಿಗೆ ಇಟ್ಟಿರುವುದರಿಂದ ಪ್ರತಿವಾದಿಯು ಆ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಕೋರ್ಟು ಮುಂದೆ ಹಾಜರ್ರಾಗಿ ಆಕ್ಷೇಪವಿದ್ದರೆ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಆತನ ಗೈರ ಹಾಜರಿ ದೆಸೆಯಿಂದ ಸರ್ಟಿ ವ್ಯಾಜ್ಯ ವ ಅರ್ಜಿಯು ತೀರ್ಮಾನಿಸಲ್ಪಡುವುದು.

B. S. Hegde,—*Pleader for plaintiff.*

ನೋಟೀಸು:

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 120/1932-R. 1. A. 865/32.

ದೊಡ್ಡಣ್ಣ ಯಾನೆ ವ್ಯಾಸರಾಯ ಭಟ್ಟ—(ವಾದಿ) ಅರ್ಜಿದಾರ ಮತ್ತು

ದೇಯಿ ಹೆಂಗ್ಸು ಕೂಡಾ—(ಪ್ರತಿವಾದಿರು)—ಎದ್ರಿರು

ಈ ಅರ್ಜಿಯಲ್ಲಿ 3ನೇ ಯದ್ರಿ ಕಾಳುಪೂಜಾರಿಗೆ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯು ಗುಜಕ್ಕೆ ತಾ. 4—8—1932ರಲ್ಲಿ ಕೊಡೋಹಾದ ಪ್ರಿಲಿಮಿನರಿ ಡಿಕ್ರಿ ಮೇರೆಗೆ, ಯೆದ್ರಿರು ಹಣವನ್ನು ವಸೂಲು ಕೊಡದೆಯಿರುವ ಕಾರಣ, ಸದ್ರಿ ಡಿಕ್ರಿಯನ್ನು ಶಾಶ್ವತಲ್ ಮಾಡಬೇಕಾಗಿ ಕೊಟ್ಟ ಅರ್ಜಿಯು ತಾ 25—11—32ಕ್ಕೆ ಇತೋಹಾದ್ದರಿಂದ, ಆ ಕುರಿತು ಆಕ್ಷೇಪಗಳೇನಾದರೂ ಇದ್ದರೆ ಸದ್ರಿ ಯವ್ವಗಳನ್ನು ಈ ಕೋರ್ಟುಮುಂದೆ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಹಾಜರಾಗಿ ಜ್ಯಾಹಿರುಮಾಡಬೇಕಾಗಿಯೂ ತಪ್ಪಿದರೆ ಶಿವ್ಯಾ ಮಾಡಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾದೀತು ಎಂದು ತಿಳಿಸೋಣಾಗುತ್ತದೆ

ಉಡುಪಿ, ತಾ ೧೫—೧೧—೩೭ } K Vittal Nayak, *Pleader for Petitioner*

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

I P. 21/32

ಸುಬ್ಬು ಧಂಡಾರಿ—ಅರ್ಜಿದಾರ

ಮತ್ತು

ಕಂಕಾನಾಡಿ ಕೋಪರೇಟಿವ್ ಸೊಸೈಟಿ ಕೂಡ—ರಿಪ್ರೆಸೆಂಟೆಂಟರು ಈ ವ್ಯವಹಾರದಲ್ಲಿ 2ನೇ ರಿಪ್ರೆಸೆಂಟೆಂಟರಾದ (Napitha Benefit Society) ಯ ಪ್ರೆಸಿಡೆಂಟ ಕಾಂತು ಧಂಡಾರಿಗೆ—ನಾಂ ಧಂಡಾರಿ ಮಗ—ಬೊಂಡಂತಿಲ ಗ್ರಾಮ—

ಈ I P 21/32ನೇ ವ್ಯವಹಾರದಲ್ಲಿ ಅರ್ಜಿದಾರ ಸುಬ್ಬು ಧಂಡಾರಿಯು ತನ್ನನ್ನು ದಿವಾಳಿಯೆಂತ ಸ್ಥಾಪಿಸ ಬೇಕಾಗಿ, ಈ ಕೋರ್ಟಿನಲ್ಲಿ ಮೇಲಣ I P. 21/32ನೇ ಅರ್ಜಿದಾರ್ಸ್ಥ ಮಾಡಿರುತ್ತಾನೆ ಆ ಬಗ್ಗೆ ನಿಮ್ಮ ಆಕ್ಷೇಪಗಳೇ ನಾದರೂ ಇದ್ದರೆ, ಅರ್ಜಿ ತನ್ನಿಗೆ ಇಟ್ಟ ತಾ 16—11—32ಕ್ಕೆ ಪೂರ್ವಾಹ್ನ ಗಂಟ 11ಕ್ಕೆ ಈ ಕೋರ್ಟಿಗ ನೀವ ಖುದ್ದಾಗಿ ಯಾ ವಕೀಲರ ಮುಖಾಂತರ ಹಾಜರಾಗಿ ಜಾಹೀರು ಮಾಡಿ ಕೊಳ್ಳಕ ಕ್ಕದ್ದು ಕಲ್ಲದಿದ್ದರ ಯೆನ್ಸಿಪಾರ್ಟಿಯಾಗಿ ತೀರ್ಮಾನಿಸಲ್ಪಡುವುದು

ಮಂಗಳೂರು ತಾ 4—11—32 } K Gopal Rao, ಅರ್ಜಿದಾರನ ಪರವಾಗಿ ವಕೀಲ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 363/1932

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು—ವಾದಿಯ

ಎದ್ರಿ

ನೇಜಾರ ವೆಂಕಟ್ರಮಣಯ್ಯ, ಸಹ 3 ಜನರು—ಪ್ರತಿವಾದಿರು

1ನೇ ಪ್ರತಿವಾದಿ ನೇಜಾರ ವೆಂಕಟ್ರಮಣಯ್ಯ, ಶಂಧಯ್ಯನವರ ಮಗ, ಪುತ್ತೂರು ತಾಲೂಕು ಅಮರಪಡ್ಡೂರು ಗ್ರಾಮದಲ್ಲಿರುವವ

2ನೇ ಪ್ರತಿವಾದಿ—ಸೈಲೂರು ರಾಮಚಂದ್ರಯ್ಯ, ನಾರಾಣಪ್ಪಯ್ಯನವರ ಮಗ, ಪುತ್ತೂರು ತಾಲೂಕು ಅಮರ ಮುಡ್ಡೂರು ಗ್ರಾಮದಲ್ಲಿರುವವ—

ಸದ್ರಿ 2 ಜನ ಪ್ರತಿವಾದಿಗಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿರು ನಿಮ್ಮ ಮೇಲೆ ಕೂಡಾ ರೂ 417-8-4ಕ್ಕೆ ಬರಮಾಡುವರೆ ದಾಕಲು ಮಾಡಿದ ಮೇಲಣ ವ್ಯಾಜ್ಯವ ತಾರೀಕು 22—11—'32ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಿವಸ ನೀವ ನಿಮ್ಮ ಉದಾಹರಣೆಯನ್ನು ದಾಕಲು ಮಾಡುವರೆ ತಪ್ಪಿದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ಸದರಿ ವ್ಯಾಜ್ಯವ ತೀರ್ಮಾನವಾಗುವುದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ

ಪುತ್ತೂರು, ೭—೧೧—೩೭ } H. Ganapathi Rao, ವಾದಿರ ಕಡೆ ವಕೀಲ

→←→←

ಸೂಚನೆ! ಕಲೆಸೇ ಕುಗೆಳು
ಬಾಲ್ ಕಲೆಸೇವು, ಅಟ್ಟುಪಾಗೇಗೂ, ಪ್ರಕಟಕರಿಗೊಸವು ತಿಳ್ಳೆಯ ಅನು ಭವಿಸಿದ ಮಾಡಲಿಚ್ಛಿಸುವವರಿಗೂ, ಧೇಯಾಗಿರುವ ಕ್ಲೌನ್ 444 ವುಟಗಳ ಯನ್ನೆ ಪ್ರಕಟಿಸಿರುವ ಜಿಲ್ಲೆಯ ಕ್ಲಾಸಿಕ್ ಇತಿಹಾಸ'ವೆಂಬ ಉದ್ಗ್ರಂಥ! ಬೆರೆ ಪ್ರತಿಯೊಂದಕ್ಕೆ ಟಪಿ. ಸಹಿತ ರೂ. 3
ಕಾರವಾರ ಛಾಪಖಾನೆ,
ಮಂಗಳೂರು.

1ನೇ ಜನವರಿ ನಂತರ ಗಾಂಧೀಜಿಯವರ ಇನ್ನೊಂದು ಉಪವಾಸ (?)

ಮಹಾತ್ಮರ ನಿವೇದನೆ.

೨೦೦೦೦! ಜಸ್ಟಿಸ್ ಪಕ್ಷವು ಬದಲಾಯಿತು. ಬ್ರಿಟಿನರು ಉತ್ತಮರೋ ಜಪಾನರೋ? ಕಳೆದು ಹೋಗಿದ್ದ ಗಂಡ ಸಿಕ್ಕಿದ ?

ಕೈ ಇಂದಿಯನ್!
ಸ್ವದೇಶಿಯಕ್ಕೇ ಪಡಕೊಳ್ಳಿರಿ!
ಸ್ವದೇಶೀ ಕಾಗದದಲ್ಲಿ ಮುದ್ರಿತವಾದ 1938ನೇ ಇಸವಿಯ ಡೈರಿಗಳು ಇದೇ ನವಂಬರ ತಿಂಗಳಲ್ಲಿ ಸಿದ್ಧವಾಗುವುವು. ಇದೇ ಡೈರಿಯನ್ನು ಪಡಕೊಳ್ಳುವಂತೆ ಇಂದೇ ನಿರ್ಧರಿಸಿರಿ!
ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ.
ಕಾರವಾರ ಛಾಪಖಾನೆ,
ಮಂಗಳೂರು.

೧೯–೧೧ ಸಲ್ಲಿ ಮಹಾತ್ಮರ ಉಪವಾಸ(?)

ಮುಲಬಾಗಿಲಿನ ಗುರುವಯ್ಯಂಗಾರು ದೇವಸ್ಥಾನವನ್ನು ೧೯೫೯ ಜನವರಿ ೧೮ನೇ ತಾರೀಖಿಗೆ ಅಲ್ಲಿಯ ದೇವಸ್ಥಾನಾಡಳಿತಾಧಿಕಾರರು ಹರಿಜನರ ಪ್ರವೇಶಕ್ಕಾಗಿ ತೆರೆದಿಡಬೇಕೆಂದು ಮಹಾತ್ಮಾ ಗಾಂಧಿಯವರು ಈ ಸಂಬಂಧವಾಗಿ ತಮ್ಮೊಂದು ಉಪವಾಸವನ್ನು ಕೈಕೊಳ್ಳುವರೆಂದು ಪ್ರಕಟವಾಗಿದ್ದ ವಿಷಯವನ್ನಾ ಡಾ। ಅಂಬೆಡ್ಕಾರರ ಅಧಿಕಾರ್ಯವನ್ನು ಕೇಳಲು ಇದ್ದರು. ಅಂಥಪ್ರಶ್ನೆಗಳಿಗಾದ ಅನೇಕರು ಗಾಂಧೀಜಿಯವರ ಉಪವಾಸದಿಂದಿ ಹಿಂಗಿಗೆ ಬರಲಾರದಾದುದರಿಂದ ಇನ್ನೊಂದುಪವಾಸವು ನುಡಿಪಡಿಸಿಯಾಳ್ವರು; ಗಾಂಧಿಯವರು ಅತ್ಯಪ್ರೇರಣೆ ಹಾದು ಅದೇ ರೀತಿ ಈ ಸಂಪ್ರದಾಯವಾದಿಗಳೂ ಅಸ್ಪೃಶ್ಯತಾನಿವಾರಣೆಯಾಗಬಾರದೆಂದುದೂ ತಮ್ಮ ಅತ್ಯಪ್ರೇರಣೆಯೇ ಎಂದುಬಿಟ್ಟರೆ, ದ್ವಿಪಕ್ಷಗಳ ಅತ್ಯಪ್ರೇರಣೆಗಳು ತಲೆ ತಲೆ ತಾಟಾಡಿಸುವ ಪ್ರಸಂಗವೊದಗಬಹುದು, ಗಾಂಧಿಯವರು ಗುರುವಯ್ಯಂಗಾರು ದೇವಸ್ಥಾನ ಪ್ರವೇಶವೆಂಬ ಅಲ್ಪ ಸಂಗತಿಗಾಗಿ ಪ್ರಾಣಾಪಾಯವನ್ನು ತಂದುಕೊಳ್ಳುವುದೇ? ೨ ಜನರ ಸಾಮಾಜಿಕ ಮತ್ತು ಆರ್ಥಿಕ ಉದ್ಧರಣೆಯ ಗಾಂಧಿಯವರ ಧ್ಯೇಯವಲ್ಲಿ ದೇವಸ್ಥಾನಪ್ರವೇಶ ಪ್ರಶ್ನೆಯೊಂದೇ ಸಂಬಂಧಿಸಿರುವುದಿಲ್ಲ. ಅಸ್ಪೃಶ್ಯರ ಉದ್ಧಾರಕಾರ್ಯವು ಇನ್ನಿತರ ಮಾರ್ಗವಾಗಿ ಆಗುವುದಾದರೆ ಅದರ ದೇವಸ್ಥಾನ ಪ್ರವೇಶದ ಹಕ್ಕು ಭಾವ್ಯತೆಗಳನ್ನಾದರೂ ಬಿಟ್ಟು ಬಿಡಲು ಸಿದ್ಧರಿರುವರು. ಈಗ ಬೇಕಾದುದು ಇದು' ಎಂದರು

೧೦೦೦೦–೨೦೦೦೦!

ಮುಂಬಾಯಿಯ "ಫ್ರೀ ಪ್ರೆಸ್ ಜರ್ನಲ್" ಎಂಬ ಇಂಗ್ಲಿಸ್ ಪೈಸ ಕವ್ ಶ್ರೀ ಎಸ್. ಸದಾನಂದರೆಂಬವರ ಸಂಪಾದಕತ್ವದಿಂದ ಹೊರ ಬೀಳುವ ಉಚ್ಚಲ ಶಾಸ್ತ್ರೀಯ ಪತ್ರಿಕೆ. ಇದು ಜನನಕ್ಕೆ ಬಂದ ಸ್ವಲ್ಪ ಸಮಯದಲ್ಲೇ ತಾಲುಪೂನಿಗೆ ಗುರಿಯಾಗಿತ್ತು. ಇತ್ತಲಾಗಿನ ಶಾಸನೊಲ್ಲಂಘನಾ ಚಳವಳಿಯ ಪ್ರಾರಂಭವಾದ ಮೇಲೆ ಮುಂಬಾಯಿ ಸರಕಾರವು ಇದರಿಂದ ೧೦,೦೦೦ ರೂಪಾಯಿ ಭದ್ರತೆ ಕೇಳಿತು. ಈ ಭಾರವಾದ ಹೊಡೆದ ಭದ್ರತೆಯನ್ನು ಕೊಡಲಾಯಿತು. ಈ ಮಧ್ಯೆ 'ಫ್ರೀ ಪ್ರೆಸ್ ಜರ್ನಲಿನ ವಾರ್ತಾವಾಹಕರು ಇದೇ ಪ್ರಪಂಚದಲ್ಲಿ ವ್ಯಾಪಿಸಿಕೊಂಡರು—ಅಂದರೆ ಭೂಮಿಯ ಅರ್ಧದಷ್ಟಲ್ಲಿ 'ಫ್ರೀ ಪ್ರೆಸ್ಸಿನ' ವಾರ್ತಾ ಕೇಂದ್ರಗಳೇ ಸ್ಥಾಪಿತವಾದವು ಇದರಿಂದಾಗಿ ಪಕ್ಷಪಾತ ದೃಷ್ಟಿಯ ರಾಯಿಟರ್ ಮತ್ತು ಎಸೋಸಿಯೇಟೆಡ್ ಪ್ರಸ್ ತಂತಿಗಳನ್ನು ಶ್ರಯಿಸಿ ಪಡೆಯುವ ರಾಷ್ಟ್ರಿಯ "ಫ್ರೀ ಪ್ರೆಸ್"ಗೆ ಇರದೆ ಕೋಟಿಯು ಮಹಾತ್ಮರ ಕಳೆದ ಸೊನ್ನೆನ ಉಪವಾಸವಾಯಿತಷ್ಟೆ. ಆ ಸಮಯದಲ್ಲಿ ಈ ಪ್ರಾಯೋಜಿತವಾದ ಸ್ಮರಣಾರ್ಥವಾಗಿ "ಫ್ರೀ ಪ್ರೆಸ್ ಜರ್ನಲ್" ಒಂದು ವಿಶೇಷ ಸಂಚಿಕೆಯ ರೂಪದಿಂದ, ಮಹಾತ್ಮರು "ಯಂಗ್ ಇಂಡಿಯ" ದಲ್ಲಿ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಪ್ರಕಟಿಸಿದ್ದ ಕೆಲವು ಲೇಖನಗಳನ್ನು ಹೆಕ್ಕಿ ಪುನರ್ಮುದ್ರಿಸಿತು. ಒಡನೆ ಮುಂಬಾಯಿ ಸರಕಾರವು ಈ ಪತ್ರಿಕೆಯ ೧೦,೦೦೦ ರೂಪಾಯಿ ಭದ್ರತೆಯನ್ನು ಕರಗತ ಮಾಡಿಕೊಂಡಿತು. ಅಲ್ಲದೆ "ಫ್ರೀ ಪ್ರೆಸ್ ಜರ್ನಲ್" ಪುನಃ ಪ್ರಕಟವಾಗಬೇಕಾದರೆ ೨೦,೦೦೦ ರೂಪಾಯಿ ಭದ್ರತೆಯನ್ನು ಕೊಡಬೇಕೆಂದಾಜ್ಞಾಪಿಸಲಾಯಿತು 'ಇದೇ ತಾ. ೩೧ನೇ ದಿನ ಈ ೨೦,೦೦೦ ರೂಪಾಯಿಯನ್ನು ಫ್ರೀ ಪ್ರೆಸ್ ಜರ್ನಲ್' ಮುಂಬಾಯಿಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಭದ್ರತೆಯಾಗಿ ಇಟ್ಟಿತು. "ರಾಜಪ್ರೋಕವು ನಮ್ಮ ಧ್ಯೇಯವಲ್ಲ" ಸತ್ಯವಿದ್ದುದನ್ನು ಮಂಡಿಸಿ, ಅಸತ್ಯವಾದುದನ್ನು ಖಂಡಿಸಿ ಧೈರ್ಯವನ್ನು ಪ್ರದರ್ಶಿಸುವುದೇ ಈ ಪತ್ರಿಕೆಯ ಶೀಲ"ವೆಂದು ಸಂಪಾದಕರ ಅಂಬೋಣ.

ಜಸ್ಟಿಸ್ ಪಕ್ಷವು ಬದಲಾಯಿತು!
ದೇವದ ತಾತ್ಕಂದಿರೊಳಗೆ ಕಲಹ!

ಕಳೆದ ವರ್ಷ ಡಿಸೆಂಬರ್ ೧೭ರಂದು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮಂತ್ರಿಗಳ ಗಣವಿಧಿ: ಚೀಫ್ ಮಿನಿಸ್ಟರಾದ ಮಾನ್ಯ ಮುನ್ಸಾಮಿ ನಾಯಿಡುರವರ ಮೇಲೆ ಮಾನ್ಯ ಪಿ. ಟಿ. ರಾಜನ್, ಮಾನ್ಯ ಕುಮಾರ ಸ್ವಾಮಿ ರೆಡ್ಡಿಯರು ದೋಷಾರೋಪಣೆಯ ಗೂಢ ವಿಷಯ ಪತ್ರಿಕೆಯೊಂದನ್ನು ಕೊಡಲು, ಚೀಫ್ ಮಿನಿಸ್ಟರ್ರವರ ಜೇಬಿನ ಮೇಲೆ ದಾಳಿ–ತಾವು ರೈತರ ಪರವಾಗಿರುವ ಕಾರಣವು ಭಾವಿಸಿದೆಗಳಿಗೆ, ಜಸ್ಟಿಸ ಪಕ್ಷಾನುಭೂತಿಯನ್ನು ಕೊಲ್ಲುತ್ತಿದ್ದುದರಿಂದ ಈ ಮೂಲಕ ತನ್ನ ಮೇಲೆ ಉದ್ದಿಗ್ನಗೊಂಡಿರಬಹುದೆಂಬ ಆರೋಪ. ಪ್ರಥಮದಲ್ಲಿ ಈ ಸದಸ್ಯರೆಲ್ಲರೂ ಮಾನ್ಯ ಮುನಿಸ್ವಾಮಿ ನಾಯಡುರವರ ಪಕ್ಷದಲ್ಲಿದ್ದರು. ಕೃಷೀಣ ಮಾನ್ಯ ಪಿ. ಟಿ. ರಾಜನರೂ ಇನ್ನಿತರರೂ ಕೂಡಿ ಮಾನ್ಯ ಮುನಿಸ್ವಾಮಿ ನಾಯಡುರವರು ತನ್ನ ಪದವಿಗೆ ರಾಜೀನಾಮೆ ಕೊಡುವಂತೆ ಪ್ರೇರೇಪಿಸಿದರು ರಾಜೀನಾಮೆಯು ಕೊಡಲ್ಪಟ್ಟತು ಗವರ್ನರರು ಈ ಸದಸ್ಯರುಗಳನ್ನು ತನ್ನ ಬಳಿಗೆ ಕರೆದು ಹಲವೊಂದು ಬಗೆಯಾಗಿ ಇತ್ಯರ್ಥಿಸಿದರು ರಾಜೀಕಟ್ಟುವರ ಸ್ಥಾನಕ್ಕೆ ಗವರ್ನರರು ದೊಡ್ಡಲಿಯ ರಾಜರನ್ನು ಚೀಫ್ ಮಿನಿಸ್ಟರ್ನ್ನಾಗಿಯೂ, ಮಾನ್ಯ ಪಿ. ಟಿ ರಾಜನ್, ಮತ್ತು ಮಾನ್ಯ ಕುಮಾರ ಸ್ವಾಮಿ ರೆಡ್ಡಿಯರನ್ನು ಸಹಾಯಕ ಮಂತ್ರಿಗಳನ್ನಾಗಿಯೂ ಹೊನಾಯಿಸಿದರು ಒಡಕಿನ ರೂಪಿತ ದಲ್ಲಿ ಮಾನ್ಯ ಹೋಮ್ ಮೆಂಬರ್ರೂ ಕೈಯಿಕ್ಕಿರುವರೆಂದು ಮುನಿಸ್ವಾಮಿ ನ್ಯಾಯುರವೆರೆ ಆರೋಪ. ಈ ದೇಶ ಕಾಂಚನಿರೋಳಗೆ ಈ ರೀತಿಯ ಕಲಹದಿಂದಾಗಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಇನ್ನೂ ಪ್ರಬಲ ಪಾತಾವರಣವು ತಲೆದೋರಿರುವುದಿಲ್ಲ ಹೇಗೂ ಮಾನ್ಯ ಮುನಿಸ್ವಾಮಿ ನಾಯಡುರವರು ಪದವಿಯಿಂದ ಕೆಳಬಂದಂತಾಯಿತು ಬೊಬ್ಬಿಲಿಯ ರಾಜರು ಮುಖ್ಯ ಮಂತ್ರಿಯಾದಂತಾಯಿತು ಕೈಗಾರಿಕೆ, ವೇತಾಯ, ಶಿಕ್ಷಣ ಮೊದಲಾದ ವೀಕ್ಷಿಯ ಕೆಲಸಗಳಲ್ಲಿ ಪಾರ್ಟಾಟಿಗಳು ಕೋಂಬರದಿರವು

ಬ್ರಿಟಿನರು ಉತ್ತಮರೋ ಜಪಾನರೋ?
ಲೇಬಲ್ ಕದಿಯಲು ಕಾರಣ?

ಲಂಡನಿನ ಮೆಂಚಸ್ಟರ್ ಚೇಂಬರ್ ಒಫ್ ಕೊಮರ್ಸ್‌ನವರ ವಿಚಾರ ವಿಮರ್ಶೆಯಿಂದಾಗಿ ಇತ್ತಿತ್ತಲಾಗಿ 'ಜಪಾನರು ಬ್ರಿಟಿಷ ಲೇಬಲ್‌ಗಳಂತಿರುವುವುಗಳನ್ನು ತಮ್ಮ ಸರಕುಗಳಮಿಶ್ರಣಮಾಡಿಯೇ ತಮ್ಮ ವ್ಯಾಪಾರ ಶೀಲದಲ್ಲಿ ಮೋಸದ ಜಾಲವೊಂದನ್ನು ಕಂದಿರುವರೆಂದು ತಿಳಿಸಬಂದಿದೆ ಇದನ್ನಂತ ಬ್ರಿಟಿಷ ವ್ಯಾಪಾರಿಗಳು ಬಾಯಿ ಬಾಯಿ ಬಡಕೊಳ್ಳುತ್ತಿರುವರು ಹಿಂದೂಸ್ಥಾನಕ್ಕೆ ರವಾನಿಯಾಗುವ ಜಪಾನು ವ್ಯಾಲುಗಳಲ್ಲಿ ಬ್ರಿಟಿಷ ಲೇಬಲ್‌ಗಳನೆಯಂತೆ. ಈ ಲೇಬಲ್‌ಗಳು ಎಲ್ಲಾ ವಿಷಯಗಳಲ್ಲಿ ಬ್ರಿಟಿಷ್ ಲೇಬಲ್‌ಗಳಂತಿದ್ದರೂ ಅವುಗಳಲ್ಲಿ ಸ್ವಲ್ಪ ಅಕ್ಷರಗಳಿಂದ "ಜಾಪಾನಿನಲ್ಲಿ ಉತ್ಪಾದ ದು' ಎಂದು ಅಚ್ಚು ಹಾಕಿ ದ್ದಾರೆ ಇಂತಹ ಮರಮೋಸಗಳು ಮಂಚಸ್ಟಾಗದಂತೆ ಬ್ರಿಟನಿನಲ್ಲಿ ಯೋಜನೆಗಳಾಗುತ್ತಿವೆ

ಕಳೆದು ಹೋಗಿದ್ದ ಗಂಡ–ಸಿಕ್ಕಿದ?
ಹೆಂಡತಿಯ ಜೆನತ್ಕಾರ!

ತಿನ್ನೆನೆಲ್ಲಿಯಲ್ಲಿನ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಪೊನ್ನಪ್ಪ ಪಿಳ್ಳೆಯೆಂಬ ಗುಮಾಸ್ತ ವನೋ ವೈರಾಗ್ಯ ಪ್ರೇರೇಪಣೆಯಿಂದ ಎಕ್ಕೋ ನಡೆದ ಅವನ ಹೆಂಡತಿ, ಅತ್ತೆಯರು ಅವನನ್ನು ಹುಡುಕಿದರು ಪೋಲೀಸರಿಗೆ ಅರ್ಜಿ ಬರಿದುಕೊರು. ಆದರೆ ಹೋದವನು ಬರಲೇ ಇಲ್ಲ ಕಾಣೆಯಾದವನು ಕಾಣಲೇ ಇಲ್ಲ ಇದೇ ತಾ ೩ನೇ ಇನ ತಿನ್ನೆನೆಲ್ಲಿಯ ರೈಲ್ವೇ ಜಂಕ್ಷನಿನಲ್ಲಿ ಗಡಿದಿದ್ದ ರೈಲು ನಿಂತೊಡನೆಯೇ ಒಬ್ಬಳು ಸ್ತ್ರೀಯು, ಉದ್ದವಾಗಿ ಬೆಳೆದಿದ್ದ ಗಡ್ಡದ ಒಬ್ಬ ಸನ್ಯಾಸಿಯನ್ನು ಹಿಡಿದು ನಿಲ್ಲಿಸಿದಳು "ನೀನು ನನ್ನ ಗಂಡ ಪೊನ್ನಪ್ಪ ಪಿಳ್ಳೆ! ಬಾ! ಮನೆಗೆ! ಬಾ ಬಿಡಲಾರೆ!" ಎಂದು ಆ ಸ್ತ್ರೀಯ ಗಜರಿಸುವಿಕೆ ಜನನಂದಣಿಯು ಕೂಡಿತು. ಕೆಲವರೆಂದರು "ಅವನು ಪೊನ್ನಪ್ಪ'ನೆಂದು ಕೆಲವರೆಂದರು "ಅವನಲ್ಲ" ಎಂದು ಹಂಗುಸು ಎಂದಳು ' ನೋಡಿ ಇವನು ಕೈಮೇಲಿನ ಗುರುತು' ಇವನು ನನ್ನ ಗಂಡ' ರೈಲಿನಲ್ಲಿ ಕುಳಿತ್ತಿದ್ದವನ್ನು ನಾನು ಇನ್ನೊಮ್ಮ ಸ್ಟೇಷನಿನಲ್ಲಿ ಕಂಡು ಇವನನ್ನು ಹಿಂಬಾಲ್ಸಿದೆ ನನ್ನನ್ನು ಕಂಡು ಓಡಲು ತೊಡಗಿದ್ದಾನೆ! ಇವನೇ ನನ್ನ ಗಂಡ" ಎಂದು. ಕಾವಿಕಾಷಾಯ ಧಾರಣೆಯ ಸನ್ಯಾಸಿಯಿವನು "ನಾನು ಪೊನ್ನಪ್ಪನಲ್ಲ ನಾನು ಅನೇಕುವಿಗೆ ಜೊತೆ ಸನ್ಯಾಸಿ ನಾನು ಇವಳ ಗಂಡನಲ್ಲ" ಎಂದು. ಆದರೆ ಆ ಸನ್ಯಾಸಿಯನ್ನು ಸ್ತ್ರೀಯು ಬಲಾತ್ಕಾರ ಚಮತ್ಕಾರಗಳಿಂದ ಸ್ಟೇಷನಿಗೆ ಕರೆದೊಯ್ದಳು. ಅವಳಿಗೆ ಹುಣ್ಣು ಪೆಂಪಲುಗಳನ್ನು ಕೊಡಲಾಯಿತು. ಕುಟುಂಬಿಕರೂ, ಮಿತ್ರರೂ, ಸಮಾಜವಧಿಕರಿಗಳೂ ನೇರಿದರು ಕಣ್ಣ ನಡದುತು. ವಿವರಣವು ಹೊರಿತ್ತು. ಸತ್ಯವು ಪ್ರಕಟವಾಯಿತು. ಆ ಸ್ತ್ರೀಯ ದುರ್ದೈವವಕಾಕ್ ಆಕ್ಕದಲ್ಲಿ ಆ ಸನ್ಯಾಸಿಯು ಆಚೆ ಗೆರೆಡನೆಲ್ಲ ನೆಂದೇ ನಿರ್ಧಾರವಾಯಿತು!

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ್ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ರಮ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನರಾಗೆ ಬಸ್ಸುಗಳೊಂದಿಗೆ ಕನೆಕ್ಷನ್ ಕೊಡಲಾ ಹುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರು ಕ್ರಮವಿನಯ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೋಗುವ ಬಸ್ಸುಗಳಲ್ಲಿ ಕುಳಿತು ನಾಲ್ಕೇ ಕಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ತಿಂಗಳಲ್ಲಿ ಹಿಂದಿರುಗುವಿರಿ, 37 ಫೀಟು ಉದ್ದವಾಗಿ ಎತ್ತರವಾದ ತಿಲಾರ್ಪಣತಟ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸುಗಳಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡ ಜಿಲ್ಲೆಯವರ ಸರ್ವಿಸುಗಳಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ; ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗಾಗಿ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ **ಶಿವಮೊಗ್ಗಕ್ಕೆ** 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಒರೆದರೆ ತಿಳಿಸಲಾಗುವುದು.

Secretary
The Canara Public Conveyance Company Ltd., Mangalore

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುರಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ:- ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ, ಮೂಡಗೆರೆಗೆ, ಸಕಲೇಶಪುರಕ್ಕೆ, ಮಂಗಳೂರಿಗೆ, ಮೂಡಬಿದ್ರೆಗೆ, ಕುದ್ರೋಳಿಗೆ, ಮೂಲ್ಕಿಗೆ, ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಉತ್ತಮವಾದ ಸೌಕರ್ಯ!

ಪ್ರಯಾಣಿಕರ ಪ್ರಯಾಣ!

ಬೇಕಾದ ಮಾಹಿತಿಗೆ ಮೇಲೆ ತಿಳಿಸಿದ ವಿಳಾಸಕ್ಕೆ ಬರೆದು ತಿಳಿಸುತ್ತೇವೆ.

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ(ಕಾವು) Maximum	Minimum	Rainfall. ಮಳೆ ದಿನದ ಮಳೆ	ಜುಮುಲಾ ಮಳೆ.
3	82—8	74—0	1—02	—
4	83—9	75—1	0—102	—
5	85—5	74—9	—	—
6	86—5	74—4	—	—
7	86—4	74—7	—	—
8	85—7	76—9	—	—
9	90—3	73—3	0—10	118-52

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ತನಕ ರೂ. ಆ
ರಾಶಿ ಅಕ್ಕಿ ...	3 2	3 10
ಮುಷ್ಟಿ ...	4—0	4—8
ಗೆಂಡ್ಡಿ ...	3—4	3 14
ಸುಸಿ ...	3—0	3—1
ಊರಿ ಅಕ್ಕಿ ಬೆಲ್ಲಿಗೆ ...	4—10	5—4
ರಂಗೂನು ಬೆಲ್ಲಿಗೆ ಗೋಣಿ ಗಳ್ಳೆ ...	7 0	7—4
ಎಲ್ಲೂರು ಬೆಲ್ಲಿಗೆ ಮುಡಿ ಗಳ್ಳೆ ...	4—12	4—14
ಗೋದಿ ಗೋಣಿ ಗಳ್ಳೆ ...	10—8	12—8
ತೊಗರಿ ಗೋಣಿ ಗಳ್ಳೆ ...	11—8	12—0
ಹುರುಳಿ ಗೋಣಿ ಗಳ್ಳೆ ...	6—12	7 4
ಶಾವಲಿ ಗೋಣಿ ಗಳ್ಳೆ ...	8—8	11—0
ತೊಗರಿಬೇಳೆ ಗೋಣಿ ಗಳ್ಳೆ ...	13—8	14—0
ಉದ್ದು ಗೋಣಿ ಗಳ್ಳೆ ...	0—8	0 12
ಹೆಸರು ಗೋಣಿ ಗಳ್ಳೆ ...	10—4	11—
ಊರುಬೆಲ್ಲ ಖಂಡಿ ಗಳ್ಳೆ ...	42—8	45 0
ಉಪ್ಪು ಗೋಣಿ ಗಳ್ಳೆ ...	5 14	6—0
ಮೊಲ್ಲೆ ಖಂಡಿ ಗಳ್ಳೆ ...	66—	72—
ಪೊಪ್ಪಿ ಹಿಂಡಿ ಖಂಡಿ ಗಳ್ಳೆ ...	93—0	—
ಎಳ್ಳಿಂಡಿ ಖಂಡಿ ಗಳ್ಳೆ ...	23—8	—
ಕೊಬ್ಬರಿ ಎಣ್ಣೆ ಮಣ ಗಳ್ಳೆ ...	6—8	6—8
ಎಳ್ಳೆಣ್ಣೆ ಮಣ ಗಳ್ಳೆ ...	6—12	7—0
ಅಡಿಕೆಪುಡಿ ಪಿಲ್ಲಿಗೆ ಗಳ್ಳೆ ...	4—7	8—12
ಹೊಗೆಸೊಪ್ಪಿನ ಕೊಳೆ ಗಳ್ಳೆ ...	4—1	4—2
ಹೊಸ ಮೆಣಸು ...	5—8	5—10
ಹಾಸಿಕ ಮುಡಿ ಗಳ್ಳೆ ...	5—4	5—8
ಕೇರಳ ಕಾಸ್ಟ ಖಂಡಿ ಗಳ್ಳೆ ...	275—0	300—
ತಾಲಮುಡಿಪು ಖಂಡಿ ಗಳ್ಳೆ ...	170—0	180—
ಮೆಣಸು ಮಣ ಗಳ್ಳೆ ...	37—0	38—
ಗೇರುಬೀಜ ಮುಡಿ ಗಳ್ಳೆ ...	3—2	3—4
ಕಬ್ಬಿಣ ಮಣ ಗಳ್ಳೆ ...	25—0	25—8
ಅಡಿಕೆ ಚಾಲಿ ಮಣ ಗಳ್ಳೆ ...	11—0	11—8
ಅಡಿಕೆ ಕೆಂಪುಗೋಟು ಮಣ ಗಳ್ಳೆ ...	15—0	15—0
ಅಡಿಕೆಪುಡಿ ಕೆಂಪು ಗಳ್ಳೆ ...	14—4	14—12
ಓಪ್ಪರ ಅಡಿಕೆ ಮಣ ಗಳ್ಳೆ ...	11—8	12—0
ಕಡಲೆ ಗಳ್ಳೆ ...	—	12—4
ಹುಣಸೆ ಹುಣಿ ಖಂಡಿ ಗಳ್ಳೆ ...	40—	—
ಕಿಡಿರ ಕಾಸಿ ಖಂಡಿ ಗಳ್ಳೆ ...	350—	400—
ಜಾಕ್ ಅಡಕೆ ...	50—	200—
ಹೊಸ ಅಡಕೆ ...	140—	144—

ಮಕ್ಕಳ ಕೂಟ (ಎರಡನೇ ಅಧಿವೇಶನ)

—ಸ್ಮೃ—

ಸ್ಥಳ—ಹಾಯರ್ ಎಲಿಮೆಂಟರಿ ಶಾಲೆ
(ತಾ ೨೦ರಿಂದ ೨೬ ನವಂಬರ ೧೯೩೨)

ಕಳೆದ ವರುಷ ಉಪ್ಪಿನಂಗಡಿಯಲ್ಲಿ ಮಕ್ಕಳ ಕೂಟವನ್ನು ಜರಗಿಸಿದಂತೆಯೇ ಈ ವರುಷವಾದರೂ ಜರಗಿಸಬೇಕೆಂದು ನಿಶ್ಚಯಿಸಿಯದೆ ಮಕ್ಕಳಲ್ಲಿ ಸ್ಫೂರ್ತಿ, ಮತ್ತು ರಚನಾಶಕ್ತಿಯನ್ನು ಬೆಳೆಯಿಸುವಂತೆಯೂ ಭ್ರಾತೃಭಾವವು ಹೆಚ್ಚುವಂತೆಯೂ ಅವಕಾಶವನ್ನುಂಟುಮಾಡಲು ಯತ್ನಿಸುವ ಈ ಕೂಟದ ಯಶಸ್ವಿಗಾಗಿ ಈ ವರುಷ ಇನ್ನು ಕೆಲವು ಸುಧಾರಣೆಗಳನ್ನು ಕಾರ್ಯಕ್ರಮದಲ್ಲಿ ಮಾಡಿರುತ್ತದೆ.

ಪ್ರತಿನಿಧಿಗಳು—ಪುತ್ತೂರು ತಾಲೂಕಿನ ಪ್ರತಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯವರು ಈ ಕೂಟಕ್ಕೆ ೬ ಪ್ರತಿನಿಧಿಗಳನ್ನು ಕಳುಹಿಸುವರಾಗಿ ನಂದಿಸಿ ಅವರು ೧೬ ವಯಸ್ಸಿಗೆ ಮಿಗಿಲಿದವರಾಗಕೂಡದು ಹೆಚ್ಚಿನ ಚಟುವಟಿಕೆಯುಳ್ಳ ಬಾಲಕರನ್ನೇ ಆರಿಸಬೇಕು ಪ್ರತಿನಿಧಿಗಳು ಬರುವಾಗ ತಮ್ಮ ಹಾಸಿಗೆಯನ್ನು ತಾವೇ ತರತಕ್ಕದ್ದು ಪ್ರತಿನಿಧಿಗಳ ಹೆಸರು, ಪ್ರಾಯ ಮತ್ತು ಜಿಲ್ಲೆ ಈ ವಿವರವನ್ನು ನವಂಬರ ತಾ ೧೫ಕ್ಕೊಳಗೆ ಇಲ್ಲಿಗೆ ಕಲ್ಪಿಸಬೇಕು ತಪ್ಪದೆ ತಳುಹಿಸಬೇಕು ಅವರಿಗೆ ಬಸ್ಸುಗಳಲ್ಲಿ ರಿಯಾಯಿತಿಯನ್ನು ದೊರಕಿಸಿ ಕೊಡಲು ಯತ್ನಿಸಲಾಗಿದೆ.

ಆಮಂತ್ರಿತರು ಈ ಬಾರಿಯ ಕೂಟಕ್ಕೆ ಶ್ರೀಯುತ ಹೊಯಿಸಳರು ಹಾಸನದಿಂದ ಶ್ರೀ ಕೃಷ್ಣ ಸ್ವಾಮಿರಾಯರು ಹುಬ್ಬಳ್ಳಿಯಿಂದ ಶ್ರೀ ಮುಗುಳಿ ರಂಗನಾಥರಾಯರು, ಶ್ರೀ ಪಂಡಿ ಮಂಗೇಶರಾಯರು, ಯಂ ಎಸ್ ಕಾಮತರು ನಿಮಂತ್ರಿತರಾಗಿರುವರು ಅವರಿಂದ ಶಿಕ್ಷಕ ವರ್ಗಕ್ಕೆ ಉಪನ್ಯಾಸಗಳ ವ್ಯವಸ್ಥೆಯ ಇದೆ

ನಿತ್ಯದ ಕಾರ್ಯಕ್ರಮ ಬ್ರಾಹ್ಮಕಾಲ ೫½ ಗಂಟೆಗೆ ಪ್ರಾರ್ಥನೆ ೬½ ಗಂಟೆ ಉಟ ಬಳಿಂದ ೧೦—೩೦ ತನಕ ಕೂಟದ ಕಾರ್ಯಕ್ರಮ ೧೦ ೩೦ರಿಂದ ೧೨ ತನಕ ಸ್ನಾ ೧೨½ಕ್ಕೆ ಭೋಜನ ಅಪರಾಹ್ನ ೩ರಿಂದ ೪ ೩೦ ವರೆಗೆ ಕೂಟದ ಕಾರ್ಯಕ್ರಮ ೪ ೧೫ಕ್ಕೆ ಉಪಹಾರ ಬಳಿಕ ಆಟ ೬ ೩೦ಕ್ಕೆ ಸಾಯಂ ಪ್ರಾರ್ಥನೆ ೭½ಕ್ಕೆ ಭೋಜನ ಅನಂತರ ೮ ೩೦ರ ವರೆಗೆ ವಿನೋದಗಳು

ಕೂಟದ ಕಾರ್ಯಕ್ರಮ—ತಾ ೧೯ರ ಸಂಜೆ ಪ್ರತಿನಿಧಿಗಳು ಬಂದ ಸೇರುವುದು ತಾ ೨೦ರ ಬೆಳಿಗ್ಗೆ ಗೀತೆ ಸ್ವಾಗತ (ವಿಟ್ಲದ ಬಾಲಕರಿಂದ) ಬಂದಿರುವ ಪ್ರತಿನಿಧಿಗಳು ತಮ್ಮ ಗೆಳೆಯರ ಸಂದೇಶವನ್ನು ಹಿಡುವುದು ಹಿರಿಯರ ಮಾತುಗಳು ಅತಿಥಿಗಳ ಪರಿಚಯ ಮಧ್ಯಾಹ್ನ—ಬಾಲಕರು ತಾವು ಸಂಗ್ರಹಿಸಿದ ಹಳ್ಳಿಯ ಹಾಡು ಮೊದಲಾದುವನ್ನು ಹಾಡುವುದು

ತಾ ೨೧ ಬೆಳಿಗ್ಗೆ—ವಿವಿಧ ಬಣ್ಣದ ಮಣ್ಣು ಮೊದಲಾದುವುಗಳಿಂದ ಚಿತ್ರಲೇಖನ ಮಧ್ಯಾಹ್ನ—ವಿವಿಧ ಬಣ್ಣದ ಕಾಗದ ಚೂರುಗಳಿಂದ ನಾನಾ ತರದ ದೃಶ್ಯಗಳನ್ನು ಪ್ರತಿರೂಪಗಳನ್ನು (Designs) ಕತ್ತರಿಸಿ ಅಂಟಿಸುವುದು ಇಂಥ ಚಿತ್ರಗಳನ್ನು ಟೀಟಗಳಿಂದಲೂ ಕನ್ನಡಿ ಚೂರುಗಳಿಂದಲೂ ಮಾಡಬಹುದು (Mosaic Drawings)

ತಾ ೨೨ ಬೆಳಿಗ್ಗೆ— ಅಧಿನಯಗೀತಗಳು ಪಶುಪಕ್ಷಿಗಳ ಸ್ವರಾನುಕರಣೆ (mimicry) ಮಧ್ಯಾಹ್ನ—ಹಳ್ಳಿಯ ನರ್ತನಗಳು

ತಾ ೨೩ ಬೆಳಿಗ್ಗೆ — ಬಾಲಕರೇ ಹೊಸ ಕಥೆ ಹಾಡು ಶಿಕ್ಷಣಗೀತೆ ಮೊದಲಾದುವುಗಳನ್ನು ರಚನೆ ಹೇಳುವುದು ಮಧ್ಯಾಹ್ನ—ತಮಗೆ ಓದಗಿಸಿಕೊಟ್ಟರುವ ಚಿತ್ರಗಳ ಸಹಾಯದಿಂದ ಯಾವುದಾದರೂ ಒಂದೆ ರಡು ದೇಶೀಯರ ಮನೆಮಾರು ಉಡುಗೆ ತೊಡುಗೆಗಳನ್ನು ಚಿತ್ರಿಸಿ ನಟಿಸಿ ತೋರಿಸುವುದು

ತಾ. ೨೪ ಬೆಳಿಗ್ಗೆ—ತಾವೇ ನಾಟಕದ ಕಥಾ ಯೋಚನೆಮಾಡಿ ಪಾತ್ರದೃಶ್ಯಗಳ ಸಿದ್ಧತೆ ಮಾಡಿ ನಾಟಕವಾಡುವುದು ಮಧ್ಯಾಹ್ನ—ಮೂಕ ನಾಟಕ—ಮಾತುಗಳೆಲ್ಲದೆ ಬರೇ ಅಧಿನಯದಿಂದ ಕಥಾ ನಟನೆ ಸಚೀದ ಗೊಂಬೆ ಆಟ — ತಾವೆ ಗೊಂಬೆಗಳಂತೆ ನಟಿಸಿ ಶೃಂಗರಿಸಿ ಕೊಂಡು ಕಥೆಯೊಂದನ್ನು ಚಿತ್ರಿಸುವುದು.

ತಾ ೨೫ ಬೆಳಿಗ್ಗೆ—ವಿವಿಧ ಎಲೆ ಹೂವುಗಳಿಂದ ಚಿತ್ರಲೇಖನ ಮಧ್ಯಾಹ್ನ—ಚರಿತ್ರೆಯ ಯಾವುದಾದರೊಂದು ಭಾಗವನ್ನು ಸಮುಯೋಚಿತ ಉಡುಗೆ ತೊಡುಗೆಗಳಿಂದ ಚಿತ್ರಿಸಿ ತೋರಿಸುವುದು ಚಿತ್ರ ಮುಳುಗಳು ಪಶುಪ್ರಾಣಿಗಳ, ರಾಕ್ಷಸರ—ಕಥಾಧಿಪಯ ಮಾಡುವುದು

ತಾ ೨೬ ಬೆಳಿಗ್ಗೆ—ಬಾಲಕರು ತಮಗೆ ದೊರಕುತ್ತಿರುವ ಶಿಕ್ಷಣ ಸ್ವಾತಂತ್ರ್ಯಗಳ ವಿಷಯವಾಗಿ ಚರ್ಚೆನಡಿಸುವುದು ಮಧ್ಯಾಹ್ನ—ಗಾಡಿ, ಓಗುಟುಗಳ ಸ್ಪರ್ಧೆ—ಉಪಸಂಹಾರ — ಕೂಟ ಸಮಾಪ್ತಿ

ಸಾಯಂಕಾಲದ ವಿನೋದಗಳು—ಪ್ರತೀ ರಾತ್ರಿ ಗಂಟೆ ಆರಿಂದ ೯ ೩೦ ತನಕ ದಿನಕ್ಕೆ ಮೂಯಾಭಾರದ ಕಥೆ ತಾಲೀಮು ೭½ಕ್ಕೆ ಸಿನೆಮಾ, ೨೩ಕ್ಕೆ "ಅಧಿನಯ ಚಿತ್ರಗಳು" ತಾ. ೨೪ಕ್ಕೆ "ವೇಷ ಮುಂಗಳೂರಿನ ಗೌಡ ಸಾರಸ್ವತ ಬ್ರಾಹ್ಮಣ ವೃಂದದ ಹತ್ತು ಸಮಸ್ತರಿಗೆ ಸಂಬಂಧಪಟ್ಟ ಶ್ರೀ ವಿಠ್ಠಲ ರುಕುಮಾಯಿ ದೇವಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ವಿಠ್ಠಲ ಭಜನೆ ಮಂಡಲಿಯ ಕಾರ್ಯದರ್ಶಿಯವರಾದ ಶ್ರೀಗಳಾದ ಕೃಂಗೇರಿ ದಾಸನಾರಾಯಣ ಪೈ, ಎಂ ರಾಮಕೃಷ್ಣ ಕಾಮತ್, ಮತ್ತು ಶ್ರೀ. ಮಣೇಲ ವೆಂಕಟ್ರಾಯ ನ್ಯಾಯಕರವರಿಗೆ—

ಈ ಕೆಳಗೆ ಸಹಿ ಮಾಡಿದ ಮಂಗಳೂರು ಗೌಡಸಾರಸ್ವತ ವೃಂದದ ಹತ್ತು ಸಮಸ್ತರು ಬರಕೊಂಡ ಮನವಿ —

ಭಾರತ ರಾಷ್ಟ್ರಪುರುಷರೂಂಗವರೆಂದೆಸಲ್ಪಟ್ಟ ಮಹಾತ್ಮಾ ಗಾಂಧಿ, ಪಂಡಿತ ಮದನಮೋಹನ ಮಾಲವೀಯ ಚಕ್ರವರ್ತಿ ರಾಜಗೋಪಾಲಾಚಾರ್ಯ ಡಾ ಮುಂಜೆ ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿರುವ ನರಸಿಂಹ ಚಿಂತಾಮಣಿ ಕೇಳ್ಕರ್, ಮೊದಲಾದ ಅಖಂಡ ಮುಖಂಡರು ಹಿಂದೂಸಮಾಜಕ್ಕೆ ಬಹು ಕಾಲದಿಂದ ಅಂಟಿಕೊಂಡಿರುವ ಅಸ್ಪೃಶ್ಯತೆಯೆಂಬ ಕಳಂಕವನ್ನು ತೊಳೆದು ಬಿಡಲು, ಅಗತ್ಯವಿರ ವ ಕಾರ್ಯಕ್ರಮಗಳನ್ನು ರಚಿಸಿ ಜಳವಳಿಸು ಹೂಡಿರುವುದೂ ಇದೇ ಅಸ್ಪೃಶ್ಯತಾ ಸಮಸ್ಯೆಯ ಸಂಬಂಧವಾಗಿ ಸಮಸ್ತ ಹಿಂದೀಯರ ಹಿತಚಿಂತಕರಾದ ಲೋಕಪೂಜ್ಯ ಎಹಿಂಸಾತ್ಮಾ ಗಾಂಧಿಯವರು ಉಪವಾಸವನ್ನು ಕೈಕೊಂಡುದೂ, ಇದರಿಂದಾಗಿ ದೇಶದ ಎಲ್ಲೆಡೆಗಳಲ್ಲಿಯೂ ಜನಜಾಗ್ರತಿಯಂಟಾಗಿ ಅಸ್ಪೃಶ್ಯೋದ್ಧಾರ ಕಾರ್ಯಗಳು ಅಂಧೋಲನವು ಪ್ರಬಲಿಸುತ್ತಿರುವುದೂ ನಮ್ಮಂತೆ ತಮಗೂ ವಿದಿತವಿರಬಹುದು ದೇವಾಲಯಗಳೆಂಬವು ಯಾವುದೊಂದೇ ವ್ಯಕ್ತಿಯ ಅಥವಾ ಒಂದೇ ವರ್ಗ ದವರಿಗಾಗಿರುವುದಿಲ್ಲವೆಂಬುದನ್ನೂ ಪ್ರಕಂಡ ಪಾಕನಾದ ದೇವರು ಸಲಿಕರ ಭಕ್ತಿಸೇವೆಗಳನ್ನು ಪಕ್ಷಪಾತ ವಿಲ್ಲದೆ ಸ್ವೀಕರಿಸುವನೆಂಬುದನ್ನೂ ತಿಳಿದ ನಾವು ಅಜ್ಞಾನದಿಂದಲೋ ಮತ್ತೇತರಿಂದಲೋ ದೂರವಿರಿಸಲ್ಪಟ್ಟ ನಮ್ಮ ಅಸ್ಪೃಶ್ಯ ಬಂಧುಗಳನ್ನು ಎಲ್ಲಂತೆ ಶ್ರೀ ವಿಠೋಬನ ಸನ್ನಧಿಯಲ್ಲಿ ಭಜನೆ ಸೃತರ್ಪಣ ಹೊಂದುವ ಅನುಕೂಲತೆಯನ್ನೇರ್ಪಡಿಸಿಕೊಡಬೇಕೆಂಬ ಬಂದು ಪ್ರೇಮದಿಂದ ಪ್ರೇರಿತರಾಗಿ—ಅದನ್ನು ಅನುಕೂಲಿಸಿ ಕೊಡಲು ಸಮರ್ಥರಾದ ತಮ್ಮಲ್ಲಿ ಈ ವಿಷಯ ವಿಜ್ಞಾಪಿಸಿಕೊಂಡಿರುವೆವು ಭಜನೆ ಸಪ್ತಾಹದ ಆ ವಿಳು ದಿನಗಳಲ್ಲಿ ಒಂದು ದಿನವನ್ನಾದರೂ ಶುಚಿರ್ಭೂತರಾಗಿ ಕೀರ್ತನೆಯ ಸದುದ್ದೇಶದಿಂದ ಬರುವ ಹರಿಜನರಿಗಾಗಿ ತಾವು ಪ್ರತ್ಯೇಕಿಸಿ, ಚಪ್ಪರದೊಳಗೆ ಭಜನೆಯಲು ವಿರ್ಮಾಡುವುದನ್ನು ಮಾಡಿ ಅಂತಹ ದಿನವನ್ನು ಎಲ್ಲರ ತಿಳುವಳಿಕೆಗಾಗಿ ಮೊದಲೇ ಜ್ಞಾಪೀಸಿ ಪಡಿಸಬೇಕಾಗಿ ಅಗ್ರಹಪೂರ್ವಕವಾಗಿ ವಿನಂತಿಸುತ್ತೇವೆ

ಇದರಂತೆಯೇ ನಮ್ಮ ನಿಸ್ವಾರ್ಥ ಬಂಧುಪ್ರೇಮವೂ ಒ ದಾರ ಹೃದಯವೂ ವ್ಯಕ್ತವಾಗಿ ಭಜನೆ ಸಪ್ತಾಹವೆಂಬುದರ ಉದ್ದೇಶವು ಸಫಲವಾಗುವುದೆಂಬುದನ್ನು ನಾವು ವಿಚಿಕಾಗಿ ತಿಳಿದುಕೊಂಡಿರುವೆವು ಸಂಸಾರಕ್ಲೇಶಗಳನ್ನೂ ರಾಗದ್ವೇಷಗಳನ್ನೂ ಮರೆತು ಸದ್ಭಾವಿಗಾಗಿ—ಸಮಸ್ತ ಮಾನವ ಜನಾಂಗದ ಕ್ಷೇಮಕ್ಕಾಗಿ, ಭೂತದಯೆ ಹಾಗೂ ಸೋದರತೆಗಾಗಿ ಈ ಸಪ್ತಾಹದಲ್ಲಿ ನೆರೆದು ನಿಶ್ಚಿಲಮನಸ್ಸಿನಿಂದ ಪರಮಾತ್ಮನ ಸನ್ನಧಿಯಲ್ಲಿ ಭಜಿಸುವ ನಮಗೆ—ನಮ್ಮೊಳಗಿನ ಒಂದಂಶ ಜನರು "ಅಸ್ಪೃಶ್ಯರು ಎಂದೆಸಿ ದೂರವಿರಿಸಲ್ಪಡುವ ದುರ್ದೈವ ದಿಂದ ಆ ಸಪ್ತಾಹವು ವಿಘಂವೆನಿಸಬೇಕೆಂಬ ಇಚ್ಛೆಯಿರಲಾರದು ದೇಶದ ತಾಪನಿವಾರಣೆಗಾಗಿಯೇ ಶ್ರೀ ವಿಠೋಬನು ತಾನೆ ಮಹಾರಾನಾಗಿ ಮಹಾರನೆಲ್ಲಯೂ ತಾನು ಪರಿಪೂರ್ಣವಾಗಿ ನೆಲೆಸಿರುವನೆಂದು ನಂದಿದನ್ನೂ ನಾವು ಶ್ರೀವಿಠೋಬನ ಸನ್ನಿಧಿಯಲ್ಲೇ ದುಡಿತು ಮರೆಯುವುದು ಆ ವಿಠೋಬನ ಭಕ್ತರಾದ ನಮಗೆ ಸಲ್ಲ—ಎಂದೂ ನೆನಪುಮಾಡಿ ಕೊಳ್ಳಬೇಕಾಗಿದೆ ಇಷ್ಟೆಲ್ಲವನ್ನೂ ಪರ್ಯಾಲೋಚಿಸಿ ಹರಿಜನರೆಸಿಸುವವರಿಗೆ ಈ ಭಜನೆ ಸಪ್ತಾಹದ ವಿಳಂದಿನಗಳಲ್ಲೊಂದನ್ನು ಪ್ರತ್ಯೇಕಿಸಿ ಭಜನೆಯ ಅನುಕೂಲತೆಗಳನ್ನು ಕಲ್ಪಿಸಿ ಕೊಡಲು ಅಗತ್ಯವೆಂದೂ ಎರ್ಪಾಡುಗಳನ್ನೆಲ್ಲ ಮಾಡಿಕೊಟ್ಟು ಆ ಕಾರಿತ ಎಲ್ಲರ ಅವಗಾಹನೆಗಾಗಿ ಜ್ಞಾಪೀಸಲ್ಪಡಿಸಬೇಕಾಗಿ ಪುನಶ್ಚ ವಿಜ್ಞಾಪಿಸಿ ಕೊಳ್ಳುವ

ಮಂಗಳೂರಿನ ಗೌಡ ಸಾರಸ್ವತ ಬ್ರಾಹ್ಮಣ ವೃಂದದ ಹತ್ತು ಸಮಸ್ತರು
(ಇದರ ಕೆಳಗೆ ೧೦೧ ಸಹಿಗಳನ)

ಈ ಸಹಿಗಳ ಸೃತಿ ಶ್ರೀಮಚ್ಚಿತ್ತಾಸ್ಥಳದ ಗುರ್ಪುರ ವೆಂಕಟ್ರಾಯ ಪ್ರಭು ಕೊಂಡಿಂದಿ ಬಾಮೋದರ ಶಾನುಭಾಗ ಕೊಂಡಿಂದಿ ಕೇಶವ ಶಾನುಭಾಗ್, ನಗರ ವೆಂಕಟ್ರಾವ ಮಿಜಾರು ರಾಮಕೃಷ್ಣ ಶೆ (ವಾಜಿ ವೆಂಕಟ್ರಮಣ ದೆವ ಅಡಕ್ಕೆದಾವ) ಬಂಟ್ವಾಳ ನಂದಾಯಣ ನ್ಯಾಕ, ಕೆನ್ಸರಾ ಹ್ಯಾಸ್ಕೂಲಿನ ಮಾಸ್ತರ್ ಬ ಅಚ್ಚುತ ಬಾಳಿಗ ಗುರ್ಪುರ ಶೇಷಭಟ್ಟ ವಗೈರರು ಕೂಡ ಸಹಿ ಮಾಕಿರುತ್ತಾರೆ

ಉಯ ಭಾಗ್ಯ'—'ನಾಟ್ಯರೂಪ ಚಿತ್ರ ತಿಳಿಕೆ ಜಾಣನು' ದೃಶ್ಯಾವಳಿ ತಿಳಿಕೆ ಸಂಗೀತ ತಿಳಿಕೆ ಕೃತಕ ಉದ್ಯಾನವನ್ನು ನಿರ್ಮಿಸಿ ವಿನೋದ ವಾಡುವುದು

ಸ್ಮಾರಕ ಸಂಖ್ಯೆಗಳು—ಕೂಟದ ಕಾಲಕ್ಕೆ ಅದರ ಸ್ಮಾರಕವಾಗಿ ಕೆರಿಯರೂ ಹಿರಿಯರೂ ಬೇರೆ ಬೇರೆಯಾಗಿ ಎರಡು ಸಚಿತ್ರ ಸ್ಮಾರಕ ಸಂಖ್ಯೆಯನ್ನು ಹೊರಡಿಸತಕ್ಕದ್ದು

ಪುತ್ತೂರು, ೨೬—೧೧ ೧೯೩೨ } ಯಂ ಶಿವರಾವ್, ಕೊ. ಶಿವರಾಮ
ಕಾರಂತ—ಸಂಚಾಲಕರು.

ಪತ್ರವ್ಯವಹಾರ.

(ಪತ್ರಿಕಾದರರ ಅಧಿಕ್ಯಾಯಗಳಿಗೆ ನಾವು ಜವಾಬ್ದಾರರಲ್ಲ ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕುದು ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ ಸಂ. ಸ್ವ)

ಜಳವಳ ಮತ್ತು ಕಳವಳದ ತಿರುಳು.

(ಮೆಸರ್ಸ ಯು ಎಸ್ ಭಟ್, ಕೆ ಕಾಂತಪ್ಪ ಶೆಟ್ಟಿ, ನೋಟಿಕ ಮತ್ತು ಮಂಜಿಕ್ಕಿ ಇವರಿಗೆ ಚಿತಕಾಲ್ಕೆಯ ಪ್ರತ್ಯುತ್ತರ)—ಶ್ರೀ ಯು ಎಸ್ ಭಟ್ಟು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡುವರಾಗಿ ನಂಬುತ್ತೇನೆ (೧) ನೀವು ಪ್ರಕಟಿಸಿರುವ ಉಡುಪಿಯ ವೃತ್ತಾಂತವು ನಿಜವಾದದ್ದೋ? ಯಾ ನಿಮ್ಮ ಸ್ನೇಹಿತರಾದ ಕೆ ಕೆ ಶೆಟ್ರು ಪ್ರಕಟಿಸಿದ ವೃತ್ತಾಂತ ನಿಜವಾದದ್ದೊ? (೨) ನೀವು 'ನವಯುಗ' ಪತ್ರಿಕೆಯ ಜಾತ್ಯಾಧಾರರಾಗಿರುತ್ತೀರೋ? (೩) ಹಿತಕಾಂಕ್ಷಿಯು ಕನ್ನ ಹೆಸರನ್ನು ಪ್ರಕಟಿಸಬೇಕೆನ್ನುತ್ತೀರಿ ಇದರಿಂದ ನಿಮಗೇನು ಪ್ರಯೋಜನ? (೪) ನಿಮ್ಮ ಲಿಮಿಟೆಡ್ ಕಂಪೆನಿಯ ಮುಂಬರಲಾದ "ನೋಟಿಕೆ" ಮತ್ತು ಸಿಕ್ಕಿದ್ದಲ್ಲಿ ಜೆಕ್ಕುವ ಮಂಜಿಕ್ಕಿಯ ಸಂಪೂರ್ಣ ಹೆಸರು ನಿಮಗೆ ಅಗತ್ಯವಿಲ್ಲವೇ? ಅವರ ಹೆಸರನ್ನು ಪ್ರಕಟಿಸಲು ನೀವ ಪರಿಗೆ ಹೇಳುವಿರಾ? ನಿಮ್ಮ ಲೇಖನದ ಬಹುತೇಕ ಅಂಶವು "ಜಳವಳ ವ ತ್ಯುತ್ಪಳವಳ ವೆಂಬ ಲೇಖನವನ್ನು ಖಂಡಿಸುವ ಬದಲಿಗೆ ವಾಚಕರಲ್ಲಿ ವಿಷಯ ವಿಪರ್ಯಾಸವನ್ನು ಹುಟ್ಟುಹತಕ್ಕದ್ದಾಗಿದೆ ಅಥವಾ ಮೇಲಿನ ಪ್ರಶ್ನೆಗಳಿಗೆ ಉತ್ತರ ದೊರಕಿದಲೆ ನೀವು ಕಂಡಿದ ನಂಜನ ದುರ್ವಾಸನೆಯನ್ನು ಕೋಗಲಾಡಿಸುವ ವಿಚಾರವಿದೆ

ಮಂಜಿಕ್ಕಿಗೆ]ತ್ತರ—ಪ್ರಿಯ ವ ವಿಜಿಕ್ಕಿಯೇ ನಿಕ್ಕಿದ್ದನ್ನು ಜೆಕ್ಕುವಾಗ ಎಲ್ಲಿಯವರೂ ವಾಜ್ಞರ್ಯ ಮಹರ್ಷಿಯ ದರ್ಶನ ವಾದೀತ ಜೋಕೆ ಅಪ್ಪಚ್ಚಾ ಎಂಥಾ ಸಾಹಸ ನೀನು! ಎಷ್ಟು ಬ್ರಹ್ಮರ್ದೇವಿ ಬ್ರಾಹ್ಮಣರನ್ನು ಕಾಗೆಗಳೆಂದು ಸಂಬೋಧಿಸಿದಿ ಲ್ಲಾ ನಿಜ ನಿಜ ಕಾಗೆಗಳು ನಿನ್ನ ಶತ್ರುವಾ/ಬಹುದು ಬ್ರಾಹ್ಮಣರಿಗೆ ಪ್ರೀತಿಯುಳ್ಳ ಕಾರಣ ಬೇರೆ ವ ಪಕ್ಷಿಗಳಿಗೆ ವಾಸಸನ್ನಿಧಿಯ ಕಾಗೆಗಳನೇ ಕೊಡುತ್ತಾರೆ ಸಾಕ ಎಷ್ಟಾದರೂ ಶೆಟ್ಟಿರ ಗೂಡಿನ ಮಂಜಿಕ್ಕಿಯಲ್ಲವೇ? ಬ್ರಾಹ್ಮಣರ ಭೋಜನ ಶಾಲೆಯಲ್ಲಿ ತಿಂದು ತೇಗಿ ವ ಕಾಗೆಗಳು ಅವರಿಗೆ "ಪ್ರಿಯೆಕ್ಕಾ" ಕೊಡಿಯಲು ಒಂದು ಉಪಾಯ ಹೇಳುತ್ತೀನೆ ಕೇಳು ನೀನು ಒಂದು ಕಾಳು ಅಕ್ಕಿಯನ್ನಾದರೂ ಭೋಜನ ಶಾಲೆಗೆ ಕಳುಹಿಸಬೇಡಾ ಹೀಗೆ ಮಾಡಿದರೆ ಬ್ರಾಹ್ಮಣ ಕಳ್ಳಾದಿತ್ಯರಾಗಿ ನಿನಗೆ ಶರಣಾಗತರಾಗಿ ವರು ವಿಪ್ರ ವಾಕ್ಯೋ ಜನಧರ್ನೆ ಎಂದು ಹೇಳಾಳಿಸುತ್ತೀ! ವಿಪ್ರರಿಗೂ ವಿಪ್ರರ ಮಾತಿಗೂ ಸಜ್ಜಿರಲ್ಲಿ ಇಂದಿಗೂ ಮರ್ಯಾದೆ ಇದೆ ಇರಲಿ ಇತ್ಯ ರಲ್ಲಿ ನಿನಗೆ ಸಚಾಧಾನವಾಗದಿರುವುದಾದರೆ ಇನ್ನೊಮ್ಮೆ ಮಾತ ನ್ನಾಡುವ

ನೋಟಿಕೆರೇ!—ನಿಮ್ಮ ನೋಟು ಶೆಟ್ಟಿರ ಮತ್ತು ಭಟ್ಟರ ಲೇಖನ ಗಳ ಅಂಶವಾಗಿರುವುದರಿಂದ ಪ್ರತ್ಯೇಕವಾದ ಉತ್ತರವು ಅನಾವ್ಯ ಎಂದು ಭಾವಿಸುತ್ತೇನೆ

ನವಯುಗದ ಉಪಲೇಖಕರಾದ ಶ್ರೀ ಕೆ ಕೆ ಶೆಟ್ಟರಿಗೆ—ಪ್ರಿಯ ಶೆಟ್ಟರೇ ತಾನು ೫ ಮಿನಿಟು ಹತ್ತೇ ನಿಮಿಷ ಮಾತನಾಡಿದ್ದೇ ನೆಂಬುದಾಗಿ ಹೇಳುತ್ತೀರಲ್ಲಾ? ಏನು ನೀವತ ಬಿದ್ದಿರೇಂಬುದನ್ನು ಏಕೆ ವಿವರಿಸಿಲ್ಲ? ಸಭೆಯಲ್ಲಿ ನೆರೆದಿದ್ದವರ ಪರಿಚಯವಿಲ್ಲದಿದ್ದರೂ ವ್ಯಕ್ತಿಗಳಿಗೆ ಬೆರಳು ತೋರಿಸಿ ಮಾತನಾಡಿದ್ದೀರಲ್ಲವೇ? ಅದರಿಂದಲ್ಲವೇ ಗೊಂದಲವೆದ್ದುದು? ನಿಜವಾಗಿಯೂ ವ್ಯಕ್ತಿಗತ ದೂತ್ಪದಲ್ಲ ಬ್ರಾಹ್ಮಣ ಸಮಾಜಕ್ಕೇನೇ ಎಂದು ಹೇಳಿದರೂ ಸಮರ್ಪಕವಾಗುವುದು ಶ್ರೀ ಪಣಂಬೂರಿಯವರು ನಿನ್ನೊಬ್ಬನೇನೂ ಇದ್ದರಲ್ಲವೇ? ಪ್ರಾಯಶಃ ಗಲಾಟೆಯ ನಿಜಕಾರಣ ತಿಳಿಯದೆ ಬೋಧಿಸಲಾರಂಭಿಸಿದರು" ಎಂದು ಹೇಳುತ್ತೀರಿ ನಿಮ್ಮ ಒಬ್ಬುದ್ದ ಪಣಂಬೂರಿಯವರಿಗೆ ನಿಮಗೆ ತಿಳಿದ ವಿಷಯವು ತಿಳಿಯದಿರಲು ಶಕ್ಯವಿಲ್ಲದೆ ಹೋಯಿತೇ? ಪಣಂಬೂರಿ ಯವರು ಕೇಳಿಕೊಂಡಾಕ್ಷಣವೇ ನೀವು ಸುಮ್ಮನಿರಬೇಕಾಗಿ ನಾವು ಹೇಳಿಲ್ಲ ನೀವು ಅವರ ಮಾತಿಗೆ ಬೆಲೆಕೊಡುವಷ್ಟು ಉದಾರತೆಯನ್ನು ತೋರಿ ನಿಮ್ಮೊ ಇಲ್ಲ ನೀವು ನುಡಿದುದೆಲ್ಲಾ ಸತ್ಯ' ಮಾಡಿದ್ದಲ್ಲಾ ನ್ಯಾಯ!! ಹಿಂದಿರಿಯುವ ಪಾತ್ರವನ್ನು ನೀವು ಕಲಿತಿಲ್ಲವೆಂಬುದು ನಿಜ ಹಿತಕಾಂಕ್ಷಿಗಳಂತಹ ಹಿತ ಶತ್ರುಗಳ ಉಪದೇಶವು ನಿಮಗೆ ಅಗತ್ಯವಿಲ್ಲ ಕಂಡ್ಯನ್ನು ಕಂಡಹಾಗೆಯೇ ಹೇಳಿದರೆ ಕೆಂಡದಂಥಹ ಕೋಪವೆಂಬುದು ಸಹಜವಾದ್ದರಿಂದ ಹಿತಕಾಂಕ್ಷಿಯು ಹಿತಶತ್ರುವಾಗುವುದರಲ್ಲಿ ಸಂದೇಹ ವೇನು? ಪ್ರಿಯವಾಚಕ ಬಂಧಗಳೇ, ಶೆಟ್ಟರ ನಮ್ಮ ಕೈಯಲ್ಲಿ ಕೊಟ್ಟ ರುವ ನ್ಯಾಯಾನ್ಯಾಯದ ತಕ್ಕಡಿಯನ್ನು ಸರಿಯಾಗಿ ಪಿಡಕೊಳ್ಳಿ!

ಉಡುಪಿ, ೩—೧೧—೩೨ 'ಹಿತಕ್ಷಾಂಕ್ಷಿ'

'ಸ್ವದೇಶಾಭಿಮಾನಿ' ಪತ್ರಿಕೆಗೆ ಇಂದೇ
ಚಂದಾದಾರರಾಗಿರಿ.

Astrological Advertisements

Proprietor:-

B. Sridhar Ganapathi Baliga,

Astrologer, SUNTWAL P. O. S. Kanara, India

Trained and Certificate won from the greatest Astrologer of the world Prof B. Suryanarain Raw, B. A, M. R. A. S. F. R. H. S. etc.

Charges:—

Life reading Rs. 15, 5 years life-reading Rs. 5, Annual life reading Rs 3, Any selected 5 questions about futurity Rs. 3 each extra question Re. 1, postage extra A trail order will convince you marvel lously Please send your correct birth time, date, month and year, with Birth place. No communications will be attended to unless accompained by remittance in advance. For fuller informations apply to the *Proprietor*

1933.

1933ನೇ ಇಸವಿಯ

ಸುಂದರವಾದ ಬ್ಯಾಂಡಿನ ಮತ್ತು ಕಾಗದದ

ಸಣ್ಣ ಸ್ಯಾಜು ಮತ್ತು ದೊಡ್ಡ ಸ್ಯಾಜು

ಡೈರಿಗಳು.

ಕಾರದಾ ಛಾಪಖಾನೆ

ಇಲ್ಲಿಗೆ ಬರೆದುಕೊಳ್ಳಿರಿ ಮಂಗಳೂರು

ನಮ್ಮಲ್ಲಿದ್ದರ್ ರೇಶ್ಮೆ ಮಡಿಗಳಿಗೆ

ಗಮನ ಕೊಡಿರಿ.

SUN & CO

Choukhamba Benares City

ಮೂರು ಇನಾಮುಗಳು

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ಮಾಲುಗಳ ಕಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ವಟ 1 ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುದು ಸ್ಟಾಂಪು ಬಾರದಿದ್ದರೆ ತಿಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಬಣ್ಣ, ಮುಡಿ, ಕದಪಾಮ್ಮಿ, ಪೇಟಾ ಕೋಟಿಂಗ್, ಶರ್ಟಿಂಗ್, ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ ಊಲ್ಲನ್ ಜೌಕ, ಧಾವಣಿ, ನಾರ್ಮಂಡಿ, ತರ ತರದ ರುದ್ರಾಕ್ಷಿಗಳೂ, ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಬಿದ್ದರ್ ಮಡಿ-6 ಮೊಳ, 2 ಮೊಳ ಅಗಲ ರೂ ೫ ಶಿರಿದ್ದರ್ರೂ. 8, ಮೊಳ 8ರದ್ದು 2-12-0ರಿಂದ ರೂ 4 10 ಮೊಳ್, 2½ ಅಗಲ ರೂ. 4ರಿಂದ ರೂ 5 ಮೊಳ 12 + 2½ ರೂ. 5ರಿಂದ-6-8-0 ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ, ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ತಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಬೆನಾರಸ್ (ಕಾಶಿ)

ಮಿಕ್ಕುಳಿದ ಎಲ್ಲವನ್ನು ಬಹುಕ್ಕರಿಸಿ, ಬಾಟ್ಲಿವಾಲರ

ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂಮಿಕ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾವೀಣ್ಯತೆ ಪಡೆದವರು. 52 ವರುಷಗಳ ಖ್ಯಾತಿಯಿದೆ.

ಎಲ್ಲಾ ಪ್ರಮುಖವಾದ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕೃಪೆ ಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.

ಕೇದಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H. L. Batliwalla, Sons & Co., Ltd.

Kadell Road, P O Dadar Bombay, 14

ತಂತಿ ವಿಳಾಸ — GAVASPUR Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡೈರೆಕ್ಟರ್.

ಕೇಸರಿಯವರ ಅಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಒಹಿಸ್ಟೆಯಾಗದಿರುವುದು, ಅಕಾಲ ಬಹುಸ್ರಾವ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ ಕೀಲು ನೋವುಗಳು ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭಿಪ್ಸಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ

ದೊಡ್ಡ ಬಾಟಲ್ ಗತ ಪಿನ್ಸ್ ೫ ರೂ-೦-೦

ಸಣ್ಣ ಬಾಟಲ್ ೬ ಪಿನ್ಸ್ ೨ ರೂ-೧೦-೦

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗ್ ಬೇಕಾದಲ್ಲಿ ಒರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರ,

ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ್— ಶಾ ಕಂಪೆನಿ, ಡೈಮಂಡ್ ಬಿಲ್ಡಿಂಗ್ ಮಂಗಳೂರು

The Zandu Pharmaceutical Works, Ltd., Bombay, 14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ. 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅನೋಘ ಟಾನಿಕ್ಕು!!

ಈ ಅವಲೇಹವನ್ನು ಇತರ ಮಾಲೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಶ್ಯವಸ್ತುಗಳಲ್ಲಿ ಶ್ರೇಷ್ಠಯಸ್ಸುಂಟುಮಾಡುತ್ತದೆ. ಶ್ವಾಸರೋಗ ಉಬ್ಬಸ ನಾನಾ ವಿಧವಾದ ಕುಲಾಸಕ್ಕೆ, ಕೆಮ್ಮು, ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವುದು ಮತ್ತು ಗರ್ಭಸ್ರಾವ ಸಿಸ್ತ್ರೆ, ರಕ್ತಸ್ಟೋಟಕ ಶಕ್ತಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಶಕ್ತಿಯನ್ನುಂಟುಮಾಡಿ ಯೌವನವನ್ನು ಕೆಟ್ಟು ವೃದ್ಧಾಪ್ಯರನ್ನಾಗಿ ಮಾಡಲಕ್ಕೆ ಈ ಲೇಹವು ಸಮಸ್ತಿಷ್ಟಾಗುವುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೆಟಿಷಕ್ಕೆರ್ಪಡಿಸುವುದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/- ಕೃಯ 1ಪಾನು ಸೀರೆ ರೂ 2/8, ½ ಪಾ ರೂ. 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ವಿಜಂಟರು — ದಾಮೋದರ್ ಆಂಡ್ ಕಂಪೆನಿ, 78 ಹೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ವಿಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ವಿಜಂಟರು — ಶಾ ಕಂಪೆನಿ, ಡೈಮಂಡ್ ಬಿಲ್ಡಿಂಗು

ಸಿರ್ಸಿ ವಿಜಂಟರು — ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸದ್ ವಿಜಂಟರು-ಮೈಸೂರು ವಿಜಂಟರು — ಟಿ. ಸಿ ಸಟುರಾಜ್ ಆಂಡ್ ಕೊ, ಸಯಾಜಿರಾವ್ ರೋಡ್.

ಬೆಂಗಳೂರು ವಿಜಂಟರು — ವಿ ಪೂಪಚೆಟ್ಟಿಲಾಲ್ ಕಂಪೆನಿ, ಚಿಕ್ಕಪೇಟೆ

ಕೆಲವು ವಿವರ ಬೇಕಾದವರು ಸೋಲ್ ವಿಜಂಟರಿಗೆ ಬರೆದುಕೊಳ್ಳಬೇಕು.

ಲಂಡನ್ನಿನಲ್ಲಿ ನಿರುದ್ಯೋಗಿಗಳ ಭಯಂಕರ ಲೂಟಿ!!!

ಬರ್ಲಿನ್‌ನಲ್ಲಿ 50000 ಜನರ ಕ್ಷೋಭೆ!!!

ಅಲ್ಲಹಾಬಾದಿನಿಂದ ಸಂತೋಷದ ಸುದ್ದಿ!!

ಗಾಂಧಿಜೀಯವರ ಮೇಲೆ ಸರಕಾರದ ದಯೆ!

ಕಳೆದವಾರ ಮೊದಲ್ಗೊಂಡು ಲಂಡನಿನಲ್ಲಿ ಮಹಾ ತ್ಕೋಭೆಯೆದ್ದಿದೆ. ನಿರುದ್ಯೋಗಿಗಳಾಗಿರುವ ಸಾವಿರಗಟ್ಟಲೆ ಜನರು ಮೊನ್ನೆ ಪಟ್ಟಣದ ಹೊರಗಿರುವ ತಮ್ಮ ಊರು ಪರವೂರುಗಳಿಂದ ಧೈಲು ಮಾಳಲ ಲಂಡನಿನ ಟ್ರಾಫಲ್‌ಗಾರ್ ಸ್ಕ್ವಯರಿನಲ್ಲಿ ಬಂದು ಮುತ್ತಿದರು. ಗಾಳಿ ಮಳೆಯು ಬೀಸುತ್ತಿದ್ದರೂ ಜನರು ಮಾರ್ಗದಲ್ಲಿ ಓಡುತ್ತಿರುವ ಕಾಲು, ಬಸ್ಸು, ಗಾಡಿ ಮೊದಲಾದ ವಾಹನಗಳನ್ನು ನಿಲ್ಲಿಸಿ ಕಲ್ಲು ಮುಳ್ಳುಗಳನ್ನೆಸೆದು ಅನೇಕರನ್ನು ಜಖಂಗೊಳಿಸಿದರು. ಪೋಲೀಸರ ನಿರ್ಬಂಧವು ಎಷ್ಟು ಬಲವತ್ತಾಗಿದ್ದರೂ, ಸ್ತ್ರೀ ಪುರುಷ ಬಾಲರಾದಿಗಳ ಅದಮ್ಯಕೂಟದ ಶಕ್ತಿಯು ಕೈಮೀರಿ ಹೋಯಿತು. ಅಫಿ ಚಾರ್ಜು ಬೆಟನ್ ಚಾರ್ಜುಗಳು ನಡೆದುವು. ೩೦೦ ಮಂದಿಗಳನ್ನು ಕೈಸೆರೆ ಹಿಡಿದರು. ತಮ್ಮ ನಿರುದ್ಯೋಗ ನಿವಾರಣೆಗಾಗಿ ಅಧಿಕಾರಿಗಳು ಏನಾದರೊಂದು ಸಮಾಲೋಚನೆಯನ್ನು ಮಾಡಬೇಕೆಂದೇ ಈ ಜನತಂಡದ ಆಗ್ರಹ. ಪ್ರಧಾನಮಂತ್ರಿಯವರ ಬಳಗೊಂದು ಮನವಿಯನ್ನು ಕೊಂಡುಹೋಗಲು ಯತ್ನ ವಾಯಿತು. ಆದರೆ ವಾತಾವರಣದ ಪ್ರಕ್ಷುಬ್ಧತೆಯನ್ನು ತಡೆಯಲು ಆವರಲ್ಲಿನ ಮುಖಂಡರನ್ನು ಸೆರೆಹಿಡಿದು ಲೂಟಿಯು ವಿಪರೀತವಾಯಿತು. ಅನೇಕ ಅಂಗಡಿಗಳು ಬರಿದಾದುವು. ಒಂದು ಅಂಗಡಿಯ ಎದುರು ಜಾಹೀರಾತಿಗಾಗಿ "To empty the shop-reduction sale" ಎಂದಿತ್ತು. ಹೆಸರಿನಿಂದ ಕಂಗೆಟ್ಟ ಧಣಿಯಾಯಗಾರರು ಆ ಅಂಗಡಿಯನ್ನು ಹೊಕ್ಕು ಅದನ್ನು ಬರಿದು ಮಾಡಿಬಿಟ್ಟರು. ಪ್ರಮುಖರ ಕೈದುಗಳಾದ ನಂತರ ಪೋಲೀಸರು ಅಲ್ಲಲ್ಲಿ ಜಿತ್ತಿ ನಡೆಸಿದರು. ದಂಗೆಗಾರರ ಮುಖಂಡನಾಗಿ ಹೆಸ್ಲಿಂಗ್ಟನ್ ಎಂಬವನನ್ನು ಅವನ ರಾತ್ರಿ ರಾತ್ರಿ ರಿಕಾರ್ಡುಗಳ ಸಮೇತ ಸೆರೆಹಿಡಿದರು. ಅವನನ್ನು ಸೆರೆ ಹಿಡಿದುದರಿಂದ ನಿರುದ್ಯೋಗಿಗಳ ಪರವಾಗಿ ಅನೇಕ ಸಹಾನುಭೂತಿಪರರು ದೊರೆತು ಅವರ ಸಂಖ್ಯೆಯು ೫೦೦೦೦ವನ್ನು ಮೀರಿತು, ನಿರುದ್ಯೋಗ ನಿವಾರ್ಣಾರ್ಥವಾದ ಪ್ರಶ್ನೆಯು ಪಾರ್ಲಿಮೆಂಟಿನಲ್ಲಿ ಅತ್ಯವಸರದಿಂದ ತರ್ಕಸಲ್ಪಡುತ್ತಿದೆ. ಈಗಿನ ಸುದ್ದಿಯಿಂದ ತಿಳಿದುಬರುವಂತೆ ಹೆಸ್ಲಿಂಗ್ಟನನು ರಷ್ಯಾದೇಶದ ಸಿಪ್ಪಿ ಜೋನ್ ಎಲಿಯಸ್ ಎಂಬವನು ಬ್ರಿಟಿಷ ದ್ವೇಷದಿಂದ ಎಲ್ಲೆಲ್ಲೂ ಸ್ಥಾಪಿಸಿದ ನೇಷನಲ್ ಅನ್ ಎಂಪ್ಲೆಯಿಡ್ ವರ್ಕರ್ಸ್ ಮೂವ್‌ಮೆಂಟ್ ಎಂಬುದರ ಪರವಾಗಿ, ಬ್ರಿಟಿಷ್ ರನ್ನು ಉದ್ವಿಗ್ನಗೊಳಿಸುತ್ತಿದ್ದನು ಎಂದು ತಿಳಿದು ಬಂದಿದೆ. ಇದರಿಂದಾಗಿ ಬ್ರಿಟನು ಮತ್ತು ರಷ್ಯಗಳೊಳಗಿರುವ ವೈಮನಸ್ಸಿನ ಜಿಹ್ವೆಯು ಹೊರ ಬೀಳುವಂತಿದೆ. ಹೆಸ್ಲಿಂಗ್ಟನ ವಶದಲ್ಲಿದ್ದ ಅನೇಕ ಕಾಗದ ಪತ್ರಗಳಿಂದಾಗಿ ಅವನು ರಷ್ಯದವರಿಂದ ಪ್ರೇರೇಪಿಸಲ್ಪಟ್ಟ ಪಿತೂರಿಗಾರನೆಂದು ತಿಳಿದು ಬಂದಿದೆ. ಹೆಸ್ಲಿಂಗ್ಟನನ್ನು ತಕ್ಷೀರಿಗೆಳೆದಿರುವರು. ಎರಡು ಮೂರು ಸಾವಿರ ಜನರಿಗೆ ಧೈಲುವೆಚ್ಚ ವನ್ನೂ ನಿರುದ್ಯೋಗ ನಿವಾರಣಾರ್ಥವಾದ ಅಶ್ವಾಸನೆಯನ್ನೂ ಕೊಟ್ಟು ಸ್ವದೂರುಗಳಿಗೆ ಕಳುಹಿಸಿರುವರು.

ಬರ್ಲಿನ್‌ನಲ್ಲಿ ಮಿಲಿಯಾಧಿ ಜನರ ಕ್ಷೋಭೆ!

ಜರ್ಮನಿಯ ರಾಜ್ಯಾಡಳಿತವು ಈಗ ಮಹಾ ವಿಪತ್ತಿಗೊಳಗಾಗಿದೆ. ನಾಜಿಗಳೂ ಕಮ್ಯೂನಿಸ್ಟರೂ, ನೋಕಿಯಲ್ ಡೆಮೊಕ್ರೆಟ್ಸ್, ನೇಶನಲಿಸ್ಟ್ ಎಂಬ ನಾಲ್ಕೈದು ಪ್ರಬಲ ಪಂಗಡಗಳೂ ಅಲ್ಲಿ ತಲೆ ತಲೆ ಬಡಿದಾಡಿಕೊಳ್ಳುತ್ತಿವೆ. ಮಜೂರಿ ಗಾರರಿಗೆ ಸಂಬಳವನ್ನು ಕಡಿಮೆಮಾಡಬೇಕೆಂದು ಅಲ್ಲಿಯ ಸರಕಾರವು ಲಿರ್ಡಿನೆನ್ಸ್ ಒಂದನ್ನು ಜ್ಯಾರಿ ಮಾಡಿತು. ಈ ಕಾರಣ ತಾಸನದಿಂದಾಗಿ ಅಲ್ಲಿ ಕೆಲವು ಮಿಲಿಯ ಜನರು ನಿರುದ್ಯೋಗಿಗಳಾ ದುವರು. ಮಿಲಿಯಾವಧಿ ಮುಷ್ಟುಗಾರರು ವಾಹನಗಳನ್ನು ಪಿಕಟ್ ಮಾಡಿದರು. ಸಾವಿರ ಗಟ್ಟಲೆ ಟ್ರಾಂಕಾರುಗಳಲ್ಲಿ ಈಗ ಒಂದಾದರೂ ಮಾರ್ಗದಲ್ಲಿ ಕಾಣಸಿಗುವುದಿಲ್ಲ. ೩೦೦ ಪಿಕಟರ ರನ್ನು ಸೆರೆಹಿಡಿದಿರುವರು. ವಾಹನಗಳನ್ನು ತಡೆಯುತ್ತಿರುವ ಒಂದು ದೊಡ್ಡ ಗುಂಪಿನ ಮೇಲೆ ಪೋಲೀಸರು ಗುಂಡುಹಾರಿಸಿದರು. ಒಬ್ಬ ನಾಜಿ ಮುಂದಾಳುವು ಮಡಿದುಬಿದ್ದನು. ಒಡನೆ ಅವನು ಸತ್ತು ಬಿದ್ದ ಸ್ಥಳದಲ್ಲಿನ ರಕ್ತದಲ್ಲಿ ಅವನ ಪಂಗಡದವರು ತಮ್ಮ ಪತಾಕೆಯನ್ನು ಮುಳುಗಿಸಿ ಅದನ್ನು ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿ ಕೊಂಡೊಯ್ದರು. ಮುಷ್ಕರವು ಕಾಯಿದೆ ವಿರೋಧಿ ವೆಂದು ಒಫಿಶಿಯಲ್ ಆರ್ಡಿಸ್ಟ್ರೀಟರರು ಡಂಗುರ ಹೊಡೆಸಿರುತ್ತಾರೆ. ತಮ್ಮ ತಾಸನವನ್ನು ಪ್ರಜಾ ಗಣವು ಮನ್ನಿಸಿ ಪರಿಶಾಲಿಸಬೇಕೆಂದೇ ಸರಕಾರದ ಆಗ್ರಹ. ಟ್ರಾನ್ಸ್‌ಪೋರ್ಟ್ ಕಂಪೆನಿಗಳು ಮುಷ್ಕರಿಗಾರರನ್ನು ಇನ್ನು ಕೆಲಸಕ್ಕೆ ತೆಗೆದುಕೊಳ್ಳುವ ದಿಲ್ಲವೆಂದು ಪ್ರಕಟಿಸಿದುದನ್ನು ನೋಡಿ ಅದರ ೨೪೦೦೦ ಕೆಲಸಗಾರರಲ್ಲಿ ಬರೇ ೩೦೦೦ ಕೆಲಸ ಗಾರರು ಕೆಲಸಕ್ಕೆ ತಾಜರಾಗಿರುವರು. ನಾಜಿ ಕೆಲಸಗಾರರು ೮ ಮೋಟಾರ್ ಬಸ್ಸುಗಳನ್ನು ಜಖ್ಖ ಹುಡಿಮಾಡಿದರು. ಕೆಲವು ಪೋಲೀಸರು ಜನರ ದೊಣ್ಣೆಗಳಿಗೆ ತಲೆಯೊಡ್ಡಬೇಕಾಗಿ ಬಂತು. ಪೋಲೀಸರು ದಿಢೀರ್ಮುರುಗಳನ್ನು ಹಿಡಿದು ಕೊಂಡೇ ಶಾಂತತೆಗಾಗಿ ಯತ್ನಿಸುತ್ತಿರುವರು. ಮತವಾದಿಗಳ ಎಲ್ಲಾ ವಾರ್ತಾಪತ್ರಗಳು ನಿಷೇಧಿ ಸಲ್ಪಟ್ಟಿವೆ. ಈ ಮುಷ್ಕರವು ಇನ್ನು ಕೆಲವು ದಿನಗಳ ತನಕ ನಿಂತರೆ ಏನೆಲ್ಲ ಘಟನೆಗಳಾಗುವ ವೆಂದು ಊಹಿಸುವಾಗ್ಯವೆಂದು ಪತ್ರಿಕೆಗಳನ್ನು ತಿಳಿ.

ಅಲ್ಲಹಾಬಾದಿನಿಂದ ಸಂತೋಷದ ಸುದ್ದಿ.

"ಪ್ರಿಯ ಭ್ರಾತೃರೇ,

ನಾವು ಇಂದಿನ ದಿನದಲ್ಲಿ ನೆರೆಹುಬದುವಂತೆ ಪ್ರೇರೇಪಿಸಿದ ಆ ಭಗವಂತನನ್ನು ಸ್ಮರಿಸೋಣ. ನಮ್ಮ ನಮ್ಮೊಳಗೆ ಬಹು ಕಾಲದ ಛಿನ್ನಾಭಿಪ್ರಾಯಗಳಿವೆ—ಭೇದ ಗಳಿವೆ. ಅವುಗಳನ್ನೆಗ ಮರೆಯೋಣ. ನಮ್ಮ ನಿಕ್ಕ ಮತ್ಕಾರ್ಯಾಗಿ ಮಾಡಿದ ಸಾಹಸವು ಅನೇಕ ಮೇಲೆ ನಿಷ್ಫಲ ವಾಯಿತು. ಅಂತಹ ನಿಷ್ಫಲತೆಯಿಂದಾಗಿ ನಾವೂ ನಮ್ಮ ಜನ್ಮಭೂಮಿಯಿಂ ತಕ್ಕ ತಾಸಕರ್ಮೊಳಗಾಗಬೇಕಾಯಿತು. ಬ್ರಿಟಿಷ ಸರಕಾರವು ನಮ್ಮ ಗ್ರಹಕೃತ್ಯ ವಿಷಯಗಳಿಗೆ ಕೈಯಿಕ್ಕಬೇಕಾದುದು ವಿಷಾದಕರ ಸಂಗತಿಯಲ್ಲವೇ? ನಮ್ಮ ಗೌರವಕ್ಕೆ ಹಾನಿಯಲ್ಲವೇ? ಈ ವಿಷಯವನ್ನು ಈಗ ಸರ್ವರೂ ವಿಚೇಚಿಸಿರುವರೆಂದು ಭಾಸವಾಗುತ್ತಿದೆ. ಬ್ರಿಟಿಷ ಸರಕಾರವು ನಮಗೆ ದೇಶವಾಗಿರುವ ರಾಜ್ಯಾಂಗವನ್ನು ಕೊಡಬೇಕೆಂದಿರುತ್ತದೆ. ಆದರ ದಾನದಿಂದಾಗಿ ತಾಸನ ಗಳಿಂದ ಅನಸ್ಥರ್ಥನಾಮಗಳ್ಳಾಪನೆಗಳು ಹೊರಬಿದ್ದು ದರಿಂದ ನಮ್ಮಲ್ಲಿನ ಶ್ರೇಷ್ಠಪುರುಷಪ್ರಮು ಕ್ತಿ ಪ್ರಕಾರ ಬಂಧನದಲ್ಲಿರುತ್ತಿರುವರು. ನಮ್ಮ ಅರ್ಥಿಕ ಏಳ್ಗೆ ಯನ್ನು ದಿನಂಪ್ರತಿ ಮಣ್ಣುಗೂಡಿಸುತ್ತಿರುವರು. ಜನಾಂಗ ಹಿತವನ್ನು ಬಯಸುವ ರಾಷ್ಟ್ರಕಾರ್ಯಗಳನ್ನು ತಡೆದಿರು ವರು. ಇಂದಿನ ಪರಿಸ್ಥಿತಿಯನ್ನು ನೋಡಿ ನನ್ನ ಹೃದಯವು ವಿದೀರ್ಣವಾಗಿದೆ. ಇಂತಹ ಇಕ್ಕಟ್ಟು ಜಿಕ್ಕಟ್ಟುಗಳಿಗೆ ಸಿಲುಕಿರುವ ನಾವು ನಮ್ಮ ನಮ್ಮೊಳಗಿನ ಬಾಸಗಿ ವೈಷ್ಯಾಸ ಭೇದಗಳನ್ನು ಮರೆತು ರಾಷ್ಟ್ರೀಯ ಭಾವನೆಯ ದೃಷ್ಟಾ ಒಕ್ಕಟ್ಟಾಗಿ, ಏಕ್ಯರಾಗಿ ಎಡತಟ್ಟ ನಿಲ್ಲಬೇಡವೇ? ಯಾವು ಅಲ್ಪಸಂಖ್ಯಾಕರೋ ಅವರಿಗೆ ಅವರ ಹಕ್ಕು ಭಾದ್ಯತೆಗಳು ದೊರತೇ ದೊರೆಯುವುವು. ನಮ್ಮ ದೇಶವು ಪೂರ್ವದಲ್ಲಿ ಹಿಂದೂ ಮುಸ್ಲಿಮ ಸಿಖ್ಖರಿಂದ ರಕ್ಷಿಸಲ್ಪಟ್ಟಿತು. ಇಂತಹ ರಾಷ್ಟ್ರವನ್ನು ಏಕೀಕರಿಸೋಣ! ಒಂದಾಗೋಣ! ನವೀನ ಧಾರ್ಮರಚನೆಯನ್ನು ಮಾಡೋಣ! ನಮ್ಮಂಥ ರಚಯಿತವಾಗುವ ಈ ನವೀನ ರಾಷ್ಟ್ರವು ಇಂಥ ಧರೆಯಲ್ಲಿ ಅಗ್ರಗಣ್ಯವಾಗುವುದು. ಆಶ್ಚರ್ಯಚಕಿತ ಶಕ್ತಿಯಿಂದೊಗೂಡುವುದು. ನಮ್ಮ ಸ್ವಶಕ್ತಿ ಪ್ರಭೆಯನ್ನು ನಾವು ಇಷ್ಟರ ತನಕ ಅಂತುಕೊಂಡಿರದಿರುವುದೇ ನಮ್ಮ ನಾಶಕ್ಕೆ ಮೂಲ ಹೇತುವಾಯಿತು. ಅಂತಹ ಪ್ರಭೆಯನ್ನು ಕಾಣಲು ತಪ್ಪದವರಲ್ಲಿ ನಾನೂ ಒಬ್ಬನೆಂದು ವಿಷಾದದಿಂದ ನಿವೇದಿಸಿಕೊಳ್ಳಬೇಕಾಗಿದೆ. ಅಂತಹ ಪ್ರಭೆಯ ಪ್ರತಿಬಿಂಬವು ನನಗೆ ಈಗ ಕಂಡುಬರುತ್ತಿದೆ. ಯಾರು ಈ ಪುಣ್ಯಭೂಮಿಯನ್ನು ತನ್ನ ಮಾತೃಭೂಮಿ ಯೆಂದು ಪರಿಗಣಿಸುತ್ತಾನೋ ಅಂತಹವರಿಗೆ ಯಾವ ಭೇದವಿಲ್ಲದೆ, ಮೇಲು ಕೀಲುಗಳೆಂಬ ತಾರತಮ್ಯವಿಲ್ಲದೆ ಹಕ್ಕು ಸರ್ವಸ್ವವನ್ನು ಕೊಡೋಣ. ನಮ್ಮಿಂ ಯತ್ನವು ಫಲಪ್ರದವಾಗುವಂತೆ ದಯಾಮಯನಾದ ಭಗವಂತನು ನಮಗೆ ವರವನ್ನೀಯುವನು."

ಹೀಗೆಂದು ಹೇಳುತ್ತಾ ತಾ. ೩೦೯ ದಿನ ಅಲ್ಲಹಾಬಾದಿನಲ್ಲಿ ಪಂಡಿತ ಮಾಲವೀಯರು ಏಕೀಕರಣ ಪರಿಷತ್ತಿನ ಅಧಿವೇಶನಾರಂಭವನ್ನು ಮಾಡಿದರು. ಈ ಯುನಿಟೆ ಕಾನ್ಫರೆನ್ಸಿಗೆ ದೇಶದ ಎಲ್ಲಾ ಭಾಗಗಳಿಂದ ನೂರಕ್ಕಿಂತಲೂ ಹೆಚ್ಚು ಪ್ರತಿನಿಧಿಗಳು ಚಿತ್ತೈಸಿದ್ದರು. ಮೌಲಾನಾ ತ್ಕತಾಲಿಯವರು ಮದ್ರಾಸಿನ ಶ್ರೀ. ವಿಜಯ ರಾಘವಾಚಾರ್ಯರವರನ್ನು ಅಧ್ಯಕ್ಷಸ್ಥಾನಕ್ಕೆ ಸ್ವಾಗತೀಕರಿಸುತ್ತಾ "ಶ್ರೀ. ಸಿ. ವಿಜಯ ರಾಘವಾಚಾರ್ಯರು ವೃದ್ಧಪಿತಾಮಹರು" ಎಂಬತ್ತು ವರ್ಷದ ಹತ್ತಿರ ಹತ್ತಿರವಿರುತ್ತಾರೆ. ರಾಷ್ಟ್ರಧಕ್ಷರು, ಸರ್ವ ಅನುಭವಿಗಳು. ಮಹಾತ್ಮಾ ಗಾಂಧಿಯವರು ನಮ್ಮೊಡನೆ ಇಲ್ಲದಿರುವ ಈ ಪ್ರಸಂಗದಲ್ಲಿ ಇಂತಹ ಧೀರವೃದ್ಧ ಪಿತಾಮಹ ರನ್ನು ಅಧ್ಯಕ್ಷರನ್ನಾಗಿ ಆರಿಸುವುದರಲ್ಲಿ ಔನ್ನಾಭಿ ಪ್ರಾಯವಿರದು. ವಯೋನೃದ್ಧರಾದರೂ ನಮ್ಮಿ ಸಮ್ಮೇಳನದ ವಿಜಯವನ್ನು ಕಾಂಕ್ಷಿಸಿ ನಮ್ಮೆಡೆಗೆ ಸಮಯನಿಷ್ಠೆಯನ್ನು ಕಾಯ್ದು ಬಂದಿರುವರು" ಎಂದರು. ಅಧ್ಯಕ್ಷರು ಪೀಠವನ್ನೇರಿ, ಸಧೆಯ ಉದ್ದೇಶ, ಸರಕಾರದ ದಾನ, ಹಿಂದೂ ಮುಸಲ್ಮಾನ, ಸಿಖ್ಖ, ಕ್ರೈಸ್ತರ ಕರ್ತವ್ಯ, ಏಕ್ಯಮತ್ಯದ ಸತ್ಪರಿಣಾಮ, ಪರಸ್ಪರ ವಿಶ್ವಾಸವು ತಪ್ಪಿದರೆ ಸಂಧಿವಿಸಲಿರುವ ಕಷ್ಟಪರಂಪರೆಗಳ ಉರಿತು ಹೃದಯಂಗಮವಾಗಿ ಮಾತನಾಡಿದರು. ಪ್ರಾರ್ಥನೆ ನಡೆದ ಮೇಲೆ ಪಧೆಗೆ ಬರಲಾಗದ ಮಾ। ರಾ। ಅಂಬೆ ಡ್ಕಾರ್, ಜಯಕರ್, ಶ್ರೀಮತಿ ಹನ್ಸ್‌ಮೇಥ, ಜಿನ್ನ, ಪಿ. ಎಸ್. ಶಿವಸ್ವಾಮಿ ಅಯ್ಯರ್, ಯಾಕೂಬ್ ಹುಸೇನ್, ಎ. ರಂಗಸ್ವಾಮಿ ಅಯ್ಯಂಗಾರ್, ಬೇಗಂ ಮಹಮದ್ ಅಲಂ, ಜಿಂತಾಮಣಿ, ಡಾ. ಸುಬ್ಬರಾಯನ್, ಶ್ರೀಮತಿ ಅಸಾಫ್ ಅಲಿ, ಜಿ. ಡಿ. ಬಿರ್ಲ, ಟಿ. ಪ್ರಕಾಶಂ, ಹುಸೇನ್ ಇಮಾಮ್, ಡಾ। ಜೆತೋರಾಮ್ ಮೊದಲಾದವರ ಮಂಗಳ ಕಾಂಕ್ಷೆಗಳನ್ನು ಓದಿ ಹೇಳಲಾಯಿತು. ಆ ಮೇಲೆ ಸರಕಾರವು ಮೌಲಾನಾ ಶೌಕತಾಲಿಯವರಿಗೆ ಮಹಾತ್ಮರ ಛೇಟಿ ಕೊಡಲಿರುವುದಕ್ಕಾಗಿ ದುಃಖಿಸಿ ಶರಾವಾಯಿತು.

ಮಾಲವೀಯರ ಭಾಷಣವಾದ ನಂತರ ಮೌಲಾನಾ ಶೌಕತಾಲಿ, ಡಾ। ಮುಂಜೆ, ಮೌಲಾನಾ ಜಫರ್ ಅಲಿ, ಜೆ. ಎನ್. ಬಾಸು, ಡಾ। ಡಿ' ಸೋಜ, ಮೌಲಾನಾ ಅಬ್ದುಲ್ ಕಲಂ ಆಜಾದ್, ಮೊದಲಾದವರು ಪರಿಷತ್ತಿನ ಉತ್ಸರ್ಷತೆ, ನಿರ್ಧಾರಗಳ ಕುರಿತು ಮಾತನಾಡಿದರು. ಪ್ರತಿಯೊಬ್ಬರೂ ಏಕಾವಾಜಿಗಳಂತೆಯೇ ಭಾಷಣಮಾಡಿದರು.

ತಾ. ೬—೭ನೇ ದಿನಗಳಲ್ಲಿ ಬಂಗಾಳ ಸಿಂಧ್ ಮೊದಲಾದವುಗಳ ವಿಚಿತ್ರ ಕುರಿತು ಚರ್ಚೆಗಳಾದುವು. ಸಿಖ್ಖ ಪ್ರಶ್ನೆಯು ಹೆಚ್ಚಿನ ಗಡಚು ಸ್ಥಿತಿಗೆ ಬಂದು ಮುಟ್ಟಿದೆ. ಇವುಗಳಲ್ಲವೂ ಇನ್ನು ಒಂದೆರಡು ದಿನಗಳೊಳಗೆ ತೀರ್ಮಾನ ಹೊಂದಲಿವೆ.

(ಅನೇ ಪುಟ ನೋಡಿ)

ಒಂದು ದೇಶವನ್ನು ಇನ್ನೊಂದು ಅಹಿತ ಪುತವಿರುದ್ಧವಾಗಿ ಆಳಲು ಶಕ್ಯವಿಲ್ಲ. ಆಂಗ್ಲೇಯರೊಳಗೂ ಹಿಂದೀಯರೊಳಗೂ ಬೇರೂರುತ್ತಿರುವ ಅಭಿಪ್ರಾಯವು, ಅವಿಶ್ವಾಸಗಳು ಹಾರಾಗಬೇಕಾದರೆ ಮಹಾತ್ಮಾ ಗಾಂಧಿಯವರ ಮುಂದಾಳುತನದ ಕಾಂಗ್ರೆಸ್ಸಿನ ಪ್ರತಿಪಳೆಯು ಅತ್ಯವಶ್ಯ. ಗಾಂಧಿಯವರು ಸಂಪೂರ್ಣ ಸಂಬಿಗಸ್ಥರು. ಆಳರಸರು ತಿಳಿಯಲಿ —

ರವೀಂದ್ರನಾಥ ಠಾಗೂರ.
ತಾ. ೨-೧೧-೩೨.

ಎಂದು ಸ್ವದೇಶಿಯು ದೇಶದಲ್ಲೆಲ್ಲಾ ಹಬ್ಬುತ್ತದೆಯೋ ಎಂದು ಪ್ರತಿಯೊಬ್ಬನ ಕರ್ಣದಲ್ಲಿ ಸ್ವದೇಶೀ ಮಂತ್ರವುರುಣಾಕ್ಷರಿ ಸುತ್ತದೆಯೋ, ಅಂದು ಭರತವರ್ಷದ ಆರ್ಥಿಕ ಸುಧಾರಣೆಯು ಮಂದಿರದ ಬೀಗದ ಕೈಯು ಮಿಲಿಯಗಟ್ಟಲೆ ಬಡ ಜನರ ಹಸ್ತಗತವಾಗುವುದು.

ದರಿದ್ರ ಸೇವೆಯು ದರಿದ್ರನಾರಾಯಣನ ಸೇವೆ. ದರಿದ್ರರಲ್ಲಿ ದರಿದ್ರ ನಿಂದಿರುವುದೇ ನಾನೀಶ್ವರ ಸೇವೆಯು.

ಮಹಾತ್ಮಾ ಗಾಂಧಿ.

ಮಕ್ಕಳ ಅನುಭವಸಿದ್ಧ ಔಷಧಗಳು

ಧಾತುಪುಷ್ಟಿ ಲೇಹ—ಬಾಲ್ಯವಸ್ಥೆ ದುಶ್ಚಾಲನೆಗಳಿಂದಾಗುವ ಶಾರೀರಿಕ ನಿಸ್ತೇಜಗಳನ್ನು, ಧಾತುಪುಷ್ಟಿ ಮೂತ್ರದೋಷಕ್ಕೆ ಮೊದಲಿನಸ್ಥಿತಿಗೆ ತರುವುದು, ಶರೀರ ಮರ್ದನಾದಿ ಸಂಧಿಬಂಧನಕ್ಕೆ ಉಂಟಾದಾಗ, ಸ್ವಪ್ನದಲ್ಲಿ ಧಾತುಪುಷ್ಟಿ ನಿಸ್ತೇಜಗಳಾದಾಗ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷೀಣವಾದಾಗ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಬಿಳಿಸೆರ, ಮೂಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ತಿ ಗುಣವಾಗಿ ಶರೀರದಲ್ಲಿ ಶಕ್ತಿಯು ಪುನಃ ಸಂಚಯವಾಗುವುದು. ಪೌ 1 ಕ್ಕೆ ರೂ. 2—8—0, 3 ಕ್ಕೆ ರೂ. 7.

ಶೀಘ್ರಪ್ರಸವ ಮತ್ತು ಸುಖಪ್ರಸೂತಿ—ಸುಲಭ, ಸುಖಪ್ರಸೂತಿ, ಸುಖಕರ ಹೊಗದಿರುವಿಕೆ, ಸುಖಕರ ಹೊಗುವಾಗ ನೋವು, ಸುಖಪ್ರಸವದಿಂದ ತೊಡೆ ಬಾಗುವುದು, ಸುಖಪ್ರದಲ್ಲಿ ಧಾತು ಹೋಗುವುದು, ಸುಖಪ್ರವ ಆಗಾಗ್ಗೆ ಬಂದು ತಡಮಾಡಿಕೆ ಸಾಮಾನ್ಯವಾಗಿ ಕಂಡುಬರುವುದು ಇಂಥ ಮೊದಲಾದ ಹಲವು ಸುಖಪ್ರಸೂತಿಯ ರೋಗಗಳನ್ನು, ಬಾಯುರ್ಗೆ, ಮೂಲಬದ್ಧತೆ, ಸ್ವಪ್ನಾದಿಗಳನ್ನು ಇವೆ ಗಳ ಮೇಲಿನ ಸಿದ್ಧೌಷಧ. ಬಾಟ್ಲಿ 1ಕ್ಕೆ ರೂ. 1—2—0 1 ಕ್ಕೆ ಮಾತ್ರೆಗೆ ರೂ 1-8-0. 2 ಬಾಟ್ಲಿ ಔಷಧಕ್ಕೆ ರೂ 4 12.0.

ಬಾಲಗ್ರಹ ಗುಟಿಕೆ—ಬಾಲಗ್ರಹ, ಕೆಳ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಕಫ್ಫ, ಮೂಲಬದ್ಧತೆ ಇವುಗಳ ಮೇರೆ ದಿವ್ಯೌಷಧ. ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

(ಕನ್ನಡಿ ವಿಶ್ರಮ) ದಶಮೂಲಾರಿಷ್ಟ—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಳುಂಬಿಸಿ, ಪ್ರಸವದ ಅಯಾಸವನ್ನೆಲ್ಲಾ ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ ಗರ್ಭಕೋಶದ ವೇದನೆಗಳನ್ನು ಸುಧಾರಣೆಯಿಂದ ಹೊರಹಾಕಿಸಿ ಜೀರ್ಣಾಂಶಯದ ಅರುಚಿ, ಅಗ್ನಿಮಾಂದ್ಯ, ಶಿಶ್ವಾಧಿಗಳಿಗೆ ಮೊದಲಾದವುಗಳು ಮಾಯೆಯಾಗಿ ಬಾಣಂತಿಯರು ಪುಷ್ಟಿ ಹೊಂದುವುದು. ಮಗುವಿನ ಆರೋಗ್ಯವೂ ಸಂತೋಷವಾಗುವುದು ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಆಗ 3 4ನೇ ದಿವಸದಿಂದ ಧಶಮೂಲ ಬೆರೆ ಬಾಟ್ಲಿ 1ಕ್ಕೆ ರೂ 1-8 0 2 ಬಾಟ್ಲಿಗಳಿಗೆ ರೂ 3

ನಮ್ಮ ಎಲ್ಲಾ ಔಷಧಗಳು ಪುಕ್ಕಾಸಿನಲ್ಲಿ ದಾ। ಶ್ರೀನಿವಾಸ ಪೈಯವರ ಕೋಷಿನಲ್ಲಿ ಸಿಗುತ್ತವೆ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು

ಚಿನ್ನ ಬೆಳ್ಳಿ ಒಡವೆಯ ಸೊಸ್ಟ್ಯಾಗಳಿಗೆ

ಚೀಣಾಪ್ಪ ನಮ್ಮಣಿಯ ಖಂಡ್ಯ ವಿದ್ಧದ ಫಾರಂಗಳು, ರಸೀದಿಗಳು, ರೋದ್ದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮುದ್ರಿಸುವಲ್ಲಿ

ದಿ ಮಂಗಳೂರು ಪ್ರಿಂಟಿಂಗ್ ಎಸೋಸಿಯೇಶನ್
ರಥ ಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರೆ



ಬಹುಜನಪ್ರಿಯ ಸಾರಸಪರಿಲಾ

ಕೆಟ್ಟು ರಕ್ತಕ್ಕೆ ಪರಮೌಷಧ ಆಗಾ ವರ್ಷದ ಅನುಭವ ಉಪಯೋಗಿಸಿ ದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್
ಕೇಶವರವರ
ಪ್ರೊಸ್ಪರಸ್ ಗುಳಿಗೆಗಳು
ಅಮೃತಪ್ರಭಾ ಬಾಣ

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಧಾಕುರದ್ವಾರ, ಮುಂಬಾಯಿ ಮತ್ತು ಸ್ಟೋರ್ಸ್ ಸಾ ಕಂಬಿ,
[ಸಕ್ಕರೆಕಾರ್ ಖಾನೆಗ್ಲಿಷ್ ಅಥವಾ ಮುಂಬಾಯಿಲ್ಲಿ] ಮಂಗಳೂರು

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ
ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ
ಕನ್ನಡಿ ವಿಶ್ರಮ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager
The South Indian General Assurance Co Ltd
64 3rd Cross Road Srirampur Extn
Malleswaram Post, BANGALORE

OR

The Managing Agents
The S I G A Co Ltd
55 Poonamallee High Road Kilpauk MADRAS

The India Flour Mills Ltd. Karachi.

have pleasure to announce that they have appointed Messrs R B Jessaram Thakurdas, Post Box No 164, Karachi as their Sole Agents for the sale of their world renowned Rose Brand and India Brand wheat products, Sooji Rawa, Superfine, Household, Atta, Bran Pollard etc

It is needless to say that our asset has been the quality of our products Our products are manufactured from the choicest wheat grown in the Plains of the Panjab, the Land of the Five Rivers **The Flour is not Chemically or Electrically bleached as some of the Mills are doing as this kills the vitamin, the source of Nourishment** and therefore all the Medical Authorities in Europe & America are agitating strongly against the bleached flour, say they find it injurious to health

For prices and other particulars write to Agents—

Messrs. Kerwar & Co,

Mangalore Madras. Tuticorin, Calicut, & Cochin.

Wanted.

For the Sun Rise Banking Company Limited Bangalore in the Districts of South Kanara Malabar and Coorg, three Superintendents of Branches and fifteen Taluk Branch Managers on a Monthly Salary of Rs 60-20-300 and Rs 35—10—150 plus Rs 30 and 22-8-0 respectively as Office and Conveyance Allowance Also 75 Village Agents on a salary of Rs 20—3—30 Only influential business men who can hold Savings Bank Deposit Certificate of this Company of Rs 500 Rs 150 and Rs 12 8-0 respectively need only apply personally or with six annas postage stamps to the Secretary now camping at the office of the Chairman

The Secretary,
The Sun Rise Banking Co Ltd
'Arcot House 5th Main Road Malleswaram,
Bangalore City

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಿಯಾಯಿತಿ ದರವಿದೆ
ಕೂಡಲೇ ಇತರ ಮಾಹಿತಿಗೂ ಈ ವಿಳಾಸಕ್ಕೆ ಬರೆಯಿರಿ.
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

PRINTED & PUBLISHED BY V. S. KUDVA AT THE SHARADA PRESS, MANGALORE.

ವಾರ್ಷಿಕ ವರ್ಗಣಿ ಕೂಡಾಯ 2-0-0 ಪತ್ರಿಕೆಯ ನಂ. [illegible] ಪತ್ರಿಕೆ ಪ್ರತಿಯು ಹಾಸಲು ನೇರ ರೂಪಾಯ 2-18-0.

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರಕ್ಷೈರ್ಮಹಾಹ್ಯೆಸ್ತುತೆರ್ಮನ ದೇವಾ । ನ ಭೇಜಿರೇ ಭೀಮವಿಷೇಣಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಂ । ಹರುಷವಾಯಿತೆ! ಮತ್ತೆ ವಿಶ್ವನ ಸುಖತ ಬರುತಿರುವ ॥
ಗರಲಕನರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೮ನೇ ಶುಕ್ರವಾರ ನವಂಬರ ೧೯೩೨ (18-11-'32.) ಸಂಚಿಕೆ ೪೬

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು:—ಉಡುಪಿ. ಶಾಖೆ-ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Subscribed & Called up Rs. 2,25,000-

ನಿಯಮಿತ ಮೂಲಧನ ರೂ 3,50,000- ಜಂದಾ ಹಾಕಲಿಕ್ಕೆ ಅರ್ಪಿಸಿದ ನ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 30TH SEPTEMBER, 1932.

CAPITAL AND LIABILITIES.			PROPERTY AND ASSETS	
1 Paid up Capital	Rs. 2,25,000-0 0	1 Premises, Building, Furniture etc	Rs 66,070 11- 6	
2 Reserve and other funds	„ 2,22,705 0-0	2 Gover ment securities	„ 3,30,788 4 0	
3 Deposits	„ 20,65,828 15 5	3 Authorised Investments	„ 18,99,966 14 10	
Due to Bankers	„ 18,603-4-2	4 Bills for collection	5,173 11 0	
5 Sundries	„ 71,438- 5 2	5 Sundries	„ 75,048 2 3	
6 Bills for collection per contra	5,173 11 0	9 Cash in hand & with bankers.	„ 2,31701 8 2	
Total	26,08,749- 3-9	Total	26,08,749- 3-9	

UDIPI 10-10-'32

N. ANANDA RAO,
Secretary & Manager.

(Regd)

ಅಮೃತಾಂಜನ.

ಇದು ಕಟ್ಟು ಶಿರೋನೇದನೆ, ಕಪ್ಪಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಥಾಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು – ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬ 1ಕ್ಕೆ 6 ಆಣೆ ಡಜನಿಗೆ ರೂ 3-8-0 ಅಂಚೆಕೆಳ್ಳ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ನಿರಾಣಿ, ಪೂ ಕಾ ರೈ.

ಏಜೆಂಟರು— ಟಿ. ಕಂಪೆನಿ, ಪೂ ಕಾ ರೈ.

INSURE WITH
The Popular Insurance Co. Ltd.
Head Office - MANGALORE, S India
First of its kind in the West Coast.

CHAIRMAN
Dewan Bahadur N. Subba Rao.

STRIKING FEATURES

Policy Conditions Liberal!
Claims Settlement Prompt!

MANAGEMENT PURELY INDIAN.

Ensure the Absolute Safety, Comfort and Happiness of your Dear Ones

WANTED INFLUENTIAL AGENTS. LIBERAL TERMS TO COMPETENT MEN.

For further particulars apply to the Head Office.



ನಿಮ್ಮ ಮನೆಯಲ್ಲಿನ ಆರೋಗ್ಯಕ್ಕಾಗಿ ಈ ಅಸದೃಶವಾದ ಪಾನೀಯವನ್ನು ಸೇವಿಸಿರಿ:

ದೈಹಿಕ ಮತ್ತು ಮಾನಸಿಕ ಶಕ್ತಿಯುಂದಿರಲು ನಮ್ಮ ಸಾಮಾನ್ಯ ಮತ್ತು ನಿತ್ಯದ ಆಹಾರಗಳು ಪೌಷ್ಟಿಕವಲ್ಲ ಪರಿಪೋಷಿಸುವುದಿಲ್ಲವೆಂದು ನಿಮಗೆ ಗೊತ್ತಿರಲಿಲ್ಲವೇ? ಅಲ್ಲದೆ ನಮ್ಮ ಸಾಮಾನ್ಯ ಉಪಟಳುಹಾರಗಳಿಂದಲೂ, ನಮಗೆ ಸರಿಯಾದ ಪೋಷಣೆಯು ಸಿಗುವುದಿಲ್ಲ.

ಸ್ತ್ರೀಧರ್ಮವು ಬಾಲಂಬಾದಿಗಳ ಸದಾರೋಗ್ಯವು ಹೆಚ್ಚಾಗಿ ಅದರ ಸರಿಯಾದ ಮತ್ತು ಪರಿಮಾಣಕ್ಕೆ ತಕ್ಕ ಪೋಷಣೆಯ ಮೇಲೆ ಹೊಂದಿಕೊಂಡಿರುತ್ತದೆ. ನಮ್ಮ ಪೂರ್ವಾಗುವು ನಮ್ಮ ಶಕ್ತಿ ಮತ್ತು ಚೈತನ್ಯದ ಮೇಲೆ ವಿಶೇಷ ಪರಿಣಾಮಕಾರಿಯಾಗಿರುವಾಗ, ನಾವು ವಿಶಂಕ್ಷಣ ಹೊರಗೂ ಒಳಗೂ ಆರೋಗ್ಯದಿಂದಿರಬೇಕಾದರೆ, ದೇಹ ಮೆದುಳು, ಮತ್ತು ಸ್ನಾಯುಗಳು ಸರಿಯಾದ ಪೋಷಣೆಯಲ್ಲಿ ರಬೇಕು

ಆದುದರಿಂದ ನಿಮ್ಮ ಅನುನಿತ್ಯದ ಸಾಧಾರಣವಾದ ಆಹಾರದೊಡನೆ 'ಓವಲ್ ಟಿನ್' ನನ್ನು ಸೇವಿಸಿರಿ ಇದು ನಿಸರ್ಗಸಿದ್ಧವಾದ ಆಹಾರ ಅಲ್ಲದೆ ಸಂಪೂರ್ಣವಾದ ಆಹಾರವೂ ಆಗಿರುತ್ತದೆ ಇದು ಸೃಷ್ಟವಾದ ಮತ್ತು ಅತೀ ಶುದ್ಧವಾದ ಆಹಾರ ದನ್ನು ಧಾರಾಳವಾಗಿ ಒದಗಿಸಿಕೊಡುತ್ತದೆ ಅಸಮಾನವೂ ಅತ್ಯುತ್ಕೃಷ್ಟವೂ ಆಗಿರುವ ಈ ಪಾನೀಯವನ್ನು ಕ್ರಮಪ್ರಕಾರ ಸೇವಿಸುತ್ತಾ ಬಂದರೆ, ನಿಮ್ಮ ನಿತ್ಯ ಕುಟುಂಬವೂ ದೃಢಕಾಯರಾಗಿ ಆರೋಗ್ಯದಿಂದಿರುವಿರಿ ಸರಿಯಾದ ಶರೀರವರ್ಧನೆಯಲ್ಲಿ ಪರಿಪೂರ್ಣತೆಗೆ ಬರಲು ಇದನ್ನು ಸೇವಿಸಿರಿ

ಅತೀ ಉತ್ಕೃಷ್ಟವಾದ 'ಓವಲ್ ಟಿನ್' ಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ ಅನ ಕರಣೀಯವಾದ ಏಕೈ ಮಿಶ್ರಣವಾದ ಮತ್ತು ಸಂಸಕ್ತ ತೂಕದಿಂದಿರುವ ಆಹಾರಗಳನ್ನು ತಿರಸ್ಕರಿಸಿರಿ

OVALTINE

TONIC FOOD BEVERAGE

ಅತೀ ಶುದ್ಧವಾದುದು ಅತ್ಯುತ್ಕೃಷ್ಟವು—ಕೈಕೊಂಡಿರುವಂತಹದ್ದು

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರ್ಸ್‌ಗಳಲ್ಲಿಯೂ ದೊರೆಯುತ್ತದೆ

ವಿತರಿಸುವರು ಜೇಮ್ಸ್ ರೈಟ್ & ಕಂ. ಲಿಮಿಟೆಡ್ ಸ್ಟ್ರೀಟ್ ಕಲ್ಕತ್ತಾ

ಮತ್ತು ಮುಂಬಾಯಿ ಮದ್ರಾಸ್, ರಂಗೂನುಗಳಲ್ಲಿ

"ಓವಲ್ ಟಿನ್ ರಸ್ಕ್"ಗಳನ್ನೂ ನಿಮ್ಮ "ಓವಲ್ ಟಿನ್"ನೊಡನೆ ತಿನ್ನಿರಿ ಪಸ್ಯಾಟುಗಳಂತಲ್ಲ ಅದು ನಿಮಗೆ ಒಳ್ಳೆಯದು ಬಹಳ ಪರಿಮಳಯುಕ್ತ ಮತ್ತು ಮಲಭರಿತ ಜೀರ್ಣವಾಗುತ್ತದೆ ಸಂಪೂರ್ಣತೆಯುಳ್ಳದ್ದು ಹಲ್ಲುಗಳಿಗೂ "ಓವಲ್‌ಟಿನ್" ರಸ್ಕ್ ಒಳ್ಳೆಯದು ಅದು ಹಲ್ಲುಗಳನ್ನು ಹಾಳಾಗದಂತಿರಿಸಲು ಸಹಾಯಕವಾಗುತ್ತದೆ.

OV/91

(ಚಿತ್ರಕ್ಕೆ ತಕ್ಕ ಹಾಡು: ಸಂಗೀತ)

ಎಷ್ಟು ಸೊಗಸು ಈ ಸಿನಿಮಾ! ಆಗಾಗ್ಗೆ ನಗಿಸ್ತಾ
ಬಿಗಿಯಾಗಿಸಿ, ಎಳ್ಳಷ್ಟೂ ಗಾಬರಿ ಹುಟಿಸದೆ! ಓ ಸಿನಿಮಾ!
ಎಷ್ಟು ಹೊಗಳಿ ಗಾಯಕಿಯರ್ನ ಹಾಡಿಸಿದೆ! ಓ ಸಿನಿಮಾ ಹಾಡುಗಾರಿಕೆ!
ಗಾಂಧಿಯವ್ರ!
ಅಂದಿನೆಷ್ಟೊಂದು ಕೊಲೆಯ ಕತೆಯಿದು! ಕಾಂತಿಯ ಬೇಟೆಯಲ್ಲಿ
ಬಹಳಷ್ಟು ಕೊಲೆ ಮಾಡಿದ ಗಾಂಧಿಯೇ! ಓ
ಭಾರತಕ್ಕಷ್ಟೊಂದು ಹಿತವಿರೆ ನಿಮ್ಮನು ! ಎಷ್ಟೆಷ್ಟು ಪ್ರಶಂಸಿಸಲಿ!! ಓ
ಓ ಗಾಂಧಿಯೇ! ಓ ಗಾಂ

+ + + +

ರೌಂಡ್‌ಟೇಬಲ್ ಆರಂಭವಾಗುವ ಮೊದಲು ಜೋರರು ಈ ಗಾಸಿಪ್ಪನ್ನು ಹಬ್ಬಿಸ್ತಾರೆ. 'ಹಾ ಎಷ್ಟು ಕಮಾರ ಗಾನ! ಪಸ್ಸ್ ಮೋರ್! ಪಸ್ಸ್‌ನೋರ್! ಪೋರ್ ಪಸ್ಸ್‌ಮೋರ್! ಪಸ್ಸ್‌ಮೋರ್!

× × × ×

ತಬರ್ ಬಾಂಬಾಯ ಪಿ. ಮೆಳ್‌ಜೊಹಾಲ್ಡರಿಗೆ ಕಾಲ್ಹೋಪ್ತಾನಿಡಿಯಂತೆ. ಅವರ ಸ್ಟ್ರಾತಪಸ್ಸು ಇಷ್ಟುದರ ತನಕ ಯಾರೂ ನಡಸಿಸ್ಸುವುದಿಲ್ಲ ಕಾಣುತ್ತಿದ್ದಾರೆ. ಸರ್ರ್. ಜೋರರ ಗಾನ ಒಳ್ಳೆಯದಾಗುತ್ತ್ತು. ಅವರೆ ತಬಧಿ ಇರಲಿಲ್ಲ. ನೋ ಮೋರ್!

+ + × ×

ಫ್ರೆಂಚ್‌ರ್ ಪಂಗಡದವರು ಜೋರರ ಗಾನವನ್ನು ಕೇಳಿ ಮತ್ತ ರಾಗಿದ್ದಾರೆ ಅನಂದಪರವಶರಾಗಿದ್ದಾರೆ. ' ಕಾಯದಿಭಂಗವನ್ನು ಛಿಡುವುದಿಲ್ಲವಾದರೆ ಗಾಂಧಿಯನ್ನು ಬಿಡುವುದಿಲ್ಲ"ವೆಂದು ಸರ್. ಜೋರರು ಹೇಳಿದ್ದು ಸರೀ!! ಎಂದು ಅವರು ಲವಿಲ್ಲಾಡಿಸುತ್ತಿರುವರು!

+ × + ×

ನಾಟಿಳವು ನಾಳೆ ಪ್ಯಾರಂಭ! ಸಮ್ಮೇಳನಕಾರರಿಗೂ ಕೇಳ್ಕರ್ ಪ್ರತಿನಿಧಿಸ್ತ್ರೀಯರಿಗೂ ಟಿಕೇಟ್ ದೊರೆತಿದೆಯಂತೆ ಈ ವರ್ತಮಾನವೂ ದೊರೆತಿದೆಯಂತೆ ಹಿಂದೆ ಬರಲು ಸ್ಟೀಮರ್ ಚಾರ್ಜ್ ಇದರ ಜೇರಿ ನೆತ್ತಿಳಗಿರಬಹುದೆಂಬು ನಿಸ್ಸ ಊಹೆ.

× × × ×

ಶೌಕಾಲಿಯವರು ಈ ಸಲ ಔಟ್ ಆಫ್! ಅವರಿಗೆ ಟಿಕೆಟು ತೋರಿಸಲೇ ಇಲ್ಲ ಪಾಪ! ಅದರೂ ಅವರು ಒಂದಲ್ಲ ಮಾಡಿದ್ದಾರೆ! ಅವರನು ಗೊತ್ತಾಯಿತೆ? ಅಲ್ಲಹಾಬಾದಿನಲ್ಲಿ ಹಿಂದೂಮುಸಲ್ಮಾನ ಪರಿಷತ್ತು ನಡೆಯುತ್ತಿದ್ದರೂ ಅವರದನ್ನು ಛಿಟ್ಟು ಇಂಗ್ಲಾಂಡಿಗೆ ಓಡಿದ್ದಾರೆ ಇಂಗ್ಲಾಂಡಿನಿಂದ ಆಮೇಲಾಕ್ಕೆ ಹೋಗುತ್ತಾರಂತೆ.

× × × ×

ಕಾಮ ಇಲ್ಲದ ಕೇವರ ಆದೊಂದು ಅಭ್ಯಾಸ ಆಟ್! ಥಿಯೇಟರಿನ ಪಿಸ ಹೊರಗೆ ಕುಳಿತು ಗಾಯನ ಮತ್ತ ಕೇಳುವುದು ಈ ಸಲ ಶೌಕತ್ ಖಾಲಿಯವರೂ ಜಿನ್ನಾರೂ ಥಿಯೇಟರಿನ ದೀಪಿಯ ಹೊರಗೆ ಕುಳಿತು ಗಾನ ಕೇಳುವವರೆಂದು ಪಿಕೂರಿ ನಡೆದಿದ್ದಾರೆ! ಕಾಸು ಸೆಟ್ಟಿ ಅಲ್ಲಹಾಬಾದ್ ಗಿರಿಕ್ಕೆ ನೀರು ಹಾಕಿದ ಅದನ್ನು ಛಿಸಿಲಲ್ಲಿ ಹಾಕಿ ಶೌಕತ್‌ಅಲಿಯವರು ಓಡಿದ್ದು ಇದಕ್ಕಾಗಿಯೇ! ತಿಳಿಯತೇ?

× × × ×

ರೌಂಡ್‌ಟೇಬಲ್ ಮಂದಿರದಲ್ಲಿ ಪರದೆಯು ಪ್ರಥಮದ್ದಾಗಿ ಮೇಲಕ್ಕೆಳ್ಳುವಾಗ ಶೌಕತ್‌ಅಲಿಯವರು ಇದ್ದರೆ ಪ್ರಯೋಜನ ವುಂಟೆಂದು ಅವರ ಮಿತ್ರರು ಅನೇಕರ ಭಾವಪೆಯಾಗಿದಬಹುದು. ಒಬ್ಬನ ತಿಕೆಟ್ ತೋರಿಸಿ ಮಂದಿರಕ್ಕೆ ಇಬ್ಬರು ಹೋಗಬಹುದೆಂಬಾ ತೆಳಾಸೆಯೇನೆ!

+ + + +

ಟೋರಿ ಹಾಮೋನಿಯಂಗಾರರು ಚರ್ಚಿಲ್‌ರಿಂದ ಕರಬೇತಿ ಹೊಂದಿದವರಂತೆ! ವಿಲ್ಲಿಯರ್ಸ್ ದೊರೆಯವರೂ ಇವರಿಗೆ ಬಾಕಿ ಜೇಕ ಹುಕಾರ್ ಮಾಡಿದ್ದಾರಂತೆ! ಈಗ ಕನ್ಸ ಬಾಕವನ್ನು ಕಲಿಸಲು ಕಲ್ಕತ್ತದ 'ಸ್ಟೇಟ್ಸ್‌ಮನ್' ಪತ್ರಿಕೆಯ ಸಂಪಾದಕರವರ ಪೋಟ್ಟನರು ಲಂಡನ್ನಿಗೆ ಹೋಗುವರಂತೆ!

+ + + +

ಈ ರೌಂಡ್‌ಟೇಬಲ್ ನಾಟಕವು ಸಮ್ಮೇಳಯಕರಿಗೆ ತಿನ್ನಾಗಿ ರುಚಿಯಾದೀತು! ಎನ್. ಸಿ. ಕೇಳ್ಕರರಿಗೆ ಮಾತ್ರ ಕಹಿಯಾಗಬಹುದು. ಕಳ್ಳಾದ ಕಡಲೆಯನ್ನು ಬಾಯಲ್ಲಿ ಹಾಕಿದಂತಾದೀತು! ಕೇಳ್ಕರರೇ ಅನಿಸು ಬಿಡಿ! ಜಗಗೆ ಬಹಳ ಬೈಕೆಯಿಮು.

× × × ×

ಲೇಬರ್ ಪಾರ್ಟಿಯವರು ತಾವು ರೌಂಡ್‌ಟೇಬಲಿಗೆ ಲರುವುದಿಲ್ಲವೆಂದು ಖಂಡಿತ ಹೇಳ್ತಾರೆ ಈ ಟೇಬಲ್ ನಾಟಕವೆಯಿಂದು ಪಿಕ್ಷಿಯರ್ ಚರ್ಚಿಲ್‌ರ ಅಂಗಿ, ಗಡಿಯಿಂ ತಿಕ್ಕಿದ ಹಚ್ಚೆಯ ತಾವು ಇಷ್ಟು ಸ್ಪಷ್ಟವೆಂತಿ! ಅಗಲ! ಬ್ಯಾಚಾರಪ್ಪರೇ!

× × × ×

ಮಂತ್ರಿಯವರ್ಗ, ಜೋರರು, ಜೋರಾಗಳು, ಸೇವಕರಿಲ್ಲ್ಲ ಇದ ರೆಲ್ಲ ಈ ಸಲ ಇಂಡಿಯ ಪರಿಷತ್ತಿಗೆ ಪ್ರತ್ಯೇಕವಾಗಿ ಮಾಡುವುದಿಲ್ಲ ಪಾಪ! ಇವರಿಗೆ ಇಲ್ಲಗಳೆಲ್ಲಾ ಬಹಳ ಬೈಕೆಯಿಲ್ಲ ಎಂಬು ಜೋರರ ಮಾತ!

+ × × ×

ಮೋರರ್! ನಾವು ಹೊಸ್ ಆರ್ಡಿನರಿ ಒಟ್ಟು ಪ್ರತಿಯನ್ನು ನವರಿ ಕಳಿಸಿಕೊಡುವುದಿಲ್ಲ! ಮಿಸ್ಟರ್ 'ಸ್ಟಾಳ್ ಇಂಡಿಯ ಬಿಲ್ಲಿಗೆ ಕೊಡಿ ಬಿಡಿಲ್ಲ. ಕೋಳ್ಕರ್ ಮಾಡಿ ಬಾಯಿಬಿಡಿ. ನಾವು ಇಂಡಿಯದನ್ನು ಕಾಯಿದೆ ಪ್ರತಿಯಲ್ಲಿ ಇಲ್ಲದೆ ಬೇರೆಯವರಿಗೆ ಕೊಡುವುದಿಲ್ಲ! ಗರ್ಜಕ.

ಕನ್ನಡ

ಮಂಗಳೂರು ಶ್ರೀ. ಗೋಕರ್ಣನಾಥ ಕ್ಷೇತ್ರದ ಪರವಾಗಿ ಸ್ಥಾಪಿಸಿದ ಬಾರ್ಕೂರು ಭಲ್ಲವರ ಚಾರಿಟಿ ಫಂಡು.

— ಮುಂಬಾಯಿ —

ಪ್ರತಿವಾದಿಯಿಂದ ವಾದಿಗೆ ಬರಾ ನೋಟೀನ ಅನ್ವ ಬಡ್ಡಿ ಏವದು ರೂಪಾಯಿ 157—12—0ರ ವಸೂಲಿ ಬಗ್ಗೆ ಕೂಡಾ ದಾಕ್ಲು ಮಾಡಿದ ಮೇಲಿನ ದಾವೆಯು ತಾ, 8—12—32ಕ್ಕೆ ಇಟ್ಟಿರುವುದರಿಂದ, ಆ ದಿವನ ಪ್ರತಿವಾದಿಯು ಕೋರ್ಟು ಮುಂದೆ ಹಾಜರಾಗಿ ಉದಪರಿಸದಿದ್ದರೆ ನಪ್ರಿ ದಾವೆಯು ಏಕಪಕ್ಷೀಯವಾಗಿ ವಿಚಾರಣೆಯಾಗಿ ಏಕಪಕ್ಷೀಯವಾಗಿ ತೀರ್ಪಾಗುವುದೆಂಬ ಈ ಮೂಲಕ ತಿಳಿಸೋಣವಾಗಿಯದೆ

Puttur, 29—11—32. — S. Narsapaya, *Vakil for Plaintiff*

Seaforth Gun Powder Tea Dust
or High Forest No. 1 Tea Dust.

ಸೀಫೋರ್ತ್ ಗನ್ ಪೌಡರ್ ಟೀ ಡಸ್ಟ್ ಅಥವಾ

ಹೈ ಫೋರೆಸ್ಟ್ ನಂಬ್ರ 1 ಟೀ ಡಸ್ಟ್

ಶುದ್ಧ ಚಹವನ್ನೇ ಸೇವಿಸಿರಿ! ಶುದ್ಧ ಚಹವನ್ನೇ ಸೇವಿಸಿರಿ!

ನಾವು (The Estates & Agency Co, Ltd,) ದಿ ಎಸ್ಟೇಟ್ಸ್ ಎಂಡ್ ಏಜನ್ಸಿ ಕಂಪೆನಿ, ಲಿಮಿಟೆಡ್‌ನ ಮ್ಯಾನೆಜಿಕರು ತಿಳಿಯಪಡಿಸುವುದೇನೆಂದರೆ—ಈ ಮೇಲಿನ ಚಹವನ್ನು ನಾವು ದಿಳಿಯಸಿ, ತಯಾರಿಸಿ ಪೇಕ್ ಮಾಡಿ ವಿಕ್ರಯಕ್ಕೆಡುತ್ತೇವೆ ಇದು ಯಾವ ತರದ ಮಿಶ್ರಣದಿಂದಲೂ ಕೂಡಿದ್ದಾಗಿರುವುದಿಲ್ಲ ನೆಂದೂ, ಅತೀ ಶುದ್ಧವಾದುದೆಂದೂ ಗೇರೆಂಟಿ ಕೊಡುತ್ತೇವೆ ಈ ಚಹಾವು ಶೇಕಡಾ ನೂರರಷ್ಟು ಶುದ್ಧವೆ ಆಗಿದ್ದು, ರುಚಿಕರವೂ, ಪರಿಮಳಭರಿತವೂ ಆಗಿರುತ್ತದೆ

" ನಾವು ಸೀ ಫೋರ್ತ್ ಗನ್ ಪೌಡರ್ ಟೀ ಡಸ್ಟ್ ಮತ್ತು ಹೈ ಫೋರೆಸ್ಟ್ ನಂಬ್ರ 1 ಟೀ ಡಸ್ಟ್ ಚಹಾಗಳೆರಡನ್ನೂ 2½ ಪೌಂಡ್‌ಗಳ ಟಿನ್ನು ಮತ್ತು 1 ಪೌಂಡ್ ಸೀಸದ ಕಟ್ಟುಗಳಲ್ಲಿ ಪೇಕ್ ಮಾಡುತ್ತೇವೆ ಇವುಗಳ ಪ್ರಾಶಕ್ತಿಯೂ ಬೆಲೆಯೂ ಸಂಪೂರ್ಣ ವಿಶ್ವಾಸನೀಯವಿದೆ

ನಿಮ್ಮ ಲೇಬಲ್‌ಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿರಿ

ಈ ಕೆಳಗಿನ ನಮ್ಮ ಸೋಲ್ ಏಜಂಟರುಗಳಲ್ಲಿ ರುಜು ಸ್ಟೋಕ್ ಇದೆ—

ಮೆಸ್ಸರ್ಸ್ ಕರವಾರ್ ಎಂಡ್ ಕೋ

ಬಂದರ ರಸ್ತೆ, ಮಂಗಳೂರು

ಶಾಲೆಗಳ ಮಂದಿರಕ್ಕೆ ಗ್ಯಾರಂಟಿಯನ್ನು ತೆಗೆದು ಕೊಳ್ಳುವುದು ಹೇಗೆ?

(ನಿನ್ನೆ ಮುಗಿದ ಲೇಖನದಿಂದ)

ಮೈಸೂರು ರಾಜಧಾನಿಯಲ್ಲಿ ಕೆಲವರು ಬಸ್ಸುಗಳನ್ನು ಇಟ್ಟುಕೊಂಡು ದೊಡ್ಡಗು, ಹಾಸನ, ಚಾಮರಾಜನಗರ ಟಿ ನರಸೀಪುರ, ಮೊದಲಾದ ಸುತ್ತ ಮುತ್ತಲೂ ಇರತಕ್ಕ ಪ್ರದೇಶಗಳಿಗೆ ಬಸ್ಸುಗಳನ್ನು ಓಡಿಸುತ್ತಾರೆ. ಈ ಬಸ್ಸುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವ ಅಧಿಕಾರವು ಪೋಲೀಸು ಇನ್‌ಸ್ಪೆಕ್ಟರ್ ಜನರಲ್‌ರಾದ ಮಿ|| F. A Hamiltonರವರಿಗೆ ಇಟ್ಟಿರುವುದು ಬಸ್ಸಿನ ಯಜಮಾನರು ರಿಜಿಸ್ಟ್ರೇಷನ್ ಸರ್ಟಿಫಿಕೇಟಿನ್ನು ಪಡದಿರತಕ್ಕ ವಿಷಯದಲ್ಲಿ ಉದಾಸೀನ ರಾಗಿರುವರೆಂಬುದಾಗಿಯೂ, ಬಸ್ಸುಗಳ ಸ್ವಾಧೀನತೆಯು ಇತರರಿಗೆ ವಹಿಸಲ್ಪಡತಕ್ಕ ಕಾಲದಲ್ಲಿ ಈ ಔದಾಸೀನ್ಯದಿಂದ ಗಲಾಟೆಗಳು ಒದುವುವೆಂಬುದಾಗಿಯೂ, ಮೊದಲೇ ಮಾಲೀಕರು ಎರಡನೇ ಮಾಲೀಕರಿಗೆ ವರ್ಗವನ್ನು ಮಾಡುವಾಗ ಮೊದಲನೇ ಸರ್ಟಿಫಿಕೇಟು ಹಾಜರಾಡ್ಡದೆದೆ ಇದ್ದರೆ ಒಂದು ನೂರು ರೂಪಾಯಿಯ ವರೆಗೂ ಜುಲ್ಮಾನೆ ರೆಗ್ಯುಲೇಷನಿನಲ್ಲಿ ವಿಧಿಸಲ್ಪಟ್ಟಿರುವ ದೆಂಬುದಂಗಿಯೂ, ಇಂತಹ ಅಪರಾಧವನ್ನು ಒಂದಾವರ್ತಿ ಮಾಡಿದವರಿಗೆ ಎರಡನೇ ಅವರ್ತಿ ಅಪರಾಧ ಮಾಡಿದರೆ ಅವರ್ಗ ೫೦೦ ರೂಪಾಯಿ ಜುಲ್ಮಾನೆಯ ವರೆಗೂ ಕೊಡುವ ಸಂಧ್ಯೆ ಬರುವುದೆಂಬುದಾಗಿಯೂ ಪರ್ಮಿಲೋಜಿನ ಮೈಸೂರು Motor Vehicle ರೂಲುಗಳ ಪೈಕಿ ಇನೇ ರೂಲನ್ನು ಮೋಟರ್ ಬಸ್ಸುಗಳ ರೆಗ್ಯುಲೇಷನಿನಲ್ಲಿ ಜುಲ್ಮಾನೆಗಳಿಗೆ ಸಂಬಂಧಪಟ್ಟ ಇನೇ ಸೆಕ್ಷನ್ನನ್ನು ಅಕ್ಟೋಬರ್ ೩೦ನೇ ತಾರೀಕಿನ Daily Postನಲ್ಲಿ ಪ್ರಿಸಿ ಮಂತೆ ಮಾಡಿರುತ್ತಾರೆ ಬಸ್ಸಿನ ಯಜಮಾನರಿಗೆ ದುಬಾರಿ ಕಂದಾಯಗಳನ್ನು ಹಾಕಿ ಅವರಿಗೆ ತುಂಬಾ ನಷ್ಟವಾಗುವಂತೆ ಮಾಡಲು ಟೈರುವುದೆಂಬುದಾಗಿಯೂ ಕಳೆದ

(ಇನೇ ಪುಟವನ್ನು ನೋಡಿರಿ)

The Canara Industrial & Banking Syndicate Limited.

Established in 1925. Branches Mangalore, Payyanur, Brahmavar, Kumta, Karwar & Hubli **Head Office — UDipI**

Authorised Capital Rs 1 00 000 Subscribed Capital Rs 1 00 000 Paid up Capital Rs 20 000

STATEMENT OF AFFA RS AS ON 31ST OCTOBER 1932

CAPITAL AND LIABILITIES			ASSETS		
Paid up Capital	Rs	20 000 0—0	Loans on Land mortgage	R	1 41 464 14 2
Reserve and other Funds		10 032 - 3—5	Valuable Securities		2 01 726—5 8
Deposits		7 73 405—5 - 6	Bills of Exchange hundis and Promissory Notes		3 11 740 - 7—10
Due to Bankers		375 0 0	Investment on Shares of other Companies		43 565—0 0
Sundries		67 504—3—5	On Deposits withother Bankers		80 000 0 0
			Sundries		54 039 12 8
			Cash in hand and with Bankers		38 830 - 4—0
	Total Rs	8,71,366-12 4		Total Rs	8 7 366-12 4

Interest allowed on current account at 3 per cent Savings Bank at 4 per cent Short term Deposits for 4 months at 5 per cent Seven months at 5½ per cent 10 months at 6 per cent 13 months at 6½ per cent Long term for 19 months and over 6½ per cent

Long and Short term Loans on attractive Schemes are granted

ALL KINDS OF BANKING BUSINESS UNDERTAKEN

Udipi, 9—11—1932

P A Pai Bros,
Managing Agents

Zenith Life Assurance Company Ltd.,

1932 IS OUR BONUS YEAR.

Rs. 500 *or more per month you can earn by representing us. Test your ability and apply for Agency terms to -*

Messrs: KERWAR & COMPANY,
BRANCH MANAGERS FOR SOUTH INDIA,
Mangalore.

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage.

FOR

4. Only 20 per cent extra Money

A TIRE UN-IMITATED & EXCLUSIVE.

Dealers Earn Profits. *Users Save Money.*

The Canara Public Conveyance Co., Ltd.

MANGALORE.

ಸ್ವದೇಶ ವಾರ್ತೆಗಳು.

ಪಾಠಕ್ಕೆ ಶಾಶ್ವತಾನುಕೂಲ.

ಶ್ರೀ। ರಾಜಗೋಪಾಲಾಚಾರ್ಯರು ಅಲ್ಪಕಾಲದಿನಿಂದ ಬಹಿರಂಗವಾಗಿ, ಕಿರಿ ಯರಲ್ಲಿ ಮಹಾತ್ಮರನ್ನು ಸಂದರ್ಶಿಸಿ, ಸುಮಾರು ತಿಂಗಳ ವರೆಗೆ ಅವರ ಉಪವಾಸ ವ್ರತದ ಧೋರಣೆ ಮೊದಲಾದುವನ್ನು ತಿಳಿದುಕೊಂಡಿರುವರು. ಬರುವ ಜನವರಿ ೨೬ ನೇ ತಾರೀಖಿಯವರೆಗೂ ಈ ವ್ರತವನ್ನು ಅವರು ಪ್ರಾರಂಭಿಸಿದ್ದೇ ಕೃತಕೃತ್ಯರಾಗುವ ಕಾರಣ, ಹಾಗೆ ಮಾಡಬಾರದಾಗಿ ಸೂಚನೆಯನ್ನು ಹೇಳಿದರೂ ಅವರು ಒಪ್ಪುವಂತಿಲ್ಲ. ಗುರು ವಯ್ಯರಿಗೂ ದೇವಸ್ಥಾನವನ್ನು ಅಸ್ಪೃಶ್ಯರು ನಿರಾತಂಕವಾಗಿ ಪ್ರವೇಶಿಸಬೇಕೆನ್ನುವ ವಿಚಾರದಲ್ಲಿ ಈ ವ್ರತವನ್ನು ಅಂಗೀಕರಿಸಲು ನಿರ್ಧಾರವಾಗಿದೆ. ಇತರ ಯಾವ ದೇವಸ್ಥಾನಗಳ ವಿಷಯವಾಗಿ ಅಸ್ಪೃಶ್ಯತೆಯ ಮಾತು ಹೀಗಿದ್ದರೂ ಹೀಗಿದ್ದರೂ ಅವರು ಗಣ್ಯಮಾಡುವುದಿಲ್ಲ. ಆದರೂ, ಮದ್ರಾಸಾಧಿಪತ್ಯದಲ್ಲಿ ಇತರ ಶಾಖಾಮುಖ್ಯ ದೇವಾಲಯಗಳು ಅಸ್ಪೃಶ್ಯರನ್ನು ಆತಂಕಪಡಿಸಿದಿರುವಲ್ಲಿ ಗುರುವಯ್ಯೂರಿನ ಮೇಲೆ ಹೆಚ್ಚಿನ ಜವಾಬ್ದಾರಿಯು ಬೀಳುವುದಾಗಿ ತಿಳಿಯಬೇಕಾಗಿದೆ. ಏಕೆಂದರೆ, ಶ್ರೀ। ಕೇಳಪ್ಪನವರು ಉಪವಾಸವನ್ನಾರಂಭಿಸುವ ವರೆಗೆ ಮಹಾತ್ಮರು ಉಪವಾಸವನ್ನು ಕೈಗೊಳ್ಳುವ ಹಾಗಿಲ್ಲ. ಆದುದರಿಂದ ಇವರೇ ಉಪವಾಸ ಹಿಡಿಯದಂತೆ ಮಾಡುವುದೇ ಸದ್ಯದಲ್ಲಿ ಎಲ್ಲರ ಕರ್ತವ್ಯ ಎಂದು ಆರ್ಯರ್ ಹೇಳಿಕೆ. ಮಹಾತ್ಮರು ಈಗ ಉಪವಾಸ ಕೈಕೊಂಡರೆ ೪ ದಿನಗಳಲ್ಲೇ ಬಾಧಿತರಾಗಿ, ಹತ್ತು ದಿನಗಳಲ್ಲಿ ಬಲು ಬಲಹೀನರಾಗಿ ದೈವ್ಯವಶೆಯಿಂದ ತಾನೆ ಬದುಕುವ ಕಾಗ್ಗಾದೀತೆಂದೂ ಎಚ್ಚರ ಹೇಳಬೇಕಾಗಿದೆ. ಇಂತಹ ಕಠಿಣ ಪ್ರಶ್ನೆಯೊಂದು ಬೇಗ ಮುಗಿದರಾಗುತಿತ್ತು.

ಮದ್ರಾಸು ಪೋಲೀಸರನ್ನು ಕುರಿತು

ಗವರ್ನರ ಸಾಹೇಬರು ಅವರಲ್ಲಿ ಕೆಲವರಿಗೆ ಬಿರುದು ಬಿಲ್ಲೆಗಳನ್ನು ಹೊಡುವ ಸಮಾರಂಭದಲ್ಲಿ ಬಹಳವಾಗಿ ಶ್ಲಾಘಿಸಿರುವರು: ಯಥಾರ್ಥವಾಗಿಯೂ ಕೆಲ ವರ್ಷಗಳಿಂದ ಪೋಲೀಸರಿಗೆ ಕಾಲವು ಕಠಿಣವೇ ಆಗಿದೆ. ಜಗತ್ತಿನ ಪ್ರತಿಯೊಂದು ರಾಜ್ಯದಲ್ಲೂ ಹೀಗೆಯೆ ಇತ್ತೀಚೆಗೆ ಪೋಲೀಸರ ಸ್ಥಿತಿ. ಪೋಲೀಸರು ಎಲ್ಲೆಯಾದರೂ ಬಂದೋಬಸ್ತಿಗೆ ಹೊಂಟರೆಂದ ಕೂಡಲೆ, ಪೋಲೀಸರು ಅನ್ಯಾಯಮಾಡುತ್ತಾರೆಂದೇ ಕೂಗುವ ಕೆಲವ ರಿದ್ದಾರೆ; ಹಾಗೆಂದು, ಇಂಥ ಜನರು ಅನ್ಯಾಯಗಾರರನ್ನೇನೂ ಸಹಾನುಭೂತಿಯಿಂದ ಕಾಣುವುದಿಲ್ಲ ಎಂಬುದೂ ನಿಜವೇ. ಆದರೂ ತಪ್ಪಿತಸ್ಥನ ಮೇಲೆ ಅನಗತ್ಯವಾದ ಬಲಪ್ರದರ್ಶನ ನಡೆವುದಾಗಿ ಇವರು ಧಾವಿಸುತ್ತಾರೆ. ಹೀಗಾಗಿ, ಪೋಲೀಸರ ಮೇಲೆ ಬಂದ ಎಲ್ಲ ದೂರುಗಳನ್ನು ವಿಚಾರಿಸಿದಲ್ಲಿ, ಪ್ರತಿಯೊಂದೂ ಎಂಬಂತೆ ಸುಳ್ಳೆಂದು ವಿಚಾರಮಾಡಿದಲ್ಲಿ ತಿಳಿದು ಬಂದಿದೆ. ಹೀಗಿದ್ದರೂ ಪೋಲೀಸರು ದೃಢರಾಗಿ ಕರ್ತವ್ಯನಿಷ್ಠೆಯಿಂದ ಇದ್ದ ಕಾರಣ, ಸರಕಾರವು ಅವರಿಗೆ ಕೃತಜ್ಞವಾಗಿದೆ. ಸಾಲದೇ?

ಕ್ರಿಮಿನೆಲ್ಸ್ ಕಾನೂನನ್ನು

ಎಸೆಂಬ್ಲಿಯಲ್ಲಿ, ಸಿಲೆಕ್ಟ್ ಕಮಿಟ್ಟಿಯವರು ನಿರ್ಣಯಿಸಿದ ಮಟ್ಟಿಗೆ ಮಂಜೂರು ಮಾಡಿರುವರೆಂಬುದು ವಿಶೇಷ ಆನಿರೀಕ್ಷಿತ ವಾರ್ತೆಯಲ್ಲ. ಈಗಣ ಎಸೆಂಬ್ಲಿಯು ಇನ್ನೂನು ಮಾಡದೆ ಇರುತ್ತಿದ್ದರೆ ಅದೇ ಒಂದು ಕೌತುಕವೆನಿಸುತ್ತಿದ್ದಿತು. ಜನಾಂಗದ ಪ್ರತಿನಿಧಿಗಳು ಇದರಲ್ಲಿ ಎಷ್ಟರ ಸಂಖ್ಯೆಯಲ್ಲಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತಿದೆ. ಸರಕಾರದ ನ್ಯಾಯಶಾಸನ ಪದ್ಧತಿಯ ಪಕ್ಷಪಾತಿಗಳಾಗಿರುವ ಸರ್ ಜಿಂತಾಮಣಿ, ಸರ್ ಜಿಮಣಶಾಲರು ಸಹ ಈ ಕಾನೂನುಗಳು ಅನಗತ್ಯವೂ ಹಾನಿಕರವೂ ಎಂದರೂ, ಕಾನೂನೆಂತೂ ಮಂಜೂರಾಯಿತು. ಹೀಗೆ, ಎಲ್ಲರೂ ಬೇಡವೆಂದ ಕಾನೂನನ್ನು ಊರ್ಜಿತವಿರಿಸಲೇ ಬೇಕೆಂಬ ಹಟವು ಸರಕಾರಕ್ಕೆ ವಿಶಕ್ಕೆ? ಕೆಲವು ಸಂಶಯವಾದಿಗಳ ಅಭಿಪ್ರಾಯದಲ್ಲಿ,—ಮುಂದೆ ಕೊಡಲಾಗುವ ಸ್ವರಾಜ್ಯವೆಂಬುದು ಎಂಥದೆಂದು ಈಗಲೆ ಇಂಡಿಯಾ ಸರಕಾರಕ್ಕೆ ತಿಳಿದುಬಂದಿರುವ ಪ್ರಯುಕ್ತ, ಅಂತಹ ಹೋಮ್ ರೂಲ್ ಎಂಬುದರ ನಿರಸನ್ನು ಸಹ - ಅಸ್ಪೃಶ್ಯತೆಯಂತೆ ದೂರವಿಡುವ ಜನಾಂಗವನ್ನು ಮರ್ಥಿಸುವ ಹಂಬಲೆಯಂತೆ, ಇದು! ಅದೆಂತೂ ಇದ್ದರೂ ಇರಬಹುದು! ಸ್ಥಿರವೆಂದರೆ ಈಗಣ ರೌಂಡ್‌ಟೇಬಲ್ ಕೊಫ್ಟ ರೆನ್ಸಿನ ಲಿಖಿತವೇ ಈ ಎಸೆಂಬ್ಲಿಯನ್ನೆ ಜನತೆಯ ಪ್ರತಿನಿಧಿಗಳನ್ನಾಗಿ ಮಾಡಿರುವುದು. ಹೀಗೂ ಕಿರಿ ಕಾನೂನು ಪಾಠಕ್ಕಾದ ಶಾಲೆಗಳಲ್ಲಿಯೂ ಈ ಸೊಂಕು ಎಲ್ಲಿಂದ? ಇಲ್ಲಿ ಯಾವ ಕ್ರಾಂತಿಕಾರರೂ ಇಲ್ಲದಿರುವಾಗ?

* * * *

ಇಂತಹ ಉತ್ತರಗಳನ್ನು ಯಾವ ಶಾಲೆಯ ಪತ್ರಗಳಲ್ಲಿ ಕಂಡಿದ್ದಿರೋ, ಆ ಶಾಲೆಗಳಿಗೆ ಮಾತ್ರ ಈ ಸರ್ಕೀಲಾರು ಕಳುಹಿಸಿ ಕೊಟ್ಟಿದ್ದರೆ ಚೆನ್ನಾಗುತಿತ್ತು. ಎಲ್ಲರಿಗೂ ಎಂದೇ ರೀತಿ ಧಿವಿಸಿಯಲು ಬರೆದು, ಪ್ರತಿಯೊಬ್ಬರ ಮನಸ್ಸು ಹಂಬಲಗೊಳಿಸಿ ಹೈರೆಸ್ಪರಿಗೆ ಲಾಭವೇನು?

ಬಂಗಾಳದ ಮುಸಲ್ಮಾನರಲ್ಲಿ ಅಳ್ಪ

ಇದರಲ್ಲಿ ಗಾಂಧಿಯಿಂದ ಒಂದೂವರೆ ವರ್ಷಗಳ ತರುವಾಯ ಪ್ರತ್ಯೇಕವಾಗಿ ಮುಸ್ಲಿಮರಿಗೆ ಕ್ಷಾತಿಪಡಿದ್ದರೆ ಹಕ್ಕೊಂಬುದು ಇರಲಾರದೆಂದೂ, ಸರ್ವ ಸಾಮಾನ್ಯ ಪ್ರತಿನಿಧಿಗಳೆಂದೇ ಎಲ್ಲರನ್ನು ಚುನಾಯಿಸಬೇಕೆಂದೂ ಸೂತ್ರಗಳು ಇರುತ್ತಾ, ಬಂಗಾಳ ಕೌನ್ಸಿಲ್‌ನಲ್ಲಿ ಸಮಾಜ ಸ್ವಾರ್ಥ ಸಾಧಕರಾಗಿರುವ ಒಬ್ಬ ಮುಸ್ಲಿಮ್ ಮೆಂಬರರು, ಇದು ವರೆಗೆ ಇರುವಂತೆ ಮುಂದೆಯೂ ಪ್ರತ್ಯೇಕವಾಗಿಯೆ ಮುಸ್ಲಿಮರನ್ನು ಆರಿಸಬೇಕಾಗಿ ಒಂದು ಸೂಚನೆ ಮುಂದೆ ತಂದರು. ಕೂಡಲೆ ಸರಕಾರದ ಪರವಾಗಿ,— "ಸರಕಾರವು ಮುಸ್ಲಿಮ ಮುಖಂಡರೊಡನೆ ನೊದಲೇ ಅಭಿಪ್ರಾಯ ಪಡೆದು, ಇನ್ನು ಜನಸಂಖ್ಯೆಯ ದಾಮಾಶಯದಲ್ಲಿ ಮಾತ್ರ ಮುಸ್ಲಿಮರಿಗೆ ಸ್ಥಾನಗಳನ್ನು ಗೊತ್ತು ಪಡಿಸುವುದೆಂದೂ ಆದರೆ ಪ್ರತ್ಯೇಕ ಚುನಾವಣೆಯೇ ಇರಕೂಡದೆಂದೂ" ಉತ್ತರ ಬಂದುದು ನ್ಯಾಯವೇ ಆಗಿದೆ. ಸ್ಥಾನಗಳನ್ನು ಮುಸ್ಲಿಮರಿಗೆ ವಿಸಲಾಗಿರುವ ವಿಚಾರವಾದರೂ ಕೆಲವೇ ವರ್ಷಗಳ ಮಟ್ಟಿಗೆ ಹೊರತು ಕಾಯಂ ಅಲ್ಲವೆಂದೂ ತಿಳಿದುಬಂದಿದೆ. ಅಲ್ಲಾಹಾ ಬಾದಿನ ಕರಾರಿಗೆ ಗೌರವ ದೊರೆಯಿತು.

ಬೊಂಬಾಯಿ ಸರಕಾರವೂ

ಒಂದು ಹೊಸ ಬರ್ಡಿನೆನ್ಸ್ನು ಕಾನೂನಿನ ಮಸೂದೆಯನ್ನು ಕೌನ್ಸಿಲಿನಲ್ಲಿ ತಂದಿಟ್ಟಿದೆ. ಏದು ದಿನಗಳ ಚರ್ಚೆಯ ತರುವಾಯದಲ್ಲಿ, ಬಹುಮತದಿಂದ ಅದನ್ನು ಅಲೋಚನೆಗೆ ತಂದು ಕೊಳ್ಳಬೇಕಾಗಿ ನಿರ್ಧಾರವಾಯಿತು. ಈಗ ಒಂದು ವರ್ಷದ ಅವಧಿಗೆ ಮಾತ್ರ ಅದನ್ನು ಜಾರಿಗೆ ತಂದು, ಮುಂದೆ ಆಗತ್ಯ ಕಂಡರೆ ಎರಡು ವರ್ಷದ ಅವಧಿಗೆ ಅದನ್ನು ಗಜೇಟಿನಲ್ಲಿ ನೋಟೀಸು ಕೊಡುವುದರ ಮೂಲಕ ಜಾರಿಯಲ್ಲಿಡುವಂತೆ ಬೆಲ್ಲಾ ಮೆಜಿಸ್ಟ್ರೇಟರು ತಮ್ಮ ಬೆಲ್ಲಾ ಮೆಜಿಸ್ಟ್ರೇಟ್ ಅಧಿಕಾರವನ್ನು ಈ ಕಾನೂನಿನ ಮಟ್ಟಿಗೆ ಯಾವ ಇತರ ಕೆಳ ಆಫೀಸರ ನಿಗೂ ಕೊಡಬಹುದೆಂಬ ಕಲಮನ್ನು ರದ್ದುಪಡಿಸಲಾಗಿದೆ. ಈಗ ಬರ್ಡಿನೆನ್ಸು ಕಾನೂನಿನಂತೆ ಜೈಲು ವ ಇತರ ದಂಡನೆ ಹೊಂದಿದವರ ತಪ್ಪಿತಗಳನ್ನು ತಾವೇ ವಿಮರ್ಶಿಸಿ, ದಂಡನೆಗಳನ್ನು ಸರಿಗೊಳಿಸುವೆನೆಂದೂ, ಜೈಲಿನಲ್ಲಿರುವವರು ಇನ್ನು ಮುಂದೆ ಶಾಸನೋಲ್ಲಂಘನೆಗೆ ಕೈಹಚ್ಚುವುದಿಲ್ಲವೆಂದೂ ವಾಗ್ದಾನ ಮಾಡಿದರೆ, ಅವರನ್ನು ಬಿಡುಗಡೆ ಮಾಡಲಾಗುವುದೆಂದೂ ಹೋಮ್ ಮೆಂಬರರು ತಿಳಿಸಿದರು.

ಸರ್ ಸಾಮುವೆಲ್ ಹೋರರ ಲಂಡನು ಭಾಷಣ

ಸರಕಾರವು ಎರಡು ಬಗೆಯಾಗಿ ನಡೆಯುವುದೆಂದು ಮೊದಲೇ ನಿರ್ಧಾರ ಮಾಡಿದ್ದಿತು; ಆದರಂತೆ, ಕಾನೂನು ಕ್ರಮಗಳಿಗೆ ಪ್ರಜೆಗಳು ಗೌರವ ಕೊಡುವಂತೆ ಅವರನ್ನು ಊರ್ಜಿತವಿರಿಸಲು ಯತ್ನಿಸಬೇಕಾದುದೊಂದು, ಈ ಧಾಗದಲ್ಲಿ ಸರ. ಕಾರವು ಕೃತಾರ್ಥವಾಗದೆ, ಉಳಿದಿಲ್ಲ. ಇದರಂತೆ ವಿವೇಕ ದಿಂದಲೂ ಜಾಗರೂಕತೆಯಿಂದಲೂ ರಾಜ್ಯಧಾರ ಶ್ರಮದಲ್ಲಿ ತಿದ್ದುಪಡಿ ಮಾಡಬೇಕಾದುದು ಇನ್ನೊಂದು; ಇದಕ್ಕಾಗಿಯೆ ಈ ಬಾರಿಯ ರೌ. ಟೀ. ಕೂನ್ಸರೆನ್ಸು ಹಲವು ಕನ್ಸರ್ವೇಟಿವರು, ಹಿಂದೀಯರೊಡನೆ ಪರಾಮರ್ಶಿಸುವುದೇ ಕೂಡದೆಂಬಂತೆ ಸಂಶಯ ಕಾಣುತ್ತಿರುವರು; ಆದರೆ, ಎರಡೂ ಕಡೆಯ ಪ್ರಮುಖರನ್ನು ಒಂದು ಕಡೆ ಕೂಡಿಸಿ, ಅವರ ಭಿನ್ನಭಿಪ್ರಾಯಗಳನ್ನು ಯಥೋಚಿತವಾಗಿ ಲಾಲಿಸುವುದರಿಂದ ಬಾಧಕವೇನು? ಸರಕಾರವು ತನ್ನ ಹೇಳಿಕೆಯನ್ನು ಬಹಿರಂಗವಾಗಿ ತಿಳಿಸುವುದು. ದೇಕಾದವರು ಮನಬಂದಂತೆ ವಿಮರ್ಶಿಸಲಿ. ಹಿಂದೀಯರಿಗೆ ಜಗತ್ಯವಾಗಿ ತೋರುವುದನ್ನು ಈಗ ನೆಶನಲ್ ಗವರ್ನಮೆಂಟು ಊರ್ಜಿತವಾಗಿ ಇರುವಾಗಲೆ ಕೊಟ್ಟರೆ ಚೆನ್ನಾಗುವುದು. ಬ್ರಿಟಿಷರು ಮತ್ತು ಇಂಡಿಯದ ಮೇಲ್ಮೆಗಾಗಿ ರಕ್ಷಣೋಪಾಯಗಳನ್ನು ಸರಿಯಾಗಿಟ್ಟರೆ ತೀರಿತು,—ಎಂಬುದೇ ಇವರ ಧಾವಣದ ಅಭಿಪ್ರಾಯ.

NOTES ನೋಟುಗಳು.

ಎಡ್ಡಾ ಇರಾಖೆಯ ಸರ್ಕಿಲಾರು ಹೊರಟಿದೆ: ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಕೆಲವು ಶಾಲೆಗಳ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳಲ್ಲಿ ರಾಜಕೀಯವಾಗಿ ಆಕ್ಷೇಪಕರವಾದ ಮಾತುಗಳು ಇವೆಯಂತೆ. ಇವನ್ನೊಂದಿದ್ದಲ್ಲಿ ಹೈರೆಸ್ಪರಿಗೆ ಇಂತಹ ಶಾಲೆಗಳಲ್ಲಿ ಕಲಿಸುವ ಶಿಕ್ಷಣವು ಮಂಜೂರಾದ ರೀತಿಯದಲ್ಲವೆಂದು ಸೂಚಿಸುವಾಗುತ್ತಿದೆಯಂತೆ.

* * * *

ವಿದ್ಯಾರ್ಥಿಗಳು ಬರೆವ ಉತ್ತರಗಳಲ್ಲಿ ಆಕ್ಷೇಪಕರವಾದ ಇಂತಹ ಅಭಿಪ್ರಾಯಗಳು ತಿಳಿದುಬಂದಲ್ಲಿ, ಅಂತಹ ಶಾಲೆಯ ಶಿಕ್ಷಣ ರೀತಿಯು ಸದಿಯಲ್ಲವಾಗಿ ಅವುಗಳ ಮಂಜೂರಾತಿಯನ್ನು ಹಿಂತೆಗೆವರಾಗಿ ಡೈರೆಕ್ಟರರು ಈಗಲೇ ಹೈಸ್ಕೂಲುಗಳೆಲ್ಲವುಗಳ ಮೆನೆಜರರಿಗೆ ತಿಳಿಸಿದ್ದಾರೆ.

* * * *

ಹೋರಗಣ ವಾತಾವರಣದಲ್ಲಿ ಸುಳಿಯುತ್ತಿರುವ ನಾನಾ ಅಭಿಪ್ರಾಯಗಳು ವಿದ್ಯಾರ್ಥಿಗಳ ಮೆದುಳ್ಳಿಗೆ ಹೋಗುವ ಹಾಗಿರುವಾಗ, ಅವ ಬಗೆಯ ರಾಜಕೀಯ ವಿಷಯಗಳನ್ನೂ ಚರ್ಚಿಸ ಲಾರದ ಶಾಲೆಯಲ್ಲಿ ಸಹ ವಿದ್ಯಾರ್ಥಿಗಳು ತಿಳಿದೋ ತಿಳಿಯದೆಯೋ ಬರೆಯಬಹುದಾದ ಉತ್ತರಗಳಲ್ಲಿ ಈ ಅಭಿಪ್ರಾಯ ತೋರಿದರೆ, ಅಲ್ಲಿಗೆ ಶಾಲೆಯ ಮಂಜೂರಾತಿಯೆ ರದ್ದಾಗುವ ಸಂಧವಿ

* * * *

"The answers show clearly that the students have not received an education of the kind which will help to fit them to assume when they grow up their responsibilities as citizens" * * *

* Attention of managements drown to rule 12 of rules for recognition of Secondary Schools.

* * * *

ಸೆಕೆಂಡರಿ ಶಾಲೆಗಳ ಮಂಜೂರಾತಿಯ ನಿಯಮಗಳಲ್ಲಿ ಗಿನಿ ನಿಯಮವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ನಾಗರಿಕರಾಗಿ ಬಾಳುವುದಕ್ಕೆ ಅವಶ್ಯವಾಗಿರುವ ರೀತಿಯ ಶಿಕ್ಷಣವು ಇಂತಹ ವಿದ್ಯಾರ್ಥಿಗಳಿಗೆ ದೊರೆತಿಲ್ಲವೆಂದೇ ಇವರ ಉತ್ತರಗಳು ತೋರಿಸುತ್ತಿವೆ. ಸುತ್ತಲೂ ಹರಡಿ ಬೇಡದೂ ಒಳಸುಗ್ಗುವ ವಿಚಾರಗಳ ಜತ್ತಾಯದಿಂದ ವಿದ್ಯಾರ್ಥಿಗಳು ಕೈತಪ್ಪಿ ತಿಳಿಯದೆ ಬರೆಯಬಹುದಾದ ಉತ್ತರಗಳಲ್ಲಿ ರಾಜಕೀಯವು ಸುಳಿಯದ ಹಾಗೆ ಮೆನೇಜರರು ಅಥವಾ ಉಪಾಧ್ಯಾಯರು ವಿದ್ಯಾರ್ಥಿಗಳ ಮನಸ್ಸಿಗೆಂದು ಆವರಣ ಹಾಕಬೇಕಾಗಿದೆ,—ಜಾಗ್ರತೆಯಾಗಿ ಇನ್ನು ನೂರೇ ತಿಂಗಳಲ್ಲಿದೆಯಲ್ಲ. ಮತ್ತೊಂದು S. S. L. C. ಪರೀಕ್ಷೆ?

* * * *

'ಮಹಾರಾಯರುಗಳೆ,—ನೀವೇನೋ ಬೇಕೋ ಕೇಳಿ, ನಂಬಿರಿ, ನಂಬದಿರಿ. ಉತ್ತರಗಳಲ್ಲಿ ರಾಜಕೀಯ ವಿಷಯಗಳೇನೂ ಭರಿದರೆ ಫೈಲಾಗುವಿರಿ" ಎಂದು ವಿದ್ಯಾರ್ಥಿಗಳನ್ನು ಈಗಲೇ ಬೆದರಿಸುವುದು ಉತ್ತಮವೆ? ಅಥವಾ,—"ಯಾವ ಬಗೆಯ ರಾಜಕೀಯ ವಿಚಾರಗಳೂ ಹೊರಟು ಉತ್ತರಗಳೇ ಬರುವ ಹಾಗೆ ಪ್ರಶ್ನೆ ಕೇಳಿರಿ" ಎಂದು ಎಕ್ಸಾಮಿನರ್ ಮಹಾಶಯರನ್ನು ಸರಕಾರವು ಎಚ್ಚರಿಸುವುದು ಉತ್ತಮವೆ? ಎರಡೂ ಸರಿಯೆ? ಎರಡೂ ತಪ್ಪೇ?

* * * *

ಮನೆ, ಬೀದಿ, ಆಟವ ಬಯಲು, ವಾರ್ತಾಪತ್ರಿಕೆ, ಧಾವ ಹಾದಿಗಳು ಮೊದಲಾದುವು ರಾಜಕೀಯಾಭಿಪ್ರಾಯಗಳನ್ನು ಸ್ವೇಚ್ಛೆಯಿಂದ ಒದಗಿಸಿ ಕೊಡುವಾಗ, ಕ್ಲಾಸಿನೊಳಗೆ ಕ್ಲಪ್ತ ಕಾರ್ಯವನ್ನು ನಿಷ್ಠೆಯಿಂದ ಮಾಡುವ ಉಪಾಧ್ಯಾಯನಾದರೂ ಆ ಅಭಿಪ್ರಾಯಗಳಲ್ಲ ಯಾವುವು ವಿದ್ಯಾರ್ಥಿಯ ಮೆದುಳ್ಳಿನಿ ಎಂದು ತಿಳಿದುಕೊಳ್ಳುವುದು ಹೇಗೆ?

* * * *

ಮಂಜೂರಾತಿ ಹೊಂದಿದ ಯಾವ ಶಾಲೆಯಲ್ಲಾದರೂ ರಾಜಕೀಯ ವಿಷಯಗಳನ್ನು ಮಾತಾಡಿ ಕುಳಿತುಕೊಳ್ಳಲು ಸಮಯವೆಲ್ಲಿದೆ? ನಿಯಮವೆಲ್ಲಿದೆ?

* * * *

ಬಂಗಾಳದ ಕ್ರಾಂತಿಕಾರರು ಶಾಲೆಗಳೆಂದಲೇ ಉಪದೇಶ ಹೊಂದಿದವರೆಂದು ಎಲ್ಲೆಲ್ಲಿಯೂ ಸಾರುತ್ತಾರೆ, ದೂರುತ್ತಾರೆ. ಕನ್ಯಾ ರಾಜಕೀಯ ಶಕ್ತಿಯ ಮಂದಿರಗಳಾಗಿರುವ ಮದ್ರಾಸು

ಗಾಂಧಿಯವರೊಡನೆ ನೀಲನಾಗಿನಿಯು ಉಪವಾಸ!

ಸೌಂಡ್‌ಟೇಬಲಿನ ಮಂದಗತಿ! "ನ್ಯೂಸ್ಟೇಟ್ಸ್‌ಮೆನಿ"ನ ಎಚ್ಚರಿಕೆ!

ಸರ್ ಸಾಮುವೇಲ್ ಹೋರರ ಹಟ!

ಗುರುವಯ್ಯೂರಿನವರಿಗೆ ಗಾಂಧಿಜೀಯವರ ಕೆಲವು ಸಲಹೆಗಳು!!!

ತಾ. ೧—೧—೩೩ರಿಂದ ಉಪವಾಸಾರಂಭ!

ಮಹಾತ್ಮಾ ಗಾಂಧಿಯವರು ಬರುವ ಜನವರಿ ೧ ಆಥವಾ ೨ನೇ ತಾರೀಕಿನ ದಿನ ಗುರುವಯ್ಯೂರು ದೇವಸ್ಥಾನ ಪ್ರವೇಶಕ್ಕಾಗಿ ಉಪವಾಸದೀಕ್ಷೆಯನ್ನು ಕೈಕೊಳ್ಳುವರಾದರೆ ಅವರೊಡನೆ ತಾನೂ ಅಂದಿನಿಂದ ನಿರ್ಜಲೋಪವಾಸವನ್ನು ಕೈಗೊಳ್ಳಲು ನಿರ್ಧರಿಸಿರುವುದಾಗಿ ಮಿಸ್ ನೀಲ್‌ಕ್ರೇಮ್ ಕುರ್ (Miss Neelkraym Kur) ಎಂಬ ಅಮೇರಿಕನ್ ಯುವತಿಯು ನಿರ್ಧರಿಸಿರುತ್ತಾಳೆ ಇವಳ ತಂದೆಯವರು ಜೋರ್ಜ್ ಕ್ರೇಮ್ ಕುರ್ ಎಂಬವರು ಇವಳ ಮಲತಾಯಿಯು ಅಮೇರಿಕದ ಸುಪ್ರಸಿದ್ಧ ಅಮೇರಿಕನ್ ಕಾದಂಬರಿಗಾರ್ತಿಯಾದ ಸೂಸಾನ್ ಗ್ಲಾಸ್‌ಪೆಲ್ ಎಂಬವಳು ಇವಳು ಕಳೆದ ವರ್ಷ ಕಾಶ್ಮೀರದಲ್ಲಿ ಹಿಂದೂ ಮತಾವಲಂಬಿಯಾದಳು ಇವಳು ತನ್ನ ನಿರ್ಧಾರದ ಕುರಿತು ಮಹಾತ್ಮರಿಗೊಂದು ಪತ್ರವನ್ನು ಬರೆಯುತ್ತಾ—ತಾನು ಅಮೆರಿಕದ ಹಿಂದೀಯರ ಮತವಾದ ಹಿಂದೂಮತವನ್ನು ಅವಲಂಬಿಸಬೇಕೆಂದು ಏಷ್ಟೋ ಕಾಲದಿಂದ ಕಾತರಿಸುತ್ತಿದ್ದೆ ಅದು ತನ್ನ ಬೀವಿನದ ಸೊತ್ತಾಗಿರುತ್ತದೆ ತನ್ನ ಹಿರಿಯರು ಸ್ವಾತಂತ್ರ್ಯ ಯುದ್ಧದಲ್ಲಿ ಕಾದಾಡಿದವರು ಹಿಂದೀಯ ಜನಾಂಗದೊಡನೆ ಬೆರೆತು ಒಮ್ಮತದಿಂದಿದ್ದವರು ಭಾರತ ದೇಶದ ಕುಶ್ಚಲ ಸತ್ಯ ಅಹಿಂಸೆಗಳ ಧರ್ಮವು ಅಮೇರಿಕದ ಪ್ರತಿಯೊಬ್ಬ ಸ್ವೀಪುರುಷರ ಅರ್ಹಪ್ರಾಪ್ಯ ವಿಷಯವಾಗಿರುತ್ತದೆ ತನ್ನ ತಂದೆಯವರು ಹಿಂದೂ ಧರ್ಮ, ಒತ್ತ, ವೇದ ಪುರಾಣ, ಕಾಸ್ತ್ರ ನೀತಿಗಳ ಕುರಿತು ತನಗೆ ಪದೇ ಪದೇ ಉಚ್ಚ ಪಾಠವನ್ನು ಕೊಟ್ಟಿದ್ದರು ಅವರು ಹಿಂದೂಗಳ ದೇವಸ್ಥಾನಗಳನ್ನು ಅತ್ಯುಚ್ಚಲು ದೇವ ಮಂದಿರಗಳೆಂದು ವಿವರಿಸಿದ್ದರು ಈಗ ಅಂತಹ ದೇವಸ್ಥಾನಗಳ ಕಟ್ಟಿರ್ಣಾಣದಲ್ಲಿ ಉದ್ಯುಕ್ತರಾಗಿರುವುದರಿಂದ ತಮ್ಮ ಮುಂದಿರುವ ಉಪವಾಸದಲ್ಲಿ ತಾನೂ ಭಾಗವಹಿಸಬೇಕೆಂದು ನಿರ್ಧರಿಸಿರುವೆನು ನಿಮ್ಮ ಪವಿತ್ರ ಕಾರ್ಯವು ಅಮೇರಿಕನರಿಗೂ ಬ್ರಿಟಿಷರಿಗೂ ಮಾರ್ಗದರ್ಶಕವಾಗುವುದೆಂದು ನಂಬಿ ನಿಮ್ಮ ಚರಣತಲವನ್ನು ಮರೆ ಹೊಗುವೆನು ಎಂದಿರುವಳು

ರೌಂಡ್‌ಟೇಬಲಿನ ಮಂದಗತಿ

ಕಳೆದ ತಾ. ೩ನೇ ದಿನ ರೌಂಡ್‌ಟೇಬಲ್ ಪ್ರತಿನಿಧಿಗಳ ಮಹಾಸಭೆಯು ಸೇರಿತು ಇತ್ತರ ತನಕ ನಡೆದ ವಿದ್ಯಮಾನಗಳನ್ನು ಪರಿಶೀಲಿಸುವಾಗ—ಅಲ್ಲಿಯ ಕಾರ್ಯಕಲಾಪಗಳು ಬಹಳ ಮಂದಗತಿಯಿಂದಲೇ ಸಾಗುತ್ತಿರುವುವೆಂದು ಧಾಸವಾಗುತ್ತಿದೆ ಸರ್ ಸಪ್ರೂ, ಶ್ರೀ ಜಯಕರ್, ಪುರುಷೋತ್ತಮ ದಾಸ್ ಧಾಕೂರ್ ದಾಸರು ಈ ಸಲ ಭಾರತದೇಶಕ್ಕೆ ಸ್ವಾತಂತ್ರ್ಯದ ನೆರಳ ನ್ನಾದ್ರೂ ತಿರುಳನ್ನೇ ಕೊಡಬೇಕೆಂದು ವಾದವಿವಾದವೆಬ್ಬಿಸುವುದರಲ್ಲಿರುವರು. ಕೇಂದ್ರಸರಕಾರ, ಗವರ್ನರರ ಅಧಿಕಾರದ ಮೇರೆ, ಅರ್ಥವ್ಯವಹಾರ, ವಿದೇಶೀಯ ವ್ಯವಹಾರಗಳನ್ನು ಹಿಂದೀಯರ ಆಕಾಂಕ್ಷೆಗನುಗುಣವಾಗಿಯೇ ಸಮಾಧಾನ ಪೂರ್ವಕವಾಗಿ, ಸಮರ್ಪಕವಾಗಿಯೇ ತೀರ್ಮಾನಿಸದೆ ನಿವಾರ್ಹವಿಲ್ಲವೆಂದೇ ಅವರು ಪ್ರತಿ ಸಭೆಯಲ್ಲೂ ಅಭಿಪ್ರಾಯಪಡುತ್ತಿರುವರು ಇವರ ಎಲ್ಲಾ ಆದರ್ಷಗಳಿಗೂ ವಿರುದ್ಧಪಕ್ಷದ ಪ್ರತಿ ಭಟನೆಯಾಗುತ್ತಿದೆ ಫೆರಡನೇ ಪರಿಷತ್ತಿನಲ್ಲಾದ ನಿರ್ಧಾರಗಳನ್ನು ಪ್ರಧಾನ ಮಂತ್ರಿಯವರು ಕಾರ್ಯತಃ ಮುಂದುವರಿಸಬೇಕೆಂದೂ ಅದನ್ನು ಕುರಿತು ರಾಷ್ಟ್ರಾಂಗಡಜನೆಯು ನಡೆಯುವು ದಾದರೆ ಅನಾಹುತಗಳಿಗೆಡೆಯಾಗುವುದೆಂದೂ ಸಪ್ರೂ ಮೊಬಳಾದ ಲಿಬರಲರ ನಿಷ್ಠೆಯಾಗಿ ರುತ್ತದೆ ಆದರೂ ಇವರ ಈ ಅರಿಕೆಯು ಪ್ರಧಾನರಿಂದಾಗಲೀ ಮಂತ್ರಿಮಂಡಲದವರಿಂದಾಗಲೀ ಸ್ವೀಕೃತವಾಗುವ ಚಿಹ್ನೆಯು ತೋರಿ ಬರುತ್ತಿಲ್ಲ ಆದರ ಬದಲಿಗೆ ಬ್ರಿಟಿಷರು ಮೊದಲೇ ನಿಷ್ಕರ್ಷಿಸಿಕೊಂಡಿರುವ ಕೆಲವು ಸಾಮಾನ್ಯ ಸುಧಾರಣೆಗಳನ್ನು ಮುಂದೊತ್ತುವ ವಿಚಾರಣಾಗುತ್ತಿದೆ ಬ್ರಿಟಿಷ ಸರಕಾರವು ಮೊದಲು ಕೇಳಿದುದಕ್ಕಿಂತಲೂ ಹೆಚ್ಚಿನ ಭದ್ರತೆಗಳನ್ನು ಈಗ ಕೇಳಲಿಕ್ಕಿದೆಯೆಂಬುದಾಗಿಯೂ ಕೇಂದ್ರಸರಕಾರದ ಆರ್ಥಿಕ ಬಲವನ್ನು ತಾನೇ ಇಟ್ಟುಕೊಳ್ಳಬೇಕೆಂದು ಹೆಮ್ಮನೆ ನಿರ್ಧರಿಸಿದೆಯೆಂಬುದಾಗಿಯೂ ಅವರ ಹಲ ಕೆಲವು ಕಾರ್ಯಪಡೆಯುತಿದೆಯ ಪರಿಶೀಲನೆಯಿಂ ತೀರ್ಮಾನ ಬರುತ್ತದೆ ಇಷ್ಟೂ ಅಲ್ಲದೆ ಇಂಡಿಯಾ ಸೈನ್ಯ ರಾಯಲಿಗೆ ಈಗಿರುವುದಕ್ಕೆಂತ ಹೆಚ್ಚಿನ ನಿರಂಕುಶ ಪ್ರಭುತ್ವಾಧಿಕಾರವನ್ನು ಕೊಡಲಿರುವುದಾಗಿಯೂ ಯತ್ನವಾಗುತ್ತಲಿದೆ ಇದನ್ನು ತಿಳಿದ ಸಪ್ರೂ ಜಯಕರು ಅಂತಹ ಅಸಮ್ಮತ ಸೂತ್ರಗಳು ಹಿಂದೀಯ ಜನಾಂಗದ ಯಾವ ಪಕ್ಷೀಯರಿಂದಲೂ ಸ್ವೀಕೃತವಾಗಲಿಕ್ಕಿಲ್ಲವೆಂದೂ ಬ್ರಿಟಿಷ ಸರಕಾರವು ಅವುಗಳನ್ನು ಎಷ್ಟು ಮಾತ್ರಕ್ಕೂ ಮುಂದುವರಿಸಲಾಗದೆಂದೂ ವಾದಿಸುತ್ತಿರುವರು ಈ ಸಲ ಸಪ್ರೂ ಜಯಕರೊಡನೆ ದಾಸ ಅಂಬೆಡ್ಕರ್ ಪುರುಷೋತ್ತಮ ದಾಸ್, ಸರ್ ಕಾವಾಜಿ ಜಹಂಗೀರ್ ಮೊದಲಾದವರು ಅದರ ಮೇಲೆಯೇ ತಮ್ಮ ದೃಷ್ಟಿಸಥೆಯನ್ನಿರಿಸಿ ವಾದಿಸುತ್ತಿರುವರು

'ನ್ಯೂಸ್ಟೇಟ್ಸ್‌ಮೆನಿ'ನ ಎಚ್ಚರಿಕೆ

ಲಂಡನಿನ 'ನ್ಯೂಸ್ಟೇಟ್ಸ್‌ಮೆನ್' ಪತ್ರಿಕೆಯು ರೌಂಡ್‌ಟೇಬಲ್ ಸಂಜಾಲಕರಿಗೆ ಎಚ್ಚರವನ್ನೀ ಯುತ್ತಾ,—ಈಗ ಹಿಂದೂದೇಶದ ಸಮಸ್ಯೆಯೆಂದರೆ ಆರ್ಥಿಕ ಭದ್ರತೆ ಮತ್ತು ಸೈನ್ಯಾಯ ಗವರ್ನರುಗಳಿಗೆ ಕೊಡಬೇಕಾದ ಎಮರ್ಜೆನ್ಸಿ ಪವರ್ಸ್! ಈ ವಿಚಾರಗಳನ್ನು ಸಮರ್ಪಕವಾಗಿ ತೀರ್ಮಾನಿಸಿದರೆ ಎಲ್ಲವೂ ಸರಿ ಹೋಗುವುದು Exchequerನ ಅಧಿಕಾರವನ್ನು ನಾವು ಹಿಂದೂ ದೇಶಕ್ಕೆ ಕೊಟ್ಟುಬಿಟ್ಟರೆ ಕೊಂಗ್ರೆಸ್ ಪಕ್ಷೀಯರೂ ಕೂಡಾ ಸಮಾಧಾನಗೊಳ್ಳದಿರರು ಅಲ್ಲದೆ ಇದರೊಡನೆ, ಸರಕಾರದ ಬದಲಾವಣೆಗಳು ಯಾವಾಗ ಕೈಗೊಡಿ ಬಂದಾವೆಂಬ ವಿಚಾರವಾಗಿ ನಾವು ಹಿಂದೀಯರಿಗೆ ನಿಷ್ಕರ್ಷಿತ ದಿನವನ್ನು ಹೇಳಬೇಕು ಆದರೆ ಈಗಿನ ಪರಿಸ್ಥಿತಿಯೇನು? ಧಾವೀ ವಿಚಾರದ ಹೊರೆಯು ಹಲಕೆಲವು ಬ್ರಿಟಿಷ ಅಧಿಕಾರಿಕಾಹಿಯವರ ಹೆಸ್ತಗತವಾಗಿ ಬಿಟ್ಟಿದೆ. ಬರಹಗಾರರು ಬರೆದುಕೊಂಡಂತೆ ಅವರು ಭದ್ರತೆ ಗಳನ್ನು ಓದಿಹೇಳುತ್ತಾರೆ. ಹಿಂದೂದೇಶದ ದ್ರವ್ಯದ ಶುಚ್ಚಿಗೆ ನಾವು ಎಷ್ಟರ ತನಕ ಭದ್ರತೆ ಕೇಳು ತ್ತೇವೋ ಅಷ್ಟರ ತನಕ ನಮಗೆ ಹಿಂದೀಯ ಸಹ ಸಮೀಕ್ಷ ನಾಶವಾಗಬೇಕೆಂದೂ, ಯಾರೂ ಬೆಲೆಯಿಲ್ಲದ ವಸ್ತುವನ್ನಾಗಿ ಪರಿಗಣಿಸುವೆನು" ಎಂದಿದ್ದಾರೆ.

ಸರ್ ಸಾಮುವೇಲ್ ಹೋರರ ಹಟ

ಥೋಮಸ್ ವಿಲ್ಲಿಯಮ್ಸ್ ಎಂಬವರು ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಸರ್ ಸಾಮುವೇಲ್ ಹೋರರಿಗೆ ಪ್ರಶ್ನೆಯಿಡುತ್ತಾ "ಹಿಂದೂದೇಶದ ದಂಡತೆರಿಗೆಯ ವಸೂಲಾತಿಯ ವಿವರವನ್ನು ಹೇಳಬಹುದೇ? ಎಂದು ಕೇಳುವಾಗ ಹೋರರು "ಅದನ್ನು ಈಗ ಹೇಳಲು ನಾನ್ನು ವಿಲ್ಲ ತನಿಲಿ ನಡಿಸಿ ಹೇಳುವೆನು' ಎಂದರು ಹಿಂದೂದೇಶದ ಪ್ರಕೃತ ಸ್ಥಿತಿಗತಿಯ ಬಗ್ಗೆ ಪ್ರಶ್ನೆ ಯಾದಾಗ ಹೋರರು "ಅಲ್ಲಿಯ ಪರಿಸ್ಥಿತಿಯಲ್ಲಿ ಮಾರ್ಪಾಟು ಉಂಟಾಗಿರುವುದಿಲ್ಲ, ಕಾಸನೋಲ್ಲಂಘನಾ ಚಳುವಳಿದ ಸಂಬಂಧವಾಗಿ ಕಳೆದ ವಾರಕ್ಕೆ ೧೫೨೪೬ ಶಿಕ್ಷೆಗಳಾದುವು ಅಕ್ಟೋಬರ ೩೧ರತನಕ ಜನರ ಕಡಿಮೆಯಾದರು, ೭೫೬೧ ಜನರನ್ನು ಮಾಫಿಯ ಮೇಲೆ ಬಿಡಲಾಗಿದೆ ಎಂದರು ಆ ಮೇಲೆ ಮಾಂಚಾಯಿಯ ಫ್ರೀಪ್ರೆಸ್ ಜರ್ನಲಿನ ೧೧,೦೦೦ ರೂಪಾಯಿ ವೇರಿಕರಣದ ಪ್ರಶ್ನೆಯು ಬಂತು ಅದರ ಹಿನ್ನೆಲೆಯನ್ನು ಹೋರರು ಮಾಡುತ್ತಾ 'ಆ ಪತ್ರಿಕೆಯು ಪ್ರಕಟಿಸಿದ ಲೇಖನಗಳು ಗಾಂಧಿಯವರ ಯಂಗ್ ಇಂಡಿಯಾದಿಂದ ಉಲ್ಲಟ್ಟು ಲೇಖನಗಳ ಪುನರ್ಮುದ್ರಣವಾದುದೂ ಅವುಗಳು ತಾಲ್ಕಾಲಿಕ ಹಿತ ಲೇಖನಗಳಾದುದರಿಂದ ಅವುಗಳನ್ನು ನಿಷ್ಪ್ರಯೋಜಕವಾಗಿಸಲಾಯಿತು ಎಂದರು ಮುಂದುವರಿಯುತ್ತಾ ತಾನು ಆ ಪತ್ರಿಕೆಯ ಆ ಸಂಚಿಕೆಯನ್ನು ಓದಿಲ್ಲವೆಂದೂ ಪ್ರಶ್ನೆಕರ್ತರು ಅವನ್ನೊದಿಗಿಸಿ ಕೊಟ್ಟರೆ ಓದಿಳಿಳ್ಳುವೆನೆಂದೂ ಸರ್ ಹೋರರ ಉತ್ತರವನ್ನಿತ್ತರು

ಬಂಗಾಳದ ಕ್ರಾಂತಿಕಾರಿ ಹೆಣ್ಣಳಿಯನ್ನು ಹೋರರು ಒಪ್ಪಿಸಿ ಹೇಳಿಕೆಯನ್ನಿತ್ತಾ—ಎಲ್ಲೆಲ್ಲಿ ಕ್ರಾಂತಿಕಾರಿ ಹಾವಳಿಯು ನಡೆಯುತ್ತದೆಯೋ ಅಲ್ಲಿ ದಂಡತೆರಿಗೆಯನ್ನು ಹೊರಿಸಲು ಸರಕಾರವು ಹಿಂಜರಿಯಲಾರದು ಅಂತೂ ಕ್ರಾಂತಿಕಾರಿ ಚಟುವಟಿಕೆಗಳು ನಿಲ್ಲಬೇಕು ರಾಜಭಕ್ತಿಯುತರಾದ ಪ್ರಜೆಗಳು ಪೋಲೀಸರಿಗೂ ಸರಕಾರದ ಅಧಿಕಾರಿಗಳಿಗೂ ಸಹಾಯವನ್ನಿತ್ತು ಅರಾಜಕರ ಜೀವಿತ ತಾಖೋಲಕಾಮೆಗಳು ಧ್ವಂಸನವಾಗುವಂತೆ ಮಾಡಬೇಕಾಗಿದೆ ಎಂದರು ಇಂಡಿಯಾ ಲೀಗ್ ಡೆಲಿಗೇಶನಿನವರು ಹಿಂದೂಸ್ಥಾನದ ಪ್ರಸ್ತುತ ಸ್ಥಿತಿಗತಿಗಳನ್ನು ಲಂಡನ್ನಲ್ಲಿ ವಿವರಿಸಿದ ವಿಷಯವಾಗಿ ಸರ್ ಹೋರರಿಗೆ ಪ್ರಶ್ನೆಯಿಡಲು ಅವರು ಇಂಡಿಯಾ ಲೀಗ್ ಡೆಲಿಗೇಶನಿನವರು ಇಂಡಿಯಾ ಲೀಗ್ ಎಂಬ ಕೊಂಗ್ರೆಸ್ ಪರವಾದ ಸಂಸ್ಥೆಯಿಂದ ಸಹಾಯ ಹೊಂದಿರುವರು ಅವರು ಹೋದಹೋದಲ್ಲಿ ದೊರೆತನದವರ ಸಲಹೆಗಳನ್ನು ಸ್ವೀಕರಿಸಿಲ್ಲಿ ಬದಲಿಗೆ ಕೊಂಗ್ರೆಸ್ ಪಕ್ಷೀಯರ ಅಭಿಪ್ರಾಯವನ್ನು ಮಾತ್ರ ಸ್ವೀಕರಿಸಿದರು. ಅದುದರಿಂದ ಅವರ ನಿಷ್ಪಕ್ಷಪಾತಿತ್ವವನ್ನೆಯನ್ನು ನಂಬಲಕಲ್ಲವು ಎಂದರು ಹೋರರು ಈ ರೀತಿಯ ಮುಸುಕು ಮಾರೆಯ ಹಪಹಾಧಪೆಯಿಂದ ಮಂತ್ರಿಮಂಡಲದ ರಾಷ್ಟ್ರಪಕ್ಷೀಯ ಸದಸ್ಯರು ಅಸಮಾಧಾನಗೊಂಡಿರುವರು

ಉಪವಾಸವು ೩ನೇ ಜನವರಿಯಿಂದ ಪ್ರಾರಂಭವಾಗುವುದು

ತನ್ನ ಮುಂದಿರುವ ಉಪವಾಸದ ಕುರಿತು ಗಾಂಧೀಜೀಯವರು ಹಲಕೆಲವು ಪತ್ರಗಳನ್ನು ಪ್ರಕಟಿಸಿರುವರು. ತಾ ೩ನೇ ದಿನ ಅವರ ೧೫ನೇ ಪ್ರಕಟಣೆಯು ಹೊರಬಿದ್ದಿದೆ ಮುಂಚಿನ ೧೪ ಪ್ರಕಟಣೆಗಳಲ್ಲಿ ಅವರು ಅಸ್ಪೃಶ್ಯತೆಯು ತನ್ನ ಕ್ರಾಜದ ಬಲಿಯನ್ನಾವರೂ ಪಡೆದು ಬುಡ ಸಮೇತ ನಾಶವಾಗಬೇಕೆಂದೂ, ಯಾರೂ ಬೆಲೆಯಿಲ್ಲದ ವಸ್ತುವನ್ನಾಗಿ ಪರಿಗಣಿಸುವೆನು" ವಾದರೆ ತಾನದಕ್ಕೆ ಒಪ್ಪಲಾರೆನೆಂದೂ ಅದರ ಬದಲಿಗೆ ತಾನು ಅಸ್ಪೃಶ್ಯತಾ ನಿವಾರಣೆಯ ಬಲಿ ಗಂಧದಡಿಯಲ್ಲಿ ಮರಣವನ್ನಪ್ಪಲಾದರೂ ಸ್ವೀಕರಿಸುವೆನೆಂದೂ ಹೇಳಿರುವರು ಗುರುವಯ್ಯೂರು ದೇವಸ್ಥಾನದ ಬಾಗಿಲನ್ನು ಅಸ್ಪೃಶ್ಯರಿಗಾಗಿ ತೆರೆಯಬಿದ್ದರೆ ತಾನು ಆ ಸಂಬಂಧವಾಗಿ ಖಂಡಿತವಾಗಿಯೂ ಜನವರಿ ೩ನೇ ದಿನ ಪುನರುಪವಾಸವನ್ನಾರಂಭಿಸುವೆನೆಂದು ಅವರು ತನ್ನ ೧೫ನೇ ಪ್ರಕಟಣೆಯಲ್ಲಿ ವಿವರಿಸುತ್ತಾ "೩ನೇ ಜನವರಿಯು ಸಮೀಪವಾಗುತ್ತಿದೆ ಗುರುವಯ್ಯೂರು ದೇವಸ್ಥಾನ ಪ್ರವೇಶ ಸಂಬಂಧವಾಗಿ ನನಗೆ ಅನೇಕಾನೇಕ ಪತ್ರಗಳ ಬರುತ್ತಿವೆ ಗುರುವಯ್ಯೂರು ಈಗ ಅಬಿಗ ಧಾರ್ಮಿಕರ ವಿಚಾರಾಧೀನವಾಗಿದೆ ಗುರುವಯ್ಯೂರು ದೇವಸ್ಥಾನದ ಸುತ್ತಮುತ್ತಲಿನ ಜನಸಮುದಾಯದ ವೋಟಿನ್ನು ತೆಗೆದು ಎಷ್ಟು ಜನರು ನನಗೆ ವಿರೋಧವಿದೆಯೆಂಬುದನ್ನು ತಿಳಿಸುತ್ತಾರೆ, ಎಷ್ಟು ಜನರ ಅಲ್ಲಿಯ ಜನವಿರೋಧವಿದೆಯೆಂಬುದನ್ನು ನಿರ್ಣಯಿಸುತ್ತಾರೆ ಪರೀಕ್ಷೆಸೋಣ ಆ ಪ್ರಕಾರ ಯಾವ ಹೆಚ್ಚಿನ ಜನರು ವೋಟನ್ನು ಪಡೆಯುತ್ತಾರೋ ಅವರು ತಮ್ಮ ನಿರ್ಧಾರದಂತೆ ಪತಿ ನಡೆಯುವುದು ಒಂದು ವೇಳೆ ನನಗೆ ಹೆಚ್ಚಿನ ವಿರೋಧಿಗಳಿದ್ದರೆ ನಾನು ದೀಕ್ಷೆಯನ್ನು ಹಿಂತೆಗೆಯುವೆನು ಗುರುವಯ್ಯೂರಿನ ಜನೋವಿನರ ದೇವಸ್ಥಾನದ ಸಮಸ್ತ ಭಜಕ ಮಂಡಲದ ಪ್ರತಿನಿಧಿ, ಹಾಗಿರುವಾಗ ಅವರು ಜನ ಸಮುದಾಯದ ಆಕಾಂಕ್ಷೆಗಳಿಗೆ ವಿಪ್ಲವವಾಗಿ ನಿಲ್ಲದೆ ಒಗ್ಗಲೇಬೇಕಾಗಿದೆ ಜನತೆಯ ಇಚ್ಛೆಯಂತೆ ದೇವಸ್ಥಾನವನ್ನು ತೆರೆಯುವುದು ಅತ್ಯಂತ ಸುಲಭ ಆದರ ಬೀಗದ ಕೈಯ ಜನತೆಯ ಕೈಯಲ್ಲಿದೆ ಜನಾಭಿಪ್ರಾಯವು ಜನೋವಿನರನ್ನು ತಿದಬಾಗಿಸಲು ಪ್ರಯತ್ನ ಬಹಿಷ್ಕರಿಸಲಾಗುವುದು ನಾನು ನಂಬಿಲಾರೆ. ನಾನೂ ಕೇಳ್ವನವರೂ ಉಪವಾಸವನ್ನಾರಂಭಿಸಿದ ದೊಡನೆ ಸನಾತನ ಪಕ್ಷದ ಒಂದು ಸಾವಿರ ಜನರೂ ನನ್ನುತ್ಥಾಯೆ ಮಾಡುವರೆಂಬ ಸದ್ಭಿಯಾರೂ ಸರಿಯೇ, ತಮ್ಮ ಅಂತರಾತ್ಮನ ಪ್ರೇರೇ ಪಣೆ ಪ್ರಕಾರ ವರ್ತಿಸಬೇಕು ಕೊನೆಗೆ ದೇವತಾ ಸ್ವರೂಪಿಯಾದ ಸತ್ಯವೇ ಜಯಶೀಲವಾಗದಿರದು ಗುರುವಯ್ಯೂರಿನಜನೋವಿನರುಹಿಂದುಕಡೆಯಿಂದ ಅವರ ಭಕ್ತವೃಂದವನ್ನು ಒಂದು ಕಡೆಯಿಂದ ನನ್ನನ್ನೂ ಸಮಾಧಾನಗೊಳಿಸಲಿರುವ ಸಂಧಿಗ್ಧಸ್ಥಿತಿಯಲ್ಲಿ ಬಿದ್ದಿರುವುದರಿಂದ ಅವರಿಗೆ ಯಾವುದನ್ನು ಬೆಕೊಳ್ಳಬೇಕೆಂದು ನಿರ್ಧರಿಸಲು ಸಾಧ್ಯವಿಲ್ಲದೆ ಹೋಗಿದೆಯೆಂದು ಒಬ್ಬರು ನನಗೆ ಬರೆಯುತ್ತಾರೆ ಜನೋವಿನರ ಅಂತರಾತ್ಮನ ಬೋಧನೆಯು ಹೇಗಿದೆ? ಅವರು ದೇವರನ್ನು ಮೆಚ್ಚಿಸುವುದಕ್ಕಾಗಿ ಕೆಲಸಮಾಡಬೇಕು ನನ್ನನ್ನೂ, ಜನತೆಯನ್ನೂ ಮೆಚ್ಚಿಸುವುದು ಅನಗತ್ಯ ಸತ್ಯ, ದೇವರು, ಅತ್ಯಸಾಕ್ಷಿ ಪ್ರಕಾರ ಅವರು ವರ್ತಿಸಲಿ ನಾನು ಬರೇ ಹಿಂದೂತ್ವದ ಸಲುವಾಗಿ ಉಪವಾಸವನ್ನಾರಂಭಿಸಲಿರುವುದರಿಂದ ನನ್ನ ದೃಷ್ಟಿಯು ಸಂಕುಚಿತವಾದುದೆಂದು ಒಬ್ಬರ ಪ್ರತಿಪಾದನೆ ಅದರದು ಸರಿಯಲ್ಲ ಹಿಂದೂತ್ವವೆಂಬುದು ವಿಶಾಲ ನೃಕ್ಷ. ಅದಕ್ಕೆ ಸಂಬಂಧಪಟ್ಟು ಇನ್ನಿತರ ಎಲ್ಲಾ ಮತಗಳೂ ಅಂತಹ ಹಿಂದೂಮತಕ್ಕೆ ಹಿಡಿದಿರುವ ತಾ ಜಾಡ್ಯವಾದ ಅಸ್ಪೃಶ್ಯತಾ ನಿವಾರಣೆಗಾಗಿ ನಾನು (I would count my life to be a cheap price to pay for the removal of the blot) ನನ್ನ ಜೀವಿತವನ್ನು ಬೆಲೆಯಿಲ್ಲದ ವಸ್ತುವನ್ನಾಗಿ ಪರಿಗಣಿಸುವೆನು"

ಅನ್ಯದೇಶ.

ಮಿಲಿಟರಿ ಅಭ್ಯಾಸಕ್ಕಾಗಿ ಹೊರಟಿರುವ ಸೈನ್ಯ . . . ೫

ಸ್ವದೇಶಸಂಗತಿ.

ಒಳ್ಳೆಯ ಉದಾಹರಣೆ . . . ೩-೪

ಕಲ್ಲು- ಕಬ್ಬಿಣ- ಮಂಗಳೂರು, ಉಡುಪಿ, ಕಾಸರಗೋಡು, ಮಡಿಕೇರಿ, ಹೊಂ, ಮುಂತಾ . . . ೫

ವಿವಿಧ ಸಮಾಚಾರಗಳು . . . ೧೧

ಹೋರಲೇ! ಎಷ್ಟರ ಮಟ್ಟಿಗೆ ಸಹ? . . . ೨

ಪತ್ರವ್ಯವಹಾರ . . . ೧೩

ಧರ್ಮಕ್ಕೆ ಬಂದಿರುವಕ್ಕೆ ಗ್ಲಾನಿಯನ್ನು ತಪ್ಪಿಸಿಕೊಳ್ಳುವುದು ಹೇಗೆ? . . . ೪

ಪರಿಹಾರವನ್ನುದ್ಧರಿಸಿರಿ ದೇವ. . . . ೧೦

ಗಾಂಧಿಯವರೊಡನೆ ಕೀಲಾಗಿನಿಯ ಉಪವಾಸ. . . . ೭

ಸ್ವದೇಶಾಭಿಮಾನಿ.

ಸಂ. ೨೩ನೇ ಮಂಗಳವಾರ ದಶಂಬರ ೧೯೨೩.

ಮಠಗಳ ಅಧೋಗತಿಯ ಪರಮಾವಧಿ.

ದಕ್ಷಿಣ ಕನ್ನಡ ಜಿಲ್ಲಾ ಕೋರ್ಟಿನಲ್ಲಿ, ಎಂಡೋಮೆಂಟ್ ಬೋರ್ಡಿನ ತೀರ್ಮಾನದ ವಿರೋಧವಾಗಿ, ಎಸ್ಕೀರ್ ಮಠ (ಕಾಸರಗೋಡು ತಾಲೂಕು)ದ ಸ್ವಾಮಿಗಳಾಗಿರುವ ಶ್ರೀ ಈಶ್ವರಾನಂದ ಭಾರತೀಸ್ವಾಮಿಯವರು ಮಾಡಿದ ಅರ್ಜಿಯ ತೀರ್ಪಿನ ಪ್ರತಿ ಒಂದು ನಮ್ಮ ಮುಂದಿದೆ. ಎಂಡೋಮೆಂಟ್ ಬೋರ್ಡಿನ ರಕ್ಷಣಾತ್ಮಕ ದೃಷ್ಟಿಯಿಂದ ತಪ್ಪಿಸಿ ಸ್ವೇಚ್ಛಾ ಪ್ರವರ್ತಕರಾಗಿ ನಡೆಯಲು ಮಠಾಧಿಪತಿಗಳು ಯಾವ ರೀತಿಯಲ್ಲಿ ಉಪಾಯವನ್ನು ಹೂಡುತ್ತಿರುವರೆಂಬುದೂ, ಮಠಗಳಲ್ಲಿ ದೇವರಪೂಜೆ ಅಳಿದು ಖಂಗಾರದಪೂಜೆ ಮಾತ್ರವೇ ಉಳಿದಿದೆ ಯೆಂಬುದೂ ಈ ತೀರ್ಮಾನವನ್ನು ಓದಿದರೆ ತಿಳಿದುಬರುತ್ತಿದೆ.

ಉಡುಪಿಯ ಅಷ್ಟಮಠಗಳೊಳಗಿನ ಕುಂದುಕೊರತೆಗಳನ್ನು ಬಹಿರಂಗಪಡಿಸಿಲೊಬ್ಬರು ಮಾಡಿದ ಪ್ರಯತ್ನಗಳೂ, ಅವರನ್ನು ಪೀಡಿಸಲಿಕ್ಕೆ ಮಠದವರು ನಡೆಸಿದ ಸಾಧಾನಗಳೂ ನಮ್ಮ ಜಿಲ್ಲೆಯಲ್ಲಿ ಕೆಲವರಿಗೆ ಗೊತ್ತಿರಬಹುದು. ಮಠಗಳು ಅಷ್ಟಮಸ್ಥೆಯ ಮಾತು ಹಾಗಿರಲಿ; ಸನ್ಯಾಸಿಗಳ ನಡತೆಯೇ ಸಂಪೂರ್ಣವಾಗಿ ತಿಥಿಲವಾಗಿ ಹತ್ತಡಿಂದ ವೃದ್ಧಿಶಾರದ ವರೆಗೆ, ದುರ್ವಾಹ್ಯದಿಂದ ಕಳವಿನ ವರೆಗೆ ಮಠಾಚಾರಗಳು ಪರ್ಯವಸಾನ ಹೊಂದುತ್ತಿವೆಯೆಂಬುದು ಅತ್ಯಂತ ವಿಷಾದಕರವೂ ನಿರಾಶಾಜನಕವೂ ಆದ ಸತ್ಯಸ್ಥಿತಿಯಾಗಿರುತ್ತದೆ.

ಆದರೆ ಸನ್ಯಾಸಿಗಳೊಳಗಿನ ಕೆಂಜಿತ್ ಪಾವಿತ್ರ್ಯವೂ ಕೂಡ ಹೇಗೆ ಹಾರಿ ಹೋಗಿಯದೆಂಬುದು ನಮ್ಮ ಮುಂದಿರುವ ಈ ತೀರ್ಮಾನವು ಸೂಚಿಸುತ್ತಿದೆ. ಸನ್ಯಾಸಿಗಳ ಅತ್ಯಾಶ್ಚರ್ಯಕರವಾದ ಸಾಧನೆಗಳು ಜಿಲ್ಲಾ ಜಡ್ಜರನ್ನು ಕೂಡ ದಿಗಿಲು ಬಡಿದು ಬಿಟ್ಟಿವೆ ಎಂದರೆ, ಈ ತೀರ್ಮಾನದ ಮಹತ್ವವು ಸ್ಪಷ್ಟವಾಗುವುದು.

ಶ್ರೀ ಈಶ್ವರಾನಂದ ಭಾರತೀ ಸ್ವಾಮಿಯವರು ಎಂಡೋಮೆಂಟ್ ಬೋರ್ಡಿನ ಮೇಲ್ಕಿಚಾರಣೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಮುಂದೆ ತಂದ ಸಾಧನವು-ಮಠವು ತನ್ನಸ್ವಂತದ್ದಾಗಿದೆ ಎಂಬುದು. ಮಠವು ತನ್ನ ಸ್ವಂತದ್ದೆಂದು ರುಜುಪಡಿಸಲಿಕ್ಕೆ ಅವರು ಮುಂದೆ ತಂದ ಸಾಕ್ಷ್ಯವು ಅತ್ಯಾರ್ಯತ್ಮಕವಾಗಿದೆ. ಮಠವು ತನ್ನ ಸ್ವಂತ ಹಕ್ಕಿನದ್ದು, ತಾನು ಸ್ವೇಚ್ಛೆಯಂತೆ ಅದರೊಡನೆ ನಡೆಯಬಹುದು ಎಂದವರು ಹೇಳಿದ್ದು ಮಾತ್ರವಲ್ಲ, ತನಗೆ ಅನುಯಾಯಿಗಳೆಲ್ಲ, ಮತಪ್ರಚಾರವು ತನ್ನ ಕೆಲಸವಲ್ಲ, ಶಿಷ್ಯರ ಮೇಲೆ ತಾನು ಪಾರಮಾರ್ಥಿಕ ಅಧಿಕಾರವನ್ನು ನಡೆಯಿಸುವುದಿಲ್ಲ, ಮಠದಲ್ಲಿ ಹಿಂದೂಮತ ಪ್ರೋತ್ಸಾಹದ ಬಗ್ಗೆ ಯಾವ ಕೆಲಸವೂ ನಡೆಯುವುದಿಲ್ಲ, ಇತ್ಯಾದಿ.

ಎಸ್ಕೀರು ಮಠವು ಶ್ರೀ. ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟಿದೆಯೆಂದು ಮಠವೇ ತನ್ನ ಮಹತ್ಕಿಕೆಯ ಆಧಾರವನ್ನು ತೋರುತ್ತಿದೆ. ಶ್ರೀ. ಶಂಕರಾಚಾರ್ಯರು ಆ ಎಸ್ಕೀರು ಮಠವನ್ನು ಸ್ಥಾಪಿಸಿದ್ದೇಕೆ? ಮತ ಪ್ರಚಾರಕ್ಕಾಗಲಿ, ಮತಪ್ರಚಾರಕ್ಕಾಗಲಿ, ಹಿಂದೂ ಧರ್ಮಾಭಿವೃದ್ಧಿಗಾಗಲಿ, ಹಿಂದೂ ಧರ್ಮಾಭಿವೃದ್ಧಿಗಾಗಲಿ ಅಲ್ಲವೆಂಬುದು ಅವರ ಆದರ ಅಭಿಪ್ರಾಯಗಳಿಂದ ಸ್ಪಷ್ಟವಾಗಿ ಕಾಣುತ್ತಿದೆ. ಸುಧೋಗಗಳಲ್ಲಿ ಹೋಗಿ ಹುಟ್ಟುವ ಕಾವಿ ಮಠವು, ಧರ್ಮಾಚಾರವನ್ನು ತಲ್ಲಿಸಲು ಒಂದು ಹೊಸ ತರದ, ಅವಿವಾಹಿತ ವ್ಯಕ್ತಿಗಳ ವರ್ಗವನ್ನು ನಿರ್ಮಾಣಮಾಡುವ ಬಗ್ಗೆ ಶ್ರೀ. ಶಂಕರಾಚಾರ್ಯರು ಸಮಗ್ರ ಹಿಂದೂಸ್ಥಾನವನ್ನು ಕಾಲುನಡಿಗೆಯಲ್ಲಿ ಸಂಚರಿಸಿ ಸರ್ವದಿಕ್ಕುಗಳಲ್ಲಿಯೂ ಖಂಡಿತ ಮಠಗಳನ್ನು ರಚಿಸಿದರೆ?

"It is lamentable that the petitioner should have dared to come before a Court of Law with assertions and theories so revolting to common sense and even ordinary standards of honesty." "ಸಾಮಾನ್ಯ ಬುದ್ಧಿಶಕ್ತಿಯನ್ನೂ, ಸಹಜವಾದ ನಂಧಾವಿಕತನವನ್ನೂ ಸಂಪೂರ್ಣವಾಗಿ ಅಲ್ಲಗಳೆಯುವಂತಹ ತತ್ವಗಳನ್ನೂ ಹೇಳಿಕೆಗಳನ್ನೂ ತೆಗೆದುಕೊಂಡು ಅರ್ಜಿದಾರರು ಕೋರ್ಟಿನ ಮುಂದೆ ಬರಲು ಧೈರ್ಯಪಟ್ಟುದು ವಿಷಾದಜನಕವಾಗಿದೆ" ಎಂದು ಜಡ್ಜರು ಹೇಳಿರುವರು. ಮುಂದೆ—"ಎಂಡೋಮೆಂಟ್ ಬೋರ್ಡಿನ ಮೇಲೆ ಚಿಕ್ಕದೊಂದು ವಿಜಯವನ್ನು ಹೊಂದಲಿಕ್ಕೆ ಅವರು ತಮ್ಮ ಅಲ್ಪದೃಷ್ಟಿಯನ್ನೂ ತೋರಿಸಿರುವರು, ತಮ್ಮ ಉತ್ತರಾಧಿಕಾರಿಗಳ ಧನತನ್ಮವನ್ನು ಕೆಡಿಸಿರುವರು, ಮತ್ತು ತನ್ನ ಸಮಾಧಿಯನ್ನು ತಾನೇ ಅಗೆದಿರುವರು . . . ಅವರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುವುದು ಒಳ್ಳೆಯದು, ಅಥವಾ ತನಗಿಂತ ಉತ್ತಮರಾದವರಿಗೆ ತನ್ನ ಸ್ಥಾನವನ್ನು ಬಿಟ್ಟುಕೊಡುವುದು ಒಳ್ಳೆಯದು. x x x ಇಂತರವನ್ನು ಮಠದ ಅಧಿಪತ್ಯದಲ್ಲಿ ಇನ್ನೂ ಇರಗೊಡಿಸಬಹುದೇ ಎಂದು ಬೋರ್ಡಿನವರೂ ಜನತೆಯೂ ಆಲೋಚಿಸಬೇಕಾಗಿದೆ" ಎಂದು ಹೇಳಿರುವರು.

ಶಿಷ್ಯವೃಂದವು ಇನ್ನಾದರೂ ಕಣ್ಣನ್ನು ತೆರೆದು ಮುಂದೆ ಬರುವುದೊಳ್ಳೆಯದು.

ವಿದೇಶ ವರ್ತಮಾನ.

—ಆಮೇರಿಕಾದ ವಾಶಿಂಗ್ಟನ್‌ನಲ್ಲಿ ಫೋನಸ್ ಸೈನ್ಯ, ನಿರುದ್ಯೋಗಿಗಳ ಸೈನ್ಯ, ಹುಟ್ಟುಗೊಂಡವರ ಸೈನ್ಯವೆಂಬ ಹಂಗಡಗಳ ಸಾವಿರಗಟ್ಟಲೆ ಜನರು ಕೊಂಗ್ರೆಸ್ಸಿನೆದುರು ತಮ್ಮ ಚಳವಳಿಯ ಕಳವಳ ಪ್ರದರ್ಶನ ಮಾಡಲು ಸಿದ್ಧರಾಗಿರುವರು.

—ಲಂಡನಿನ ಬರ್ನೀಸ್ ದೊರೆಗಳು ಒಂದು ಭಾಷಣಮಾಡುತ್ತಾ ಕ್ರಿಟನು ಹಿಂದುಸೀದೇಶವನ್ನು ಶಾಂತಗೊಳಿಸಿ ಗಾಂಧಿಯವರ ಸಹಕಾರವನ್ನು ಸಡೆಯುವುದು ಅಗತ್ಯವೆಂದು ಎಚ್ಚರಿಸಿರುವರು.

—ಕೆರೂಸಲೇಮಿನಲ್ಲಿ ದೊರೆತನದವರ ಮೇಲೆ ಜನಸಮುದಾಯವು ಹಂಗೆಯೇಳಲು ಸಿದ್ಧವಾಗಿದೆ. ದಂಗೆಯನ್ನು ಸಡೆಯಲು ಕೆನನ್ ಗಳೂ, ತೋಪುಗಳೂ ಹೊರಬಿದ್ದಿವೆ.

—ಕೆಸಡಾದ ಮಿಸಸಗಳೆಗಾದ ಎಚ್. ಎಸ್. ಫೆರ್ಗೂಸನ್ ಕೆಂಬ್ರೈ ನಗರದಲ್ಲಿ ನೆರೆಹಾವಳಿಯ ಸಂಬಂಧವಾದ ಕೆಲಸಗಳಲ್ಲಿ ನಿರತರಾಗಿದ್ದಾಗ ಟೀನಾ ಭಂಡಾಯಗಾರನೊಬ್ಬನು ಅವರನ್ನು ಕೊಂದನು.

—ಐರಿಷ್ ಫ್ರೀ ಸ್ಟೇಟ್‌ಗೆ ಗವರ್ನರ್ ಜನರಲರಾಗಿ ಮಿ ಡೆಸಿಯರ್ ಟ್ಯೂಡ್ಗೀ ಎಂಬವರು ನೇಮಕಹೊಂದಿದ್ದಾರೆ. ಇವರು ತನ್ನ ಸಂಬಳವನ್ನೆಲ್ಲ ಬೆಪ್ಪೆತ್ತಿದವನ್ನು ರಾಜ್ಯಕೋಶಕ್ಕೆ ಹಿಂದೆ ಬಯಸುವರೆಂದೂ ಯಾವ ಬಗೆ ವಿಶ್ಯಂಭಣೆಯ ಸಭೆಗಳಿಗೆ ಹೋಗಲೊಪ್ಪುವುದಿಲ್ಲವಾಗಿಯೂ, ಅಲ್ಲದೆ ಗವರ್ನರ ಜನರಲರ ಆರಮನೆಯಲ್ಲಿ ವಾಸಿಸಲೊಪ್ಪುವುದಿಲ್ಲವಾಗಿಯೂ ತಿಳಿಸುವುದಿದೆ. ತನಗೆ ಯಾವ ಆಡಂಬರವೂ ಬೇಡವೆಂದೇ ಇವರ ಹೇಳಿಕೆ.

—ಫ್ರೀ ಪ್ರೆಸ್ ಜರ್ನಲಿನ ೧೦,೦೦೦ ರೂಪಾಯಿ ಭದ್ರತಾ ಪ್ರಶ್ನೆ ವಿವರವನ್ನು ಇಂಡಿಯಾ ಸರಕಾರವು ವರ್ತಕರಿಗೊಂಡ ಕುರಿತು ಹೊರರಿಗೆ ಪ್ರಶ್ನೆ ಕೇಳಿದಾಗ—ತಾನು ಜರ್ನಲಿನ ಅಂದಿನ ಸಿಬ್ಬಂದಿ ಸಂಖ್ಯೆಯನ್ನು ಓದಲಿಲ್ಲವೆಂದೂ, ಇಂಡಿಯಾ ಸರಕಾರವೆ ಮಾಡಿರುವು ನ್ಯಾಯಸಮ್ಮತವಿರುವುದೆಂದೂ ಹೇಳಿದರು.

++ ++

ಒಳದೇಶ ವರ್ತಮಾನ

—ನ್ಯಾಯಾಸಭಾರಚನಾ ಸಮಿತಿಯೊಂದನ್ನು ಸ್ಥಾಪಿಸಿ ಭೂಮಿ ಮೂಲಕ ಗುರುವಯಸ್ಕರು ದೇವಸ್ಥಾನ ಪ್ರವೇಶ ಸಂಬಂಧ ಪ್ರಶ್ನೆಯನ್ನು ಸಂಸ್ಕರಿಸಬಹುದೆಂದು ಗಾಂಧೀಜಿಯವರ ಅಭಿಪ್ರಾಯವಿರುತ್ತದೆ.

—ಲಂಡನ್ನಿನ ಯುನಿವರ್ಸಿಟಿಯ ತೊಟ್ಟಿಲೇತಜ್ಞರಾಗಿ ತೃಂಗಂಬಲ್ಬಟ್ಟಿನ್ಸ್ ಫ್ರಿ ಆಸ್ಪತ್ರೆಯ ಎಕೇ ರಾತ್ರಿ ಔಂಷಯಂದಾಗಿ ಸುಟ್ಟುಹೋದುವು. ಬೆಂಕಿಯ ಕಾರಣ ತಿಳಿದುಬಂದಿಲ್ಲ. ತೊಟ್ಟಿಲೇತಜ್ಞರು ಅದೃಷ್ಟವು ಸರ್ವಮಾಲ್ಯಂ ತ್ಯಜೇಯವದೆ.

—ಮುಂಬಯಿ ಸ್ಥಿತಿಯ ಕ್ರಿಮಿನಲ್ ಜಸ್ಟೀಸ್ ಆಕ್ಟ್ ಅಡಿಯಲ್ಲಿ ಸಾಮಾನ್ಯ ಅಧಿಕಾರವನ್ನು ಈ ಆಕ್ಟಿನ ಸ್ಥಾಪಕ ಮಂತ್ರಿ ರಾಮಚಂದ್ರ ಬಾಬಾಜಿ ಸಾಳುಂಕೆಯವರಿಗೆ ಕೊಟ್ಟಿರುವರು. ಇವರು ತಿಲಕರ್ಮರಿಂಬವರ ಸ್ಥಿತಿಯು ವಿಷಮವಿದ್ದಾಗಿದೆ.

—ಹತಿಯರಬಳದ ರಾ ಬಹದ್ದೂರ್ ಪಂಡ್ಯನಾಚರಿಯವರು ಅರ್ಯಸಮಾಜದ ವಾರ್ಷಿಕೋತ್ಸವಕ್ಕಾಗಿ ರಾಷ್ಟ್ರಪತಿಗೆ ಹೋಗುವು ಮುಂದಿರವನ್ನು ಹೊಳ್ಳಿರನೆ ಅವರ ಹೇಳು ಬರಿದಾಯಿತು. ಅಧಿಕಾರಿಯರು ಕಾಣಿ!

—ದೇಶಭಕ್ತ ಶ್ರೀ ಕಾನಾಗು ಸಮಾಜಿಪರಾಯರು ಗಾಂಧೀಜಿಯವರನ್ನು ಮೊನ್ನೆ ಕಂಡು ಮಾತನಾಡಿ ಕಲ್ಲಿ ಹೋಗಿದೆ ಹಿಂದಿರುಗಿ ಅಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ ಪ್ರಚಾರಕಾರ್ಯವನ್ನು ನಡೆಸುತ್ತಿರುವರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ಶ್ರೀಮತಿ ಊರ್ಮಿಳಾದೇವಿ ಮೊದಲಾದವರು ಮದ್ರಾಸಿಗೆ ಬಂದು ಅಸ್ಪೃಶ್ಯತಾನಿವಾರಣಾ ಕಾರ್ಯದಮ್ಮ ಕೈಕೊಳ್ಳುವರು.

—ಟೀಪಾವರ ಇನ್ಸ್‌ಪೆಕ್ಟರ್ ಜನರಲರವರಿಗೆ ಭಯೋತ್ಪಾದಕ ಪತ್ರವನ್ನು ಆನಾಮಧೇಯಕನಾಗಿ ಬರೆದ ಅಮೃತಾಪಾಸ್ ಎಂಬವಳ ವಿಚಾರಣೆಯು ನಡೆಯುತ್ತಲಿದೆ. ಇವನ ಸಹೋದರನಾದ ಹರಕೃಷ್ಣ ಎಂಬವನು ಪಂಜಾಬ್ ಗವರ್ನರರ ಕೊಲೆಗೆ ಸಾಧಿಸಿದವನು.

—ಮದುರೆ ಜೈಲಿನ ಹೋಮ್ ಸುಪರಿಂಟೆಂಡೆಂಟರು ಮೇಲ್ವಿಚಾರಣೆ ಮಾಡುತ್ತಿರುವಾಗ ಚಿನ್ನಸ್ವಾಮಿ ತೇವರ ಎಂಬ ಕ್ರಿಮಿನಲ್ ಆಷಾಡಿಕನು ಅವರಿಗೆ ಘಟೆ ಘಟೆ ಎಂದು ಹೊಡೆಬಡಿಟ್ಟನು.

—ಚಿನ್ನಸ್ವಾಮಿಯ ಮೇಲಿನ ಸಹಾನುಭೂತಿಗಾಗಿ ಮಿಕ್ಕುಳಿದ ರಾಜಕೀಯ ಕೈದಿಗಳು ಮುಷ್ಕರ ಹಿಡಿಯಲು ಅವರಿಗೆ ಚಿನ್ನಸ್ವಾಮಿಯೇ ಹೆಚ್ಚು ಕಡಿಮೆ ಪಡಿಸಿ ಬಿಟ್ಟನು.

—ಮುಜಾಫರಪುರದಲ್ಲಿ ಳಳ್ಳಾಟಿಕೆಯ ಫೈಲ್ಸ್ ಟೆಲಿಫೋಗಳನ್ನು ರಚಿಸಿ ಉಪಯೋಗಿಸಿದುದಕ್ಕಾಗಿ ೨೩ ಮಂದಿಗಳು ಸ್ಪೇಶನಿಗೆ ಹೋಗಿರುವರು.

ಕಲ್ಕತ್ತದಲ್ಲಿನ ಹುಗ್ಲಿ ನದಿಯ ಬಳಿ ನಡಿಗಳ ಹಿಂದು ಒಂದು ಫೋರ್ಟ್ ಕಾಣ್ಕಳ್ಳಿ ನುಗ್ಗಿ ೪ ಮಂದಿಗಳಿಗೆ ಕಳ್ಳ ಪಲಾಯನಗೈದಿತು. ಒಬ್ಬನು ಮರಣ ಹೊಂದಿದನು.

ಪಂಡಿತ ಮಾಲವೀಯರು ಕಲ್ಕತ್ತದಲ್ಲಿ ಸಂಚರಿಸಿ ಹಿಂದೂ ಮುಸ್ಲಿಮ ಧುರೀಣರನ್ನು ಸಂದರ್ಶಿಸಿ ಮತಸಾಮ್ಯತೆಯ ಪರಿಷ್ಕಾರಕ್ಕಾಗಿ ಸಾಧಿಸುತ್ತಿರುವರು.

ಬೆನಾರಸ ಹಿಂದೂ ಯೂನಿವರ್ಸಿಟಿಯಲ್ಲಿ ಕಲಿಯುತ್ತಿದ್ದ ರಾಮಸುಖ ಪಾಂಡೇ ಎಂಬ ಬಿ. ಎಸ್‌ಸಿ ವಿದ್ಯಾರ್ಥಿಯು ಹೊಡೆದ ಚಡಿಯೆಂದಾಗಿ ವಿಷ ತಿಂದು ಪ್ರಾಣಹತ್ಯ ಮಾಡಿಕೊಂಡನು. ಮುಖ್ಯ ಸೂಪರಿಂಟೆಂಡೆಂಟರಿಗಾಗಿ ಕಾಲೆಯನ್ನು ಮುಚ್ಚಲಾಗಿತ್ತು.

ಮಿಡ್ನಾಪುರ ಮೆಜಸ್ಟ್ರೇಟರನ್ನು ಕೊಂದುದಕ್ಕಾಗಿ ಪ್ರದ್ಯೋತ ಭಟ್ಟಾಚಾರ್ಯನಿಗೆ ಮರಣದಂಡನೆಯು ವಿಧಿಸಲ್ಪಟ್ಟು, ಆದನ ತಾಯಿಯು 'ಮರ್ಸಿಪಿಟಿಷನ್' ಬರೆದುಕೊಂಡರೂ ಕರುಣೆ ತೋರಿಸಲಾಗಲಿಲ್ಲ.

ಬೆನಾರೆಸ್ ಹಿಂದೂ ಯೂನಿವರ್ಸಿಟಿ ವಿದ್ಯಾರ್ಥಿಯಾದ ಶ್ರೀ ಅಮರೇಂದ್ರನಾಥ ಸರ್ಕಾರ್ ಎಂಬ ಡೆಟಿನ್ಯೂವು ಬೆನಾರಸ್ಸನ್ನು ೧೨ ಘಂಟೆಗಳೊಳಗೆ ಬಿಡಬೇಕೆಂದು ಆಜ್ಞೆಯಾಯಿತು.

ಕರಾಚಿಯ ರಾಮಭಾಗ ವಿಕಾರಸ್ಥಾನದಲ್ಲಿ ಕಾಯದೆ ಭಂಗ ಚಳವಳಿಯ ಆರಂಭದಿಂದಲೂ ಹಾಕ್ಕಾಡುತ್ತಿದ್ದ ರಾಷ್ಟ್ರಧ್ವಜವನ್ನು ಯಾರೋ ತೆಗೆದುಬಿಟ್ಟಿರುವರು.

ಲಾಹೋರಿನ ಜೈಲಿನಿಂದ ಡಾ। ಆಲಮರನ್ನು ಶರ್ಟಾಬಿಲ್ಲದೆ ಖಾಸಗೀ ದಿನ ಬಿಟ್ಟುಬಿಟ್ಟಿರು.

ಲಾಹೋರಿನಲ್ಲಿ ಗಂಡನ ಶಿಕ್ಷೆಯನ್ನು ತಡೆಯಲಾರದೆ ಅವನನ್ನು ಕೊಂದಿಕ್ಕಿದ ಮೆಸಸೂಪ್ ಇಂದೋ ಎಂಬ ಸ್ತ್ರೀಯೊಬ್ಬಳಿಗೆ ಮರಣ ದಂಡನೆ ವಿಧಿಸಿರುವರು.

ಕರಾಚಿಯಲ್ಲಿ ಪೋಲೀಸರು ಪತ್ರೆ ನಡೆಸಿ ಕೊಂಗ್ರೆಸ್ ಕೆಲಸಗಾರರಾದ ಶ್ರೀ. ಅಮೃತ ಕೆ. ಕಂದಲ್ ಎಂಬವರನ್ನು ಕೆಲವು ಪತ್ರಕ್ಕ ಚಿಟ್ಟುಗಳ ಸಮೇತವಾಗಿ ಸೆರೆ ಹಿಡಿದಿರುವರು.

ಬಂಗಾಳ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಶಾಸನವು ಕೃಷ್ಣಾ ಕಲ್ಕತ್ತದಲ್ಲಿ ಸಾತ್ಯಸಿದ್ಧರಾದ ಶ್ರೀ. ನಿರೇನ್ ಚಂದ್ರವರ್ತಾಸನ್ನು ಸೆರೆಹಿಡಿದಿರುವರು.

ಕಳೆದ ಅದಿಕ್ಕವಾರ ಕರಾಚಿಯ ವಿಕಾರಭೂಮಿಯಲ್ಲಿ ರಾಷ್ಟ್ರ ಧ್ವಜವಂದನೆಯಾಗುವಾಗ ಪೋಲೀಸರು ಸಭೆಯನ್ನು ಚದರಿಸಿಬಿಟ್ಟಿರು.

ಕಲ್ಕತ್ತದಲ್ಲಿ ಒಂದು ಅಚಾನಕ್ಕಿ ಜಗಿ ಬಂಗಾಳ ದೇಶಭಯೀಷಿಗಳಾದ ಶ್ರೀ. ಸುಭಾಷಚಂದ್ರ ಮತ್ತು ಶ್ರೀ. ನಾಗಾಸುತ್ತರನ್ನು ಪ್ರಯಾಣಕ್ಕೆ ಪ್ರತಿಯಾಗಿ ಮಾಡಬೇಕಾಗಿ ಕಾರಣವಾಯಿತು. ಮೇರಿನ ಶ್ರೀಯರಿಗೆ ಸ್ಥಿತಿಯು ಹೆಚ್ಚು ಸುಧಾರಿಕಾಗಿರುವುದಿಲ್ಲವೆಂದು ತಿಳಿಯಬಂದಿದೆ.

++ ++

ಸಕಲೇಶಪುರದ ವಾರ್ತೆ.

(ನಮ್ಮ ಸ್ವಂತ ಸುದ್ದಿಗಾರರಿಂದ.)

ಹಾಸನದ ಡಿಪ್ಟಿ ಕಮ್ಮಿಷನರು ಶಾ. ೨೬–೧೧–೨೫ರಲ್ಲಿ ಇಲ್ಲಿಗೆ ಬಂದಿದ್ದು, ಇಲ್ಲಿಯ ರಾಷ್ಟ್ರೀಯ ಸಹಕಾರಿ ಸಂಘವು ಏರ್ಪಡಿಸಿದ್ದ ಸಭೆಗೆ ಹೋಗಿದ್ದರು. ಅವರು ಕಾರಿನಲ್ಲಿ ಕುಳಿತುಕೊಳ್ಳುವರೆಗೆ ಶಾಮಾಯಿ ಎಫೆಕ್ಟ್ ಬರೆಗೆ ಹೋಗಿ ಬಂದು ಶಾ. ೨೭–೧೧–೨೫ರಲ್ಲಿ ವಾಪಾಸು ಹಾಸನಕ್ಕೆ ಹೋಗಿರುತ್ತಾರಾಗಿ ತಿಳಿಸಿಬರುತ್ತದೆ.

ಈಗ ಯಾಲಕ್ಕಿ ವ್ಯಾಪಾರವು ಸಾಕಷ್ಟು ಉನ್ನತ ಸ್ಥಿತಿಯಲ್ಲಿದ್ದು ಈರೆ ಯಾಲಕ್ಕಿ ವರ್ತಕರು ಸ್ವಲ್ಪ ಹಸಿಮುಖರಾಗಿರುತ್ತಾರೆ.

ಇಲ್ಲಿಯ ಸಕಲೇಶ್ವರ ದೇವರಿಗೆ ಸನ್ನಿಧಿಯಲ್ಲಿ ಆಗಾಗ್ಗೆ ಹರಕೆಕ್ಕೆ ಭಾರಕೆ ಒಪ್ಪಿಸುವ ಸಮಾರಂಭದಿಂದಾದ ಭಕ್ತಾದಿಗಳು ಹಣಿಯ ಮಹಿಮೆಯನ್ನು ಸಹಿಯಿಸುತ್ತಿರುವರು.

ಮಂಗಳಾವಾಣಿ ಕೊಡ್ಲಿಪೇಟೆ ಸೆಕ್ಷನ್ ರೋಡೂ ಸಕಲೇಶಪುರ ಹಾಸನ ಸೆಕ್ಷನ್ ರೋಡೂ ಮತ್ತು ಬಿಸಿಲೆ ರೋಡೂ ಸ್ವಲ್ಪ ಮಳೆ ಬಂದಾಗಲೇ ಕೆಸ್ಸು ಪ್ರಯಾಣಿಕರಿಗೂ ಬಸ್ಸು ಸರ್ವಿಸಿನವರಿಗೂ ಮೇಲಿಂದ ಮೇಲೆ ತೊಂದರೆಯಾಗುತ್ತಿದೆ. ಸದರಿ ರೋಡುಗಳಿಗೆ ಜಲ್ಲಿಕಲ್ಲು ಹಾಕಿ ಸರಿ ಆಸುಕಾಸಿನ ತೋಡುಗಳಿಂದ ಬರೇ ಮಣ್ಣು ಹಾಕುತ್ತಿರುವುದೇ ಕಾರಣ. ಆದುದರಿಂದ ಸಂಬಂಧಪಟ್ಟ ಇಂಜಿನಿಯರರೂ ರೋಡು ಕಂಟ್ರಾಕ್ಟರರೂ ಸದರಿ ರೋಡುಗಳನ್ನು ಸರಿಪಡಿಸಿ ಪ್ರಯಾಣಿಕರಿಗೆ ಮತ್ತು ಬಸ್ಸು ಸರ್ವಿಸಿನವರಿಗೆ ಉಪಕಾರ ಮಾಡಬೇಕಾಗಿ ಕೋರುತ್ತೇವೆ.

ಇಲ್ಲಿಯ ಅಸಿಸ್ಟಾಂಟ್ ಸರ್ಜನರಾದ ಶ್ರೀ ಪಿ. ಶ್ರೀನಿವಾಸ ಮುದಲಿಯಾರರು ವರ್ಗಾಯಿಸಲ್ಪಟ್ಟು ಬೇಗುಗೊಳ್ಳುವ ಸಮಯ ಊರ ಪ್ರಮುಖರೂ, ವರ್ತಕರೂ ಸ್ಥಳೀಯ ಇಂಡಿಯನ್ ಕ್ಲಬ್ಬಿನಲ್ಲಿ ದಿಢೀರ್ ಕಮ್ಮಿಶನ್ನರ ಸಮಕ್ಷಮ ಸತ್ಕಾರ ಉಪಚಾರ ಮಾಡಿ ಕಳುಹಿಸಿರುವರು. ಶೋಣೇಗಾಲ್ ಶ್ರೀ ಬಸವೆ ಗೌಡರು ತಮ್ಮ ಬಂಗಲೆಯಲ್ಲಿ ಬಹಳ ಗಂಭೀರದಲ್ಲಿ ಸದರಿ ಅಸಿಸ್ಟಾಂಟ್ ಸರ್ಜನರಿಗೆ ಸತ್ಕಾರ ಉಪಚಾರ ಮಾಡಿರುವರು.

ಇಲ್ಲಿರುವ ಜಂಬರದಿ ಕ್ಯಾಶುಭಾಗರು ಮನೆಯಲ್ಲಿಲ್ಲದ ಸಮಯ ನೋಡಿ ಯಾರೋ ಕಳ್ಳರು ತಾ. ೨೬ ರಿಗೆ ೪ರ ರಾತ್ರಿ ಕಳವು ಮಾಡಿರುತ್ತಾರಾಗಿಯೂ ಸ್ಥಳೀಯ ಸಬ್ ಇನ್ಸ್‌ಪೆಕ್ಟರರು ತನಿಖೆ ಮಾಡಿ ಸಂಬಂಧಪಟ್ಟು ಕಳ್ಳರನ್ನು ಹಿಡಿಯುವ ಪ್ರಯತ್ನದಲ್ಲಿರುವರಾಗಿಯೂ ತಿಳಿದುಬರುತ್ತದೆ.

ಹಗಲಲ್ಲಿ ಭಯಂಕರ ಕೊಲೆ.

ತಾ. ೨೯–೧೧– ೨೫

ಸಕಲೇಶಪುರದಿಂದ ಒಂದು ಮೈಲು ದೂರವಿರುವ ಆಚಂಗಿ ಎಂಬಲ್ಲಿ ಯಾರೋ ದ್ವೇಷಿಗಳು ಈ ದಿನ ಸುಮಾರು ೪ ಗಂಟೆಗೆ ಇಬ್ಬರನ್ನು ಕತ್ತಿಯಿಂದ ತಿವಿದು ಹಾಕಿರುವರು. ಅವರ ಪೈಕಿ ಒಬ್ಬರು ಅಕ್ಷಣವೇ ಮೃತಪಟ್ಟಿರುವರು. ಇನ್ನೊಬ್ಬರು ಗುಟುಕು ಜೀವದಲ್ಲಿರುವರು ಅಸ್ಪರಲ್ಲಿಯೇ ಅವರೊಡನೆ ಇದ್ದ ಒಬ್ಬ ಹೆಂಗಸು ತನ್ನ ಮಗುವನ್ನು ಅಲ್ಲಿಯೇ ಬಿಟ್ಟು ಸಕಲೇಶಪುರಕ್ಕೆ ಓಡಿ ಬಂದು ಸ್ವೀಕ್ಷನಿಗೆ ತಿಳಿಸಿದೊಡನೆ ಇಲ್ಲಿಯ ಸಬ್ ಡಿವಿಜನಲ್ ಆಫೀಸರರು ಅವಸರದೊಡನೆ ಹೊರಟು ಆಯಾ ಸ್ಥಳಕ್ಕೆ ಹೋಗಿ ಗುಟುಕು ಜೀವದಲ್ಲಿರುವವರ ಮರಣ ವಾಗ್ಮೂಲ ಬರಿಸಿಕೊಂಡಿರುವರು ಮರಣ ವಾಗ್ಮೂಲದಲ್ಲಿ ಕತ್ತಿಯಿಂದ ತಿವಿದವರ ಹೆಸರನ್ನೂ ತಿವಿಸಿದವರ ಹೆಸರನ್ನೂ ಹೇಳಿರುವರಾಗಿ ತಿಳಿದು ಬರುತ್ತದೆ. ಸಾಯಂಕಾಲ ಸಕಲೇಶಪುರ ಟೌನ್ಸ್ ಎಲ್ಲಾ ಎಂಬಂತೆ ನೋಡಲಿಕ್ಕೆ ಹೋಗಿಯವರು. ಅಮಲ್ದಾರರೂ ಸಬ್ ಇನ್ಸ್‌ಪೆಕ್ಟರರೂ ಪೋಲೀಸ್ ಕಸ್ಟೇಬಲರೂ ರಾತ್ರಿ ೯ರಾ ಪುರಿನಿಯಾದ ಸ್ಥಳಕ್ಕೆ ಹೋಗಿ ಬರುವುದೇ ಕೆಲಸವಾಯಿತು

ಪುಬ್ಬಾಗಿ ಸಬ್ ಡಿವಿಜನಲ್ ಆಫೀಸರರು ತನಿಖೆಮಾಡಿರುವುದರಿಂದಲೂ, ಊರವರೆಲ್ಲಾ ಕಕ್ಕಾರಿ ನೋಡಿರುವುದರಿಂದಲೂ ಸದರಿ ಕೇಸನ್ನು ಕೂಡಲೇ ತನಿಖೆ ಮಾಡಿ ಕೊಲೆಗಡಕರನ್ನು ಹಿಡಿದು ತಕ್ಕ ಶಿಕ್ಷೆ ವಿಧಿಸುವರಾಗಿ ಹಾರೈಸುತ್ತೇನೆ

ಗುಟುಕು ಜೀವದಲ್ಲಿ ಮಲಗಿರುವವರು ಒಬ್ಬ ಪಟೇಲರೆಂದೂ ಇವರಿಗು ಸಂಬಂಧ ವ್ಯಾಜ್ಯವಾಗಿ ಗುಣಾಹೊಂದುವ ಸಂದರ್ಭ ಎದುರು ಪಾರ್ಟಿಯವರು ದ್ವೇಷದಿಂದ ಕೊಲೆ ಮಾಡಿರುವರಾಗಿಯೂ ಅಪಾಯ ಹೊಂದಿದವರ ಸ್ಥಿತಿಯು ನೋಡಲಿಕ್ಕೆ ಬಹಳ ಭಯಂಕರದಿತ್ತೆಂದೂ, ಸಾಯದೆ ಬದುಕಿರುವವರನ್ನು ಈ ದಿನವೇ ಸಕಲೇಶಪುರಕ್ಕೆ ಸಾಗಿಸಿರುವರೆಂದೂ ತಿಳಿದುಬರುತ್ತದೆ ಮುಂದಿನ ಸಂಗತಿ ಯಥಾವಕಾಶವಾಗಿ ತಿಳಿಸುವೆವು

-+-+-+-

ಸ್ವೀಕಾರ.

ಆಯುರ್ವೇದೌಷಧ ಸಿದ್ಧತೆಯಲ್ಲಿ ಸರ್ವಪ್ರಸಿದ್ಧವಾದ ಮುಂಬಾಯಿಯ ದಿ ಧನ್ವಂತರಿ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಇವರ ಪರವಾಗಿ ಇವರ ಸಮಗ್ರ ಕರ್ನಾಟಕದ ವಿಜಯಿವಾಡ ಪಂಡಿತ್ ಮತ್ತು ಕುಂಬಿಸ್ತ ತೀರ್ಥಹಳ್ಳಿ, ಮೈಸೂರು ಸ್ಟೇಟ್, ಇವರು ಪ್ರಕಾಶಿಸಿದ ೧೫ ಆಣೆ ಬೆಲೆಯುಳ್ಳ ಆಯುರ್ವೇದ ಚಿಕಿತ್ಸಾ ಸಂಗ್ರಹವೆಂಬ ೪೦೦ ಪುಟಗಳ ಒಳ್ಳೇ ಮುದ್ರಣ, ಮತ್ತು ಆಗಾಧವಾದ ಸರ್ವಸುಂದರವಾದ ಆಯುರ್ವೇದ ಗ್ರಂಥವೊಂದನ್ನು ಅತ್ಯಗತವಾಗಿದೆ. ಅಲ್ಲದೆ ಮುಂಬಾಯಿಯ ಈ ಔಷಧಿಯಾಲಯದ ವಿಜಯಿಯು ತಯಿಸಾಗಿ ಸಮೀಕ್ಷ ಧನ್ವಂತರಿ ಪ್ರಭಾಕರ ಪ್ರಾಕೃತ ಲೇಹಾದಿ ಮತ್ತು ಧನ್ವಂತರಿ ಪ್ರಭಾಕರಾಸವದಿ ಸಣ್ಣ ಸೀಸೆಗಳಲ್ಲಿ ಸಮ್ಮ ಸೈಸಿರುತ್ತಿದ್ದು, ಇವರ ಸ್ಥಳೀಯ ವಿಜಯಿಯು ಶಾ. ಕಂಚಿನಿ

ದಕ್ಷಿಣ ಕನ್ನಡ.

ಮಂಗಳೂರು — ಸುರತ್ಕಲ್ ಸರ್ಕಲಿನ ದಿ. ಬೋರ್ಡು ಮೆಂಬರೆ ಸ್ಥಾನವೊಂದು ಖಾಲಿಬಿದ್ದಿರುವುದರಿಂದ ಆ ಸ್ಥಾನಕ್ಕೆ ರಾವ್ ಬಹದ್ದೂರ್ ಎನ್. ಎನ್. ಸುಬ್ಬಾರಾವರು ಉಮೇದ್ವಾರರಾಗಿ ನಿಲ್ಲಲಿರುವರೆಂದು ತಿಳಿಸಬರುತ್ತದೆ

ಮಂಗಳೂರು ತಾಲೂಕು ಬೋರ್ಡಿನ ಸಭೆಯೊಂದು ಇದೇ ದಕ್ಷಿಣದ ತಾ ೧೩ನೇ ಸೋಮವಾರ ಅಪರಾಹ್ನ ಘಂಟೆ ೨ಕ್ಕೆ ಆದರ ಆಫೀಸಿನಲ್ಲಿ ಜರಗುವುದು

ಪ್ರಾಂತಿಕ ಮತ್ತು ಬೋರ್ಡು ತೆರಿಗೆಗಳನ್ನು ಅದಷ್ಟು ಕಡಿಮೆ ಮಾಡಲಾಗುವುದೆಂದು ಹೊಸ ದಿ ಬೋರ್ಡು ಪ್ರೆಸಿಡೆಂಟರಾದ ಶ್ರೀ ಎ ಪಿ ಶೆಟ್ಟಿ ಎಂ ಎಲ್ ಸಿ ಇವರು ಆಶ್ವಾಸನೆಯಿತ್ತಿರುವರು.

ತಾ. ೨೬ನೇ ದಿನ ಇಲ್ಲಿಯ ಗವರ್ನಮೆಂಟ್ ಕೋಲೇಜಿನ ವಾರ್ಷಿಕೋತ್ಸವವು ರೌಂಡ್‌ಟೇಬಲ್ ಪ್ರತಿನಿಧಿಗಳಾದ್ದ ಮಿಸೆಸ್ ಸಬ್ಬರಾಯನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು

ಅಖಿಲ ಭಾರತ ಅಸ್ಪೃಶ್ಯತಾ ನಿವಾರಣೆ ಸಭೆಯ ಜನರಲ್ ಸೆಕ್ರಿಟರಿಗಳಾದ ಶ್ರೀ ಎ ವಿ ಥಾಕೂರರವರು ಬರುವ ವಾರದಲ್ಲಿ ಇಲ್ಲಿಗೆ ಬರಲಿರುವರೆಂದು ತಿಳಿದುಬಂದಿದೆ

ಇಲ್ಲಿಯ ಬಾಸೆಲ ಮಿಶನ ಪ್ರೆಸ್ಸಿನ ಮೆನೆಜ್‌ಮೆಂಟಿನಲ್ಲಿ ವ್ಯತ್ಯಿಸ್ಥ ಬಾಗಲಿರುವುದೆಂದು ಕಂಠಿರವ ನಲ್ಲಿ ಬರಿದಿದ್ದ ಅಡೆಂದು ಅಬದ್ಧ ಸುದ್ದಿಯು ಸತ್ಯವಾದುದಲ್ಲವೆಂದೂ ಸೆರೆಂದಿ ಮ್ಯಾನೆಜರನ್ನು ಬರ್ತಾರಾಯಿಸುವುದೆಂಬ ವಿಷಯ ನಿಜವಲ್ಲವೆಂದೂ ಮಿಸ್ ಜೆ ಫ್ರೈಂಕ್ ಇವರು ತಿಳುಬಿಸಿರುತ್ತಾರೆ.

ಜಿಲ್ಲಾ ಮೆಡಿಕಲ್ ಎಸೋಸಿಎಶೀನಿನ ಒಂದು ಸಭೆಯು ಇದೇ ತಾ ೪ನೇ ದಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಜರಗುವುದು ಮದರಾಸಿನ ರಾ। ರಾ। ರಾವುರವರ ದಿ ಎಂ ಆರ್ (ಬಿಯನ್ನಾ) ಇವರು ಭಾಷಣ ನೂಡಲಿರುವರು

ಇದೇ ತಾ ೨ನೇ ಸೋಮವಾರ ಸಂಜೆ ಘಂಟೆ ೫ ೩೦ಕ್ಕೆ ಎ ಂಗ ಊರು ಮುನಿಸಿಪಾಲಿಟಿ ಕೌನ್ಸಿಲ್ ಸಭೆಯೊಂದು ಜರಗುವುದು

ಇಲ್ಲಿಯ ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳಾದ ಶ್ರೀಯುತ ಎ ಬಿ ಶೆಟ್ಟಿಗೆ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷ ಪದವಿಯು ದೊರೆತ ಗೌರವಾರ್ಥವಾಗಿ ಅದೇ ಶಾಲೆಯ ಹಳೆ ವಿದ್ಯಾರ್ಥಿಸಂಘದ ಪರವಾಗಿ ನಿನ್ನೆ ರಾತ್ರಿ ೮ ೩೦ಕ್ಕೆ ಇಲ್ಲಿಯ ಸಾಹುಕಾರ್ ರಾ ಉಳ್ಳಾಲ ಶ್ರೀನಿವಾಸ ಮಲ್ಯರು ಫಲಹಾರಾದಿಗಳಿಂದ ಸತ್ಕರಿಸಿದರು

ಸ್ಥಳೀಯ ಶ್ರೀಕೃಷ್ಣ ಸಿನೆಮಾ ಟೋಕಿ ಮಂದಿರದಲ್ಲಿ 'ವನ್ ಹೆವನ್ಲಿ ನೈಟ್' ಚಿತ್ರದ ನಂತರ 'ದಿ ಲೊಟ್ಟು ಬ್ರೈಡ್' ಎಂಬ ಪೂರಾದುದ ಚಿತ್ರವು ಪ್ರದರ್ಶಿಸಲ್ಪಡುವುದು ಈ ಚಿತ್ರವು ಆರ್ಥರ್ ಹೆಮರ್ಸ್ಟನ್ನರ ಉತ್ಪನ್ನ ಯನೈಟೆಡ್ ಆರ್ಟಿಸ್ಟರ ಚತ್ರ ಜೆನೆಟ್ ಮೆಕ್‌ಡೊನಾಲ್ಡ್ ಜೋನ್ ಗಿಲ್ಬರ್ ಜೊ ಬೌನಾ ಮೊದಲಾದ ನಟಿನಟಮಣಿಗಳಿಂದ ಅಧಿನಯಿಸಲ್ಪಟ್ಟರುವ ಚಿತ್ರಪ್ರದರ್ಶನ ಭೋರ ಘಟನಾವಳಿಗಳಿಂದಲೂ ಭಯಂಕರ ದೃಶ್ಯವಳಿಗಳಿಂದಲೂ, ಶೃಂಗಾರ ರಸದಿಂದಲೂ ತುಂಬಿ ತುಳಿ-ಕಾಡುತ್ತಿದೆ ಆತಿ ಬೇಗನೇ ಮಿಸ್ ಜುಬೇದ ಮಿ ಜಾಲ್‌ಮರ್ಚೆಂಟ್ ಎಂಬ ಸಿನೆಮಮಣಿಗಳಿಂದ ಅಧಿನಯಿಸಲ್ಪಟ್ಟರುವ, ಸಾಗರ ಕಂಪೆನಿಯವರ 'ವಿಮಾರಾಬಾಯಿ' ಎಂಬ ಮಾತಾಡುವ, ಹಾಡುವ ನರ್ತಿಸುವ ಚಿತ್ರವನ್ನು ಪ್ರದರ್ಶಿಸಲಾಗುವುದು ಮತ್ತು ಜೋನ್ ವೇನ್ ಮಾರ್ಗರೆಟ್ ಆರ್ಟಿಲ್, ಎಲ್ ಬ್ರೆಂಡಲ್, ಟ್ಯುಲಿ ಮಷೆಲ್ಲಾ, ಟೆರನ್ ಪವರ್, ಡೇವಿಡ್ ರೋಲಿನ್ಸ್ ಮತ್ತು ೩೦,೦೦೦ ಅಧಿನಯ ಶಿಷ್ಟಾಮಣಿಗಳಿಂದ ವನ ಮಗ್ನಕರವಾಗಿ ಅಧಿನಯಿಸಲ್ಪಟ್ಟರುವ 'ದಿ ಬಿಗ್ ಟ್ರ್ಯಾಯಲ್' ಎಂಬ ಮಾತಾಡುವ ಚಿತ್ರವು ಪ್ರದರ್ಶಿಸಲ್ಪಡುವುದು. ಇದಕ್ಕೆ ಸರಿಯಾದ ಚಿತ್ರವು ಉತ್ಪನ್ನವಾಗಿಲ್ಲವೆಂದು ಲೋಕವೇ ಕೊಂಡಾಡುತ್ತಿದೆ ೩೦,೦೦೦ ಕ್ಯೂರ ಕಾಡು ವ್ಯಗಗಳೊಡನೆ ಯುದ್ಧ! ೫೦೦೦ ಕಾಡು ಕೋಣಗಳಿಗೂ, ೩೫೦೦ ಹಿಂದೂಸ್ಥಾನದ ಯುದ್ಧ ಸ್ವಬಲಿಗಳಿಗೂ ಭಯಂಕರ ಯುದ್ಧ!

ಉಡುಪಿ — ಶ್ರೀ ನಾರಾಯಣ ಶ್ರೀನಿವಾಸ ರಾಜ ಪುರೋಹಿತರು - ಇವರು ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿಗೆ ಸದಸ್ಯರನ್ನು ಸೇರಿಸುವರೆ ಮತ್ತು ಶ್ರೀ ಮನ್ಮಧ್ವಾಚಾರ್ಯರ ಚೀನಾದ ಚರಿತ್ರೆಯ ಸಂಬಂಧವಾದ ವಿಷಯಗಳನ್ನು ಸಂಗ್ರಹಿಸುವರೆ ಬಂದವ ರಿದ್ದು—ತಾ. ೨೫ಕ್ಕೆ ಶ್ರೀಕೃಷ್ಣ ಹೈಸ್ಕೂಲಿನಲ್ಲಿ ಇತಿಹಾಸದ ವಿಷಯ ಕೂಡುವುದರ ಅವಶ್ಯಕತೆ ಕರ್ನಾಟಕ ಇತಿಹಾಸದ ವೈಶಿಷ್ಟ್ಯ ತಾನ್ರು ಶಾಸನ ಶಿಲಾಶಾಸನಗಳು ಪ್ರಾಚೀನ ಕರ್ನಾಟಕದ ವಿಸ್ತೀರ್ಣ ಮತ್ತು ವೈಭವ, ಪುಲಕೇಶಿ ಮೊದಲಾದ ಕರ್ನಾಟಕಾಂತ ಅರಸರ ಉದಿತಾಸಿ ವಿದ್ಯಾರ್ಥಿಗಳಿಗೆ ಬೋಧಪರ ಭಾಷಣವಿತ್ತರು

ತಾ ೨೬ನೆಗೆ ಇಲ್ಲಿನ ತಾಲೂಕು ಬೋರ್ಡಿನ ಪ್ರಥಮ ಸಭೆಯು ಸೇರಿತ್ತು. ಸರಕಾರದ ಆರ್ಡರುಗಳನ್ನು ಸಭೆಯ ಮುಂದೆ ಓದಿ ಮುಂಜೂರು ಮಾಡುವುದೇ ಮುಖ್ಯ ಕಾರ್ಯಕ್ರಮವಾಗಿತ್ತು. ಅಲ್ಲದೆ ಉಂಬಾಪುರ ದಿವಿಜನ್ ಎಕ್ಸ್‌ಟೆಜ್ ಕಮಿಟಿಗೆ ಚುನಾಯಿಸಬೇಕಾಗಿದ್ದ ಒಬ್ಬ ಸದಸ್ಯನವು ರಾ. ಯು ಸದಿಯ ಮರಕಾಲನವರಿಗೆ ಸರ್ವಾನು ಮತಿಯಿಂದ ಮುಂಜೂರಾಯಿತು.

ತಾ. ೨೬ಕ್ಕೆ ಸಾಯಂಕಾಲ ರಥಬೀದಿಯಲ್ಲಿ ವಾಡಿಕೆಯಂತೆ ಶ್ರೀ ಕೃಷ್ಣೋತ್ಸವವು ಅಧ್ಯಕ್ಷತೆಯಲ್ಲಿ ಅಸ್ಪೃಶ್ಯತಾ ನಿವಾರಣೀ ಸಭೆಯ ಪರವಾದ ಮಹಾಸಭೆ ಭಾಷಣಗಳಿಮ್ಮವು.

ತಾ ೨೫ಕ್ಕೆ ಇಲ್ಲಿಗೆ ಬಾಸೆಲ್ ಮಿಷನ್ ಇಂಡಸ್ಟ್ರಿಯರಾಜ ಮಿಷಾರ್ಟಿಸ್ಟ್ರಿಸ್ಟರು ಚಿತ್ರಿಸಿಸಿದ್ದರು, ಇವರನ್ನು ಪ್ರೊಟೆಸ್ಟಾಂಟ್ ಕ್ರೈಸ್ತರು ಸ್ವಾಗತೀಕರಿಸಿದರು.

ಹಲವು ವರ್ಷಗಳಿಂದ ಜನಪ್ರೀತ ಪೋಸ್ಟ್‌ಮಾಸ್ತರಾಗಿದ್ದ ಶ್ರೀ ಶೇಷನವರು ತಾ ೨೫ರಲ್ಲಿ ಪೆನ್ಶನ್ ಪಡೆಯುವೆಂದು ವಿಶ್ವಂಭರಯ ವಿದಾಯ ಸತ್ಕಾರಗಳಿಮ್ಮವೆಂದು ತಿಳಿದು ಬರುತ್ತದೆ

ಪೆರ್ಡೂರಲ್ಲಿ ಭಯಂಕರ ಪೆಟ್ಟುತಿಂದು ಉಡುಪಿಯ ೧೦ನೇ ಸರ್ವಾಧಿಕಾರಿಯಾಗಿ ಜೈಲು ಸೇರಿದ್ದ ಶ್ರೀ ಲಕ್ಷ್ಮಿನಾರಾಯಣ ಬಲ್ಲಾಳರು ತಮ್ಮ ಸಂಪೂರ್ಣ ಶಿಕ್ಷೆಯನ್ನು ಅನುಭವಿಸಿ ತಾ. ೨೬ರಲ್ಲಿ ಬಿಡುಗಡೆಹೊಂದಿ ಬಂದಿರುವರು

ಕಾಸರಗೋಡು — ಇಲ್ಲಿಯ ಬಜಾರಿನ ನಡುಮಧ್ಯೆಯಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದ ಎದುರುಗಡೆಯ ಸಣ್ಣ ಮೈದಾನಿನಲ್ಲಿ ಇಂದು (೩೬–೧೧–೨೫)ರಲ್ಲು ಈ ಮಾಸದ ಕೊನೆಯ ಅದಿತ್ಯವಾರವಾದುದರಿಂದ, ಅಖಿಲ ಹಿಂದೂಸ್ಥಾನದಲ್ಲಿ ನಡೆಯುವಂತೆ ಇಲ್ಲಿಯು ಧ್ವಜ ವಂದನೆ ಸಾಂಗ್ಯವಾಗಿ ನೆರವೇರಿತು. ದೆಶ ದಿಕ್ಕು ಗಳಲ್ಲಿಯೂ ಹರ್ಷಿತ ಸ್ವಯಂಸೇವಕರ ಜಯಘೋಷವು ಧ್ವಜಾ ವಂದನೆಯು ಮುಗಿಯುವ ವರೆಗೂ ಇದ್ದು ಪೋಲೀಸರ ಸುಳಿವಿಲ್ಲದ್ದು ಆಶ್ಚರ್ಯವೇ ಸರಿ!

ತಾ ೨೦–೧೧–'೩೨ರಲ್ಲು ಕಾಠಡ್ಕ ರಿಜರ್ವ ಕಾಡಿಗೆ ಜಲ್ಲಿ ಕಾನೂನನ್ನು ಉಲ್ಲಂಘಿಸಿಲು ಹೋದ ಕೆ ಶಂಕರ ವಾರಿಯರ್ ಅಪ್ಪ ನಾಯರ್ ಮತ್ತು ಶಂಕರನಾರಾಯಣ ವಾರಿಯರ್ ಎಂಬ ಸ್ವಯಂ ಸೇವಕರು ತಾ ೨೬–೧೧– ೩೨ ವರೆಗೆ ರಿಮಾಂಡಿನಲ್ಲಿದ್ದು ಕಠಿಣ ಸಜೆಗೆ ಒಳಗಾದರು

ತಾ ೨೪ ೧೧– ೩೨ಕ್ಕೆ ಪುತ್ತೂರು ದಿವ್ಯಟ ಕಲೆಕ್ಟರ ಕೋರ್ಟಿನಲ್ಲಿ ಇಟ್ಟು ಪಬ್ಲಿ ಪಟೇಲರ ಅಪೀಲಿನ್ನು ತಾ ೭–೧೨– ೩೨ಕ್ಕೆ ಮುಂದ ರಿಸಿಟ್ಟಿರುತ್ತದೆ

ಪಡುಬಿದ್ರೆ — ಇಲ್ಲಿಯ ಶೀನಿಯ. ಮಾಮೂಲು ಪ್ರಕಾರ ಆಗತಕ್ಕ ಕಂಬಳವು ಇದೇ ಅಂಗೀರಸ ಸಂ ಮಾರ್ಗಶಿರ ಬ ೯ಯಿ ಗುರುವಾರ ಪೆಂರ್ದಿ ೯ ಸಲುವ ತಾ ೨೬–೧೨– ೩೨ ಗಲ್ಲಿ ಜರಗುವುದ

ಪೊಳಲಿ: — ಇಲ್ಲಿಯ ಭಜನಾ ಮಂಡಲಿಯವರು ಎಂದಿನಂತೆ ಈ ವರುಷವೂ ಇದೇ ೫। ೬। ಪಾಡ್ಯದಿಂದ ಭಜನೆ ನಡೆಸಿ ಬರುತಿದ್ದು ಹುಣ್ಣಿಮೆಯ ದಿವ ಅಹೋ ರಾತ್ರಿ ದೇವೀ ಸನ್ನಿಧಿಯಲ್ಲಿ ಭಜನೆ ನಡೆದು ಮಂಗಳದ ಅವಭೃತವಾಗಿ ದೇವಸ್ಥಾನದಲ್ಲಿಯೇ ಸಮಾರಾಧನೆ ನಡೆದು ಕೊನೆಗೊಂಡಿತು

ಮೂಲ್ಕಿ: — ಸ್ಥಳೀಯ ಬೋರ್ಡು ಹಾ ಎ ಶಾಲಾ ವಿದ್ಯಾರ್ಥಿಗಳ ತರ್ಕ ಸಂಪದ ಸೇತ್ರತ್ವದಲ್ಲಿ ಇದೇ ಕಳೆದ ತಾ. ೨೬–೧೧ ೩೨ನೇ ಶನಿವಾರ ಪೂರ್ವಾಹ್ನ ಸ್ಥಳೀಯ ಶ್ರೀ ರಾಧಾಕಾಂತ ಪ್ರೆಸ್ಸಿನ ಮ್ಯಾನೆಜಿಂಗ್ ಶ್ರೀ ಪಿ ವಿ ಭಟ್ಟರು ವಿಗ್ರಹಾರಾಧನೆಯ ಅವಶ್ಯಕ ಎಂಬುದರ ಕುರಿತಾಗಿ ವ್ಯಖ್ಯಾನ ಮಾಡಿದರು

ಈ ಶಾಲೆಯ ಬಗ್ಗೆ ಮುಂಬಯಿಯಲ್ಲಿ ತಮ್ಮದೊಂದು ದೇಣಿಗೆಯನ್ನು ಪ್ರದರ್ಶಿಸಿದ ಶ್ರೀ ಪ್ರೊಫೆಸ್ ' ಶೇಷಪ್ಪನವರಿಗೂ ಅವರ ವಿದ್ಯಾರ್ಥಿ ಮಂಡಲಕ್ಕೂ ಹಾಗೂ ಈ ಮಹತ್ಕಾರ್ಯದಲ್ಲಿ ವಿಶೇಷ ಪರಿಶ್ರಮವನ್ನು ವಹಿಸಿದ ಶ್ರೀಗಳಾದ ಕೇಶವ, ಬಿ ದೇವ'ಜಿ ಪಿ ಕೆ ಕೋಟ್ಯಾನ್ ಶಂಕರ ಕೆ ಕೋಟ್ಯಾನ್ ಎಚ್ ನೀಲಕಾಂತ, ಎಸ್ ಕೆ ಮೈಂದನ್ ಜ ಪಿ ಕಾಮತ್, ನಾಗೇಶ ಎ ಶೆಣ್ಯೆ ಕಾಂತು ವಿ ದೇವಡಿಗ ಇವರೇ ಮೊದಲಾದವರಿಗೂ ಮತ್ತು ಟಿಕೇಟು ಮಾರಾಟದಲ್ಲಿ ಭಾಗವಹಿಸಿದ ಎಲ್ಲಾ ಮಹಾಶಯರಿಗೂ, ಅದು ಹೊರತು ಪ್ರತ್ಯೇಕ ದ್ರವ್ಯಸಹಾಯ ಮಾಡಿದ ಎಲ್ಲಾ ಉದಾರ ಮಹಾಶಯರಿಗೂ, ಸಂಸ್ಥೆ ಗಳಿಗೂ ಈ ಶಾಲಾ ಅಡಳಿತೆ ಮಂಡಳಿಯು ಬಿರ ಕೃತಜ್ಞರಾಗಿರುತ್ತಾರೆಂದು ತಿಳಿಸುತ್ತಾರೆ

ಸುರತಕಲ್ಲು — ಇಲ್ಲಿಯ ಕೆಥೋಲಿಕ ಬಂಧುಗಳ 'ಸೇಕ್ರೆಡ್ ಹಾರ್ಟ್ ದೇವಾಲಯ'ಕ್ಕೆ ಕಳೆದ ತಾ ೨೪ನೆಯ ದಿನ ಮಂಗಳೂರು ದಿಷೋಸರಾದ ರೈಲ್ ರೆವರೆಂಡ್–ಡಾಕ್ಟರ್ ಪಿ ಆರ್ ಫ್ಲೆರ್ನಾಂಡಿಸರು ಚಿತ್ರೈಸಿ ಎರಡು ದಿನಗಳಿದ್ದು, ವೇಷಾನರಕ್ಕೆ ಕೆರಳಿರುವರೆಂದೂ, ಈ ಸಂದರ್ಭದಲ್ಲಿ ಈ ದೇವಾಲಯದ ರೆ ಫಾ ಎಸ್ ಎಫ್ ಪಿನೇಜರರು ಭಕ್ತವೃಂದ ಸಹಿತ ಬೇಂಡುವಾಡ್ಯಾದಿಗಳ ಘೋಷ ಗಳಿಂದ ಸ್ವಾಗತ ಸತ್ಕಾರಾದಿಗಳನ್ನು ಸಂಭ್ರಮದಿಂದ ಜರುಗಿಸಿರುವ ರೆಂದು ತಿಳಿಸಲು ಸಂತೋಷವಾಗುತ್ತದೆ

ಕುಳಾಯಿ ವಿಷ್ಣುಮೂರ್ತಿ ದೇವಾಲಯದಲ್ಲೂ ಸೂಟೂರು ಮಹಾಲಿಂಗೇಶ್ವರ ದೇವಾಲಯದಲ್ಲಿಯೂ ತಾ ೨೪ನೇ ಗುರುವಾರ ದಿವಾ ರಾತ್ರಿ ಭಜನೆಯು ನಡೆಯಿತು.

ಕಳೆದ ತಾ ೨೩ನೆಯ ಭಾನುವಾರ ಸಾಯಂಕಾಲ ಗಂಟೆ ೪ಕ್ಕೆ ಶ್ರೀ ಚಿತ್ರಾಪುರ ಮಹಾಧೀಶರು ತಮ್ಮ ಶ

ಹರಿಜನರನ್ನು ಪರಿಷತ್ತಿಗೆ ಕರೆಯಬೇಕು

(ಕಳೆದ ಸಂಚಿಕೆಯಿಂದ ಮುಂದುವರಿದು)

ಇದಕ್ಕೆ ಮಧ್ಯೆ ಹಿಂದಿನಿಂದಾಗಿ, ಈಶ್ವರನಿರುವನೆಂದು ನಾವು ತಪ್ಪದಿ ಕಾರ್ಯದಿಂದ ಕರೆಗಡೆಸುವ ಯಾವ ಸ್ಥಳಕ್ಕೂ ಅವರನ್ನು ನಾವು ಬರಲೀಯುವುದಿಲ್ಲ. ಜಾತುರ್ವರ್ಣದವರಂತೆ ಅವರು ಸಾರ್ವಜನಿಕ ಮಾರ್ಗ, ಸಾರ್ವಜನಿಕ ಶಾಲೆ, ಸಾರ್ವಜನಿಕ ಆಸ್ಪತ್ರೆ, ಸಾರ್ವಜನಿಕ ಬಾವಿ, ಸಾರ್ವಜನಿಕ ಕೆರೆಕುಂಟೆ, ಸಾರ್ವಜನಿಕ ಉಪವನಗಳನ್ನು ಮೊದಲಾದುವುಗಳ ಉಪಯೋಗವನ್ನು ಹೊಂದಬಾರದೆಂಬ ನಿಬಂಧನೆಯಾಗಿ ಬಿಟ್ಟಿದೆ. ಅವರಿಗೆ ಇವೆಲ್ಲ ತಿರಸ್ಕೃತವಾಗಿವೆ. ಕೆಲವು ಸಂದರ್ಭಗಳಲ್ಲಿ ಅವರು ಜಾತಿಹಿಂದೂಗಳನ್ನು ದೂರದಿಂದಾದರೂ ಸೋಂಕಿದರೆ ಅದು ಸಾಮಾಜಿಕ ದ್ರೋಹವೇ ಆಗಿದಿಡುವುದು. ಕೆಲ ಅಪರೂಪ ಸಂದರ್ಭಗಳಲ್ಲಿ ಎಷ್ಟರ ಮೆಟ್ಟಿಗೆ ಎಂದರೆ,—ಅವರನ್ನು ಕಣ್ಣಿನಿಂದ ನೋಡುವುದು ಕೂಡಾ ಮಹಾ ಪಾಪವೆಂದೇ ಗ್ರಹಿಸಲ್ಪಟ್ಟಿದೆ. ಇವರ ವಾಸಸ್ಥಾನಕ್ಕಾಗಿ ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಹೇಯಸ್ಥಳಗಳನ್ನು ಪ್ರತ್ಯೇಕಿಸಿಡಲಾಗಿದೆ ಆ ಸ್ಥಳಗಳಲ್ಲಿ ಅವರಿಗೆ ಸಾಮಾಜಿಕ ಸೇವೆಯ ಗಂಧವೂ ತಗಲುವಂತಿಲ್ಲ. ಜಾತುರ್ವರ್ಣದವರ ಸೇವೆ ಮಾಡುವಂತೆ ಜಾತಿಹಿಂದೂಗಳೂ, ವಕೀಲರೂ, ವೈದ್ಯರೂ ಅವರ ಸೇವೆ ಮಾಡುವುದಿಲ್ಲ. ಅವರ ಸಮಾಜಸಂಬಂಧವಾದ ಶುದ್ಧದಿನಗಳಲ್ಲಿ ಬ್ರಾಹ್ಮಣ ಪುರೋಹಿತರು ಪೌರೋಹಿತ್ಯವನ್ನು ವಹಿಸುವುದಿಲ್ಲ. ಇಂತಹ ದುಃಸ್ಥಿತಿಯಲ್ಲೂ ಅವರು ಜೀವಂತರಾಗಿರುವುದೆ ಅದೊಂದು ಪರಮಾಶ್ಚರ್ಯವೆಂದು ನನಗೆ ಭಾಸವಾಗುತ್ತದೆ. ಅದರಲ್ಲೂ ಅವರು ಇನ್ನೂ ಕೂಡಾ ಹಿಂದೂ ಮಹಾಬಲಂದಿಗಳಾಗಿರುವುದು ಮತ್ತಷ್ಟು ಆಶ್ಚರ್ಯಕರ ಸಂಗತಿಯಿರುತ್ತದೆ. ಅವರ ಸ್ಥಿತಿಯು ಎಷ್ಟರ ವರೆಗೆ ಅಸಾತಕ್ಕೆ ಒಳಗಿರುವುದೆಂದರೆ—ತಮ್ಮನ್ನು ದಬ್ಬಾಳಿಸುವವರ ಮೇಲೆ ಉರಿದೆದ್ದು ಬೀಳಲು ಕೂಡಾ ಈಗಿನ ಸ್ಥಿತಿಯಲ್ಲಿ ಅವರಿಗೆ ಶಕ್ತಿ ಸಾಮರ್ಥ್ಯವಿಲ್ಲ. ಪ್ರಚಾರಕರು ಎರವಾಡಾ ಒಪ್ಪಂದ ಅರ್ಥವನ್ನೆಲ್ಲ ಗ್ರಹಿಸಿಕೊಳ್ಳಬೇಕೆಂಬುದಕ್ಕಾಗಿಯೇ ನಾನು ಈ ಶೋಚನೀಯ ಮತ್ತು ನಾಚಿಕೆಕರವಾದ ಸತ್ಯ ಸಂಗತಿಗಳ ವಿವರವನ್ನು ಮಾಡಿರುವೆನು. ನಿರಂತರವಾದ ಸಾಧನೆಯೊಂದೇ ಈ ಜನರನ್ನುದ್ಧಾರ ಮಾಡುವುದು—ಹಿಂದೂತ್ವವನ್ನು ಶುದ್ಧೀಕರಿಸುವುದು—ಹಿಂದೂಮತದೊತ್ತಿನಿರುವ ಸಮಸ್ತ ಮತಗಳನ್ನು ಪುನೀತವನ್ನಾಗಿ ಮಾಡುವುದು ನನ್ನ ಉಪವಾಸ ಕಾಲದಲ್ಲಿ ಜನಸಮುದಾಯವು ತೋರಿಸಿದ ಅಭಿಮಾನವು ಜಾತುರ್ವರ್ಣದವರ ನೈಜ ಪಶ್ಚಾತ್ತಾಪವೆಂದಾದರೆ ಧಯಪಡಬೇಕಾದುದಿಲ್ಲ. ಹಾಗಿರುವುದಾದರೆ ಪ್ರತಿಯೊಬ್ಬ ಅಸ್ಪೃಶ್ಯನು ತೀರ್ಪುದಲ್ಲಿ ಸ್ವಾತಂತ್ರ್ಯದ ವಿಕಾಸೋತ್ಪನ್ನವನ್ನು ನೆರವೇರಿಸುವನು ಸ್ವಾತಂತ್ರ್ಯೋತ್ಪನ್ನವು ನೆರವೇರಬೇಕಾದರೆ ಇದರ ಸಂದೇಶವು ಪ್ರತಿಯೊಂದು ಹಳ್ಳಿ ಪಳ್ಳಿಯನ್ನು ವ್ಯಾಪಿಸುವಂತಾಗಬೇಕು. ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ಕೆಲಸ ಮಾಡುವುದು ಕಷ್ಟತರವು. ಪಟ್ಟಣಗಳಲ್ಲಿ ಪ್ರಜಾಗಣದ ಅಭಿಪ್ರಾಯವನ್ನು ಸುಲಭವಾಗಿ ಅರಿಯಬಹುದು. ಆದರೆ ಗ್ರಾಮಗಳಲ್ಲಿ ಇದು ಅಷ್ಟು ಸಾಧ್ಯ ಸಂಗತಿಯಲ್ಲ. ಈಗ ಅಖಿಲಭಾರತ ಅಸ್ಪೃಶ್ಯತಾ ನಿವಾರಣಾ ಸಂಘವೊಂದು ಸ್ಥಾಪಿಸಲ್ಪಟ್ಟಿದೆ. ಇದರಿಂದಾಗಿ ಪ್ರಚಾರಕರು ಈ ಸಂಘದೊಡನೆ ಸೇರಿ ಕೆಲಸಗಳನ್ನು ನಡೆಸಲವಕಾಶವು ದೊರೆತಿದೆ.

ಕಷ್ಟವಷ್ಟು ಅನುಭವಿಸುವವರಿಗಿಂತಲೂ ತಾವು ಹೆಚ್ಚಿಗೆ ತಿಳಿದವರೆಂದು ಈ ವರೆಗೆ ಸಂಸ್ಕೃತರು ತಿಳಿದುಕೊಂಡಿದ್ದರು. ಈ ತಪ್ಪನ್ನು ಅವರು ಇನ್ನು ಮುಂದೆಯೂ ಮಾಡದಿರಲಿ! ಹರಿಜನರ ಅಶಯವೇನು, ಅವರನ್ನು ಸಂತುಷ್ಟಗೊಳಿಸುವುದು ಹೇಗೆಂಬುದನ್ನು ಅವರ ಪ್ರತಿನಿಧಿಗಳಿಂದಾಗಿ ನಮ್ಮ ಪ್ರಚಾರಕರು ತಿಳಿದುಕೊಳ್ಳಬೇಕು. ತಾವು ಹರಿಜನರಿಗಿಂತಲೂ ಅಧಿಕರವರೆಂದೂ, ಅವರಿಗೆ ತಾವು ಅಭಿಮಾನವನ್ನು ತೋರಿಸುತ್ತಿದ್ದೇವೆಂದೂ, ಕಲ್ಪಿಸಿಕೊಳ್ಳಬಾರದು.

ಡಾ। ಅಂಬೇಡ್ಕರರು ಸ್ವಾನುಭವದಿಂದರಿತುಕೊಂಡಿರುವ ಕೆಲವು ಘೋರ ವಿಷಯಗಳು ಲೇಖನಾತೀತವಾಗಿವೆ. ಅವರು ಹೇಳಿದ ಯಥಾರ್ಥ ನುಡಿಗಳು ನನ್ನ ಮನಸ್ಸಿಗೆ ಹಚ್ಚಿ ಕೊಂಡಿವೆ. ಪ್ರಚಾರಕರಿಗೂ ಇದು ತಿಳಿಯುವುದೆಂದು ನಾನು ನಂಬುವೆನು. ಸಂಸ್ಕಾರಗಳು ಅವಲಂಬಿಸುವ ಪದ್ಧತಿಗಳ ಕುರಿತು ಕೆಲವು ಸೂಚನೆಗಳು ನನ್ನೆಡೆಗೆ ಬಂದಿರುತ್ತವೆ. ಒಂದು—ಕೇರ್ತಿಕೇಷ ಸ್ವಾಮಿ ಶ್ರದ್ಧಾನಂದರು ಹೇಳಿದ್ದುದು—ಪ್ರತಿಯೊಬ್ಬ ಹಿಂದುವು ತನ್ನ ಮನೆಯಲ್ಲೊಬ್ಬ ಅಸ್ಪೃಶ್ಯನನ್ನು ಇರಿಸಿಕೊಂಡು ಅವನನ್ನು ತನ್ನ ಋತುಂದಿಕನಂತೆ ಕಾಣುವುದು, ಎರಡು:—ಭಾರತದ ಶ್ರೇಷ್ಠಾಧಿಕಾರಿಯೂ ಹಿಂದೂವಲ್ಲದವರೂ ತಿಳಿಸಿದುದು:—ಸಂಪನ್ನನಾದ ಪ್ರತಿಯೊಬ್ಬ ಹಿಂದುವು, ಒಬ್ಬ ಅಸ್ಪೃಶ್ಯ ಪೌರುಷಿಗಾಗಲೀ ಸ್ತ್ರೀಗಾಗಲೀ ಹೆಚ್ಚಿನ ವಿದ್ಯಾದಾನವನ್ನು ಮಾಡಿ ಹರಿಜನಸಂಘ ಸೇವಕರನ್ನಾಗಿ ಮಾಡುವುದು. ಇನೆರಡು ಸೂಚನೆಗಳೂ ವಿಹವಿವೆ. ಇವನ್ನು ವಿಚಾರಿಸಿ ಅನುಸರಿಸುವುದು ಉತ್ತಮವಿದೆ. ಒಳ್ಳೆಯ ಸೂಚನೆಗಳನ್ನು ಕೊಡಲಪೇಕ್ಷಿಸುವವರು ಹೊಸದಾಗಿ ಸ್ಥಾಪಿತವಾಗಿರುವ ಸಂಘಕ್ಕೆ ಬರೆದು ಕೊಂಡರೆ ಯೋಗ್ಯ. ಈ ಅಸ್ಪೃಶ್ಯತಾ ನಿವಾರಣೀ ಕಾರ್ಯದ ಕುರಿತು ಈಗ ನನಗಿರುವ ತೊಡಕುಗಳೇನೆಂದು ಜನತೆಯು ತಿಳಿದುಕೊಳ್ಳಬೇಕಾಗಿದೆ. ನಾನು ಜೈಲಿನಲ್ಲಿದ್ದು ಸಂಘದವರಿಗೂ ಜನಸಮುದಾಯಕ್ಕೂ ಸಲಹೆಗಳನ್ನೀಯಲಿಲ್ಲ ನಲ್ಲದೆ, ಕಾರ್ಯಾಚರಣೆಯಲ್ಲಿ ಏನನ್ನೂ ಮಾಡಿ ಭಾಗಿಯಾಗಲು ಸಾಧ್ಯವಿರುವುದಿಲ್ಲ. ಅಲ್ಲದೆ ಹೊರಗಿನ ಘಟನೆಗಳು ತಿಳಿದು ಬರದಿರುವುದರಿಂದಲೂ, ತಿಳಿದ ಸಂಗತಿಗಳು ಹಳೆಯವುಗಳಾಗುವುದರಿಂದಲೂ ನನ್ನ ಸೂಚನೆಗಳನ್ನು ಕಾಲಾನುಸಾರವಾಗಿ ಪರಿವರ್ತಿಸಿಕೊಳ್ಳಬೇಕಾಗಿರುತ್ತದೆಂದು ಪ್ರಚಾರಕರು ತಿಳಿದುಕೊಳ್ಳಬೇಕು.

ಹಳೇ ಪುರಾಣವಾಗಿದ್ದರೂ, ಒಬ್ಬ ಲೇಖಕರು ನನಗೆ ತಿಳಿಸಿದ ಕೆಲವು ವಿಷಯಗಳನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಈ ವಿಷಯಗಳು ಪತ್ರಿಕೆಗಳಲ್ಲೂ ಪ್ರಕಟವಾಗಿರುತ್ತವೆ. ಪೂನಾ ಒಪ್ಪಂದದಲ್ಲಿನ ರಾಜಕೀಯ ಧಾಗದಿಂದ ನಮಗುಂಟಾದ ಲಾಭ ನೇನೆಂದು ಅವರು ಪ್ರಶ್ನಿಸಿರುವರು. ಪ್ರಧಾನಾಮಾತ್ಯರ ನಿರ್ಣಯದಲ್ಲಿ ಅಸ್ಪೃಶ್ಯರಿಗೆ ಹೆಚ್ಚಿನ ಲಾಭದಾಯಕ ಸಂಗತಿಗಳಿವೆ ಎಂದು ಅವರ ಪ್ರತಿಪಾದನೆ. ಇದು ನನಗೆ ಪರಿದೋಷದಂತೆ ಮಂತ್ರಿಯವರ ಎನಾರ್ಡಿನಿಂದಾಗಿ ಹರಿಜನರಿಗೆ ಅನ್ನಕ್ಕೆ ಬದಲು ಸುಣ್ಣವಿ ಲಭ್ಯವಾಗಿರುವುದೆಂದು ನನ್ನ ಅಭಿಮತ. ಹಿಂದೂಗಳಿಗೆ ಪ್ರತ್ಯೇಕಿಸಿಡಲ್ಪಟ್ಟಿರುವ ಸ್ಥಾನಗಳಲ್ಲಿ ಹರಿಜನರಿಗೆ ದೊರಕುತ್ತಿದ್ದರೂ ಡಾ। ಮೂಂಜೆಯವರೊಡನೆ ನಾನೂ ಅನಂದಪಡತ್ತಿದ್ದೆನು. ಜಾತುರ್ವರ್ಣದವರಿಗೂ ಹಿಂದೂಮತ ತ್ಯಾಗದು ಬಹಳ ಲಾಭದಾಯಕವಾಗಿರುತ್ತಿತ್ತು. ಅಸ್ಪೃಶ್ಯರು ಸರ್ವಾಧಿವರೊತನೆಯೂ ಸರ್ವಾಧಿವರು ಅಸ್ಪೃಶ್ಯರೊಡನೆಯೂ ಸಂಪೂರ್ಣ ಸಮ್ಮಿಶ್ರತರಾಗಿ ನಡೆಯಬೇಕೆಂದೇ ನಾನು ಕೋರಿದ್ದೆನು. ಈಗಲೂ ಅದನ್ನೇ ಆಶಿಸುತ್ತಿದ್ದೇನೆ. ಬಳಲಿ ಸುವವರು ಬಳಲುವವರಿಗೆ ಅಷ್ಟು ಹೆಚ್ಚುದಾನ ಮಾಡಿದರೆ ಅಷ್ಟು ಹೆಚ್ಚು ಫಲವಿದೆಯೆಂದು ನನ್ನ ಮತ. ಸಮಯವು ದಾಟಿಹೋದ ನಾಲವನ್ನೆಲ್ಲ ಸರ್ವಾಧಿವರು ಅಸ್ಪೃಶ್ಯರಿಗೆ ಶಾಶ್ವತಿಸಾಡಿದರೆ ಶ್ರೇಯಸ್ಸಿದೆ. ಇದು ಅತ್ಯಂತ ಗಹನ ವಿಷಯವಿದೆ. ಜಾತುರ್ವರ್ಣದವರು ಇಷ್ಟು ದಕ್ಷತೆಯಿಂದ ಇಷ್ಟು ಬೆ ಹುಮಾರ್ಗದಿಂದ ಕಾರ್ಯಸಾಧನೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸದೆ ಗತ್ಯಂತರವಿಲ್ಲ.

ಹರಿಜನರ ದೇವಸ್ಥಾನ ಪ್ರವೇಶಕ್ಕೆ ಅವಕಾಶವನ್ನುಂಟು ಮಾಡಿ ಇತರ ವಿಧದಿಂದ ಅಸ್ಪೃಶ್ಯತೆಯನ್ನು ತಮ್ಮ ಸಂಸ್ಥಾನಗಳಿಂದ ತೊಲಗಿಸಿದ ಸಂಸ್ಥಾನಾಧಿಪತಿಗಳಿಗೆ ಅಭಿನಂದನೆಯನ್ನು ಸಮರ್ಪಿಸುತ್ತೇನೆ. ಅವರು ಹೀಗೆ ಮಾಡಿದುದರಿಂದ ತಮ್ಮ ಪರವಾಗಿಯೂ ಜನರಪರವಾಗಿಯೂ ಇನ್ನಿರವರೆಗೆ ನಡೆದ ಪೂರ್ವ ಪಾದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸಿದರೆಂದು ಧೈರ್ಯವಾಗಿ ಹೇಳುವೆನು. ಈ ಸಂಸ್ಥೆಗಳ ಜನತೆಯು ತಮ್ಮ ರಾಜಕಾರಣವನ್ನವಸೆದಿಸರೆಲ್ಲವೆಂದೂ, ತಮ್ಮನ್ನು ಇನ್ನೂ ಅಸ್ಪೃಶ್ಯರನ್ನಾಗಿ ಹಿಂದೂಗಳು ಧಾವಿಸುತ್ತಾರೆಂದು ಅಸ್ಪೃಶ್ಯರು ಹೇಳಿಕೊಳ್ಳಕ್ಕಿತ್ತಾರೆಂದೂ ಅರೋಪಗಳಿಗೆ ಇವರು ಎಡೆಗೊಡದಿರಲಿ ಅಸ್ಪೃಶ್ಯತೆಯ ಶಾಶವು ಮೇರೆ ಮೀರಿ ನಡೆದ ವಿಷಯವೂ ಅದು ಧಾರತದ ಸಮಸ್ತ ಮತಗಳ ತಳಹದಿಯನ್ನು ಅಲುಗಾಡಿಸಿದ ವಿಷಯವೂ ನಮ್ಮ ಸ್ಮರಣೆಯಲ್ಲಿರಬೇಕು. ಮುಟ್ಟಬಾರದೆಂಬ ಈ ಮನೋಭಾವವು ದಿಗಂತವ್ಯಾಪ್ತವಾಗಿರುತ್ತದೆ. ಇಂತಹ ಕಳವಳವು ಜನಿತವಾದೊಡನೆ ನಾಶಗೊಳಿಸಲ್ಪಟ್ಟರೆ ಮತಮತಕ್ಕೂ, ಜಾತಿ ಜಾತಿಗೂ ಮಧ್ಯೆ ಇರುವ ಭೇದವನ್ನು ನಾವು ಸುಲಭವಾಗಿ ಮರೆಯಬಹುದು. ಹಿಂದೂಗಳೆಲ್ಲರೂ ಒಂದೇ, ಅವರನ್ನು ವಿಧಾಗಿಸಲು ಸಾಧ್ಯವಿಲ್ಲವೆಂದು ಗೊತ್ತಾಗಬಹುದು ಅಲ್ಲದೆ, ಮಹೃದೀಯರೂ, ಸಿಖ್ಖರೂ, ಪಾರಸಿಕರೂ, ಯೂಧರೂ, ಕ್ರೈಸ್ತರೂ ಒಂದೇ ವಿಕಾಲ ವೃಕ್ಷದ ಶಾಖೆಗಳೆಲೆಂದು ನಾವು ತಿಳಿದುಕೊಳ್ಳುವೆವು ಅಸ್ಪೃಶ್ಯತೆಯನ್ನು ಪ್ರತಿಷ್ಠಿಸಲು ನಾವು ನಡಸುತ್ತಿರುವ ಉನ್ಮತ್ತದ ತತ್ವವೂ ಇದೇ ಆಗಿರುತ್ತದೆಂದು ನಾವು ತಿಳಿಯಬೇಕು. ಮತಭೇದರಹಿತರಾಗಿ, ಅಕುಂಠಿತ ವಿಶ್ವಾಸದಿಂದ ಈ ಉದ್ದೇಶವನ್ನು ನೆರವೇರಿಸಿದರೆ ಇದರ ಯಥಾರ್ಥತೆಯು ನಮಗೆ ತಿಳಿದು ಬರುವುದು.

ಎಂ. ಕೆ. ಗಾಂಧಿ.

ಗಾಂಧೀಜಿಯವರ ಉಪವಾಸ

ಅದೇ ರಿಳವು ಆಶ್ಚರ್ಯಜನಕವಾಗಿದೆ!

ಸೊಂಟದ ವರೆಗೆ ಬಂಗಿಯುಟ್ಟು, ಕಷ್ಟಗಿನಮತ್ತು ಸೆರೆಯ ಅಂಗಳದಲ್ಲಿ ಮುಳಗುತ್ತಿರುವ ಒಬ್ಬ ಸಣ್ಣ ವ್ಯಕ್ತಿಯು, ತಾನು ಉಣ್ಣುತಿನ್ನುವುದಿಲ್ಲವೆಂದು ತಿರಸ್ಕರಿಸಿ, ಪರ್ಣಕುಟಿ ತಲೆ ಬಡಿಕೊಳ್ಳುತ್ತಿರುವ ತನ್ನದೇಶದ ಎರಡು ಪ್ರತಿಪಕ್ಷಗಳನ್ನೂ, ದರ್ಪಯುತವಾದ ಇಡೀ ಸಾಮ್ರಾಜ್ಯವೂ ತನಗೆ ತಲೆ ತಗ್ಗಿಸುವಂತೆ ಮಾಡುವುದೆಂದರೆ ಆಶ್ಚರ್ಯವೆ! ಇದು ಯಥಾರ್ಥವೆಂದು ಕಂಡುಬರಲಾರದು. ಆದರೂ ಇದು ಸತ್ಯ! ತಾನು ಮರಣಾಂತ್ಯದ ಉಪವಾಸವನ್ನು ತೊಟ್ಟು ಸಾಯುವೆನೆಂದು ಮಹಾತ್ಮಾ ಗಾಂಧಿಯು ಹೇಳಿದುದರಿಂದ ಈ ಪರಿಣಾಮವಾಗಿ ಇಂತಹ ಘಟನೆಯಾದುದು ಖರೆ! ಅಸ್ಪೃಶ್ಯತಾ ನಿವಾರಣೆಕ್ಕೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟ ಬ್ರಿಟಿಷ ಸರಕಾರದ ಇಂಡಿಯಾ ಆಫೀಸು-ಮಹಾತ್ಮರು ಒಡನೆ ಸಾಯಬಾರದೆಂದು ಧಾವಿಸಿ, ಆದಿತ್ಯವಾರ ದಿನದಲ್ಲೂ ಅರಿತ್ಯವಾರ ರಾತ್ರಿಯಲ್ಲೂ ಅವಸರದ ನಿರ್ಧಾರಗಳನ್ನು ಮಾಡಿ, ತನ್ನ ಮೊದಲಿನ ನಿರ್ಣಯವನ್ನು ಹಿಂತೆಗೆದುದೂ ಖರೆ!

ತನಗೆ ಸಮ್ಮತವಿಲ್ಲದ ನಿರ್ಣಯಗಳನ್ನು ಸ್ವೀಕರಿಸುವಂತೆ ಬದಲಿಗೆ ತಾನು ಉಪವಾಸ ವಿದ್ದು ಸಾಯುವೆನೆಂದು ಪ್ರತಿಜ್ಞೆ ತೊಟ್ಟು, ಯಾವ ರಾಜಕೀಯ ಧುರೀಣನಾದರೂ ಸೆರೆಯ ಕಗ್ಗತ್ತಲೆಯ ಸರಳುಗಳೆಡೆಯಿಂದ ಇಂತಹ ಅಪ್ರತಿಹತ ವಿಜಯವನ್ನು ಸಾಧಿಸಿದುದಿಯೇ! ಮಹಾತ್ಮೆಯನ್ನೊಗ್ಗೂಡಿಸುವ ದೇಹವನ್ನು ಬಂಧನಪಡಲ್ಪಟ್ಟಿರೂ ಅವನ ಅಸಾಧಾರಣವಾದ ಚೇತನ ಶಕ್ತಿಯು ಹೊರಗೆ ಅದ್ಭುತ ಚಮತ್ಕಾರಗಳನ್ನೆಸಗುವುದೆಂಬುದಕ್ಕೆ ಬೇರೆ ನಿದರ್ಶನಗಳು ಬೇಕೆ?

ಪ್ರಥಮದಲ್ಲಿ ಅಸ್ಪೃಶ್ಯರ ಒಂದೇ ಮಗುವನ್ನು ದತ್ತಕ್ಕೆ ಪಡೆದುಕೊಂಡ ಮಹಾತ್ಮಾ ಗಾಂಧಿಯವರು ಹಿಂದೂತ್ವದಲ್ಲಿ ಕಳಂಕಪ್ರಾಯವಾಗಿರುವ ಅಸ್ಪೃಶ್ಯತಾ ನಿವಾರಣೆಗಾಗಿ ಟೊಂಕ ಕಟ್ಟಿದ ಅವರ ಉಪವಾಸವು ತನ್ನ ಈ ಹಂಬಲದ ಪರಮಾವಧಿಯೆಂದೇ ಹೇಳತಕ್ಕುದಿದೆ.

ಮಹಾತ್ಮರೂ, ಕೊಂಗ್ರೆಸ್ ಪಕ್ಷವೂ ಪ್ರಜಾಹಿತದೃಷ್ಟಿಯಿಂದ, ಕೌನ್ಸಿಲುಗಳಿಗೆ ಹೆಣ್ಣುಗಂಡ, ಜಾತಿ, ಉದ್ಯೋಗ ಮತಭೇದಗಳನ್ವಯಿಸದೆ ಜತೆತ್ವಾನಿಧ್ಯದ ಮೂಲಕ ಕಾಸನ ಸಭೆಗಳಿಗೆ ಜುನಾವಣೆಯನ್ನು ಮಾಡಬೇಕೆಂದು ಬಗೆದರು—ಮತ್ತು ಅಲ್ಪಸಂಖ್ಯಾಕರಿಗೆ ಸ್ಥಾನಗಳನ್ನು ಕಾಯ್ದಿಡಬೇಕೆಂದೂ ನಿರ್ಣಯಿಸಿದರು. ಆದರೆ ಬ್ರಿಟಿಷರು ಮಾತ್ರ ಪ್ರತ್ಯೇಕ ಬ್ರಿಟಿಷ ಕಮಿಶನರಿಗಳ ಅಭಿಪ್ರಾಯಕ್ಕ ತೀರಾ ವಿರೋಧವಾಗಿ—ಪ್ರಾಂತಿಕ ಜುನಾವಣೆಯ ಪ್ರಾರಂಭವನ್ನು ಮತ್ತ ಜಂತಿ, ಉದ್ಯೋಗಗಳ ಮೇಲೆ ಆಧರಿಸಿ ಸ್ಥಾಪಿಸಿದರು. ಅದರಲ್ಲೂ 'ಅಸ್ಪೃಶ್ಯರೆಂಬವರಿಗೆ ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕನ್ನು ಕೊಟ್ಟು ಮಹಾತ್ಮರನ್ನು ಉದ್ರೇಕಿಸಿದರು.

ಮೆಕ್‌ಡೋನಾಲ್ಡ್‌ರು ಹೊರಿಸುವ ಅರೋಪದಂತೆ—ಗಾಂಧೀಜಿಯವರು ಅಸ್ಪೃಶ್ಯ ಪ್ರತಿನಿಧಿಯಲ್ಲದಲ್ಲ. ಗಾಂಧೀಜಿಯವರು ಅಸ್ಪೃಶ್ಯರ ಹಿತಚಿಂತಕರೇ ಆಗಿನ ನಿರ್ಧಾರದಂತೆ ಎಲ್ಲಾ ಹಿಂದೂಗಳೂ ಜಾತಿಪ್ರಾತಿನಿಧ್ಯದಿಂದ ಜುನಾವಣೆ ನಡೆಸಿ ಗಳಿಸಿದ ಸ್ಥಾನಗಳನ್ನು ಅಸ್ಪೃಶ್ಯರ ಪ್ರತಿನಿಧಿಗಳಿಗಾಗಿ ಬಿಡಬೇಕಾಗಿದೆ. ಆದರೆ ಬ್ರಿಟಿಷರ ದಾನದಲ್ಲಿ ಅವರಿಗೆ ಏಳು ಸ್ಥಾನಗಳು ಮಾತ್ರ ಇದ್ದುವು.

ಅಸ್ಪೃಶ್ಯರನ್ನು ಪ್ರತ್ಯೇಕವಿಡಬಾರದೆಂಬ ಹಟದಿಂದಲೇ ಮಹಾತ್ಮರು ಸಾಯುವ ತನಕದ ಉಪವಾಸವನ್ನು ತೊಟ್ಟರು. ಈ ರೀತಿಯ ಪ್ರತ್ಯೇಕತೆಯಿಂದ ಜಾತಿವೈಷಮ್ಯಗಳು ಉತ್ಪನ್ನವಾಗಿ ಹಿಂದೂತ್ವದ ಅಧೋಗತಿಯು ಸಾಧಿಸಲ್ಪಡುತ್ತಿದೆಯೆಂದೇ ಮಹಾತ್ಮರ ಮತವಿರುತ್ತದೆ.

ಮಹಾತ್ಮಾಗಾಂಧಿಯವರ ಉಪವಾಸವು ಬ್ರಿಟಿಷ ಸರಕಾರವನ್ನೇ ತಲೆ ಬಾಗಿಸಿದುದಲ್ಲ, ತನ್ನ ದೇಶೀಯರಾದ ಡಾ। ಅಂಬೇಡ್ಕರಂತಹವರನ್ನೂ ಅದು ಬಗ್ಗಿಸಿತು. ಅವರನ್ನು ತನ್ನ ಸಂಧಿಗೆಳೆಯುವಂತೆ ಪ್ರೇರೇಪಿಸಿತು. ನಮ್ಮ ದೇಶದಲ್ಲಿ ನೀಗ್ರೋಗಳ ಸಮಸ್ಯೆಯು ಹೇಗೆ ವಿಷಾದಜನಕವಾಗಿದೆಯೋ, ಹಾಗೆಯೇ ಈ ಅಸ್ಪೃಶ್ಯತೆಯೆಂಬುದು ಹಿಂದೂದೇಶದಲ್ಲಿ ಹಾನಿಕಾರಕವಾಗಿ ನಿಂತಿದೆ.

ಈಗ ಸ್ಪೃಶ್ಯ ಹಿಂದೂಗಳು ತಾವು ಅಸ್ಪೃಶ್ಯತಾ ಭೇದ ಧಾವವನ್ನು ಘರೆಯುವೆವೆಂದು ಬಾಯ್ಬಿಟ್ಟು ಹೇಳುತ್ತಿರುವರು. ಇಂತಹ ಹೇಳಿಕೆಗೆ ಮಹಾತ್ಮರ ಮರಣದ ಹೆದರಿಕೆಯೇ, ಅವರ ಮೇಲಿನ ಅಪೂರ್ವ ಅವಿರ್ಭಾವೀಯ ಪ್ರೇಮವೇ ಕಾರಣ.

(ಅಮೃತವಾಣಿ 'ನೇತಾಜಿ' ಎಂಬ ಪತ್ರಿಕೆಯ ಲೇಖನದ ಅನುವಾದ)

ಸೂಚನೆ! ಕೆಲವೇ ಪ್ರತಿಗಳು
ಶಾಲಾ ಶಿಕ್ಷಕರು, ಲೈಬ್ರರಿಗಳಿಗೂ, ಗ್ರಂಥಕರ್ತರಿಗೂ ನನ್ನ ಜೆಲ್ಲೆಯ ಅನುಭವನ್ನು ಮಾಡಿಕೊಳ್ಳಿಸುವವರಿಗೂ, ಬೇಕಾಗಿರುವ ಕ್ರೌನ್ 444 ಪುಟಗಳಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ವೆಂಬ ಗ್ರಂಥದ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ಪ್ರತಿಯೊಂದಕ್ಕೆ ಟಿ. ಖ. ಸಹಿತ ರೂ. 2.
ಶಾರದಾ ಫಾರ್ಮಸಿ,
ಮಂಗಳೂರು.

ಮಹಾತ್ಮಾ ಗಾಂಧಿಯವರು ಇನ್ನು ಒಂದು ವರ್ಷಕ್ಕಿಂತ ಹೆಚ್ಚಿಗೆ ಬದುಕರು(?)

೧೦೦೦ ರೂಪ್ಯಾ ಖರ್ಚುಮಾಡಿಸುವ ಸನ್ಯಾಸಿ. ಸ್ತ್ರೀಯನ್ನು ಸ್ತ್ರೀಯು ವಿವಾಹವಾಗಬಹುದೇ? ಹರಿದುಹೋದ ಹೃದಯಕ್ಕೆ ೦ ಪೌಂಡ್! ೭೩೨ ಪೌಂಡ್ ಭಾರ ಕಡಿಮೆಯಾಯಿತು. ವೈದ್ಯರ ಗತಿ. ಎತ್ತಹೋದರೂ ಸುತ್ತಿದ ರಾಯ ಬಿಡ. ಸಾಲಮಾಡಿಯೂ ಗವರ್ನರಿಗೆ ಸತ್ಕಾರವೇ? ಕಾಯಿದೆಭಂಗದ ಪ್ರತಿಫಲ. ಸನಾತನಿಗಳ ಸಂತೆ.

'ಟೈ ಇಂಡಿಯರ್'
ಸ್ವದೇಶಿಯನ್ನೇ ಪಡಕೊಳ್ಳಿರಿ!
ಸ್ವದೇಶೀ ಕಾಗದದಲ್ಲಿ ಮುದ್ರಿತವಾದ 1933ನೇ ಇಸವಿಯ ಡೈರಿಗಳು ಸಿದ್ಧವಾಗಿರುವುದು. ಇದೇ ಡೈರಿಯನ್ನು ಪಡಕೊಳ್ಳುವೆಂತೆಂದೇ ನಿರ್ಧರಿಸಿರಿ! ಎಲ್ಲಾ ವಿವರಕ್ಕೂ ಈ ಕೆಳಗಿನವರಿಗೆ ಬರೆಯಿರಿ.
ಶಾರದಾ ಫಾರ್ಮಸಿ,
ಮಂಗಳೂರು.

೭೩೨ ಪೌಂಡು ಭಾರ ಕಡಿಮೆಯಾಯಿತು!

ಮಹಾತ್ಮಾ ಗಾಂಧಿಯವರಿರುವುದು ೧೦ ಪೌಂಡು ಭಾರ. ವರ್ಷದ ಮಧ್ಯದಲ್ಲಿ ಮಿಸ್. ಅಲ್‌ಬೈನ್ ಬ್ಲಿಟ್ ಎಂಬವಳು ೭೩೨ ಪೌಂಡು ಗಳಷ್ಟು ಭಾರವಿದ್ದಳು. ಭೂಮಿಗೆ ಇಷ್ಟಭಾರವಾಗಿದ್ದ ಇವಳು ಇದೇ ತಿಂಗಳ ಮಧ್ಯದಲ್ಲಿ ಅಲ್ಲಿ ತೀರಿಕೊಂಡಳೆಂದೂ. ಭೂಲೋಕದಲ್ಲೇ ಅತೀ ಭಾರವಾದ ನರಮೇಧಕ್ರಿಯೆ ಶವಸಂಸ್ಕಾರವು ವಿಶೇಷ ವಿಜೃಂಭಣೆಯಿಂದ ಜರಗಿತೆಂದೂ ತಿಳಿದುಬಂದಿದೆ.

ದಿಗಂಬರಶಾಯಿಗಳ ಜಿಮ್ನಾಸ್ಟಿಕ್ ನಿಂತಿತು!

ಹಿಂದೂದೇಶದಲ್ಲಿ ಜಿಮ್ನಾಸ್ಟಿಕ್ ಆಟವನ್ನು ಆರೋಗ್ಯಾತಿಶಯವನ್ನು ಪೋಷಿಸುತ್ತಿಲ್ಲ. ಜರ್ಮನಿಯಲ್ಲಂತೂ ಇದನ್ನು ನಿಲ್ಲಿಸಬೇಕೆಂಬ ಆಜ್ಞೆಯಾಗಿದೆ. ಅಲ್ಲಿಯ Morality ಪ್ರಚಾರ ಕಮಿಟಿಯವರು "ಶುದ್ಧವಾಯು ಶಾಲೆ"ಗಳನ್ನು ಮಂಜೂರುಮಾಡಿದರು. ಅಲ್ಲಿಯ ಸುಪ್ರಸಿದ್ಧ ಜಿಮ್ನಾಸ್ಟಿಕ್ ಶಾಲೆಯಾದ ಆಡೋಲ್ಫ್ ಗೆಟ್ ಸ್ಕೂಲ್ ಎಂಬುದೂ ಮುಚ್ಚಲ್ಪಟ್ಟಿದೆ. ಆಡೋಲ್ಫ್ ಶಾಲೆಯಲ್ಲಿ ದಿಗಂಬರರಾಗಿ ಹುಡುಗ ಹುಡುಗಿಯರು ಜಿಮ್ನಾಸ್ಟಿಕ್‌ಗಳನ್ನು ನಡೆಸುತ್ತಿದ್ದರಂತೆ.

ವೈದ್ಯರ ಗತಿಯು ಹೀಗಾಯಿತೆ?

ಲೋಕಲೋಕದಲ್ಲಿ ವೈದ್ಯರು ಹೆಚ್ಚುತ್ತಿರುವರು. ಇವರ ಸಂಖ್ಯೆಯು ವರ್ಷಕ್ಕೆ ಸಾವಿರ ಪಾಲಾಪ್ಪ ಏರುತ್ತಿದೆ. ನ್ಯೂಯೋರ್ಕ್‌ನಿಂದ ಒಂದು ವಾರ್ತೆ ಬಂದಿದೆ. ಲೈಸೆನ್ಸ್ ಪಡೆದ ೩೦ ಮಂದಿ ಫಿಸಿಶಿಯನ್ಸ್ ತಮ್ಮ ವೃತ್ತಿಯನ್ನು ಬಿಟ್ಟು ಮೋಟರ್ ತೊಳೆಯ ನಿಂತಿದ್ದಾರೆ. ಹೇಗೂ ಒಂದು ಮುಷ್ಟಿ ಅನ್ನ ಸಿಕ್ಕಿದರೆ ಸಾಕೆಂದು ಅವರು ಹೇಳಿಕೆ. ಪಟ್ಟಣದ ಇನ್ನೊಂದು ಕಡೆಯಲ್ಲಿ ೧೪ ಮಂದಿ ವೈದ್ಯರು ಇನ್ಶೂರೆನ್ಸ್ ವಿಜಂಟರಾಗಿ ಕೆಲಸ ಮಾಡುತ್ತಿರುವರು. ವ್ಯಾಪಾರದ ಅಧೋಗತಿಯು ಡಾಕ್ಟರರಿಗೇತೇ ತಟ್ಟಬೇಕೆ?

ಎತ್ತಹೋದರೂ ಸುತ್ತಿದ ರಾಯ ಬಿಡಾ!

ಮಾರ್ಸೆಲ್ಸ್‌ನಲ್ಲಿ ಜೋರ್ಜ್ ಜಾನಾರ್ ಎಂಬವನು ಒಬ್ಬನನ್ನು ಗುಂಡಿನಿಂದ ಕೊಡದು, ಕೊಂದು ತಲೆಮರೆಸಿ ಓಡಿಬಿಟ್ಟನು ಎಷ್ಟು ಪತ್ತೆ ನಡೆಸಿದರೂ ಅವನ ಪತ್ತೆಯೇ ಸಿಗಲಾರದಾಯಿತು ಇವನು ಪೆರೂ ನಗರಕ್ಕೆ ಓಡಿ ಹೇಗೂ ಹತ್ತು ವರ್ಷಗಳ ಕಾಲ ಕಳೆದನು. ಹತ್ತು ವರ್ಷಗಳು ದಾಟುವ ದಿನವೇ ಅವನು ರೈಲು ಹತ್ತಿ ಮಾರ್ಸೆಲ್ಸ್‌ಗೆ ಬಂದನು. ಹತ್ತು ವರ್ಷಗಳು ದಾಟಿಲು ಮತ್ತು ಕೆಲವು ನಿಮಿಷಗಳು ಬಾಕಿಯಿದ್ದುವು. ಜೋರ್ಜನು ರೈಲಿನಿಂದಿಳಿದೊಡನೆ ಅವನ ಸ್ನೇಹಿತರ ನೇಳರು ಅವನನ್ನೆದುರುಕೊಳ್ಳಲು ಬಂದರು. ಜನರ ಗುಂಪಿ ಸೇರಿದುದನ್ನು ನೋಡಿ ಪೋಲೀಸರು ಓಡಿಬಂದರು. ಅಂದಿನ ಕಳ್ಳನ ಗುರುತು ಇಂದು ಹಿಡಿದರು—ಸೆರೆಹಿಡಿದರು. ಅಪ್ಪರಲ್ಲಿ ಜೋರ್ಜನು: ಹತ್ತು ವರ್ಷಗಳಾದುವು' ಎಂದನು. ಆದರೆ ಅವನ ದುರ್ದೈವವಶಾತ್ ಹತ್ತು ವರ್ಷಗಳಾಗಲು ಮತ್ತೂ ಕೆಲವು ನಿಮಿಷಗಳದ್ದುದರಿಂದ ಪೋಲೀಸರು ಅವನನ್ನು ಹಿಡಿದು ಸ್ವೇಚ್ಛೆಯಾಗಿ ಕರೆದೊಯ್ದರು. "ಛೆ! ಎರಡು ನಿಮಿಷ ಕಡವಾಗಿ ಬರುತ್ತಿದ್ದರೆ ನನ್ನ ಗತಿ ಹೀಗಾಗುತ್ತಿರಲಿಲ್ಲ"ವೆಂದು ಪಾಪದ ಜೋರ್ಜನು ಅತ್ತನು.

ಸಾಲಮಾಡಿಯೂ ಗವರ್ನರರಿಗೆ ಸತ್ಕಾರವೇ?

ಗವರ್ನರರಾದ ಸರ್. ಮಾಲ್ಕಂ ಹೈಲಿಯವರು ೧೯೩೧ರಲ್ಲಿ ಆಗ್ರಾ ನಗರ ಸಂದರ್ಶನಾರ್ಥವಾಗಿ ಹೋಗಿದ್ದರು. ಅವರಿಗೆ ಅನೇಕ ಕಡೆಗಳಲ್ಲಿ ಸತ್ಕಾರಗಳು ನಡೆದಿದ್ದುವು. ಪ್ರತಿಯೊಂದೆ ಅಲ್ಲಿಯ ಕೆಲವು ಗೌರವಾಸ್ಪದ ಗೃಹಸ್ಥರು ಒಂದು ಗವರ್ನರ್ ಪಾರ್ಟಿಯನ್ನು ಗವರ್ನರರಿಗೆ ಕೊಟ್ಟರು. ಅಂದಿನ ದಿನ ಗವರ್ನರರಿಗೆ ಕೊಟ್ಟ ಲೆಕ್ಕ ಹೀಗಿದೆ. ಹತ್ತು ವಿಧಾನಗಳಿಗೆ ಕೆಲವು ನೂರು ರೂಪಾಯಿಗಳು ಪೀಠಿಸಿದಂತೆ ಲೆಕ್ಕವಾಯಿತು. ಇನ್ನು ಕಾಲದಿಂದಲೂ ಆ ಲೆಕ್ಕ ಹೊಸಬಲೆ ಮತ್ತು ವಿಧಾನಗಳ ಬೆಲೆಯನ್ನು ಖಾಯಿದೆಪಡಿಸಿದ ಆ ಐದು ಮಂದಿ ಗೃಹಸ್ಥರ ಮೇಲೆ ಅಂಗಡಿಯವರು ದಾವೆ ನಡೆಸಿ ಆಗ್ರಾ ಕೋರ್ಟಿನಲ್ಲಿ ತಿರ್ಮಾನಗೊಳ್ಳಬೇಕಿದೆ. ದೊಡ್ಡ ದೊಡ್ಡ ಹುದ್ದೇದಾರರನ್ನು ಸಂತೋಷ ಪಡಿಸುವುದಕ್ಕಾಗಿ ಕೆಲವರು ಪಡಕಾಡಿಗೆ ಖಾಸಗಿ ಸಾಲಸೋಲದ ಬಿಂಕಾಲಿಕ್ಕೆ ಬೀಳುವರೆಂದು ಈ ವಿಷಯವನ್ನು ಹೊರಗಡಹುತ್ತಿದೆ.

ಮಹಾತ್ಮಾ ಗಾಂಧಿಯವರು ಇನ್ನು ಒಂದು ವರ್ಷಕ್ಕಿಂತ ಹೆಚ್ಚಿಗೆ ಬದುಕರು. (?)

ಈಗ ಲಂಡನಿನಲ್ಲಿರುವ ಪಂಡಿತ ಕೃಷ್ಣಸ್ವಾಮಿ ಎಂಬ ಯುವಕ ಜ್ಯೋತಿಷ್ಯರೆಬ್ಬಿದ್ದರು ಮಹಾತ್ಮಾ ಗಾಂಧಿಯವರ ಭವಿಷ್ಯವನ್ನು ಹೇಳುತ್ತಾ "ಮಹಾತ್ಮಾ ಗಾಂಧಿಯವರು ಇನ್ನು ಒಂದು ವರ್ಷಕ್ಕಿಂತ ಹೆಚ್ಚಿಗೆ ಬದುಕಲಾರರು" ಎಂದು ಹೇಳಿದ್ದಾರೆ. ಬ್ರಿಟಿಷ ಪತ್ರಿಕೆಗಳಲ್ಲಿ ಇವರ ಭವಿಷದ್ವಾಕ್ಯಗಳು ಪ್ರಕಟವಾಗುತ್ತಿವೆ. ಇವರು ಪ್ರಪಂಚದ ಕೆಲವು ಘಟನೆಗಳ ಕುರಿತು ಹೀಗೆಂದಿದ್ದಾರೆ:-ಬ್ರಿಟಿನಿನ ರಾಷ್ಟ್ರೀಯ ಸರಕಾರವೆ ಇನ್ನು ಆರು ತಿಂಗಳುಗಳೊಳಗೆ ಹರಿದು ಹಂಚಿಹೋಗುವುದು. ಡಾಸು ಲೀಗ್ ಒಫ್ ನೇಷನ್ಸ್‌ನಿಂದ ಇನ್ನು ಮೂರು ತಿಂಗಳೊಳಗೆ ರಾಜೀನಾಮೆ ಕೊಟ್ಟು ಕೆಳಗಿಳಿಯುವುದು. ಭವಿಷತ್ತನ್ನು ಹೇಳುವವರು ತಮ್ಮ ಭವಿಷತ್ತಿನ ಶುಭೇಚ್ಛೆಗಾಗಿ ಕೆಲವು ಪ್ರಾಮುಖ್ಯ ಘಟನೆಗಳ ಕುರಿತು ಭವಿಷ್ಯವನ್ನುಡಿಯುತ್ತಿರುವುದು ರೂಢಿ.

ಕಾಯಿದೆಭಂಗದ ಪ್ರತಿಫಲ.

೧೯೩೧ನೇ ಜನವರಿ ೧ನೇ ತಾರೀಕಿಗೆ ಪ್ರಾರಂಭವಾದ ಸತ್ಯಾಗ್ರಹ ಚಳವಳಿಯಲ್ಲಿ ಇದೇ ಸಪ್ತಂಬರ ಅಂತ್ಯದ ತನಕ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಈ ರೀತಿ ದಸ್ತಗಿರಿ, ಶಿಕ್ಷೆಗಳು ನಡೆದುವು.

ದಸ್ತಗಿರಿಗಳು.

ಜಿಲ್ಲೆ	ಗಂಡಸರು.	ಹೆಂಗಸರು.	ಒಟ್ಟು.
ಧಾರವಾಡ	೯೩೦	೩೦	೯೬೦
ಬೆಳಗಾಂವಿ	೭೫೦	೪೪	೭೯೪
ವಿಜಾಪುರ	೪೧೪	೭	೪೭೧
ಬಳ್ಳಾರಿ	೩೮	೩	೪೦
ಕಾರ್‌ವಾರ್	೨೩೫೦	೨೧೯	೨೫೬೯
ಮಂಗಳೂರು	೧೨೬೩	೨೧	೧೨೮೩
ಕೊಡಗು	೧೦೪	೩	೧೦೭
ಬೆಂಗಳೂರು	೧೩೮	೦	೧೩೮
ಒಟ್ಟು	೬೭೭೩	೪೮೩	೭೧೭೩

ಶಿಕ್ಷೆಗಳು.

ಜಿಲ್ಲೆ	ಗಂಡು.	ಹೆಂಗಸರು.	ಒಟ್ಟು.
ಧಾರವಾಡ	೬೩೩	೨೧	೬೫೪
ಬೆಳಗಾಂವಿ	೭೦೨	೧೩	೭೧೪
ವಿಜಾಪುರ	೨೪೯	೭	೨೫೬
ಬಳ್ಳಾರಿ	೨೮	೨	೨೮
ಕಾರ್‌ವಾರ್	೪೦೦	೭೬	೪೭೬
ಮಂಗಳೂರು	೩೭೧	೧೭	೩೮೮
ಕೊಡಗು	೧೦೪	೩	೧೦೭
ಬೆಂಗಳೂರು	೧೩೮	೦	೧೩೮
ಒಟ್ಟು	೨೦೩೭	೧೩೫	೨೦೬೫

ಸನಾತನಿಗಳ ಸಂತೆ!

ಅಲ್ಲಾಹುವಾ ಬಳಿ ಡೈಮಂಡ್ ಜಾರ್ಬರ್ ಎಂಬಲ್ಲಿ ನಿವಾಸ ಬಾಲಾ ಎಂಬ ಸನಾತನಿಯನಿಗೆ ಭಾಟೀಂದ್ರನಾಥ ಮೊಂಡಲ್ ಎಂಬ ವಿಧುರನನ್ನು ಕೊಟ್ಟು ಪುನರ್ವಿವಾಹ ಮಾಡುವುದೆಂದು ನಿಶ್ಚಯವಾಯಿತು. ಆದರೆ ದುರ್ದೈವವಶಾತ್ ಆ ಕುಟುಂಬದಲ್ಲಿ ಕೆಲವು ಧರ್ಮಾನುಯಾಯಿಗಳಿದ್ದುದರಿಂದ ಅವರು ವಿಧವಾ ವಿವಾಹವಾಗಬಾರದೆಂದು ಹಠ ಹಿಡಿದರು. ಆದರೂ ವಧುವಿನ ಪಕ್ಷದಲ್ಲಿ ಅಲ್ಲಿಯ ಸಮಾಜಸುಧಾರಣಾ ಕಮಿಟಿಯವರೂ ಅಲ್ಲಿಯ ಜುವ ಕಮಿಟಿಯವರೂ ಇದ್ದುದರಿಂದ ವಿವಾಹವು ಮುಂದುವರಿಸಲ್ಪಟ್ಟಿತು. ವಿವಾಹದ ದಿನ ಚಪ್ಪರದ ಸುತ್ತಲೂ ಸ್ವಯಂಸೇವಕರ ಕಾವಲಿರಿಸಲಾಯಿತು. ವಿವಾಹ ಕಾರ್ಯ ಗಳೆಲ್ಲ ಕೊನೆಗೊಳ್ಳುವ ತನಕವೂ ಯಾವ ಗಲಾಟೆಯೂ ಆಗಲಿಲ್ಲ. ವಧೂ ವರರು ಸ್ವಗೃಹ ಸಹಭೋಜನಕ್ಕಾಗಿ ಒಳ ನಡೆದರು. ಅಷ್ಟು ಹೊತ್ತಿಗೆ ಅಂಧಕ್ಯದ್ಯಾಳುಗಳ ಒಂದು ದೊಡ್ಡ ತಂಡವು ಒಳಹೊಕ್ಕಿತು. ವಧೂ ವರರನ್ನು ಹಿಡಿಯಲೆತ್ನಿಸಿತು. ಸನಾತನಿಗಳೂ ಮನೆಯವರಿಗೂ ಹತ್ತಾಹತ್ತಿ ನಡೆಯಿತು. ಆದನ್ನು ಕಂಡು ವರನು ಹಿಂಬಾಗಿಲಿನಿಂದಾಗಿ ಎತ್ತಲೋ ಮಾಯವಾದನು. ವಧುವು ಸಿಕ್ಕಿ ಬೀಳುವುದರಲ್ಲಿರುತ್ತಿದ್ದಳು. ಆದರೂ ತಪ್ಪಿಸಿ ಮಾಡಿನ ಬೀಮು ಒಂದನ್ನು ಹಿಡಿದು ಹತ್ತಿ ಅಟ್ಟದಲ್ಲಿ ಅಡಗಿ ಕುಳಿತಳು. ಸನಾತನಿಗಳ ಪುಂಡರು ಅಡಿಅಟ್ಟಿಲನ್ನು ಹುಡುಕಿ ಹೊರಗೆ ಎಳೆದಂದರು. ಅಡಿಅಟ್ಟಿಲನ್ನು ತಮ್ಮ ಮನೆಗೊಯ್ದು ಭೂಸೂರ ಅಳತೆಗಳನ್ನು ಎಳೆಯು ತೆಗೆದು ವಿಧವೆಯಾಗಿಯೇ ಇರಿಸಿದರು. ಭಯಂಕರ ನಡೆದು ಸನಾತನಿಗಳ ಪರವಾಗಿ ಕೆಲವು ಮಾಪಿಸ್ ಭೂಷಣ ಅಂಬಾರಿ ಮುಖ್ಯ ಪನ್ನಾರಿ ಹಬ್ಬಾರ್ ಎಂಬವರು ಸಿಟ್ಟಿಗೆಳಸಿಗಾಗಿದ್ದಾರೆ.

೧೦೦೦ ರೂಪ್ಯಾ-ವೆಚ್ಚಮಾಡಿಸುವ ಸನ್ಯಾಸಿ!

ಸನ್ಯಾಸಿಗೂ ಹಾದ ಪೂಜೆ ಬೇಕ?

ಇಷ್ಟು ಹಣವನ್ನು ಈ ಕುಂಬು ಟೇಬಲಿಗಾಗಿ ವೆಚ್ಚ ಮಾಡುವ ಬದ ಬದಲು ಕೆಲವು ಪೋಲೀಸರಿಗೆ ಸಂಬಳವನ್ನು ಹೆಚ್ಚಿಸಬಹುದಿತ್ತಲ್ಲ ಕೆಲವು ಸೈನ್ಯಪಡೆಯನ್ನು ಹೆಚ್ಚಿಸಬಹುದಿತ್ತಲ್ಲ ಲಘಿ ಬಾರ್ಡ್ ಮಾಡಿದವರಿಗೂ ಹೋಮ್ ಮೆಂಬರುಗಳಿಗೂ ಬೋನಸ್ ಕೊಡಬಹುದಿತ್ತಲ್ಲಾ!

× × × ×

ಈ ಗೋಷ್ಠಿ ನಾಶಕವನ್ನು ನೋಡಲು ಹೋದ ನನ್ನ ಬಾಂಧವರು ಮೂರು ಮೂರು ಸಲ ಆಳ ಹಿಡಿಮದೇ ಬಂತು ಒಂದು ಕಾಸಿನ ಫಲವಿಲ್ಲ ಪ್ರಾಂತೀಯ ಸ್ವಾತಂತ್ರ್ಯ ಕೊಡುತ್ತಾರಂತೆ ಕೇಂದ್ರ ಸರಕಾರ ಮನ್ನು ಕೊಡುವ ಆಲೋಚನೆಯೇ ಇಲ್ಲದಿರುವಾಗ ಇದೇಕೋ! ಇಂತ ರೌಂಡ್ ಟೇಬಲಿಗೆ ಗುಡ್ ಬ್ಯಾ

'ಸ್ಯಾಟು.'

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office —Dongerkery Street, Mangalore. Local Office —Bunder, Mangalore.
Established July 1906 1906 ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal, Kasargod, Cochin, Udipi, Gangolli, Coondapur, Bombay Puttur, Calicut Alleppey, Ernakulam, & Chikmagalur

ಬ್ರಾಂಚುಗಳು:— ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ, ಅಲ್ಲಪ್ಪಿ, ಎರ್ನಾಕುಲಂ ಮತ್ತು ಚಿಕ್ಕಮಗಳೂರು

Authorised Capital 10,00000—0—0	ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ 10, 0000—0—0
Issued & paid up Capital. 300,000—0—0	ಹೊರಡಿಸಿದ ಮತ್ತು ಪೂರ್ತಿ ತೆತ್ತ ಮೂಲಧನ ರೂ. 300,000—0—0
Reserve and other sinking Funds Rs 526,000—0—0	ಕ್ಷೇಮನಿಧಿ ಮತ್ತು ಇತರ ಶೇಖರಣೆಗಳು 526,000—0—0
Amount invested on G P Notes Rs 1154,092—12—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 1154,092—12—0
Rates of interest on fixed deposits at Head Office and Branches are 6% for 2 Years 5½%, 1 Year	ಕಾಯಂ ತೇವಣಾತಿಗಳ ಮೇಲೆ ಕೊಡಲಾಗುವ ಬಡ್ಡಿದರ— ಎರಡು ವರುಷಗಳಿಗೆ ತೇಕಡಾ 6% 1 ವರ್ಷಕ್ಕೆ ತೇಕಡಾ 5½

Current Account Deposits received and interest allowed on daily balance of Rs 50 and above that on multiples of Rs 10/ @ 3% from 1st Janauary to 30th June and @ 2% from 1st July to 31st December N interest will be allowed unless the depositors earns not less than Rs. 5/- during a period of 6 months ending either 30th June or 31st December in any year

Except by special arrangement, no interest is allowed on sums exceeding Rs. 10,000/- in the case of Head Office and Cochin Branch and on sums not exceeding Rs 15,000/- in the case of Bombay Branch and on sums exceeding Rs 5,000/ in the case of other Branches

For further particulars please apply to —

Office of the Bank, Mangalore 19—9—1932

K. Venkat Rao.
Secretary & Treasurer

The Pangal Nayak Bank, Ltd.

Head Office. Udipi, — *Established 1920* — Branch. Office Mangalore

Authorised Capital: Rs 2,00,000- | Paid up Capital: Rs. 1,75,000-
Issued Capital Rs 1,75,000- | Reserve and other Funds Rs 1,80,000

NOTICE.

Advances on pledge of Gold are made at 8%

ಚಿನ್ನಾಭರಣಗಳ ಅಡವಿನ ಮೇಲೆ ಸೇಕಡಾ 8ರ ಸಲೆಯ ಸುಲಭ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

Fixed deposits received at following rate

1 year 5½%,

For further particulars please apply to the Secretary or to the Agent at the Mangalore Branch

(By order)

Office of the Bank, Udipi, 1—11—'32

P. Laxman Nayak,
Secretary.

East & West Insurance Company Ltd.,

(Established 1913)

East & West Buildings, Fort Bombay.

VALUATION REPORT for the Triennium ending 31st December 1933

Reveals Certain Striking Features

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation

Interim Bonus Rs. 15/- per 1,000/- per year

both on whole life and endowment with Profit Policies becoming claims before 1st January 1934. FORECAST-STILL GREATER PROSPERITY

WANTED LADIES & GENTS In Unrepresented Areas.

Earn Rs. 100/- to 500/- independently per month.

For particulars apply or please call at:—

THE GENERAL TRADING COMPANY,

Chief Organising Office Harbour View, MANGALORE

ನಾಳೆ— ಈ ದಿನ—

ನಿಮಗೆ ಬೇಕಾದುದು!

ರಬ್ಬರ್ ವೊಹರುಗಳು

ಕಡಿಮೆ ದರ.

ದೀರ್ಘ ಕಾಲದ ಜಾಳಿಕೆ ಉತ್ಕೃಷ್ಟ ತರಗತಿ

ನಿತ್ಯವೂ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ನರಳುವಾದ ರಬ್ಬರ್ ವೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದಿ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಲ್ಲಿ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ. ಅದಲ್ಲದೆ ನಿಮ್ಮ ದನ್ಯತೆಗೆ ಮೊಹರು, ಹಿತ್ತಾಳೆ, ಇತ್ಯಾದಿ ಲೋಹಗಳ ಮೇಲೆ ಕೆತ್ತನೆಯ ತೆಲನ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಜಾಪೆಗೆ ಬೇಕಾಗುವ ಡೈಲ್ ನಮ್ಮೆರೆ ನಾವು ತಯಾರಿಸಿ ಕೊಡುತ್ತೇವೆ

ವಿ ಸೂ:— ನಿಮ್ಮ ಆರ್ಡರಿನಂತೆ ತೆಲನ ಸೃಷ್ಟಿಕರವಾಗಿ ತೋರದಿದ್ದಲ್ಲಿ ಹಣ ಪೂರ್ತ ಕೊಡುವೆವು

ಹೆಡ್ ಆಫೀಸು:—

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No 1 ಬಲ್ಮರ ರಸ್ತೆ, ಮಂಗಳೂರು,
ದ ಕನ್ನಡ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂ ೪ನೇ ನಂಬ್ರ 473/32

ಬಿ ಚಿದಾನಂದ ರಾವ್—ವಾದಿ

ವಿರುದ್ಧ

1 ಕೇಶವ ನಿಷ್ಪಂಣಾಯ, ಶ್ರೀನಿವಾಸ ನಿಷ್ಪಂಣಾಯರ ಮಗ, ಪುನಚಪ್ಪಾಡಿ ಗ್ರಾಮ 2 ಪುತ್ತಿಲ ರಾಘವರಾವ್, ಕೃಷ್ಣಯ್ಯನವರ ಮಗ—ವಿಠಲಗ್ರಾಡಿ ಗ್ರಾಮ—ಪ್ರತಿವಾದಿರು.

ವಾದಿಗೆ 1ನೇ ಪ್ರತಿವಾದಿ ಬರಕೊಳ್ಳ ಅಡವಿನ ಬಡ್ಡಿ ಬಾಕಿ ರೂಪ್ಯಾ 86—5—3ಕ್ಕೆ ಕೂಡಾ ಮಾಡಿದ ಮೇಲಿನ ದಾವೆಯು ತಾ 23—12—32ಕ್ಕೆ ತನ್ನಿಗಾ ಇಪ್ಪುದರಿಂದ ಆ ದಿವಸ 1ನೇ ಪ್ರತಿವಾದಿಯು ಈ ಕೋರ್ಟು ಮುಂದೆ ಹಾಜರಾಗಿ ತನ್ನ ಆಕ್ಷೇಪಣೆಗಳಿದ್ದಲ್ಲಿ ಉದಕಪಿನಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ಗೈರುಹಾಜರಿಯಿಂದ ತೀರ್ಮಾನಿಸಲಾದೀತೆಂತಲೂ ಈ ಮೂಲಕ ತಿಳಿಯಪಡಿಸೋಣವಾಗಿಯದೆ

ಪುತ್ತೂರು 7-12-1932 } **B. Mangesha Rao,**
Pleader for Plff.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 705/32, 1 \ 731/32

ವಾದಿರಾಜ ಭಟ್ಟ—ವಾದಿ

ಮತ್ತು

ಬಾಡ್ಯ ಗೋವಿಂದ ರಾವ್—ಪ್ರತಿವಾದಿ

ಪ್ರತಿವಾದಿಯು ವಾದಿಗೆ ತಾ 14-8-1930ರಲ್ಲು ರೂಪ್ಯಾ 100ಕ್ಕೆ ಬರಕೊಟ್ಟ ವಿಮಾಂಡ ಪ್ರೊಮಿಸರಿ ನೋಟು ಬಾಬ್ತು ವಾದಿಗೆ ಬರತಕ್ಕ ಅಸಲು ಬಡ್ಡಿ ಕೂಡ ರೂಪ್ಯಾ 124—8—0 ಬರಮಾಡಿ ಕೊಳ್ಳುವರೆ ಮಾಡಿದ ದಾವೆಯು ವ ನದರಿ ವ್ಯಾಜ್ಯದಲ್ಲಿ ಜಜ್ಜಮೆಂಟಿಗೆ ಮುಂಚೆ ಪ್ರತಿವಾದಿಯು ಹಕ್ಕಿನ ಸ್ಟ್ರಾಂಪ್ಪುಗಳನ್ನು ಖರ್ಚಿಗಾಗಿ ಕೊಟ್ಟು ಅರ್ಜಿ, ಕೂಡಾ ತಾ 20—12—32ನೇ ತನ್ನಿಗೆ ಇಪ್ಪುದರಿಂದ ಆ ಕುರಿತು ಉದಾಹರಣೆ ವ ಆಕ್ಷೇಪಗಳು ಮೈರೆ ಇದ್ದರೆ ನದರಿ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹಿರು ಮಾಡಬೇಕಾಗಿಯೂ ತಪ್ಪಿದರೆ, ತಿಳಿವಾ ಮಾಡಿ, ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಪೋಣಾನೆತ್ತದೆ.

ಉಡುಪಿ, 10—12—32 } **K Vittal Nayak,**
Pleader for Plaintiff

++ ++.

'ಸ್ವದೇಶಾಭಿಮಾನಿ' ಪತ್ರಿಕೆಗೆ ಇಂದೇ

ಚಂದಾದಾರರಾಗಿರಿ.

Seaforth Gun Powder Tea Dust
or High Forest No. 1 Tea Dust.

ಸೀಫೋರ್ತ್ ಗನ್ ಪೌಡರ್ ಟೀ ಡಸ್ಟ್ ಅಥವಾ
ಹೈ ಫೋರೆಸ್ಟ್ ನಂಬ್ರ 1 ಟೀ ಡಸ್ಟ್

ಶುದ್ಧ ಚಹವನ್ನೇ ಸೇವಿಸಿರಿ ಶುದ್ಧ ಚಹವನ್ನೇ ಸೇವಿಸಿರಿ

ನಾವು (The Estates & Agency Co, Ltd.) ದಿ ಎಸ್ಟೇಟ್ಸ್ ಎಂಡ್ ಏಜನ್ಸಿ ಕಂಪೆನಿ, ಲಿಮಿಟೆಡ್‌ನ ಮ್ಯಾನೆಜರರು ತಿಳಿಯಪಡಿಸುವುದೇನೆಂದರೆ.—ಈ ಮೇಲಿನ ಚಹವನ್ನು ನಾವು ಬೆಳೆಯಿಸಿ, ತಯಾರಿಸಿ ಪೇಕ್ ಮಾಡಿ ವಿಕ್ರಯಕ್ಕಿಡುತ್ತೇವೆ. ಇದು ಯಾವ ತರದ ವಿಶ್ರಣದಿಂದಲೂ ಕೂಡಿದ್ದೆನಿರುವುದಿಲ್ಲ ವೆಂದೂ, ಅತೀ ಶುದ್ಧವಾದುದೆಂದೂ ಗ್ಯಾರೆಂಟಿ ಕೊಡುತ್ತೇವೆ ಈ ಚಹಾವು ಶೇಕಡಾ ನೂರರಷ್ಟು ಶುದ್ಧವೆ ಆಗಿದ್ದು, ರುಚಿಕರವೂ, ಪರಿಮಳಭರಿತವೂ ಆಗಿರುತ್ತದೆ

ನಾವು ಸೀ ಫೋರ್ತ್ ಗನ್ ಪೌಡರ್ ಟೀ ಡಸ್ಟ್ ಮತ್ತು ಹೈ ಫೋರೆಸ್ಟ್ ನಂಬ್ರ 1 ಟೀ ಡಸ್ಟ್ ಚಹಾಗಳೆರಡನ್ನೂ 25 ಪೌಂಡ್‌ಗಳ ಟಿನ್ನು ಮತ್ತು 1 ಪೌಂಡ್ ಸೀಸದ ಕಟ್ಟುಗಳಲ್ಲಿ ಪೇಕ್ ಮಾಡುತ್ತೇವೆ ಇವುಗಳ ಶ್ರಾಕಸ್ತಿಯೂ, ಬೆಲೆಯೂ ಸಂಪೂರ್ಣ ವಿಶ್ವಾಸನೀಯವಿದೆ

ನಿಮ್ಮ ಲೇಬಲ್‌ಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿರಿ

ಈ ಕೆಳಗಿನ ನಮ್ಮ ಸೋಲ್ ಏಜಂಟರುಗಳಲ್ಲಿ ರಬ್ಬರ್ ಸ್ಟ್ಯೋಕ್ ಇದೆ—

ಮೆನ್ಸರ್ಸ್ ಕರವಾರ್ ಎಂಡ್ ಕೋ.
ಬಂದರ ರಸ್ತೆ, ಮಂಗಳೂರು

ಹಾಸನ ಟವನ್ ೨೪ನೇ ದವನಿವಪ್ರದರ್ಶನ.

ಹಾಸನ ಟವನ್ ದನವಿನ ಪ್ರದರ್ಶನ ಕ್ಷೇತ್ರದಲ್ಲಿ ೨೪ನೇ ದನವಿನ ಪ್ರದರ್ಶನವು ನಿರ್ಣಾಡಾಗಿರುತ್ತೆ

ಪ್ರದರ್ಶನವು ಗಣಪತೇ ಜನವರಿ ಮಾಹೆ ತಾರೀಕು ೨ನೇ ಸೋಮವಾರದಿಂದ ೬ನೇ ಶುಕ್ರವಾರದ ವರೆಗೆ ಉಭಯ ದಿವಸಗಳಲ್ಲೂ ನಡೆಯುತ್ತೆ

ಗವರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸುವಂದಕ್ಕೆ ಎರಡಾಣೆ ಯಂತೆ ಫೀ ವಸೂಲ್ಮಾಡಲ್ಪಡುತ್ತೆ

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ ಮ್ಯುನಿಸಿಪಲ್ ಜಾಗದಲ್ಲಿ ವೀಳ್ಯದ ಗೊಬ್ಬರ ಸಾಗಿಸುವ ಬಾಬನ್ನು ಸಹಾ ತಾ ೧೫-೧೦-೧೯೩೨ರಲ್ಲು ಹಾಸನದ ಸಂತೆಯ ಹತ್ತಿರ ಇರುವ ಆಕ್ಕಾಯಿ ಕಟ್ಟೆಯ ಬಳಿ ಮಧ್ಯಾಹ್ನ ೨ ಘಂಟೆ ಲಗಾಯ್ತು ಹಾಸನ ಟವನ್ ಮ್ಯುನಿಸಿಪಲ್ ಪ್ರೆಸಿಡೆಂಟರು ಅಥವಾ ವೈಸ್ ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತೆ

ಅಂಗಡಿ ವ್ಯೆರೆಗಳಿಗಾಗಿ ಎಂಗಡಿಸುವ ಜಾಗಾಗಳನ್ನೂ ತಾ ೧೫-೧೦-೧೯೩೨ರ ಲಾಗಾಯ್ತು ವಿಲವಾರಿ ಮಾಡಲು ಉದ್ದೇಶಿಸಿರುತ್ತೆ ಬಾಕಿ ವಿಷಯಗಳನ್ನು ಹಾಸನ ಟವನ್ ಮ್ಯುನಿಸಿಪಲ್ ಆಫೀಸಿಗೆ ಒಡೆದು ತಿಳಿದುಕೊಳ್ಳತಕ್ಕದ್ದು

ಹಾಸನ
೨ ೧೨-೧೯೩೨

S P Bramhappa
For President Municipal Council
& Chairman Cattle Show
Committe HASSAN

++ ++

The Canara Industrial & Banking Syndicate Limited.

Established in 1925. **Head Office — UDipi**

Branches Mangalore, Payyanur, Brahmavar, Kumta, Karwar & Hubli

Authorised Capital Rs 1 00 000 Subscribed Capital Rs 1 00 000 Paid up Capital Rs 20 000

STATEMENT OF AFFAIRS AS ON 30TH NOVEMBER 1932

CAPITAL AND LIABILITIES			ASSETS		
Paid up Capital	Rs	30 000 0—0	Loans on Land mortgage	R	1 47 081 10—7
Reserve and other Funds	,,	10,032-3—5	Valuable Securities		2 24 618—1—
Deposits	,	8 00 271—4—4	Bills of Exchange hundis and Promissory Notes		22 925 3—
Due to Bankers	,,	11,178-15 11	Investment on Shares of other Companies		4 375—0 0
Sundries	,,	73,839 13—5	On Deposits with other Banks		54 000 0—0
			Sundries		64 089 4—8
			Cash in hand and with Bankers		29 075—1—2
	Total Rs	9,15 322-5 1		Total Rs	9 15 322—5—1

Interest allowed on current account at 3 per cent Savings Bank at 4 per cent Short term Deposits for 4 months at 5 per cent Seven months at 5½ per cent 10 months at 6 per cent 13 months at 6½ per cent Long term for 19 months and over 6½ per cent

Long and Short term Loans on attractive Schemes are granted

Udipi, 9—12—1932

ALL KINDS OF BANKING BUSINESS UNDERTAKEN

P A Pai Bros,
Managing Agents

ZENITH

Life Assurance Co., Ltd.

1932 IS OUR BONUS YEAR.

Rs. 500 *or more per month you can earn by representing us. Test your ability and apply for Agency terms to -*

Messrs: KERWAR & COMPANY,
BRANCH MANAGERS FOR SOUTH INDIA,
Mangalore.

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage.
   FOR
4. Only 20 per cent extra Money

A TIRE UN-IMITATED & EXCLUSIVE.

Dealers Earn Profits. *Users Save Money.*

The Canara Public Conveyance Co., Ltd.

MANGALORE.

ಸುವಿಚಾರಗಳು

ಸರ್ ಶೇಷ ಪಟ್ಟಣಕ್ಕೆ ಸಕ್ಕರೆಯರು

ಪ್ರಬಲ ಶಾಂತಿಸಾಧಕ ಸಮಿತಿಯವರ ಆತಿಥ್ಯವನ್ನು ಸ್ವೀಕರಿಸಿದಾಗ, ಗ್ರೇ ತ್ರೀಮಂತರೇ ಅಧ್ಯಕ್ಷರಾಗಿರಲು, ಎಲ್ಲರೂ ಒಂದು ಧಾರಣವನ್ನು ಮಾಡಿದರು. ಪ್ರಮಂತ್ರಿತರೊಳಗೆ ಸರ್ ಸಾಮುಯೆಲ್ ಹೋರರೂ ಒಬ್ಬರಾಗಿದ್ದರು. "ಇತರ ಪ್ರಾರ್ಥನೆ ಜನತಾಂಗಗಳಂತಿರದೆ ಇಂಡಿಯವೂ ತ್ವರೆಯಲ್ಲಿ ತನ್ನ ಜನತಾಂಗಿಕ ಅತ್ಯವನ್ನು ಕಂಡುಕೊಂಡು, ತನ್ನ ಹೇಳಿಕೆಯನ್ನು ಪ್ರಪಂಚವು ಕೇಳಿ ಆದರಿಸಬೇಕೆನ್ನುತ್ತಿದೆ. ಬ್ರಿಟಿಷರು ಜಗತ್ತಿನ ಶಾಂತಿಯು ಹೆಚ್ಚುವಂತೆ ಪ್ರಯತ್ನಿಸುತ್ತಾರೆಂಬುದು ನಿಜವಾದರೆ, ಮೊದಲಾಗಿ ಬ್ರಿಟಿಷ ಸಾಮ್ರಾಜ್ಯದಲ್ಲೇ ಶಾಂತಿಸ್ಥಾಪನೆ ಮಾಡಲಿ ಹಾಗೆ ಮಾಡುವುದಿದ್ದರೆ, ಇಂಡಿಯದಲ್ಲೇ ಪ್ರಥಮ ಮಹಾ ಶಾಂತಿಯನ್ನು ಪ್ರತಿಷ್ಠಿಸಲಿ. ತಳ್ಳು ಗ್ರಹಿಕೆಯುಂಟಾಗುವ ಹಾಗೆ ನಾನಾ ಬಗೆಯಾಗಿ ವಿಕ್ಷಪ್ತೆಯವಾಗಿ ಸಾರುವ ಮತ್ತು ಎರಡು ಜನತಾಂಗಗಳೊಳಗೆ ದ್ವೇಷಕೆಂದೇ ಭಿನ್ನಾಭಿಪ್ರಾಯಗಳನ್ನು ಬಿತ್ತಿ ಬೆಳೆಸುವ ದುಷ್ಟ ಜಾಳಿಯಿಂದ ದೂರವಾಗಿರಿ, ಎಚ್ಚರವಾಗಿರಿ" ಎಂದರು. ಊಟದ ವೇಳೆ ಹೇಳಿದ್ದೆಲ್ಲ, ತಿಂಡಿ ತೀರ್ಥಗಳ ಅಡಿಯಲ್ಲಿ ಜತನವಾಗಿರುವಾಗ, ಎಚ್ಚರವಾಗಿರಲು ಅವಕಾಶವಿಲ್ಲ, ಅಗಲೆ ಆಹಾರದ ಅಮಲು, ನಿದ್ದೆ ಹಿಡಿಯುವುದು ಸ್ವಾಭಾವಿಕ.

ದೇಶದ ಸಂರಕ್ಷಣೆಯ ಭಾರವು

ದೇಶೀಯರು ಮೇಲೆಯೇ ಇರದೆ ಉಳಿದರೆ ಸ್ವರಾಜ್ಯವು ಅಪೂರ್ಣವಾಗುವುದು. ಆದರೆ, ಈಗಣ ಪರಿಸ್ಥಿತಿಯಲ್ಲಿ ಇಂತಹ ಜವಾಬ್ದಾರಿಯನ್ನು ಒಮ್ಮೆಲೇ ವಹಿಸಿಕೊಳ್ಳುವುದು ಅತಿ ಕಷ್ಟವೆಂದು ಎಲ್ಲರೂ ಒಪ್ಪಿಕೊಳ್ಳತಕ್ಕುದಾಗಿದೆ, ಆ ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿ ಕುಂಟಾಗುವ ತನಕ, ಸೈನ್ಯಾಂಗದ ಮೇಲಧಿಕಾರವು ಕೌನ್ಸಿಲುಗಳಿಗೆ ಬರುವಂತಿಲ್ಲ. ಹಾಗೆಂದು, ಎಷ್ಟು ವರ್ಷಗಳ ವರೆಗೆ ಹೀಗೆ ನಡೆಯಬೇಕೆಂದು ಯಾರೂ ಈಗಲೆ ನಿರ್ಧರಿಸಿ ಹೇಳಬಾರದೆ? ಸೈನ್ಯವೆಲ್ಲವೂ ದೇಶೀಯರದೇ ಎಂದಾಗುವ ವರೆಗೆ—ಎಂದರೆ ಎಷ್ಟು ಅವಧಿಯಲ್ಲಿ ಎಂದಾದರೂ ತಿಳಿಸಬೇಡವೆ? ಸಂತತ್ಸರಗಳ ಮಾತು ಹಾಗಿರಲಿ, ಇಡೀ ಸೈನ್ಯವನ್ನು ಯೋಗ್ಯ ರೀತಿಯಲ್ಲಿ ತರಬೇತು ಮಾಡುವುದಕ್ಕೆ ಯೋಗ್ಯರಾದ ಪ್ರವೀಣ ಆಫೀಸರರನ್ನು ತರಬೇತು ಮಾಡುವುದಕ್ಕೆ ಎಷ್ಟು ಸಮಯ ಬೇಕಾಗಬಹುದು ಎಂದು ಅವಧಿಯುನ್ನಾದರೂ ನಿರ್ದೇಶಿಸಬೇಡವೆ? ಇಂತಹ ಅವಧಿ ನಿರ್ಧಾರವಾಗಲಾರದಾದಲ್ಲಿ ಸ್ವರಾಜ್ಯವೆಂಬುದು ಬರೇ ಕನಸಾಗಿರಬೇಕೆಂದೇ ಬ್ರಿಟಿಷರ ಅಭಿಪ್ರಾಯವೆಂದು ಎಣಿಸುವುದು ತಪ್ಪಾದೀತೆ? ಇಂತಹ ಅವಧಿಯನ್ನು ನಿರ್ಧರಿಸದೆ ಅಥವಾ ೫೦ ವರ್ಷಗಳು ಎಂಬಂತಹ ದೂರದ ಅವಧಿಯನ್ನಿಟ್ಟರೆ ದೂರುಗಳು ಹೆಚ್ಚುವುವು ಎಂದು ಸರ್ ಶಿವಸ್ವಾಮಿ ಅಯ್ಯರ ಅಭಿಮತ.

ನ್ಯಾಯ—ವೆಂದರೇನು?

ಎಂಬುದರ ವ್ಯಾಖ್ಯೆಯೇ ಕೆನಿಯಾ ಪ್ರಾಂತ್ಯ (ಆಫ್ರಿಕ) ದಲ್ಲಿ ವಿಚಿತ್ರವಿದೆ ಹಿಂದೀಯರು ಬಹಳವಾಗಿರುವ ಈ ಪ್ರಾಂತ್ಯದಲ್ಲಿ, ಒಬ್ಬ ಯುರೋಪಿಯನನ ಯಾವುದೋ ಒಂದು ಪ್ರಾಣಿಯನ್ನು (ಅದೂ ಅವನದೋ ಅಲ್ಲವೋ ತಿಳಿದಿಲ್ಲ) ಕೆಲವು ಜನಗಳು ಚರ್ಮ ಸುಲಿಯುತ್ತಿದ್ದಾಗಲೆಂದು ಅವನು ಕೇಳ್ದ, ಅವರನ್ನು ಮೋಟರಿನಲ್ಲಿ ಬೆನ್ನಟ್ಟಿ ಪಿಸ್ತೂಲಿನಿಂದ ಗುಂಡು ಹಾರಿಸಲು, ಹಲವರು ಗಾಯಗೊಂಡರು, ಒಬ್ಬನು ಸತ್ತೇ ಹೋದನು! ಈ ಹುಟ್ಟನ್ ಸಾಹೇಬನು ನ್ಯಾಯವಿಚಾರಕ್ಕೊಳಗಾದನು ಜ್ಯೂರಿಯವರು ಇವನ್ನು ತಪ್ಪೇನೂ ಮಾಡಿಲ್ಲ ವೆಂದು 'ಕೂಲೆ'ಯ ಅಪರಾಧದಿಂದ ಅವನನ್ನು ವಿಮೋಚನೆಗೊಳಿಸಿದರು ತಾನು ಅವರನ್ನು ಹೆದರಿಸುವುದಕ್ಕಾಗಿ ಗುಂಡು ಹಾರಿಸಿದ್ದಲ್ಲದೆ, ಗಾಯವಾಗಲೆಂದು ಅಥವಾ ಕೊಲ್ಲಲೆಂದು ಅಲ್ಲ ಎಂದೇ ಸಾಹೇಬನ ಹೇಳಿಕೆ. ಕೈನನ್ನು ಕೊಂದಿಕ್ಕಿದರೆ ನಾಯಿಯನ್ನು ಕೊಂದಂತೆ ಮಾತ್ರ, ಎಂಬಂತೆ ಈ ಭಾವನೆಯು ತಪ್ಪೆಂದು ನ್ಯಾಯಾಧೀಶರು ವಿವರಿಸಿ ಹೇಳಿದರಾದರೂ, ಅವನನ್ನು ಬಿಡುಗಡೆ ಮಾಡಿದರು ಬ್ರಿಟಿಷರೇ ಒಬ್ಬರು ಈ ವಿಷಯ ಬರೆಯುತ್ತಾ, ಕೆನಿಯದಲ್ಲಿ ವರ್ಣಭೇದದ ಮತಾತ್ಮವನ್ನು ಟೀಕಿಸಿರುತ್ತಾರೆ.

ಬರ್ಮಾ ಕೌನ್ಸಿಲಲ್ಲಿ

'ಬರ್ಮವನ್ನು ಇಂಡಿಯದಿಂದ ಪ್ರತ್ಯೇಕಿಸುವುದಕ್ಕೆ ಸರ ಕಾರವು ಕೈಹಚ್ಚಲೇಕು' ಎಂಬೊಂದು ನಿರ್ಣಯವು ಹೊಸ ಕೌನ್ಸಿಲು ಮುಂದೆ ಬಂದು ಕೂಡಲು ಕೆಲವು ತಿಂಗಳ ಮೊದಲಾಗಿಯೆ ಪಾಸು ಆಗಿತ್ತು. ಆ ನಿರ್ಣಯವನ್ನು ಎದುರಿಗೆ ಇಟ್ಟು, ಆರು ತಿಂಗಳ ಕಾಲ ಇದೆಲ್ಲ ವಿಚಾರವಾಗಿ ಹೊರಬಿದ್ದವು. "ಹೊಸ ನಿರ್ಣಯಗಳು ಕ್ರಮವಿರುದ್ಧವೆಂದು ಕೌನ್ಸಿಲು ಅಧ್ಯಕ್ಷರೆಂದರು, ಹೋಗಲಿ, ಆದರೆ, ಮೂಲ ಸೂಚನೆಯನ್ನು ಹಿಂತೆಗೆದುಕೊಳ್ಳಿರಿ ಅರ್ಥವೇನು? ಅದಕ್ಕೇಕೆ ಹರ್ಷ ದಿರಲಿಲ್ಲ? ಎಂಬುದನ್ನು ಅಲೋಚಿಸಿದರೆ, ಅದು ದಿಟ್ಟ ಹೋಗುವುದಾಗಿಯೂ, ಕೌನ್ಸಿಲಿನಲ್ಲಿ ಅದಕ್ಕೆ ಬೆಂಬಲವಿಲ್ಲವೆಂದೂ ಮುಂಚಂದವರಿಗೆ ತಿಳಿದಿರ ಬೇಕೆಂದೇ ಅರ್ಥವಾಗುತ್ತಿದೆ. ಹೀಗಾಗಿ, ಬರ್ಮಾ ಕೌನ್ಸಿಲು ಈಗ ಆ ದೇಶವನ್ನು ಇಂಡಿಯದಿಂದ ಪ್ರತ್ಯೇಕಿಸುವುದಕ್ಕೆ ವಿರುದ್ಧವಾಗಿದೆ ಎಂದೂ, ಬ್ರಿಟಿಷರು ಅದನ್ನು ಪ್ರತ್ಯೇಕಿಸುವ ಬಗೆಗೆ ಹಾಕಿ ಕೊಟ್ಟ ಶರತ್ತುಗಳು ಬರ್ಮದವರಿಗೆ ಒಪ್ಪುವಂತಿಲ್ಲವೆಂದೂ ಸ್ಪಷ್ಟವಾಗಿದೆ. ಮುಂದೇನು ಮಾಡುವರು?

ಕೌನ್ಸಿಲ್ ಒಫ್ ಸ್ಟೇಟ್ಸ್ ಸಭೆಯಲ್ಲಿ

ಒರ್ಡಿನೆನ್ಸು ಕಾನೂನನ್ನು ಆಲೋಚನೆಗೆ ತಂದರು. ಬರೇ ಹತ್ತು ಮಂದಿ ತಾನೆ ಅದನ್ನು ನಿರೋಧಿಸಿದರ್ಯ ೩೨ ಮಂದಿಗೆ ಅದು ಒಪ್ಪಿಗೆ ಎಂದಾಯಿತು ಕೆಲವರಂತೂ ಹುರುಪಿನಿಂದ ಅದನ್ನು ಇನ್ನೂ ಕಠಿಣಗೊಳಿಸದೆ ಸುಖವೇ ಇಲ್ಲವೆಂದರು. ಒಪ್ಪಿಕೊಂಡ ಮಹಾಶಯರಲ್ಲಿ ಸರಕಾರದ ಮೆಂಬರರು, ಸರ ಕಾರ ನಿಯುಕ್ತ ಮೆಂಬರರಲ್ಲಿ ಒಬ್ಬರಲ್ಲದೆ ಉಳಿದವರೆಲ್ಲರು, ಮುಸ್ಲಿಮರಲ್ಲಿ ಹೆಚ್ಚಿನವರು ಸೇರಿದ್ದರು, ದೇಡನೆಂದವರಲ್ಲಿ ಸರಕಾರ ನಿಯುಕ್ತ ಮೆಂಬರರ ಸೈಕೆ ಮದ್ರಾಸಿನ ನಟೇಶನ ಒಬ್ಬರು ಇವರ ಅಭಿಪ್ರಾಯದಲ್ಲಿ, "ದೇಶದ ಹಿತವನ್ನು ಆಲೋಚಿಸಿ ಸತ್ಯವನ್ನು ತಿಳಿದರೂ, ಅದನ್ನು ಗಣನೆಗೆ ತಾರದ ಹೋರರನ್ನು ಸರಿದಾರಿಗೆ ಹಚ್ಚುವ ಹಾಗೆ ಅವರ ಮನಸ್ಸು ತಿರುಗುವುದಕ್ಕೆ ಯಾವುದೊಂದು ವಿಚಿತ್ರ ಹೊಸ ಯಂತ್ರವನ್ನಾದರೂ ನಿರ್ಮಿಸಿದರೆ ಅದೀತು" ಎಂಬ ಟೀಕೆಯಿದೆ "ಜೆಮ್ಸುಫರ್ಡ ನೊಂಚೆಗೆಗ್ಗೂ ಸುಧಾರಣೆಗಳನ್ನಾಗಲಿ ಇತರ ಸುಧಾರಣೆಗಳನ್ನಾಗಲಿ ಮಾಡಲಿರುವಾಗ, ಹೊಸ ಕಠಿನ ಕಾಯದೆಗಳನ್ನು ಕಾಯಿಸಿದೆ, ಸರಕಾರವು ದೇಶವನ್ನು ಕಾಯದೆ ಉಳಿಯಬೇಕಾದೀತೆಂದು ಹೆದರಿರುವುದು ಒಂದು ಪರಂಪರಾಗತ ಕ್ರಮವಾಗಿ ಬಂದಿದೆ" ಎಂದು ಮತ್ತೊಬ್ಬ ಮೆಂಬರರು ಎಂದರು ಎಷ್ಟೋ ಮಂದಿ ಮುನ್ನಡೆಯಬೇಕೆಂದು ಪ್ರಯತ್ನಿಸುವರು, ಆದರೆ ಕೆಲ ವರು ಪೂರ್ವಾಚಾರ ಬದ್ಧರಾದ ಕಾರಣವೇ ಇಂತಹ ಕಠಿನ ಕಾನೂನುಗಳನ್ನು ಆಗಲೆ ಮಂಡೂರ್ಯಾಡಿಸುವರು ಎಂದಿನಿಂದಲೂ ಇದೇ ರೂಢಿ ಇರುವ ಕಾರಣ, ಈ ಕಾನೂನು ಕಠಿನ ವೆಂತಾದ್ದಲ್ಲ, ಮುಂದೆ ಬರಲಿರುವ ಸುಧಾರಣೆಗಳು ಅಷ್ಟೆ ಉತ್ತಮವಾಗದಿರವು ಎಂದೇ ಕೆಲವರ ಆಸೆ

ಸರ್ ಝುಲ್ಫಿಕರ್ ಅಲಿಖಾನರವರು

ಈಗ ಲಕ್ನೌದಲ್ಲಿ ನೆಲೆಯಿರುವ ವಿಕ್ಟೋರಿಯಾ ಪರಿವತ್ತಿಗೆ ಅಧ್ಯಕ್ಷ ರಾಗಿದ್ದು ತಮ್ಮ ಭಾಷಣದಲ್ಲಿ ಕೆಳಗಣ ಅಂತರಂಗ ವಿಚಾರ ಗಳನ್ನು ಹೊರಗೆಡಹಿರುವರು. "ಮನುಷ್ಯನಾದವನು ತಪ್ಪು ಮಾಡದೆ ಇರುವನೆ? ಹಿಂದುಗಳು ಹಿಂದೆ ನಮ್ಮೊಡನೆ ಒಪ್ಪಂದ ಮಾಡಿಕೊಳ್ಳಲು ಹಿಂತೆಗೆದಿದ್ದುದಿರಬಹುದು ಹಾಗೆಂದು ನಾವು ಅವರೊಡನೆ ಸಹಕರಿಸಲು ಅಕ್ಷೇಪಿಸುವುದು ಚೆಂದವೆ? ನಮಗೆ ಶಾಂತಿಯು ಬೇಕೋ, ಹಾಗಾದರೆ ಸಹಕರಿಸಬೇಕು ದಿಲ್ಲಿಯಲ್ಲಿ ನೆರೆದ ಕೆಲವು ಮುಸ್ಲಿಮ ಮುಖಂಡರು ಅಲ್ಲಾಹಾ ಬಾದಿನಲ್ಲಾದ ಸಭೆಗೆ ಬನ್ನಿರೆಂದರೆ ಬರಲಿಲ್ಲ ಇದೂ ಮುಸ್ಲಿಮರ ಸಭೆಯೆ, ನಾವು ಮುಸ್ಲಿಮರಲ್ಲವೆ? ಅವರೂ ಮುಸ್ಲಿಮರಲ್ಲವೆ? ಮುಸ್ಲಿಮ ಮಹಾ ಸಮಾಜಕ್ಕೆ ಅವರು ತಮ್ಮ ವರ್ತನೆಯನ್ನು ಹೇಗೆ ವಿವರಿಸಿ ಸಮಾಧಾನ ಪಡಿಸುವರಂತೆ? ಇಂತಹ ಸಂದರ್ಭದಲ್ಲಿ ಜನಾಂಗದೊಳಗೆ ವೈತ್ರಿ ವಿಕ್ಷತೆಯನ್ನು ಸಾಧಿಸುವುದಕ್ಕೆ ಅವರು ಹಿಂತೆಗೆದುದಕ್ಕಾಗಿ ಮುಂದಣ ಪೀಳಿಗೆಯು ಇವರನ್ನು ಶಪಿಸದೆ? ಕೇವಲ ಸ್ವಾರ್ಥಕ್ಕಾಗಿಯೇ ಅವರು ನಮ್ಮಿಂದ ದೂರವಾಗಿರಬೇಕೆ?" ಇದೇ ಅವರ ಪ್ರಶ್ನೆ

---

* * * *

ಜವಾಬ್ದಾರಿಯಿಲ್ಲದ ಪತ್ರಿಕೆಗಳು ದೇಶಕ್ಕೇ ನಾಚಿಕೆ ಎಂದರು ಒಬ್ಬ ಮೆಂಬರು. ಜವಾಬ್ದಾರಿಯಿಲ್ಲದ ಮೆಂಬರರು ದೇಶಕ್ಕೆ ಮಾತ್ರವೇ, ಇದೀ ಪ್ರಪಂಚಕ್ಕೆ ಭೂಷಣರಾಗಿದ್ದಾರೆಯಲ್ಲವೆ!

++ ++

NOTES
ನೋಟಗಳು

ಜಿಮಿಚಿ ಎಚ್ಚೆಯ ನಾತವು ಪರ್ಯಾಯಾದಿಂದ ಹರಡಿದೆ. ಕೆಲವು ಇಂಗ್ಲಿಷ ವರ್ತಕರು, ಪಾಪ, ಎಚ್ಚೆ ವ್ಯಾಪಾರ ಮಾಡಿ ಪರ್ಷಿಯಾ ಸರಕಾರಕ್ಕೆ ನಫೆಯ ಸೇಕಡಾ ೧೫ನ್ನು ಕೊಟ್ಟು ಉಳಿದ ಅತ್ಯಲ್ಪ ನಫೆಯಿಂದ ಜೀವನ ಸಾಗಿಸುತ್ತಿದ್ದರು. ಈಗ ಎಚ್ಚೆಯೆಲ್ಲಾ ಸರಕಾರದ್ದೇ ಎಂದು ಅವರನ್ನು ದೂರವಿರಿಸಲಾಗಿದೆ!

* * * *

ಕರಾರಿಗೆ ವಿರೋಧವಾಗಿ ನಡೆದರೆ ಜೋಕೆ! ಜಿಮಿಚಿ ಎಚ್ಚೆ ಅದು ನಮ್ಮ ಹಡಗುಗಳಿಗೆ ಬೇಕಾದ್ದು! ಎಂದು ಇಂಗ್ಲಿಷ ಸರಕಾರವು ಅವರನ್ನು ಎಚ್ಚರಿಸಿದೆ ಎಚ್ಚೆಗೆ ಭಗ್ನೆಂದು ಬೆಂಕಿ ಹತ್ತೀತೋ?

* * * *

ಜಾಪಾನು, ಲೀಗ್ ಒಫ್ ನೇಶನ್ಸಿನ ಕೂಟದಲ್ಲಿ, ಸಿಡುಕಿ ನಿಂದಿದೆ ಚೀನವು, ನಿಮ್ಮ ಕಮಿಶನಿನ ರಿಪೋರ್ಟಿಗೆ ವಿರುದ್ಧ ನಾನಿಲ್ಲ ಎನ್ನುತ್ತದೆ ಜಾಪಾನಿಗೆ ಅದರ ಅನ್ಯಾಯದ ದುಡ್ಡನ್ನು ತಡೀರಿ ಎಂದು ಇತರ ಕಲವರ ಮಾತು ನೆನಗೆ, ಲೀಗೇ ಬೇಡ ಎನ್ನುವುದು ಜಾಪಾನು. ಮಂಚೂರಿಯದ ಬಾಗಿಲ್ಲುಚ್ಚಿ ತನ್ನ ಬೀಗವನ್ನೆ ಹಾಕಿಬಿಡುವುದು ಜಾಪಾನಿನ ನಿಶ್ಚಯವಾಗಿದೆ

* * * *

ಬ್ರಿಟಿಷ ಸರಕಾರವು ತಾ ೧೫೫೫ಕ್ಕೆ ಆಮೇರಿಕಕ್ಕೆ ತೆರ ಬೇಕಾದ ಸಾಲದ ಕಂತು ೨೪೫ ಮಿಲ್ಲಿಯ ಡೊಲ್ಲರು ಎಲ್ಲ ರದ್ದುಮಾಡಿರೆಂದರೆ, ಯುದ್ಧದ ಸಾಲ, ಯುದ್ಧಮಾಡದಂತೆ ನಿಶ್ಚಿತವಾದರೆ, ರದ್ದುಮಾಡುವ ಆಲೋಚನೆಯನ್ನು ಮತ್ತೆ ಮಾಡ ಬಹುದು ಎನ್ನುತ್ತದೆ ಅಮೇರಿಕ

* * * *

ಯುದ್ಧಮಾಡದೆ ಇರುವುದಿಲ್ಲವಾಗಿ ಕೆಲವರು ಅಂತ ರಂಗದಲ್ಲಿ ನಿಶ್ಚಯಮಾಡಿರುವಾಗ, ಯುದ್ಧ ನಮಗೆ ದೇಡ ಎಂದು ಸಾಮ್ರಾಜ್ಯ ಸರಕಾರವು ಹೇಗೆ ಹೇಳಬಹುದು?

* * * *

ಅದಕ್ಕಾಗಿ ಈಗ ತಾನು ವಸೂಲ್ಮಾಡಿದ್ದು ೧೫೫ ಮಿಲಿಯ ಪವನ್‌ಡ್ರು, ೨೬೦ ಮಿಲ್ಲಿಯವನ್ನು ಅಮೇರಿಕಕ್ಕೆ ಇಂಗ್ಲೆಂಡು ಕೊಡುತ್ತಿದೆ. ಧರ್ಮಕ್ಕಾಗಿಯಲ್ಲ,—ಸಾಲ ಪಾವತಿಗಾಗಿ

* * * *

ಈಗ ಸಾಲ ಕೊಟ್ಟಾಗಿದೆ, ಮುಂದೆ ಕೊಡುವ ತಂತುಗಳ ವಿಷಯದಲ್ಲಿ (ಎಂದರೆ ಇದು ಬರೇ ಸೇಕಡಾ ೨೫ರಷ್ಟು) ಜೆನ್ಯಾಗಿ ಆಲೋಚಿಸಿ ಒಂದು ಬಗೆ ಇತ್ಯರ್ಥ ಮಾಡಬೇಕು ಎಂದು ಬ್ರಿಟಿಷ ಸರಕಾರವು ಹೇಳಿದರೆ,—ಅಮೇರಿಕವು, ಪಾವತಿ ಕೊಟ್ಟದ್ದು ಏಂತು, ಮುಂದಿನ ಆಲೋಚನೆಯು ಶರ್ತ ಹಾಗಿರಲಿ, ಅದೆಲ್ಲ ಮುಂದೆ,—ಎಂದು ರಸೀದಿ ಒರೆಯುತ್ತದೆ.

* * * *

ರಷ್ಯಕ್ಕೂ ಚೀನಕ್ಕೂ ಕರಾರಾಗಿದೆ. ವ್ಯಾಪಾರಕ್ಕಾಗಿಯೆ ಎಂದರೂ ಜಪಾನನ್ನು ಚೀನವು ಇನ್ನಷ್ಟು ಕಠಿನವಾಗಿ ಬಹಿಷ್ಕರಿಸುವಂತಾಯಿತು ಜಾಪಾನು ಚೀನವನ್ನು ಪೀಡಿಸುವುದಕ್ಕೂ ಹಿಂತೆಗೆಯುವುದು ಹೇಗೆ? ರಷ್ಯಕ್ಕೂ ಜಾಪಾನಿಗೂ ಮುಂದೆ ಹೇಗಾದೀತು? ತ್ಸಾರಿನ ಕಾರಣದಿಂದ ಕೋವಿಗಳೂ ಗುಡುಗಿದ್ದುದು ಉಂಟು

* * * *

ಸರ್ ಆಕ್ಟರ್ ಖಾನರು ಒರ್ಡಿನೆನ್ಸು ಕಾನೂನನ್ನು ಬಲವಾಗಿ ಸಮರ್ಥಿಸಿದವರಲ್ಲಿ ಮುಖ್ಯರು. ಇವರು ಇಲೆಕ್ಷನಿಗೆ ನಿಂತಾಗ, ೩೦೦೦ ವೋಟರರಿರುವ ಇವರ ಊರಲ್ಲಿ, ಕೆಂಪಂಗಿ ಯವರ ಪ್ರತಾಪದಿಂದ ಬರೇ ಒಂದು ವೋಟು ಮಾತ್ರ ಇವರಿಗೆ ದೊರೆತ ಹಾಗಾಯಿತಂತೆ ಉಳಿದವರು ಕೆಂಪಂಗಿಯವರನ್ನು ನೋಡಿ ಸಪ್ಪಗೆ

* * * *

ಮುಂದಣ ಜನಾವಣೆಯಲ್ಲಿ ೩೦೦೧ ಸಿಗುವುದೋ ಎಕ್ಷನಾ ಹಿಂದೆ ದೊರೆತ ಆ ಒಂದು ವೋಟೂ ಹೋಗುವುದೋ ಎಂದು ಇವರು ನಿತ್ಯ ಚಿಂತೆಯಾಗಿರಲಿ.

ರೌಂಡ್ ಟೇಬಲ್ ಕಂಭವು ಕೆಡವಿ ಬೀಳಲಿದೆ!

ಬ್ರಿಟಿಷ ಮುತ್ಸದಿಗಳ ಕೌಟಿಲ್ಯ! ಹೋರರ ಫಲದ ಪರಿಣಾಮ!

ಭಾರತ ಪ್ರತಿನಿಧಿ ಭಾರತ ಮಂತ್ರಿಗಳೊಳಗೆ ಒಡಕು!

ಸ್ವಾತಂತ್ರ್ಯದ ಸುದ್ದಿಯನ್ನೆತ್ತದಿರಿ! ಬಾಯಿ ಮುಚ್ಚಿರಿ!

ಲಂಡನಿನ ರೌಂಡ್ ಟೇಬಲಿನಲ್ಲಿ ಒಡಕು ಮೂಡಿದೆ. ಯಾವುದೊಂದು ಇತ್ಯರ್ಥವನ್ನೂ ಮಾಡಲಾರದೆ ಬ್ರಿಟಿಷ ಸರಕಾರವೂ ಪ್ರತಿನಿಧಿಗಳೂ ಬಿಕ್ಕಟ್ಟಿಗೆ ಸಿಲುಕಿರುವರು ಯಾವ ಕರಾರುಗಳಾಗಲಿ ಬೆಯ್ಸೆ ಪರಿಷತ್ತು ಅಂತ್ಯವಾಗಲಿದೆ ನಿರಾಶೆಯಂ ಖಂಡಿತವಾಗಿಯೂ ಇದೆಯೆಂದು ಭಾರತ ಪ್ರತಿನಿಧಿಗಳು ಹೇಳಿದರು ಬ್ರಿಟಿಷರು ತಮಗೆ ಭಾವೀ ಹಿಂದೀಯ ರಾಜ್ಯಾಡಳಿತದಲ್ಲಿನ ದೃಢ ಸೈನ್ಯಗಳ ಮೇಲೆ ಭದ್ರತೆಗಳು ಅಗತ್ಯವಿವೆ, ಅವುಗಳಿಲ್ಲದಿದ್ದರೆ ಈ ಪರಿಷತ್ತನ್ನು ಕೂಡಿಸಿಯೂ ನಮಗೆ ಸಾರ್ಥಕ್ಯ ವಿಲ್ಲ ಬಂದ ಹಾಗೆ ಹಿಂದಿರುಗಬಹುದು ಎಂಬ್ಹತ್ತಿರುವರು. ಆಶ್ರಿತ ರಾಜರುಗಳೂ ಬ್ರಿಟಿಷ ಮುತ್ಸದ್ದಿಗಳ ಮನವರಿಕೆಗಳಿಗೆ ಕವಿಗೊಟ್ಟಂತಿಲ್ಲ ಸರ್ ಎ ಪಿ ಪಾತ್ರೊರವರು ಸರ್ ಹೋರರ ರೀತಿ ನೀತಿಗಳನ್ನು ಪ್ರತಂಸಿಸುವುದಿಲ್ಲನಾದರೂ, ಭಾರತ ಪ್ರತಿನಿಧಿಗಳೂ ಸಂಸ್ಥಾನಾಧಿಪರೂ ಮನಸ್ಸು ಮಾಡಿದರೆ ಪರಿಷತ್ತು ನೆಟ್ಟಗೆ ನಿಲ್ಲಬಹುದೆಂದು ಅಭಿಪ್ರಾಯ ಪಡುತ್ತಿರುವರು ಹಿಂದೂದೇಶದ ನವೀನ ರಾಜ್ಯ ರಚನಾ ಕ್ರಮದಲ್ಲಿ ಹಿಂದೂದೇಶದ ಶ್ರೇಯಃದೃಷ್ಟ್ಯಾ ರಕ್ಷಣೆಗಳಿಲ್ಲದಿರುವುದಾದರೆ, ನಮ್ಮ ಸಹಕಾರ ವಿಲ್ಲನೆಂದೂ ಸಪ್ರು ಜಯಕರರೇ ನೊದಲಾದವರು ಗದರಿಸಿರುವರು ೫ೀ ರಾಮಸ್ವಾಮಿ ಮುದಲಿಯಾರರೂ ಸಪ್ರುಗಳ ಪಂಗಡಕ್ಕೆ ಸೇರಿರುವರು ಮಾಸ್ವರ್ ತಾರಕ ಸಿಂಘರೆಂಬವರು ಈಗ ಕಣ್ಣು ಕೆರೆದು ನೂತನವಾಡುತ್ತ ''ನಾನು ಬಂದುದು ಏನಾದರೊಂದು ಪ್ರಯೋಜನಕಾರಕ ಇತ್ಯರ್ಥವು ಈಗ ಆದೀತೆಂದು; ಆದರೆ ಪರಿಸ್ಥಿತಿಯನ್ನು ಕಾಣುವಾಗ, ಇನರೆಲ್ಲ ಒಂದಾಗಿ ನೊದಲೇ ಪಿತೂರಿ ನಡಿಸಿ ನಿರ್ದಿಷ್ಟ ಗುರಿಯನ್ನು ಮುಟ್ಟಿರುವರು ಎಂದು ಗೊತ್ತಾಗುತ್ತದೆ ನನಗೆ ಈ ಪರಿಷತ್ತಿನಿಂದ ಈಗ ಆಶೆಯ ನೆರಳು ಏನೂ ಕಾಣುವುದಿಲ್ಲ ಅಲ್ಲಾಹಾಬಾದಿನ ರೌಂಡ್ ಟೇಬಲಿನ ಸರ್ವ ಪಕ್ಷೀಯ ಅನುಮೋದನೆಯಿಂದ ಮಂಜೂರಾದ ನಿರ್ಣಯಗಳನ್ನು ಬ್ರಿಟಿಷ ಸರಕಾರವು ಸಂಪೂರ್ಣ ಅಲ್ಲಗಳೆದು ತನ್ನದೇ ಆದ ಕಮ್ಯೂನಲ್ ಎವಾರ್ಡನ್ನೇ ಮುಷ್ಟಿಯೊಳಗೆ ಬಿಗಿಹಿಡಿದುಕೊಂಡಿದೆ'' ಎಂದರು ಹಿಂದೂಸ್ಥಾನವು ಯಾವ ರೀತಿಯ ಸುಧಾರಣೆಯನ್ನು ಹೊಂದಲಿಕ್ಕೂ ಅರ್ಹವಾಗಿಲ್ಲವೆಂಬ ಭಾವನೆಯು ಮಂತ್ರಿಮಂಡಲದವರ ಹೃದಯದಿಂದ ಹೋಗಿಲ್ಲವೆಂದೇ ಭಾಸವಾಗುತ್ತಿದೆ. ಸರಕಾರದ ಕಾರ್ಯ ಕಲಾಪಗಳನ್ನು ಸಿಎಳ್ ಎಂಡ್ರೂಸರು ವಿಮರ್ಶಿಸುತ್ತ,-ಅಲ್ಲಾಹಾಬಾದ್ ನಿರ್ಣಯಗಳನ್ನು ಬ್ರಿಟಿಷರು ಸ್ವೀಕರಿಸುವುದು ವಿಹಿತವಿದೆ ಭಾರತ ದೇಶದ ಪ್ರತಿನಿಧಿಗಳ ಕೀಳಿಕೆಗಳನ್ನು ಕೊಡಲಾಗದಿದ್ದರೆ ಬ್ರಿಟನು ಮತ್ತು ಇಂಡಿಯಾಗಳೊಳಗೆ ಸಿ ಮ್ಮ ದಿಯಾಗಲಾರದು ಎಂದಿರುವರು

ಸರಕಾರದ ರಥವು ಮುಗ್ಗರಿಸಿ ಬೀಳುವಂತಹ ಪ್ರಸಂಗಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವೈಸರಾಯರಿಗೆ ಸರ್ವ ತಂತ್ರ ಸ್ವತಂತ್ರಾಧಿಕಾರವಿರಬೇಕು, ಹಣ ಕಾಸಿನ ವಿಚಾರಗಳಲ್ಲಿಯೂ ಸರಕಾರೀ ಉದ್ಯೋಗಿಗಳ ಕ್ಷೇಮಲಾಭದ ವಿಚಾರದಲ್ಲಿಯೂ, ವ್ಯಾಪಾರ ವಾಣಿಜ್ಯ ವಿಚಾರಗಳಲ್ಲಿಯೂ ಗವರ್ನರ್ ಜನರಲ್ ರವರ ಹೆಸ್ತದಲ್ಲಿ ಸರ್ವ ಸಂರಕ್ಷಣಾ ಕವಚಗಳಿರಬೇಕೆಂದು ಬ್ರಿಟಿಷರ ಹವಣಿಕೆ ಆದರೆ ಸಪ್ರು ಜಯಕರರು ಈ ರೀತಿಯ ಕೀಳಿಕೆಗಳನ್ನು ಪ್ರತಿಭಟಿಸಿ, ಎಲ್ಲವೂ ವೈಸರಾಯರ ಕೈಯಲ್ಲಾದರೆ ದೇಶೀಯರ ಕೈಯಲ್ಲೇನಿದ್ದಂತಾಯಿತು? ಎಂದು ಪ್ರಶ್ನಿಸಿದ್ದಾರೆ ಲೋರ್ಡ್ ಅರ್ವಿನರು ನೊದ ನೊದಲು ಭಾರತೀಯರ ಆರ್ಜವಕ್ಕೆ ಬೆಂಬಲವಾಗಿದ್ದರೆಂದು ಕಂಡು ಬಂತಾದರೂ, ಈಗ ಅವರ ಕೆಲವು ಮಾತಿನಿಂದಾಗಿ ಅವರು ಹೇಂಟೆ ಮತ್ತು ವಿಗಳ ನ್ಯಾಯದಂತೆ ವರ್ತಿಸುವಂತೆ ಕಾಣುತ್ತದೆ ಹಿಂದೂ ದೇಶಕ್ಕೆ ಬಂದೋ ನೊದಲು ಸ್ಥಾನಿಕ ಸ್ವಾತಂತ್ರ್ಯವನ್ನು ಕೊಡಬೇಕು, ಅಥವಾ ಕೇಂದ್ರ ಸರಕಾರ ಧಾನವನ್ನು ಕಣ್ಣು ಕಟ್ಟಿಗೆ ಕೂಟ್ಟು, ಕೆಲವು ರಕ್ಷಣಾ ಕವಚಗಳ ನೆವನದಿಂದ ಅಂಪಪ ಕೇಂದ್ರ ಸರಕಾರದ ಸರ್ವ ಶಕ್ತಿಯನ್ನು ತಮ್ಮ ಹೆಸ್ತಗತ ಮಾಡಿಕೊಳ್ಳಬೇಕೆಂದೇ ಮಂತ್ರಿ ಮಂಡಲದವರ ಊಹಾ ಲೋಚನೆಯಾಗಿ ನಿ ತಿದೆ ಇನ್ನೂ ಕೆಂಡ ಸಂಸ್ಥಾನಗಳ ಪ್ರತಿನಿಧಿಗಳು ''ರಕ್ಷಾ ವಚಗಳು ಕೇಂದ್ರ ಸರಕಾರದ ಜವಾಬ್ದಾರಿಯನ್ನು ತಿರುಳಿಲ್ಲದಂತೆ ಮಾಡುವ ಈ ಹವಣಿಕೆಯನ್ನು ವಿರೋಧಿಸುವುದಾದರೆ ನಾವು ಸಂಯುಕ್ತ ರಾಜಾಂಗದೊಳಕ್ಕೆ ಪ್ರವೇಶ ಮಾಡುವುದೇ ಬೇಡ ವೆಂದು ನಿರ್ಧರಿಸಿದಂತೆ ಹೇರಿದರು ಸಪ್ರುಗಳ ಪಂಗಡದವರು ''ಈ ರಕ್ಷಾ ಕವಚಗಳು ಗವರ್ನರ್ ಜನರಲರ ಕೈಯಲ್ಲಿರುವುದು ಬೇಡ, ಸುಪ್ರೀಂ ಕೋರ್ಟಿನ ಅಧಿಪತಿಗಳ್ಲೊರಲಿ ಎಂದಿದ್ದಾರೆ ಸಪ್ರು ಪಂಗಡದವರ ನಿರ್ದಾಕ್ಷಿಣ್ಯ ಪೂರ್ವಕ ಚರ್ಚೆಗಳನ್ನು ನೋಡಿ ಬ್ರಿಟಿಷರು ಬಹಳ ದಿನಗಾಗಿ ಎಚ್ಚೆದ್ದಾರೆ ಲೋರ್ಡ್ ರೀಡಿಂಗ್‌ರವರು ತನ್ನ ಮನಸ್ಸಿನೊಳಗ ಇಷ್ಟು ಕಾಲವೂ ಇದ್ದ ಹಿಂದು ಭಾವವನ್ನು ಅನಿವಾರ್ಯವೆನಿಸಿ ಹೊರ ಹಾಕಿದರು ''ಹೌದು, ನೀವು ಕೇಂದ್ರ ಸರಕಾರವನ್ನು ಕೊಡಿರೆಂದು ಕೇಳುವುದು ಖರೆ, ನಾವು ಅದನ್ನು ಕೊಡಬೇಕಾದುದೂ ಖರೆ, ಆದರೆ ಕಾಲ ಕ್ರಮೇಣ 'ಕೊಂಗ್ರೆಸ್ಸಿನ ಕ್ರಾಂತಿಕಾರಿ ಶಾಸನ ಸಭೆಗಳನ್ನು ಹೊಕ್ಕು, ಆಡಳಿತಯಂತ್ರವನ್ನೇ ತಮ್ಮ ಕೈವಶ ಮಾಡಿಕೊಂಡು ನಿರಂಕುಶ ಪ್ರಭುತ್ವವನ್ನು ಪ್ರದರ್ಶಿಸಿ ಬಿಟ್ಟರೆ ನೀವೇನು ನೂಡುವಿರಿ? ಅದಕ್ಕಾಗಿಯೇ ನಾನೆನ್ನುವುದು,-ರಕ್ಷಾ ಕವಚಗಳು ಬ್ರಿಟಿಷರೂಡನೆಯೂ ಬೇಡ, ಕೇಂದ್ರ ಸರಕಾರಿಂದನೆಯೂ ಬೇಡ, ವೈಸರಾಯರಲ್ಲಿರಲಿ ಎಂದು'' ಎಂದಿದ್ದಾರೆ ಇದನ್ನು ಕೇಳಿದ ಲೋರ್ಡ್ ಅರ್ವಿನರು ''ಲೋರ್ಡ್ ರೀಡಿಂಗರೆನ್ನುವುದು ನ್ಯಾಯವಾದುದು' ಎಂದರು ಈ ತಂತ್ರಗಳಿಗೆ ಸರ್ ತೇಜ ಬಹದ್ದೂರ್ ಸಪ್ರುಗಳು ಒಳಗಾಗುವಂತಿಲ್ಲ ಅವರೆಂದು ಬಿಟ್ಟರು ''ನಿಮ್ಮ ಕೌಟಿಲ್ಯವು ನನಗೆ ತಿಳಿದಿದೆ ನೀವು ಹಾಗಲ್ಲ ಮಾಡುವುದಾದರೆ ನಾನೀಗಲೇ ಇಲ್ಲಿಂದೆದ್ದುಬಿಡುತ್ತೇನೆ' ಎಂದು ಭಾರತೀಯರ ಒಬ್ಬ ಪ್ರತಿನಿಧಿಯು ಮನ ಮುದುಕೊಂಡರೆ ಎಲ್ಲರೂ ಅವನನ್ನೇ ಹಿಂಬಾಲಿಸಿ ಹಡಗು ಹತ್ತಿ ಊರಿಗೆ ತೆರಳುತ್ತಾರೆಂದು ಬ್ರಿಟಿಷರಿಗೆ ತಿಳಿದಿದೆ ಅದುದರಿಂದಲೇ ಸಪ್ರುರವರು ಹಾಗೆಂದೊಡನೆ ಬ್ರಿಟಿಷರು ಅವರನ್ನು ಸವಾಧಾನ ಮಾಡಿ ಪುನಃ ಇನ್ನೊಂದು ಮಾರ್ಗವಾಗಿ ತರ್ಕಕ್ಕೆ ಪ್ರಾರಂಭಿಸುವರು.

ಒಂದು ಕಡೆಯಿಂದ ಸರ್ ಹೋರರು ಚೆಲ್ಲಿಯೋ ಎಂಬಲ್ಲಿ ತನ್ನ ದೇಶಿಯರಿಗೊಂದು ಧಾತಣ ಕೊಡುತ್ತಾ ''ನಮ್ಮ ಲ್ಯಾಬ್ ಜೊರ್ಜ್ ಸರಕಾರವು ಮೊದಲು ಆರ್ಲಂಡಿನವರೊಡನೆ ಸಂಧಿ ಬೆಳೆಸಿ ಅನಂತರ ಪಾರ್ಲಿಮೆಂಟಿನ ಮುಂದೆ ಬರದು ತಲೆ ತಗ್ಗಿಸಿ ನಂತೆಂತೆ ನಾವು ಈಗ ಮಾಡಲಿರುತ್ತೇವೆಂದು ನಮ್ಮಲ್ಲಿ ಅನೇಕ ಕನ್ಸರ್‌ವೇಟಿವರ ಭಯವಿದೆಯೆಂಬ ನನಗೆ ತಿಳಿದುಬಂದಿದೆ. ಮೆಕ್‌ಡೊನಾಲ್ಡ್ ಸರಕಾರದವರು ಹಾಗೆ ಮಾಡುತ್ತಾರೆಂದು-ನಮ್ಮ ಜನರು ನೆನಸ ವುದೂ ಕೂಡಾ ಬೇಡ ನಾನು ಅವರಿಗೆಲ್ಲ ಧರವಸೆ ಕೊಡಬಲ್ಲ ನಾವು ಹಾಗೆ ಸರ್ವಥಾ ಮಾಡಲಾರವು. ಬ್ರಿಟಿಷರ ಶ್ರೇಯಸ್ಸನ್ನು ಮರೆತು ನಾವು ಯಾವ ವ್ಯವಹಾರಗಳನ್ನೂ ನಡೆಸುವಂತಿಲ್ಲ'' ಎಂದು ಕೇಳಿದರು ಧಾರತ ಮಂತ್ರಿಗಳ ಈ ಮಾತಿನಿಂದಾಗಿ ಮೂರಲ್ಲ, ನೂರು ರೌಂಡ್ ಟೇಬಲ್‌ಗಳು ಜರಗಿದರೂ ಹಿಂದುಸ್ಥಾನಕ್ಕೆ ತಿರುಳಿರುವ ಸ್ವಾತಂತ್ರ್ಯವು ಸಿಗುವುದು ದುರ್ಲಭವೆಂದು ತಿಳಿದುಬರುತ್ತದೆ ಸರ್ ಹೋರರ ಮಾತಿನಿಂದಾಗಿ ಬ್ರಿಟಿಷರು ಕೆಲವು ನಿರ್ದಿಷ್ಟ ಅಭಿಪ್ರಾಯವುಳ್ಳವರಾಗಿರುವರೆಂದೂ, ಯಾವ ಸಂದರ್ಭದಲ್ಲೂ ಅದನ್ನು ಮೀರಿ ಹಿಂದೀಯರೊಡನೆ ವ್ಯವಹರಿಸಲು ಸಿದ್ಧರಿಲ್ಲ ವೆಂದೂ ಕಂಡು ಬರುತ್ತದೆ

ಕಳೆದ ವಾರದಲ್ಲಿ ಇಂಡಿಯಾ ಲೀಗ್ ಡೆಲಿಗೇಶನ ನವರನ್ನು ಸ್ವಾಗತಿಕರಿಸಿ ಕೆಂಗ್ಸ್‌ಲಿಹೋಲಿನಲ್ಲಿ ಒಂದು ಮಹಾ ಸಭೆಯ ಜರಗಿತು ಲಿಯೊನಾರ್ಡ್ ಪೆಟ್ಟರ್ಸ್ಸ್, ಮಿಸ್ ವಿಲ್ಲಿಯರ್ಸ್ಸನ್ ಮತ್ತು ಕೃಷ್ಣ ಮೆನೋನ್‌ರವರು ತಾವು ಕಂಡೆ ದೃಶ್ಯಗಳನ್ನೂ, ತಮ್ಮ ಅನುಭವಗಳನ್ನೂ ಸಭಿಕರಿಗೆ ಮನವರಿಕೆಯಾಗುವಂತೆ ವಿವರಿಸಿದರು ''ಸ್ವಾತಂತ್ರ್ಯ ಜ್ಯೋತಿಯನ್ನು ಜಗತ್ತಿನಲ್ಲಿ ಬೆಳಗಿಸಲು ಪಡುವ ಯತ್ನ, ಮುಖಂಡರುಗಳು ಒಬ್ಬರನ್ನೊಬ್ಬರು ಸಂದರ್ಶಿಸಿ ಮಾತುಕತೆ ನಡೆಸಲು ಅಗುವ ನಿರ್ಬಂಧ, ರಾಜಕೀಯ ಕೈದಿಗಳ ಬಿಡುಗಡೆ, ಬ್ರಿಟನಿನ್ನಲ್ಲಿಗಳನ್ನು ಹಿಂತೆಗೆಯೋಣ ಮೊದಲಾದುವುಗಳನ್ನು ಸೂಚಿಸಿ ರಾಷ್ಟ್ರಗಳಿಗೆ ಅದ್ಯಕ್ಷರಾದ ಲೋರ್ಡ್ ಸೆಲ್‌ಬರ್ನವರು ಧಾರ್ಢ್ಯತೆಯಿಂ ಧೀರತೆಯನ್ನು ಪ್ರಶಂಸಿಸುತ್ತ ''೩೭೦೦೦೦೦೦ ಜನರು ದಂಗ ಎದ್ದರೆ ನಮ್ಮಿಂದೇನಾಗ ವುದು? ಆದರ ಬದಲಿಗೆ ನಾವು ಮೈತ್ರಿಯಿಂದ ನಡೆಯುವುದು ವಿಹಿತವಲ್ಲವೇ? ಹಿಂದೂಸ್ಥಾನಕ್ಕೆ ಬೇಕಾದ ಸ್ವಾತಂತ್ರ್ಯ ದಾನವು ಅಲ್ಲೇ ಬೇ- ' ಎಂದು ಹೇಳಿದರು ಲಿಯೊನಾರ್ಡ್ ಪೆಟ್ಟರ್ಸ್ಸನ್ ಭಾಷಣ ಮಾಡಿ ''ಹಿಂದೂದೇಶದಲ್ಲಿ ಬೇಗನೆ ಬಂಗಾ ಏಳುವ ಸಂಭವವಿದೆ ಇವಾಬ್ಬಳೇ ಸರಕಾರವನ್ನು ದಾನ ಮಾಡುವುದು ಶ್ರೇಯಸ್ಕರವು' ಎಂದರು ಮಿಸ್ ವೈಟ್‌ವೇಯವರು ನುಡಿಯುತ್ತ—ಗಾಂಧಿಯವರು ತನ್ನ ಅಸಾಧಾರಣ ಆಧ್ಯಾತ್ಮ ಬೋಧನೆಯಿಂದ ಜನತೆಯ ಹೃದಯದಲ್ಲಿ 'ಹೆದರಿಕೆ'ಯೆಂಬುದನ್ನೇ ಮಾಯಗೊಳಿಸಿ ವರು ಆದುದರಿಂದಾಗಿ ಈಗ ಜನರು ಭಯಭ್ರಾಂತರಾಗುವುದೆಂಬುದಿಲ್ಲ' ಎಂದರು ಮಿಸ್ ವಿಲ್ಲಿಯ್ಸನ್‌ರವರು ''ಗಾಂಧಿಯವರನ್ನು ಪ್ರಥಮದ್ದಾಗಿ ವಿಡಬೇಕು ಎಂದರೆ ಮಾತ್ರ ಹಿಂದೂಸ್ಥಾನವು ಶಾಂತಿ ಹೊಂದುತ್ತದೆ ಹಿಂದೂದೇಶವಲ್ಲಿ ಬಹಳ ರುಚಿಸ್ಥಿತಿಯು ಪಸರಿಸಿಕೊಂಡಿದೆ ಸ್ತ್ರೀ ಪುರುಷರು ತಮ್ಮ ಸರ್ವಸ್ವಗಳನ್ನೂ ರಾಷ್ಟ್ರಹಿತಕ್ಕಾಗಿ ಧಾರೆಯೆರಯಿಎವುದನ್ನು ನೋಡಿದರ ನಾವು ತಲ ತಗ್ಗಿಸಬೇಕಾಗುತ್ತದೆ ರಾಜಕೀಯ ಚಳವಳಿ ಲ್ಲಿ ಈಗಿನ ಜನರ ಸಂಖ್ಯೆಯೂ ಕಡಿಮೆಯಾಗುತ್ತಿದೆಯೆಂದು ಹೋರರು ಹೇಳಿದ ಮಾತಿನ ತಿರುಳೀನೆಂದರ-ಲಾಥಿಯ ಪೆಟ್ಟುಗಳ ಎಂದರು

++ ++

SEVENTY FIVE YEARS!

WATCH THIS SPACE

FOR

Iportant Announcement

Next Week.

ಬರುವ ವಾರ

ಇದೇ ಸ್ಥಳದಲ್ಲಿ ಪ್ರಕಟವಾಗುವ

ವಿಶೇಷ ಸಂದೇಶವನ್ನು ಓದಲು

ಕಾದಿರಿ!

ಅಂಕಪಟ್ಟಿ

ಅಗತ್ಯಗಳು
ಸ್ವದೇಶಾಭಿ ಕೆಮಿಸಾ ೪
ಸ್ವದೇಶಾಭಿಗಳು ೪
ಸೂಚನೆಗಳು ೨೨

ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ೧೪
ಪಕ್ಷದ ಕೃತ್ಯಗಳು— ಮುಂಗಡಿರು, ಉಡುಪಿ, ಮುಂಬೈ, ಸುರತ್ಕಲ್, ಪುರಂದರಪೇಟೆ, ಆಡಳಿತ, ಕಾರ್ಕಳ, ಕಾರಸ್ಥೋಟು ೧
ವಿವಿಧ ಸಮಾಚಾರಗಳು ೧೧
ಭಾಕೆಟಿಟಲು ಮುಖಪುಟಕ್ಕು! ೨
ಪತ್ರಿಕೆದಾರ ೧೬
ಪಲಿಷನಿಗೆ ಗಾಂಧಿಯುವರ ಹಿತೋಪದೇಶ ೧೦
ರೌಂಡ್ ಟೇಬಲ್ ಕಂಳವು ಕೆಸರು ಬೀಳದೆ ೬
ಹಿಂದೂಸ್ಥಾನಕ್ಕೆ ಯುಕ್ತವಾದ ಏರ್ಪಾಟ್ಗಳು ೧೫

ಸ್ವದೇಶಾಭಿಮಾನಿ.

ಶಾ. ೧೬ನೇ ಶುಕ್ರವಾರ ದಶಂಬರ ೧೯೩೦.

ಸ್ವರಾಜ್ಯದ ತಯಾರಿ.

ಸ್ವ ಪ್ರೊ – ಜಯಕರ – ಕೇಳ್ಕುರರಾದಿ ಹಿಂದೀಯ ಉದಾರ ಧೋರಣ ಪಕ್ಷದ ಮುಖಂಡರು ಇಂಗ್ಲೆಂಡಿಗೆ ಪ್ರಯಾಣಗೈದು ಅಲ್ಲಿಯ ಬ್ರಿಟಿಷ ಪ್ರತಿನಿಧಿಗಳೊಡನೆ ಹಿಂದೀ ಸ್ವರಾಜ್ಯದ ಸಿದ್ಧತೆಯಲ್ಲಿ ನಿರತರಿರುವರು ಇಂಗ್ಲೆಂಡಿನ ಮಜೂರ ಪಕ್ಷದ ಅಧಿಕಾರವು ಬಿದ್ದಾಗಲೇ ರೌಂಡ್‌ಟೇಬಲ್ ಪರಿಷತ್ತು ಬಿದ್ದು ಹೋಯಿತೆಂದೂ, ಹಿಂದೀ–ಆಂಗ್ಲ ಅನ್ಯೋನ್ಯವು ಚಿರಕಾಲ ಕ್ಕಾಗಿ ನಾಶವಾಯಿತೆಂದೂ ಎಲ್ಲರೂ ತಿಳಿದುಕೊಂಡರು ಆದರೂ ಹಿಂದೀಯ ಉದಾರ ಪಕ್ಷದವನೆಂದರೆ ಅತಿಶಯವಾದ ಆತಾವಾದಿಗಳು ಹೆಣ ಕಂಡರೂ, ಮದ್ದುಮಾಡಿದರೆ ಪ್ರಾಣಸಂಚಾರವಾಗಬಾರದೇಕೆ? ಎಂದು ನೆನೆಸುವವರು, ಸರ ಕಾರದೊಡನೆ ದ್ವಂದ್ವ ತಮಗೇಕೆಂದು ತಿಳಿದು, ಸರಕಾರದೊಡನೆ ವಿದ್ವೇಷವನ್ನು ಬೆಳಪದೇನೇ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ವನ್ನೂ, ಸ್ವರಾಜ್ಯವನ್ನೂ, ಘೆಡರೇಷನನ್ನೂ, ಜವಾಬ್ದಾರ ಸರ ಕಾರವನ್ನೂ ತರಲಬೇಕ್ಷಿಸುವವರು ಅವರ ಮನಸ್ಸಿನಲ್ಲಿ ಒಂದು ಅಭಿಪ್ರಾಯವು ನಿಶ್ಚಲವಿದೆ–ಹಿಂದೂಸ್ಥಾನವು ಸಂಪೂರ್ಣ ಸ್ವಾತಂತ್ರ್ಯಕ್ಕೆ ಇನ್ನೂ ಸಿದ್ಧವಿಲ್ಲವೆಂಬುವುದು

ಇಂತಹ ಕ್ಷುದ್ರ ಮಾನಸಿಕತೆಯ ಹಿಂದೀಯ "ಧುರೀಣರು ಇಂಗ್ಲೆಂಡಿನಿಂದ ಸ್ವರಾಜ್ಯವನ್ನು ತಯಾರಿಸಿ ತರಲು ಇಂಗ್ಲೆಂಡಿನಲ್ಲಿರುವರು ಇವರು ತರುವಂತಹುದು ದೇಶಕ್ಕೆ ಉಪಯೋಗದ್ದಾಗಿರಲಾರದೆಂದು ಮೊದಲೇ ದೇಶಕ್ಕೆ ತಿಳಿದಿದೆ ಉದಾರ ಪಕ್ಷದ ಮುಖಂಡರು ಡಾ। ಸಪ್ರೂಗಳವರು–ತೇಜಿಪ್ರೆ–ಗಾಂಧಿ ಸ್ನೇಹಕ್ಕೆ ಪೇಚಾಡಿದವರು–ಕಾಂಗ್ರೆಸ್ ಇಲ್ಲದೆ ರೌಂಡ್ ಟೇಬಲ್ ಪರಿಷತ್ತು ಫಲಕಾರಿಯಾಗದೆಂದು ತಿಳಾಗಿ ಸೂಚಿಸಿ ದವರು–ಅವರೇ, ಈಗ, ಈಗಿನ ಈ ಮಾಯಾಮಯವಾದ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಕೂಡ, ತಾವು ರಚಿಸಿಕ್ಕ ಸರ ಕಾರವು ಮುಂದೆ ಕಾಂಗ್ರೆಸ್ಸಿನ ಕೈವಶವಾದರೆ ಗತಿಯೇನು?–ಎಂಬ ಹೆದರಿಕೆಯನ್ನು ತೋರಿಸುವರು ಸರಕಾರವು ಇನ್ನೂ ರಚಿಸಲ್ಪಟ್ಟಿಲ್ಲ, ರಚಿಸಲ್ಪಟ್ಟು ಮೇಲೆ, ಕಾಂಗ್ರೆಸ್ಸು ಹಾಗಿರಲಿ, ಸಪ್ರೂ–ಜಯಕರರ ಕೈವಶವಾದರೂ ದೇಶದ ಗತಿ ಹೇಗಾದೀತೆಂದು ಸಪ್ರೂ–ಜಯಕರರ ಅನುಮಾನವೇ ತೀರಿಸಲ್ಪಟ್ಟಿಲ್ಲ ಹಾಗಾದರೂ ಕೂಡ, ಈಗಲೇ ಹೋರರಿಗೆ ಕಾಣುವ ಕಾಂಗ್ರೆಸ್ ಧೂತವು ಸಪ್ರೂರವರ ಬುದ್ಧಿಭ್ರಂಶ ಮಾಡುವುದನ್ನು ಕಂಡರೆ, ಸಪ್ರೂರವರು ಹಿಂದೂಸ್ಥಾನದ ಪ್ರತಿನಿಧಿಗಳೂ, ಇಲ್ಲವೆ ಚರ್ಚಿಲ್ ಸಾಹೇಬರು ಪ್ರತಿನಿಧಿಗಳೊ ಎಂದು ಅನುಮಾನಿಸ ಬೇಕಾಗುತ್ತದೆ

ಸಪ್ರೂ–ಜಯಕರರು ಇಷ್ಟು ಉದಾರ ಧೋರಣವನ್ನು ಪಡಿಸಿಯೂ ಫಲವೇನು? ಸರಕಾರಕ್ಕೆ ಸಂತೋಷವಾಗುವ ರೀತಿ ಯಲ್ಲಿ ಕಾಂಗ್ರೆಸ್ಸನ್ನು ದೂರೀಕರಿಸಿಯೂ ಇವರಿಗೆ ದೊರೆತ ಗೌರವವೇನು? ಇವರ ಉತ್ತಾವಾದಕ್ಕಿಷ್ಟು ಕೂಡ ಇಂಗ್ಲೆಂಡಿನ ಸರ್ ಹೋರರ ಮುಂದೆ ಎಡೆಯಿಲ್ಲ ಇವರ ಕ್ಷುದ್ರ ಮೇರೆ ಗಟ್ಟಿದ ಅಶಯಗಳನ್ನು ಒಪ್ಪುವವರಿಲ್ಲ. ಪ್ರಧಾನ ಮಂತ್ರಿಗಳ ಹಳೆ ಮಾತುಗಳು ಎಲ್ಲಿಯೊ ಪಲಾಯನಗೈದಿರುವು. ಹಿಂದೂ ಸ್ಥಾನದ ಸರಕಾರ ರಚಿಸಲ್ಪಟ್ಟಿಲ್ಲ, ಹಿಂದೂಸ್ಥಾನಕ್ಕೆ ಒಕ್ಕೂಟ ಯಾದ, ಶಾಸ್ತ್ರಬಲ ರಕ್ಷಣಾಕ್ಷೇತ್ರ ನಿರ್ಬಂಧಗಳು ಮುಕ್ತವಾದ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕೆ ಮೇರೆಗಟ್ಟಿವೆ ಎಂಬುದೇ ಮಿ. ಬೆಸ್ಟರ ಪ್ರೇರಣೆಯಲ್ಲಿ, ಮಿ. ಮೆಕ್ಡೊನಾಲ್ಡರು ರೌಂಡ್ ಟೇಬಲ್ ಪರಿಷತ್ತಿನಲ್ಲಿ ಹಿಂದೀ ಪ್ರತಿನಿಧಿಗಳಿಗೆ ವಾಗ್ದಾನ ಮಾಡಿದ್ದರು. ಆ ವಾಗ್ದಾನ ಹೋಯ್ತೆ! ಶೇಷನ್ ಗವರ್ನ ಮೆಂಟ್ ಎಂಬ ಹೋಗಿನಲ್ಲಿ ಮಿ. ಮೆಕ್ಡೊನಾಲ್ಡರು ತಮ್ಮ ಹಳೆಯ ಜೀವನ ಸೂತ್ರಗಳಿಗೆ ತಿಲಾಂಜಲಿಯನ್ನಿತ್ತು, ಪ್ರಧಾನ ಮಂತ್ರಿತ್ವದ ಅಧಿಕಾರಕ್ಕೆ ದುರಂಭಿಲಾಷೆಯಿಂದ ಬಿಗಿದ್ದಿ ಕುಳಿ ತಿರುವರು. ಹಿಂದೂಸ್ಥಾನಕ್ಕೆ ವಾಗ್ದಾನಗಳ ಮುರಿಯುವಿಕೆ ಗಳಿಂದ ರಚಿಸಿದ ನಿರಾಶಾ ಮಾಲೆಯಲ್ಲಿ ಈ ಬಾರಿಯದು ಅಗ್ರ ಪದಕವಾಗಿರುವುದು.

ಬ್ರಿಟಿಷರ ಈಗಿನ ಸರಕಾರವು ಹೆಸರಿನಲ್ಲಿ ನೆಶನಲ್ ಎಂದಿ ದ್ದರೂ ಕಾರ್ಯದಲ್ಲಿ ಕನ್ಸರ್ವೆಟಿವ್ ಪಕ್ಷೀಯನೇ ಆಗಿರುತ್ತದೆ. ಮಜೂರ ಅಥವಾ ಲಿಬರಲ್ ಪಕ್ಷದ ಹಿಂದಿನ್ನು ಧೋರಣ ವಾದರೂ ಅದರಲ್ಲಿಲ್ಲ ಇದರ ಪರಿಣಾಮವನ್ನು ಇಂಗ್ಲೆಂಡು ಅನುಭವಿಸಲಿಕ್ಕೆ ಆರಂಭಿಸಿಯದೆ ಮತ್ತು ಇನ್ನೂ ಅನುಭವಿಸ ಲಿಕ್ಕಿದೆ ಪರದೇಶೀಯ ಸರಕುಗಳ ಮೇಲಿನ ಹೆಚ್ಚಿಸಿದ ತೆರಿಗೆ ಯಿಂದ, ಇಂಪೀರಿಯಲ್ ಸಾಮ್ರಾರ್ಥದ ಪರಿಷತ್ತಿನಿಂದ, ಜಪಾನ್–ಜೈನಾ ಕದಿಯ ಅನ್ಯಾಯಕರ ಧೋರಣೆಯಿಂದ, ರಷ್ಯಾ ದೇಶದ ಮೇಲಿನ ಅನಾವಶ್ಯಕ ದ್ವೇಷದಿಂದ, ಅಯರ್ಲೆಂಡಿನೊಡನೆ ನಿಂದ ನೀಯವಾದ ವರ್ತನೆಯಿಂದ, ಇಂಗ್ಲೆಂಡು ತನ್ನ ಆರ್ಥಿಕ ಬಲ ವನ್ನೂ ಮಾನಸಿಕ ಒಲವನ್ನೂ ಕಳಕೊಳ್ಳುತ್ತಾ ಬಂದಿರುತ್ತದೆ. ಈ ಮೂಲಕ ಅದರ ಕಾಲೀರಿಕ ಬಲವೂ ಕುಗ್ಗಲಾರಂಭಿಸಿದೆ ಈ ಕನ್ಸರ್ವೆಟಿವ್ ಪಕ್ಷವು ಇನ್ನೊ ಅಧಿಕಾರದಲ್ಲಿದ್ದರೆ, ಹಿಂದೂ ಸ್ಥಾನ, ವಿಗುಪ್ತ ಮೌರ್ಯರಾದ ಅಧೀನ ಜನಾಂಗಗಳೂ, ಜೀನಾ ದಂತಹ ಒಲಹೀನ ರಂಜ್ಯಗಳೂ ಒಹಳ ಕಷ್ಟಕ್ಕೊಳಗಾಗುವುವು ಮಾತ್ರವಲ್ಲದೆ, ಇಂಗ್ಲೆಂಡಿನ ಆಸ್ತಿವಾರವೂ ಇದರೊಡನೆ ಕದಲು ವುದು ನಿಶ್ಚಯವೆಂದು ಕಂಡು ಬರುವುದು

ಇಂತಹ ಸಂದರ್ಭದ ಹಿಂದೂಸ್ಥಾನವು ಎಷ್ಟು ಕಷ್ಟ ಗಳಿಗೂ ಅನುತಾಪಗಳಿಗೂ ಗುರಿಯಾಗದೇಕಾಗಿ ಬಂದರೂ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿದರೆ ಕೇಡಾಗದೆಂದು ನಮಗನ್ನಿಸುತ್ತದೆ ಸರಕಾರವು ಹಿಂದೀಯಂ ನ್ಯಾಯವಾದ, ಅದರಲ್ಲೂ ಹಿಂದೀ ಲಿಬರಲರ ಕೆಂಚಿತ್ತಾದ ಕೇಳುವಿಕೆಗಳನ್ನು ಕೂಡ ಮನ್ನಿಸುವುದಿಲ್ಲವಾದರೆ, ಬ್ರಿಟಿಷರ ದಾನದ ಕೈಯನ್ನು ಹಿಂದಕ್ಕಿತ್ತಿ, "ನಿಮ್ಮ ದಾನವು ನಮಗೆ ಬೇಡ ನಿಮ್ಮ ಹಕ್ಕನ್ನು ನಮಗೊಪ್ಪಿಸಿರಿ ಎಂದು ಛಿಟಾರಲು ಹೇಳಿ ಹಿಂದಕ್ಕೆ ಬಂದರೆ ದೇಶಕ್ಕೆ ಅಪಕೀರ್ತಿ ಉಂಟಾಗಲಾರದು, ಪರಿಣಾಮವೂ ಮೊದಲು ಕಷ್ಟತರವಾಗಿದ್ದಾಗಬಹುದಾದರೂ, ಅಂತ್ಯದಲ್ಲಿ ಲಾಭ ಕಾರಿಯಾಗುವುದು ನಿಶ್ಚಯ

ವಿದೇಶ ವರ್ತಮಾನ.

—ಅಮೇರಿಕಾಕ್ಕೆ ಕೊಡುವ ಸಾಲವನ್ನು ಬ್ರಿಟನು ಭಂಗಾರದ ರೂಪ ದಲ್ಲಿ ತಾ. ೧೫ನೇ ದಿನ ಕೊಡುವುದೆಂಬ ವಾರ್ತೆ

—ರಷ್ಯದ ಇಝ್ವೆಸ್ಟಿಯಾ ಎಂಬ ಪತ್ರಿಕೆಯಲ್ಲಿ ಬ್ರಿಟಿಷ ವಿರೋಧ ಲೇಖನವನ್ನು ಬರೆದುದಕ್ಕಾಗಿ ರಷ್ಯವು ಕ್ಷಮೆಕೇಳಬೇಕೆಂದು ಬ್ರಿಟನು ಆಜ್ಞಾಪಿಸಿತು ರಷ್ಯವು ಕ್ಷಮೆ ಕೇಳುವುದೇನು ಕಮಾಷೆಯೇ' ಎಂದಿದೆ

—ಲೀಗ್ ಆಫ್ ನೇಶನ್ಸಿನ ಮೇಲೆ ಜಪಾನು ಉರಿಯೆದ್ದು ಬಿದ್ದಿದೆ.

—೯೦೦ ಜಪಾನೀ ಸೈನ್ಯವು ಬ್ರಿಟೀಷರನ್ನು ನುಂಗುವುದಾಗಿ ಸೋಲಿಸಿ ೩೦೦೦ ಮಂದಿಗಳ ಚೀನಾ ಸೈನ್ಯವು ರಷ್ಯಾದ ಗಡಿಯೊಳಗೆ ಸೇರಿತು. ರಷ್ಯನರು ಜಾಪಾನಿಗೆ ಸಹಾಯಮಾಡಿದಂತಿದೆ. ಚೀನೀಯರ ರಣಧೀರರಾದ ಜನೆರಲ್ ಮಾ ಎಂಬವರೂ ಸೆರೆಹಿಡಿಯಲ್ಪಟ್ಟಿದ್ದಾರೆ

ಡರ್ಬನ್‌ನಿನಲ್ಲಿರುವ ೪೦೦ ಹಿಂದೀಯ ನಿರುದ್ಯೋಗಿಗಳಿಗೆ ಅಲ್ಲಿಯ ಸರಕಾರವು ಸಹಾಯಮಾಡುತ್ತೇನೆಂದು ಕಾಗದ ಮೂಲಕ ಮಾತ್ರ ಭಾಷೆ ಕೊಟ್ಟದೆ

ಒಳದೇಶ ವರ್ತಮಾನ

—ಡಿ। ಸಿ. ವಿಜಯ ರಾಘವಾಚಾರ್ಯರು ಹರಿದ್ವಾರದಲ್ಲಿ ಗುರು ಕುಲ ಯುನಿವರ್ಸಿಟಿಗೆ ಸಂದರ್ಶನವನ್ನಿತ್ತರು. ಆರ್ಯಸಮಾಜವನ್ನೂ ಅದರ ಸ್ಥಾಪ್ಯಾಚಾರ್ಯರಾದ ಸ್ವಾಮಿ ಶ್ರದ್ಧಾನಂದರನ್ನೂ ಪ್ರಶಂಸಿಸಿ ಭಾಷಣಮಾಡಿದರು.

—ಪೂನೆಯ ಪ್ರಭಾತ ದಿನ್ಪತ್ರಿಕೆಯವರಾದ ಪಿ. ಎಸ್ ಕಿಸ್ಟೂರ್ ಎಂಬವರು ಭಾಷಣಮಾಡಿದುದಕ್ಕಾಗಿ ಕೈದುಮಾಡಲ್ಪಟ್ಟಿರು ,

–ಂಳ್ಳಾನೇ ನೆಲ್ಲನ್ನುಲ್ಲಂಘಿಸಿದುದಕ್ಕಾಗಿ ಮದ್ರಾಸಿನಲ್ಲಿ ಮಿಸಿಸ್ ಕಸಿನ್ ಎಂಬವರಿಗೆ ತಿಳ್ಳೆಯಾಯಿತು.

—ಬಾಂಬೆ ಪ್ರಾಂತ ಶೈನ ವಿದ್ಯಾಖಾತೆಯ ಮಿನಿಸ್ಟರರಾದ ಶ್ರೀ ಖೇರ್‌ರವರು ಅಲ್ಲಿಯ ಶಾಲೆಗಳಲ್ಲಿ ೬ ತಿಂಗಳ ಕೆಲಸ ಸಹಿಸಿ ಬಂದ ಹುಡುಗರಿಗೆ ಅಲ್ಲಿಯವರೆಗಿನಲ್ಲಿ ೬ ತಿಂಗಳ ಕೆಲಸ ಸಹಿಸಿದ ಬಂದ ಹುಡುಗರು ಸಮಾನರೆಂದು ಘೋಷಿಸಿರುವರು.

—ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಜಪಾ ನೀ ಕಾನ್ಸಲರಿಗೆ ದಿನ ಲಂಚವನ್ನಿಂದ ಮುಂದಾಗಿಗೆ ಕೆಲಸಕ್ಕಿರರು.

—ಕಾರಣಾಂತರದಿಂದ ಜಾಗಿರುವ ಸಂಬಂಧವಾಗಿ ಚಿಟ್ಟಗೊಂಗಿಗೆ ಜಾಮೀ ನರ ಮೇಲೆ ದಂಡ ತೆರಿಗೆಯಿಟ್ಟು ಈಗ ವಿಧಿಸಿದ್ದರಿಂ, ಯಾರಾದರೂ ಸ್ಥಾಂತರಿಸಾರರನ್ನು ಹಿಡಿದುಕೊಟ್ಟರೆ ಅಂತಹ ದಂಡ ತೆರಿಗೆಯಲ್ಲಿ ಹಿಂದೆ ಕೊಡಲ್ಪಟ್ಟಿರುವ ಎಲ್ಲಾ ಸಾರಗಳಾಗಿದೆ.

—ಮುಂಬಾಯಿಯಲ್ಲಿ ಬಾಂಬುಗಾರಿಕೆಯನ್ನು ನಡೆಸುತ್ತಾ, ವಿಕಲಚಿತ್ತ ಮಾಡ್ದುವುದಕ್ಕಿಟ್ಟು ಯುವಕನ ಮೇಲೆ ಸಂಚಯ ಹುಟ್ಟು ಆಪಾದನೆಯ್ನು ಸೆರೆ ಹಿಡಿದಾಗ, ೪೦೦೦ ರೂಪಾಯಿಯ ಮಗನಾಣ್ಯಗಳು ಅವನಿಂದ ಪೊಡಿಕುವು ಆ ನಗನಾಣ್ಯಗಳು ಅಲ್ಲೇ ಒಂದು ದೊಡ್ಡ ಚಿನಿವಾರದಂಗಡಿಯಿಂದ ಕಳ್ಳ ದಾರಿ ತಿಳಿದುಬಂದಿದೆ.

—ಬೆನಾರಿಸ್‌ನಲ್ಲಿ ಕೊಂಗ್ರೆಸ್ ಮಂದಿರವೊಂದನ್ನು ಪೋಲೀಸರು ಜಪ್ತಿ ಮಾಡಿ "ರಂ ದುಂದುಭಿ" ಎಂಬ ಕರಪತ್ರಗಳನ್ನೂ ಇನ್ನಿತರ ಸಾಮಾ ನುಗಳನ್ನೂ ಸೆರೆಹಿಡಿದರು.

—ಮುಂಬಾಯಿಯ ಗವರ್ನರರು ಕರಾಚಿಗೆ ತಲುಪಿದಾಗ ವಿಜಯೋ ತ್ಸವನ್ನು ನೆರವೇರಿಸಬೇಕೋ ಬೇಡವೋ ಎಂದು ಚರ್ಚೆಯಾಗಿ ಕೊನೆಗೆ ಆಗಬಹುದೆಂದಾಯಿತು

—ಒಬ್ಬ ಕೈದಿಯನ್ನು ಹಿಂಸೆಗೊಳಿಸಿದುದಕ್ಕಾಗಿ ಅಲ್ಲಹಾಬಾದಿನಲ್ಲಿ ಸಬ್ಬಿಗೆ ಎಂಬ ಪೋಲೀಸನ ಕೆಲಸವು ಹೋಯಿತು ತಕ್ಕೀರು ಹೊರಿಸ ಲ್ಪಟ್ಟಜೆ

ಗುರುವಮ್ಮಯ್ಯರು ಸಂಬಂಧವಾಗಿ ಗಾಂಧೀಜಿಯವರು ಒಂದೆರಡು ದಿನಗಳ ತನಕ ಬಿಡುಗಡೆ ಹೊಂದಿ ಗುರುವಮ್ಮಯ್ಯರಿಗೆ ಹೋಗಲಿರು ವುದೆಂದು ಆಶ್ಚರ್ಯ ವಾರ್ತೆ

—ದೆಹರಾಡೆನ್ ನೆರೆಯ ಜವಾಹರಲಾಲ ನೆಹರುವವರು ತನ್ನ ಪರ್ಯಂತ್ಯವನ್ನು ನಡೆಸಿದರು ಎಲ್ಲಾ ಕೈದಿಗಳು ಒಟ್ಟುಗೂಡಿ ಅವರಿಗೆ ನೆರೆಯೋಗೆ ಮೊರೆ ಹೂವುಗಳ ತಳ ಬುಕ್ಕೆಗಳನ್ನು ಕಳುಹಿಸಿದರು.

—ಅಲ್ಲಹಾಬಾದ್ ನಿರ್ಣಯಗಳನ್ನು ಪಿಲಾಫೆತ್ ಕಮಿಟಿಯವರು ಅನುಮೋದಿಸಿದ್ದು ಇನ್ನಿತರ ಬಾಂಧವರೂ ಅದಕ್ಕೊಪ್ಪಬೇಕಾಗಿ ಕೇಳ ಕೊಂಡಿರುವರು.

—ಸುದುವಯ್ಯಾರಿನ ಜಮೊರಿನ್ ರಾಜನು ದೇವಸ್ಥಾನದ ಇನ್ನಿತರ ನುಮಿಂದರೊಡನೆ ಹರಿಜನ ಪ್ರವೇಶದ ಕುರಿತು ಕೇಳಕೊಂಡಿದ್ದಾನಾಗಿಯೂ ಹೆಚ್ಚಿನವರು ಅದಕ್ಕೊಪ್ಪಿದ್ದಾರಾಗಿಯೂ ತಿಳಿದುಬರುವುದೆ. ದವೀಂದ್ರನಾಥ ಠಾಗೂರರು ಅವನಿಗೆ ಬರೆದಿದ್ದ ಅಮೆಂದು ಪತ್ರವು ಜಮೊರಿನ್‌ನಿಗೆ ತಲುಪಲಿಲ್ಲವೆಂದು ತಿಳಿದುಬರುತ್ತದೆ

—ಮದ್ರಾಸಿನ ಸುಪ್ರಸಿದ್ಧ ದೈನಂದಿ ವ್ಯಾಪಾರಿಗಳಾದ ಶ್ರೀ ಸುರಾಜಮಾಲರು ತನ್ನ ೩೩ನೇ ವರ್ಷ ಪ್ರಾಯದಲ್ಲಿ ತಾ. ೧೨ನೇ ದಿನ ಕಾಯಿಲೆಯಿಂದ ತೀರಿಕೊಂಡರು

—ತನ್ನ ಹೆಂಡತಿಯ ಮೇಲೆ ಕನ್ನೆಹ್ಯುಮದಕ್ಕಾಗಿ ಬೆನಾರಿಸ್‌ನಲ್ಲಿ ಧಿಗವತ ಎಂಬವನು ಮಾವನನ್ನು ಕೊಂಬುಟಟ್ಟನು. ಪಾಪಿ ಶಿಕ್ಷೆಯಾಗಿದೆ.

"ಮಾತೃಭೂಮಿ ಎಂಬ ಮಲಯಾಳ, ದೈನಂದಿನ ಪತ್ರಿಕೆಯ ಸಂಪಾದಕರಾದ ಮಾ। ಸಿ ಹೆಚ್ ಕುನ್ ಹಿಮ್ಮದ್‌ನವರು ಪ್ರೆಸ್ ಕಾನೂ ನಿನ ಮೇರೆ ೧೯೦೦ ರೂಪಾಯಿ ಠೇವಣಾತಿಯನ್ನು ಕೊಡಬೇಕೆಂದು ಹಾಗೆಯೇ ಆ ಪತ್ರಿಕೆಯನ್ನು ಆಚ್ಚು ಹಾಕುವ ಕೇರಳ ದೇಶದ ಸಾಮ್ರಾಗ್ರಹ ಮುಖಂಡ ರಾದ ಮಾ। ಕೆ ಕೇಳಪ್ಪನವರ ಮೇಲೂ ಅದೇ ಠೇವಣಾತಿಗೆ ಇಪ್ಪರ ಮೇಲೂ ನೋಟೀಸ್ ಜಾರಿ ಆಗಿದೆಯೆಂದು ತಿಳಿಬರುತ್ತದೆ.

ಮೈಸೂರು ವಾರ್ತೆ.

ತಾ ೩೦—೧೧—೩೦ರಲ್ಲಿ ಪ್ರಾತಃಕಾಲ ಸುಮಾರು ೧೧ ಗಂಟೆ ಸಮಯದಲ್ಲಿ ಮೈಸೂರು ಲಕ್ಷ್ಮೀಪುರದಲ್ಲಿ ವಾಸವಾಗಿರುವ ಅರಮನೆ ಕಂಟ್ರಾಕ್ಟರ್ ಮೂಮುಸ ವೆಂಕಟಪ್ಪನವರ ಮನೆಯಲ್ಲಿ ಒಬ್ಬ ಹೊಂಬಾಳೆಯೆಂಬ ಒಕ್ಕಲಿಗರ ಹೆಂಗಸು ಕೆಲಸಕ್ಕೆ ಇದ್ದಳೆಂತೂ, ಅವಳಿಗೆ ಅವರು ಸುಮಾರು ೩೦ ಅಥವಾ ೧೦೦ ರೂಪಾಯಿ ಸಾಲ ಕೊಟ್ಟಿದ್ದ ರೆಂತಲೂ ಸದರಿ ಸಾಲವನ್ನು ಅವಳು ತೀರಿಸಲಿಲ್ಲವೆಂತಲೂ ಅವರ ಮನೆ ಎದುರುಗಡೆ–ತಿಂಳಂತನೇ ನಂಲ್ಲರ ಮನೆಯಲ್ಲಿ ವಾಸವಾಗಿರುವ ಸದರಿ ಹೊಂಬಾಳೆ ಊರುವ್ ಹನ್ನಮ್ಮ ಎಂಬವಳನ್ನು ಬಲತ್ಕಾರ ಮಾಡಿ ಎಳೆದುಕೊಂಡು ಬರುವಂತೆ ಮೂರು ಜನ ಪಠಾಣರನ್ನು ಕಳುಹಿಸಿ ಅವಳ ಮನೆಯಲ್ಲಿ ಯಾರೂ ಇಲ್ಲದ ಕಾಲದಲ್ಲಿ ಈ ಪಠಾಣರು ನುಗ್ಗಿ, ಅವಳ ಮೇಲೆ ಅತ್ಯಾಚಾರವನ್ನು ಸಹ ನಡಿಸಿ ಅವಳನ್ನು ಹೊಡೆದು ಬಡಿದು, ಆ ಕಂಳ್ಳಾಕ್ಕರ ಮನೆಗೆ ದರದರನೆ ಎಳೆದುಕೊಂಡು ಹೋಗುತ್ತಿದ್ದನ್ನು ಪೋಲೀಸರವರು ಮತ್ತು ಇನ್ನು ಇತರ ಜನೇಕರು ನೋಡಿದರೆಂತಲೂ, ಈ ಕ್ರೂರಕೃತ್ಯವನ್ನು ಯಾರೋ ಒಬ್ಬರು ಮೊಳಸ್ಕೆಗೆರು ಸಹ ನೋಡಿದ ರೆಂತಲೂ, ಮತ್ತು ಅವಳನ್ನು ಆ ಕಂಳ್ಳಾಕ್ಕರ ಮನೆಯ ಹುಡಿಗೆ ಸಹ ಎಳೆದುಕೊಂಡು ಹೋಗಿ, ಅವಳನ್ನು ಸದರಿ ಕಂಳ್ಳಾಕ್ಕರ ಹೆಂಡತಿ ಸಹ ಹೊಡೆದರೆಂತಲೂ, ಹೇಳಕೊಳ್ಳುತ್ತಾರೆ ಪೋಲೀಸರವರು ಸದರಿ ಪಠಾಣರನ್ನೂ, ಸದರಿ ಹೆಂಗಸನ್ನು, ಪೋಲೀಸ್ ಸ್ಟೇಷನಿಗೆ ಕರೆದು ಕೊಂಡು ಹೋಗಿ, ನಂತರ ಸದರಿ ಹೆಂಗಸನ್ನು ಆಸ್ಪತ್ರೆಗೆ ತೊಟ್ಟು ಳಗು ಹಿಸಿ, ಅವಳ ಮೈಮೇಲೆ ರಕ್ತಬರುವಂತೆ ಮಾಡಿದ ಗಾಯ. ಪಗೈರೆ ಗಳನ್ನು ಸಹ ಪರೀಕ್ಷೆ ಮಾಡಿ ಸರ್ಟಿಫಿಕೇಟು ಪಡೆಯುವುದಕ್ಕೆ ಕಳುಹಿಸಿ ಅನಂತರ ಸದರಿ ಠೇಣೆಗೆ ಪೋಲೀಸರವರು ತಮ್ಮ ಕೈಲಿಸಾ ತೆಗೆದು ತೊಂಡು ವಿಚಾರಣೆ ಮಾಡುತ್ತಲಿರುತ್ತಿರುವಾಗ ತಿಳಿದು ಬರುತ್ತದೆ.

ಬಂಗಾರಪೇಟೆ ಗವರ್ನಮೆಂಟ್ ಹೈಸ್ಕೂಲಿನಲ್ಲಿ ೧೦೦೦ ಜನರ ಆಸನ ಸಹಿತ ಸಭಾಮಂಟಪ ಗವರ್ನರರು ಶಿಲಾನ್ಯಾಸ ಮಾಡಿ ಯಶಸ್ವಿಗೊಳಿಸಿದರು.

ಬಂಗಾರಪೇಟೆ ಪಟ್ಟಣದಲ್ಲಿರುವ ರಮಣಿ ಶರಣ್ ಸಾರ್ ಎಂಬ ಹೆಸರು ಕನ್ನಡಿಗರಿಗೆ ಹೊಸತೆಯಿರುವಾಗ ಸಾಮಾನ್ಯ ಸ್ಥಿತಿಯಲ್ಲಿ ಬಂದು ಬೆಳ್ಳಾಗಿ ಸೊಂಟದಲ್ಲಿಳಿದ್ದ ಅತ್ಯಲ್ಪವಾದ ಬಾಲಯುಷ್ಯನ್ನೇ ಕವಿದು ಬಿಟ್ಟಿನು ಅವರೊಡನೆ ಕನ್ನಡಿಗರೂ ಕತ್ತಿಯನ್ನು ಬಿಟ್ಟ ಕಾಲಿಗೆ ಬುದ್ಧಿ ಹೇಳ ಹೇಳಿದರಿಬಾಗ ದಮನಿಯನ್ನು ಪೋಲೀಸರು ಹಿಡಿದುಕೊಂಡರು ಕೊನೆಗೆ ಅಚ್ಚರಿಯೆಂಬು ಅವನ ಪ್ರತಿಜ್ಞಾವಿಧಿ

—ವಿದ್ಯಾರ್ಥಿಗಳು ತಮಗೆ ಬಿಡುವಿದ್ದ ವೇಳೆ ಹರಿಜನರಿಗೆ ಪಾಠ ಹೇಳುವುದು ಅಸ್ಪೃಶ್ಯತಾ ನಿವಾರಣಾ ಚಳವಳಿಯಲ್ಲಿ ಸಹಕರಿಸಬಹುದೆಂದು ಗಾಂಧಿಜಿಯವರು ಸಂದೇಶವಿತ್ತಿರುವರು.

ಸಳಲೇಶಪುರದ ವಾರ್ತೆ.

ತಾ ೩೯—೧೧—೩೨ ಕ್ಕಿರಲ್ಲಿ ತೊಸಾಯಿಗಿ ಇಂದಿಗೆ ೧೩ ದಿವಸಗಳ ಮೇಲಾದರೂ ಏನೊಂದು ಚಾರ್ಜು ಶೀಟು ಪಾಲಿಸಲೆಯಾಗಿಲ್ಲ ಪೆರಿದು ತಿಳಿಯಬರುತ್ತದೆ. ಕಾರಣ ಕೆಲಿಗಡಕರ ಪತ್ರೆಯಾಗಲಿಲ್ಲ ಅಧಿಕಾರಿಗಳು ಬಹಳ ಪ್ರಯತ್ನ ಮಾಡುತ್ತಿದ್ದಾರೆ ಪೋಲೀಸ್ ಸುಪರಿಂಟೆಂಡೆಂಟರು ತಾ ೧೩ರಲ್ಲಿ ಪತ್ರ ಬಗ್ಗೆ ಬಿಳ್ಳೇಡಿಗೆ ಹೋಗಿದ್ದು ಪೋಲೂರಿಗೆ ಹೋಗಿರುತ್ತಾರಾಗಿ ತಿಳಿದು ಬರುತ್ತದೆ ಇನ್ನೂ ತಪ್ಪಿ ಯಾವಾಗ ಎಂದು ತಿಳಿಯಬರುವುದಿಲ್ಲ

ಸ್ಟ್ಯಾ ರಾಮೋ ಗೌಡನು ಅರೆ ಜೀವನದಲ್ಲಿದ್ದು ಜಾತಿಯಲ್ಲಿ ಗುಣ ಮುಖನಾಗುತ್ತಿದ್ದಾನಾಗಿ ತಿಳಿಯಬರುತ್ತದೆ ಸಳಲೇಶಪುರದಲ್ಲಿರುವ ಪಾಳೆ ಊರ ಮಹಜೀಯರು ದಂತಿಗೆ ಮಾಡಿ ಸದರಿಯವರಿಗೆ ಸೈಕಿಲ್ ಇಂಜಕ್ಷನ್ ಕೊಡಿಸಿ ಹೋಗಿದರೂ ಬದುಕಬಹುದೇನೆಂದು ಕುತೂಹಲದಲ್ಲಿದ್ದುದು ಸಂತೋಷ ಸಂಗತಿ

ಮೂಡುಗೆರೆ—ಇಲ್ಲಿಯ ಸ್ಥಳೀಯ ಪ್ರಾಮರಿ ಮತ್ತು ಮಿಡ್ಲ್ ಸ್ಕೂಲುಗಳ ವಿದ್ಯಾರ್ಥಿಗಳು ಶಾಲಾ ಇನ್ಸ್‌ಪೆಕ್ಟರರ ಸಮ್ಮುಖದಲ್ಲಿ ತಾ ೧೫ರಲ್ಲಿ (camp fire) ರಾತ್ರಿ ಬೆಂಕಿ ಎದುರು ಆಟ ಪಾಠದ ಉತ್ಸವವನ್ನು ಬಹಳ ಸಾಹಸಕಾಗಿ ಅಡಿ ತೋರಿಸಿರುವರಾಗಿ ತಿಳಿಯಬರುತ್ತದೆ

ಕಡೂರು ತಾಲೂಕು ಸರಹದ್ದಿನ ಸಮ್ಮೇಳನವು ತಾ ೧೧ರಲ್ಲು ಬೀರೂರಿನ ಶ್ರೀ ಮೈಲಾರ ದೇವಸ್ಥಾನದಲ್ಲಿ ಶ್ರೀ ಹೊಸ ಕೊಪ್ಪ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯುತು ಕಡೂರು ವಿಲ್ಲಾಧಿಕಾರಿಗಳಾದ ಶ್ರೀ ಎನ್. ಸುಂದರ ರಾಜಯಂಗಾರರು ದಯಮಾಡಿಸಿದ್ದರು ಮಹಾತ್ಮಾ ಗಾಂಧಿಯವರು ಸಮ್ಮೇಳನಕ್ಕೆ ಜಯವನ್ನು ಕೊಡುವ ಸಂದೇಶವನ್ನು ಪೋಷ್ಟು ಕಾರ್ಡಿನ ಮುಖಾಂತರ ತಳುಹಿಸಿದ್ದಾರಾಗಿ ತಿಳಿದುಬರುತ್ತದೆ.

ಉಜ್ಜಯಿನಿ—ಮಯರ್‌ದಸ್ಥ ಬ್ರಾಹ್ಮಣ ಜಾತಿಯ ಉಜ್ಜಯಮಂದಿರ ರೋಗಿಗೆ ಆಸ್ಪ ಪಾಲಿನ ಸಂಬಂಧ ಶಬ್ದಾಟವಾಗಿ ಶ್ರೀ ಸುಬ್ರಹ್ಮಣ್ಯ ಮತ್ತು ವೆಂಕಟರಾಮಯ್ಯ ಇವರೊಳಗೆ ವ್ಯಾಜ್ಯವಾಗಿ ಮೈಸೂರು ಜಿಲ್ಲಾ ಕೋರ್ಟಿಗೆ ದರಿಗೆ ಹೋಗಿ, ಸಂಬಂಧ ಪಟ್ಟ ಅಧಿಕಾರಿಗಳು ಸ್ವತ್ತುಗಳನ್ನು ಅಮಾನತು ಪಡಿಸಿರುತ್ತಾರಾಗಿಯೂ, ನಂತರ ಆಣ್ಣ ತಮ್ಮಂದಿರೊಳಗೆ ರಾಜಿಯಾಗಿ ಸಂಧಿಸಿ ಇದೇ ತಾ ೧೦ರಲ್ಲು ಮೈಸೂರಲ್ಲಿ ವಿಚಾರಣೆಯಾಗುತ್ತಾವಾಗಿಯೂ ತಿಳಿದು ಬರುತ್ತದೆ

ದಕ್ಷಿಣ ಕನ್ನಡ.

ಮಂಗಳೂರು:—ಘಾರವಾಡದ ಶ್ರೀ ರಾಜಲಕ್ಷ್ಮೀಹಿತಕರು ತಾ ೧೪ನೇ ದಿನ ಕೆನರಾ ಹೈಸ್ಕೂಲಿನಲ್ಲಿ ಇತಿಹಾಸ ಸಂಶೋಧನೆಯ ಕುರಿತು ಹೃದಯಂಗಮವಾಗಿ ಭಾಷಣ ಮಾಡಿದರು

ಶ್ರೀ ಕೆಟಿ ರಾಮಕೃಷ್ಣ ಕಾರಂತ (ವಕೀಲ) ಕೇಪಭಟ್ಟು ಪಟ್ಟಿ ಇವರು ನೆಲ್ಲಿಕಾಯಿ ಹಬ್ಬಿಗಳಲ್ಲಿ ಇದೇ ೨೩ ೨೦೦೯ಲ್ಲಿ ಯೂ, ಶಂಕರನಾರಾಯಣ ಕೊಲ್ಲೂರುಗಳಲ್ಲಿ ಇದೇ ತಾ ೨೫, ೨೬, ೨೭, ೨೮ರಲ್ಲಿ ಮೂಡ ಮೊಕ್ಕಾಂ ಮಾಡಿ ರಿಸಿಟ್ಟ್‌ಮೆಂಟಿನ ಕುರಿತಾಗಿ ರೈತರ ಸ್ಥಿತಿಗತಿಗಳನ್ನು ವಿಚಾರಿಸಿ ಸರಕಾರಕ್ಕೆ ತಿಳುಹಿಸಲಿರುತ್ತಾರೆ

ನಾಳೆ ೩೦ಕ್ಕೆ ಡಿ ಬೋರ್ಡ ಸಭೆಯೊಂದು ಜರಗಲಿರುವುದು ಈಕಡೆ ವರ್ಷದ ಜರಡಿಯು ಸಭೆಯ ಮುಂದೆ ಬರಲಿರುವುದು

ಹರಿಜನೋದ್ಧಾರ ಕಾರ್ಯನಿಮಿತ್ತವಾಗಿ ಇಲ್ಲಿ ರೂಪಕ್ಕೆ ಬಂದ ಒಂದು ಸಮಿತಿಗೆ ಡಾ ವಿಟ್ಠಲ ಶೆಟ್ಟಿ ಅಧ್ಯಕ್ಷರು, ಮಿಸೆಸ್ ಎನ್. ಸುಬ್ಬರಾಯನ್‌ರವರು ಉಪಾಧ್ಯಕ್ಷರು ಶ್ರೀ ಕಲ್ಲೇರಿಕರ್ ರಂಗರಾಯರು ಕಾರ್ಯದರ್ಶಿ. ಶ್ರೀ ಟಿ. ಕೃಷ್ಣರು ಉಪಕಾರ್ಯದರ್ಶಿ ಶ್ರೀ ಎಂ. ಮಾಧವರಾಯರು ಕೋಶಾಧಿಕಾರಿ ಶ್ರೀ ಎಸ್ ಕೃಷ್ಣ ರಾವು ಪ್ರಚಾರಕರು

ಶ್ರೀಮತಿ ಕಸ್ತೂರಿಬಾಯಿ ಗಾಂಧಿ ಮೊದಲಾದವರು ಮಂಗಳ ವಾರ ದಿನ ೧೩-೧೨-೩೨ ರೈಲಿನಲ್ಲಿ ಪ್ರಯಾಣರಿಗೆ ತೆರಳಿರುವರು.

ಪ. ಶ. ಜಿಲ್ಲಾ ಸ್ವದೇಶೀ ಪ್ರಚಾರ ಸಭಾ ಮಂಗಳೂರು—ಇವರು ಶ್ರೀಮತಿ ಕಸ್ತೂರಬಾಯಿ ಗಾಂಧಿ ಮತ್ತು ಶ್ರೀಯುತ ಅಬ್ಬಾಸ್‌ಖಾ ಸೇಠಿಯವರಿಗೆ ಒಂದು ಮಾನಪತ್ರವನ್ನು ಅರ್ಪಿಸಿದರು.

ತಾ ೩—೧೧—೩೨ ಸಮ್ಮ ಪತ್ರಸ್ಪರ್ಧೆಗೆ ಉತ್ತರವಾಗಿ ಎಂಟರತೆ ಮುನಸಿಪಲ್ ಪಬ್ಲಿಕ್ ಲೈಬ್ರರಿಯ ಪತ್ರದ ಮತ್ತು ಉರ್ದು ಪುಸ್ತಕ ಭಂಡಾರಕ್ಕಾಗಿ ತಾ ೧೬-೧೦-೩೨ ತಾರೀಖಿನ ಕೊ ೧೦೦೦ನ್ನು ಸೆಕ್ಷನ್ ಮಾತಿಕಾರಿಸಿದೆಯೆಂದೂ, ಆ ಪುಸ್ತಕಗಳನ್ನು ಬೇಗನೇ ಪಡೆಯುವ ವ್ಯವಸ್ಥೆಯಾಗಲಿದೆಯೆಂದೂ ನಗರ್ಪಾಧ್ಯಕ್ಷರು ಮಿಯರ್‌ಮನೆರು ಸಮಜಾಯಿಷಿ ಇದೇ ತಾ ೭ರಲ್ಲಿ ಬರೆದಿರುತ್ತಾರೆ. (ಸಂ. ಸ್ವ)

ತಿಪ್ಪಟೂರು ವಿಚಾರದಲ್ಲಿ ಅನೇಕ ಸುಧಾರಣೆಗಳನ್ನು ಮಾಡುವುದ ಕ್ಕಾಗಿ ಇದೇ ತಾ. ೨೪ನೇ ದಿನ ೯ ಘಂಟೆಗೆ ಎಲ್ಲಾ ಬೋರ್ಡು ಪ್ರೈಮರಿ ಸ್ಕೂಲ್ ಮತ್ತು ಮಿಡ್ಲ್ ಸ್ಕೂಲ್‌ಗಳ ಉಪಾಧ್ಯಾಯರ ಪರಿಷತ್ತು ಒಂದನ್ನು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಜರಗಿಸಲಾಗುವುದು. ಹೆಡ್‌ಮಾಸ್ಟರರು, ಗ್ರೇಜುಯೇಟ್ ಅಸಿಸ್ಟಾಂಟ್ಸ್, ಸ್ಕೌಟ್ ಮಾಸ್ಟರರು ಸೆಕೆಂಡರಿ ಗ್ರೇಡ್ ಉಪಾಧ್ಯಾಯರ ಪ್ರತಿನಿಧಿಗಳು, ಪಂಡಿತರು, ಡ್ರಿಲ್ ಮಾಸ್ಟರರು ಇವಕ್ಕೆ ಚಿಟ್ಟ್ಪ್ರಸಭೇಗಾಗಿ ವಿನಂತಿಯಿದೆಯೆಂದೂ, ಹೆಡ್ ಮಾಸ್ಟರರು ತಮ್ಮ ಶಾಲೆಗಳ ೫ ವರ್ಷಗಳ ಹಿಂದಿನ ಎಲ್ಲಾ ಶಾಲಾನು ಭವಗಳನ್ನು ತೊಡಲು ಸಿದ್ಧರಾಗಿರಬೇಕೆಂದೂ ಡಿಸ್ಟ್ರಿಕ್ಟ್ ಬೋರ್ಡು ಸೆಕ್ರೆಟರಿಯವರು ಬರೆಯುತ್ತಾರೆ

ಉಡುಪಿ—ಉಪಾಧ್ಯಾಯರ ಸಭೆಯೊಂದು ತಾ ೧೦ರಲ್ಲಿ ಜರಗಿತು ಅಧ್ಯಾಪಕರೊಬ್ಬರ ಕಥಾ ವಿಷಯ ಅತ್ಯುತ್ತಮವಾಗಿತ್ತೆಂದು ಕೇಳುತ್ತೇವೆ

ಸಮೀಪದ ಪೆರಂಬಳ್ಳಿಯ ಒಬ್ಬ ನಾದವ ತರುಣನಿಗೆ ಆದೇ ಊರಿನ ನಂಠರಿ ಯುವಕನೊಬ್ಬನು ಕತ್ತಿಯಿಂದ ಕಡಿದು, ಈಗ, ತಾನೆ ಬ್ಯಂದು ಕಲೆಕ್ಟರರ ಸಮ್ಮುಖದಲ್ಲಿ ಹಾಜರಾಗಿರುವನೆಂದೂ, ಜಖಂ ಹೊಂದಿದವ ರನ್ನು ಸರಕಾರಿ ವೈದ್ಯಾಲಯಕ್ಕೆ ತರಲಿಲ್ಲವೆಂದೂ ವದಂತಿಯಿದೆ ಕಾರಣವೇನೆಂಬು ಯಾರಿಗೂ ತಿಳಿಯದಂತೆ ಮರಾಟನು ಶಿಟ್ಟ ಮನೆಗೆ ಬಂದು ಎಂದಿನಂತೆ ಮಾತುಕತೆ ನಡೆಸುತ್ತಿರುವಾಗಲೇ ಸಮಯ ನೋಡಿ ಕಡಿದಿರುವನಂತೆ

ಈ ತಾಲೂಕಿನ ವಿದ್ಯಾರ್ಥಿಗಳಿಗಾಗಿ ವರ್ಷದಿನಿಪ ಪಂದ್ಯಾವಳಿಯು (ಸ್ಪೋರ್ಟ್ಸ್) ತಾ ೧೫ರಲ್ಲಿ ಜರಗಿತು ಸ್ಥಳೀಯ ಹೈಸ್ಕೂಲು ವಿದ್ಯಾರ್ಥಿಗಳೂ, ತಾಲೂಕಿನ ಕೆಲವೇ ಹಾಮಂ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳೂ ಇದರಲ್ಲಿ ಭಾಗವಾಗಿದ್ದರು ಹೈಸ್ಕೂಲ್‌ನ ಮಕ್ಕಳೊಂದಿಗೆ ಹಳ್ಳಿ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧಿಸುವುದೆಂದರೆನೇ ಬಲು ವಿಚಿತ್ರ! ಗೆಲ್ಲುವುದು ಇನ್ನೂ ಆಶ್ಚರ್ಯವು! ಈ ಪಂದ್ಯಾವಳಿಕ್ಕೆ ಪ್ರಾಥಮಿಕ ಶಾಲಾ ಬಾಲಕರೂ ಒಬ್ಬ ಮಾಘರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳೂ ಬರುವಂತೆ ಆಮಿತವಿದ್ದಲ್ಲವೇ, ಆದ ಕ್ಕಾಗಿ ಪ್ರತ್ಯೇಕ ಸ್ಪರ್ಧೆಗಳನ್ನು ಸಂಬಂಧಪಟ್ಟವರು ಏರ್ಪಡಿಸುವುದು ನ್ಯಾಯವಲ್ಲವೇ? ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪರೀಕ್ಷಾವಿಧಿಯನ್ನು ರೂಪಿಸಬಾರದೇಕೆ? ಮುಂದಿನ ಪಂದ್ಯಾವಳಿಯಲ್ಲಿ ಇಂದಿನ ಕುಂದು ಕೊರತೆಗಳನ್ನು ಹೋಗಲಾಡಿಸಿಕೊಳ್ಳುವೆವೆಂದು ಎರಿಚ್ಚಿಸಬಹುದೇ?

ತಾ ೧೧ನೇಗೆ ಶ್ರೀ ಬಿ ಸದಾಶಿವ ಹೆಗ್ಗಡೆಯವರ ಅಧ್ಯಕ್ಷತೆ ಯಲ್ಲಿ ಅಸ್ಪೃಶ್ಯತಾ ನಿವಾರಣೆಯ ಮಹಾ ಸಭೆಯು ನೇರಿತ್ತು. ಇಂದು ಕುದ್ರಾಸಿನಲ್ಲಿ ಆಯೋಜಿಸಲ್ಪಟ್ಟಿರುವ ಶ್ರೀ ಬಿ. ನೀತಾರಾಮರಾಯರು ಸಂದರ್ಭೋಚಿತವಾದ ಭಾಷಣ ಮಾಡಿದರು

ತಾ ೧೪ನೇ ಬುಧವಾರ ಸಾಯಂಕಾಲ ೪ ಘಂಟೆಗೆ ಜುಬಿಲಿ ಯೂನಿಯನ್ ಕ್ಲಬ್ಬಿನ ವಜ್ರೋತ್ಸವಕ್ಕೆ ಅಸ್ಪೃಶ್ಯತಾ ನಿವಾರಣೆ ಸಭೆಯ ನೇತೃತ್ವದಲ್ಲಿ ಮತ್ತು ಶ್ರೀ ಎಂ ವಿಟ್ಠಲ ಕಾಮತ್ ವಕೀಲ ಇವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಅಸ್ಪೃಶ್ಯತಾ ನಿವಾರಣಾ ಸಮಿತಿಯ ಪ್ರಧಾನ ಮಂತ್ರಿಗಳಾಗಿರುವ ಮತ್ತು ಸರ್ವೆಂಟ್ ಆಫ್ ಇಂಡಿಯಾದಿನ ಪ್ರಮುಖ ಕಾರ್ಯದರ್ಶಿಗಳಾಗಿರುವ ಶ್ರೀ ಎ ವಿ ಥಕ್ಕೂರ್ ಇವರು ಅಸ್ಪೃಶ್ಯತಾ ನಿವಾರಣೆಯ ವಿಷಯ ಭಾಷಣ ಮಾಡಿದರು

ಮೂಲ್ಕಿ—ಪ್ರಖ್ಯಾತಪಟ್ಟ ಅರ್ಥವಾರಿಗಳ ಹಾಗೂ ಪಡಶಾಲೆ ಪುದ್ದಣ್ಣಯವರ ಕೂಟದಿಂದ ಪುಂಲ್ಕಿ ಕದವಿನ ಬಳಿ (ಶಾಂಭವಿ ತೋಟ) ದಲ್ಲಿ ತಾ ೧೫—೧೨—೩೨ರಿಕ್ಕೆ ನೂತನವಾಗಿ ನಿರ್ಮಿಸಲ್ಪಟ್ಟ ಸಭಾಮಂಟಪದಲ್ಲಿ ಬೆಳಿಗ್ಗೆ ೯ ಘಂಟೆಗೆ ಸರಿಯಾಗಿ ಎಲ್ಲರಿಗೂ ಸ್ವಾಗತ ಪ್ರಸಂಗ—ಕರ್ಣ ಪರ್ವ ಭಂಗವತರು—ಯಕ್ಷಗಾನ ರತ್ನ ಬಲಿಪರು ಮೃದಂಗ—ಕೆಮ್ಮಣ್ಣು ನಾರಾಣಪ್ಪ ಅರ್ಥದಾರಿಗಳು —ಶ್ರೀಗಳಿಂದ ಕೆ ಪಿ ವೆಂಕಪ್ಪಶೆಟ್ಟಿ ಸುಬ್ರಾಯಾ ಜಾತಿಗಳು, ಶಂಕರನಾರಾಯಣ ಶಾಸ್ತ್ರಿಗಳು ಬಡಕಬೈಲು ಪರಮೇಶ್ವರಯ್ಯ, ನಾರಾಯಣಶೆಟ್ಟಿಯವರೇ ಮೊದಲಾದವರು.

ಸುರತಕಲ್—ಇಲ್ಲಿಯ "ಇಂಡ್ಯ ವಿದ್ಯಾಯಿನೀ ಶಾಲೆ ಯಲ್ಲಿ ಕಳೆದ ಒಂದು ವರುಷದಿಂದ ರಾತ್ರಿ ಶಾಲೆಯಲ್ಲಿ ಕಲಿಯುತ್ತಿದ್ದ, ೧೪ ಮಂದಿ, ಲೋವರ್ ಗ್ರೇಡ್ ಟ್ರೈನ್ಡ್ ಆದ ಉಪಾಧ್ಯಾಯರಿಲ್ಲವಿಗೂ ಈ ರೀತಿಯಿನ ಪಿ ಇನ್ಸ್‌ಪೆಕ್ಟರರಿಂದ ತಾ ೧೫ ಮೆ ಯರ್ ಭಟ್ಟಿಯವ ರಿಂದ ಕಳೆದ ವರುಷದ ಡಿಸೆಂಬರ್ ೧೬ರಲ್ಲು ಜರಿಗಿಸಲ್ಪಟ್ಟ ಪರೀಕ್ಷೆಯಲ್ಲಿ, ಹಯರ್ ಎಲಿಮೆಂಟರೀ (ಎಂಟನೆ ದರ್ಜೀಯ) ಸರ್ಟಿಫಿಕೇಟು ದೊರೆಯು ತೊಲುದು ಸಂತೋಷವೇ ಅಲ್ಲದೆ, ಇದೇ ಶಾಲೆಯ ಕರಗತಿಯಲ್ಲಿ ಓದುತ್ತಿದ್ದ ೩೧ ಮಂದಿ ವಿದ್ಯಾರ್ಥಿಗಳಲ್ಲಿ ಈ ಕೆಳಗಿನವರಿಗೆ ಸರ್ಟಿ ಫಿಕೇಟು ದೊರೆತಿರುತ್ತದೆ

೧ ಟಿ. ಕೇಶವ ಭಟ್ಟಿ (ಗುಡಿ), ೨ ಕೆ ಕೊರಗ, ೩ ಪಿ ಸುಬ್ರಾಯ, ೪ ಯಸ್. ವೆಂಕಟರಾವ್, ೫ ಯಸ್. ಆನಂದ ರಾವ್, ೬ ಯಸ್. ಶ್ರೀನಿವಾಸರಾವ್; ೭ ಯಸ್. ವಿಠಲರಾಮ, ೮ ಕೆ ಯಸ್ ಮುಯ್ಯ, ೯ ಯಸ್. ಸೋಮಸುಂದರ, ೧೦ ಕೆ. ಸದಾನಂದ ೧೧ ಪಿ. ಲಕ್ಷ್ಮಿನಾರಾಯಣ ರಾವ್, ೧೨ ಸಿ ರಾಮರಾವ್, ೧೩ ಸಿ. ಪಂಡಿತ, ೧೪ ಯಸ್. ಕೃಷ್ಣಯ್ಯ, ೧೫ ಕೆ ರಾಮರಾವ್, ೧೬ ಕೆ. ತಿಮಪ್ಪ, ೧೭ ಯೂ. ಹೆ. ಬೇರೋಸ್, ೧೮ ಯಚ್ ವೀರೇಂದ್ರ, ೧೯ ಯಚ್ ಮಾಧವ ಭಟ್ ಇಂಕಂ ವಿರಹಿ ಶಾಲೆಗಳ ಫಲ ಶಾಂಪವು ಉತ್ಸಾಹಪೂರ್ಣವಾಗಿದೆ.

ಫರಂಗಿಪೇಟೆ—ಶ್ರೀ ರಾಮಾ ಹಾಯರ್ ಎ. ಶಾಲೆಯ ವಿದ್ಯಾರ್ಥಿಗಳ ತರ್ಕ ಸಭೆಯು ಇವೇ ತಿಂಗಳ ತಾ ೧೦ರಲ್ಲು ಕಾಸರಕೋಡು ಬೋರ್ಡು ಹೈಸ್ಕೂಲಿನ ಅಧ್ಯಾಪಕರಾದ ಜನಾಬ್ ಎ ಬಿ ಹಮ್ಮಬ್ಬ ಸಾಹೇಬರವರ ಅಧ್ಯಕ್ಷತೆಯಲ್ಲಿ ಜರಗಿತು.

ಅಜೆಕಾರು:—ಇದೇ ತಕೆದ ತಾ ೧೧—೧೨—೩೨ಕ್ಕಿರಲ್ಲಿ ಮದ್ರಾಸು ಕೌನ್ಸಿಲಿನಲ್ಲಿ ಪಾಸಾದ ಮರುಮಕ್ಕತ್ತಾಯ ಮಸೂದೆಯ ವಿಷಯ ಆಲೋಚಿಸುವರೆ ಆಳಿಯಸಂತಾನ ಕಟ್ಟುನ್ನಾಚರಿಸಿಕೊಂಡು ಬರುವ ಸಮಸ್ತ ಜನರ ಒಂದು ಮಹಾಸಭೆಯು ಕಾರ್ಕಳ ತಾಲೂಕು ಬೋರ್ಡು ಮೆಂಬರರಾದ ಶ್ರೀ ಹೆಬ್ರಿ ಭುಜಂಗ ಬಲ್ಲಾಳರವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಥಳೀಕ ಬೋರ್ಡು ಶಾಲೆಯು ಕಟ್ಟೋಣದ ವಿಸ್ತರಿಸುವಿಕೆಯನ್ನು ಶೀಘ್ರದಲ್ಲಿಯೇ ಕೈಕೊಳ್ಳುವರೆಂಬು ವಾರ್ತೆಯಿಂ ತುಂಬಾ ಸಂತೋಷ ಕರ

ಕಾರ್ಕಳ—ಕಾರ್ಕಳ ತಾಲೂಕಿನ ಅಳಿಯ ಸಂತಾನ ಕಟ್ಟುಳೆಯನ್ನು ಆಚರಿಸುವ ಪೈಕಿ ೧೯ ಜನ ಪ್ರಮುಖರು ಸ್ಟ್ಯಾ ಹಾಕಿ ತಾ ೨೪—೧೧ ತಾರೀಖಿನಲ್ಲಿ ಈಗ ಪಾಸಾಗಿರುವ ಮದ್ರಾಸ ಕೌನ್ಸಿಲ್ಲಿನ ಮರುಮಕ್ಕತ್ತಾಯ ಮಸೂದೆಯ ಕುರಿತು ತಾಲೂಕಿನ ಜನರ ಅಭಿಪ್ರಾಯವನ್ನು ಪಡೆಯುವರೆ ತಾ ೪—೧೨—೩೨ಕ್ಕಿರಲ್ಲಿ ಒಂದು ಮಹಾಸಭೆ ಕರೆಯ ನೋಟೀಸುಗಳನ್ನು ಹಂಚಿದ ಮೇರೆಗೆ ಕಾರ್ಕಳ ತಾಲೂಕಿನ ಅಳಿಯಕಟ್ಟಿನ್ನಾಚರಿಸುವವರ ಮಹಾ ಸಭೆಯೊಂದು ಇದದ ತಾ ೪—೧೨—೩೨ನೇ ಆದಿತ್ಯವಾರ ಕಾರ್ಕಳದಲ್ಲಿ ಬಂಟರು ಯಾನೇ ನಾಡವರ ಹೊಸ್ಮೆಲು ಕಟ್ಟೋಣದಲ್ಲಿ ಕೂಡಿ ಬಂತು

ಕಾಸರಗೋಡು—ಕಾರಡ್ಕ ಗ್ರಾಮದ ನಿವಾಸಿಯಾದ ರಾಮನ್ ನಾಯರ್ ಎಂಬವರು ಈ ಪೊದಲ ಕಾಸರಗೋಡಿನಿಂದ ಸ್ವಯಂಸೇವಕರನ್ನು ಕಾರಡ್ಕಕ್ಕೆ ಕೊಂಡು ಹೋಗಿ ೯ ದಿನ ರಿಜರ್ವ ಕಾವಿನ ಜಂಗ್ಲಿ ಕಾರ್ಯವನ್ನೆಲ್ಲಂಪಿಸಿದ್ದಾರೆಂದು ಅವರ ಮೇಲೆ ಹಾಕಿದ ಚಾರ್ಜನ್ನು ತಾ ೬ ೧೨ ತಾರೀಖಿನಿಂದ ೧೬—೧೨ ತಾರೀಖಿಗೆ ಮುಂದಿರಿಸಿರುವರು ಮುಂದಿನ ವೇಳೆಗೆ ೬ ಘಂಟೆಗೆ ಬಿಡುವ ಸುಳ್ಯ ಬಸ್ಸಿನಲ್ಲಿ ಕೂಡಿತಿಂದ ನಂತ್ರ ಸ್ವಯಂಸೇವಕರನ್ನೂ ರಾಮನ್ನಾಯರನ್ನೂ ಎರಿಸ್ಟ್ ಮಾಡಿ ಸ್ವಯಂಸೇವಕರನ್ನು ಸಂಯಂಕಾಲ ಬಿಡುಗಡೆ ಮಾಡಿ ರಾಮನ್ನಾಯರನ್ನು ರಿಮಾಂಡಿನಲ್ಲಿ ಇಟ್ಟಿರ ವಂ ಸದರಿ ಬಸ್ಸಿನಲ್ಲಿ ಕೊಂಗ್ರೆಸ್ ಸಂಬಂಧವ ವ ಕೆಲವು ಕರಪತ್ರಗಳಿದ್ದುದರಿಂದ ಅದು ರಾಮನ್ನಾಯರದೆಂದು ಅವರ ಮನೆ ಜಪ್ತಿ ಮಾಡಲು, ಯಾವ ಕರದ ಕುರುಹುಗಳು ಕಾಣಲಿಲ್ಲವಾಗಿ ತಿಳಿದು ಬಂದಿರುತ್ತದೆ ಸದರಿ ರಾಮನ್ನಾಯರನ್ನು ತಾ ೧೩ ೧೨ ತಾರೀಖಿನಲ್ಲಿ ಮೇಜಿಸ್ಟ್ರೇಟರ ಮುಂದೆ ಹಾಜರು ಪಡಿಸಿ ಅವರ ಮುಕದ್ದಮೆಯನ್ನು ತಾರೀಕ್ಕೆ ಮುಂದಿರಿಸಿರುತ್ತದೆ ರಾಮನ್ನಾಯರು ರಿಮಾಂಡಿನಲ್ಲೇ ಇರುತ್ತಾರೆ. ಜಾಮೀನಿನ ಮೇಲೆ ಬಿಡಲಿಲ್ಲ

ತಾ ೧೨ ಮತ್ತು ೧೩ರಲ್ಲು ಕಾಸ್ತೂರಿಬಾಯಿ ಗಾಂಧಿಯವರು ಮಂಗಳೂರಿಗೆ ಹೋಗುವಾಗಲೂ ಮಂಗಳೂರಿನಿಂದ ಬರುವಾಗಲೂ ಕಾಸರಗೋಡು ಸ್ಟೇಷನಲ್ಲಿ ಹೆಂಗಸರು, ಗಂಡಸರು ತಂಡ ತಂಡವಾಗಿ ಕೂಡಿದ್ದರು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 609/24 R E P 44/1932

೧ ನೆತಾಲಿಯಾ ಮನೇಜಸ್, ೨ ಜೋನ್ ಶಿಲ್ವೆಸ್ಟರ್ ಮನೇಜಸ್ ೩ ಫ್ಲೋರಾ ಮನೇಜಸ್ ಯಾನೆ ಸಿಂಟೋ ೪ ಗ್ರೆಗೊರಿ ಮನೇಜಸ್ ೫ ಸಿಸಿಲ್ ಮನೇಜಸ್ ೬ ಮರಿಯಂಣ ಮನೇಜಸ್, ೭ ಇಸ್ಟೇಯಾನ ಮನೇಜಸ್—ಅರ್ಜದಾರರು,

ಮತ್ತು

೧ ರಾಮಪ್ಪ ೨ ಯಸ್ ಇಮ್ಮಾನುವೇಲ್ ಮನೇಜಸ್—ವಿರುದ್ಧ ಇವರೊಳಗೆ

ಮೃತ ಇಗ್ನೇಶಿಯಸ್ ಮನೇಜಸರು ವಾದಿಯಾಗಿ ೧೫ನೇ ವಿರುದ್ಧ ಮೇರೆ ಪಡದ ಉಡುಪಿ ಡಿ. ಮ. ಕೋರ್ಟು O. S No 609/24 ನೇ ರಿಕ್ತಿ ಮೇಲೆ ಸದರಿ ಮೃತನ ವಾರಸುದಾರರಾಗಿ ಅರ್ಜದಾರರು ನಡೆಸಿದ ಮೇಲ್ಕಂಡ R E P 44/32ನೇ ಅಮ್ಲ ಜ್ಞಾಪನೆಯಲ್ಲಿ ಮೃತನ ವಾರಿಸುದಾರ ೨ನೇ ವಿರುದ್ಧಿಯು ಅರ್ಜದಾರನಾಗಿ ಅರ್ಜಿಯಲ್ಲಿ ಸೇರಬೆಯಾಗುವುದರಿಂದ, ಆತಗೆ ೩ನೇ ವಿರುದ್ಧಿಯಾಗಿ ಕಕ್ಷಿಯಲ್ಲಿ ಸೂಚಿಸಿ ಯಿದೆ ಆ ಕಾರಣ ಏನಾದ್ರು ಆಕ್ಷೇಪಣೆಯಿದ್ದಲ್ಲಿ ತಾ ೧೯—೧೨—೩೨ನೇ ಬೆಳಿಗ್ಗೆ ೧೦ ಗಂಟೆಗೆ ಈ

ಹರಿಜನರಿಗೆ
ಗಾಂಧಿಯವರ ಹಿತೋಪದೇಶ.

ಹರಿಜನರು ಎಂಜಲು ತಿನ್ನಬಾರದು.

(೧) ಪ್ರಕೃತ ಸ್ಥಿತಿಯಲ್ಲಿ ಹರಿಜನರ ಮುಖಂಡರು ತಮ್ಮ ನೆಂಟರಲ್ಲಿ ಸಾಧ್ಯವಾದ ಪುಟ್ಟಿಗೆ ಸುಧಾರಣೆಗಳನ್ನು ಮಾಡುವುದು ಕರ್ತವ್ಯವು. ಹರಿಜನರಿಗೆ ಶುಭ್ರ ಮತ್ತು ಪರಿಶುದ್ಧವಾಗಿರುವುದನ್ನು ಆರೋಗ್ಯ ಶಾಸ್ತ್ರಾನುಸಾರವಾಗಿ ಬೋಧಿಸಬೇಕು.

(೨) ಚರ್ಮವನ್ನು ಹದಗೊಳಿಸುವುದು, ಪಾಯಿಖಾನೆಯನ್ನು ಶುಚಿಗೊಳಿಸುವುದು ಮೊದಲಾದ ಕೆಲಸಗಳನ್ನು ಮಾಡಬೇಕಾಗಿರುವವರಿಗೆ ಆ ಕೆಲಸಗಳನ್ನು ಸರಿಯಾಗಿ ಹೇಳಿಕೊಡಬೇಕು.

(೩) ಸತ್ತ ಜಂತುಗಳ ಮಾಂಸವನ್ನು ದನಗಳ ಮಾಂಸವನ್ನೂ ತಿನ್ನಬಾರದೆಂದು ಒತ್ತಿ ಒತ್ತಿ ಹೇಳಬೇಕು. ಮಾಂಸವನ್ನು ತಿನ್ನದಿರುವುದು ಉತ್ತಮ ಪದ್ಧತಿ, ಆದರೆ ಅದನ್ನು ಬಿಡಲಿಚ್ಛವಿಲ್ಲದವರು ಕನಿಷ್ಠ ಪಕ್ಷ ಸತ್ತ ಜಂತುಗಳ ಮತ್ತು ಎತ್ತು ಹಸುಗಳ ಮಾಂಸವನ್ನು ಸಂಪೂರ್ಣವಾಗಿ ಬಿಡಬೇಕು.

(೪) ಹೆಂಡ ಸರಾಯಿಗಳನ್ನು ಕುಡಿಯದ ಹಾಗೆ ಬೋಧಿಸಬೇಕು.

(೫) ಶಾಲೆಗಳಿಗೆ ಹೋಗತಕ್ಕ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವಂತೆ ಬೋಧಿಸಬೇಕು. ರಾತ್ರಿ ಶಾಲೆಗೆ ಹೋಗುವವರಿದ್ದರೆ ದೊಡ್ಡವರು ರಾತ್ರಿವೇಳೆ ಶಾಲೆಗಳಿಗೆ ಹೋಗುವಂತೆ ಹೇಳಬೇಕು.

(೬) ಹರಿಜನರಲ್ಲಿ ಹೊಲೆಯ, ಮಾದಿಗ, ಸಲಾಸಿ ಮೊದಲಾದವರು ಒಬ್ಬರನ್ನೊಬ್ಬರು ನೀಚವಾಗಿ ಕಾಣದೆ ಸಮಾನ ಸ್ಥಂದರಂತೆ ಕಾಣಬೇಕು. ಅಂದರೆ ಹರಿಜನರಲ್ಲಿ ಉಚ್ಚನೀಚ ಭೇದವಿರಲೇ ಕೂಡದು.

ಪ್ರತಿಯೊಬ್ಬ ಸ್ತ್ರೀಪುರುಷ ಬಾಲಕಾದಿಯಾಗಿ ಸರ್ವರೂ ಪ್ರತಿನಿತ್ಯದಲ್ಲೂ, ಒಂದು ವೇಳೆಯಾದರೂ ತಪ್ಪದೆ ಸ್ನಾನ ಮಾಡಬೇಕು. ಯಾವಾಗಲೂ ಶುದ್ಧ ಬಟ್ಟೆಗಳನ್ನು ಧರಿಸಬೇಕು. ಹರಿಜನರು ವಾಸಮಾಡುವ ಸ್ಥಳಗಳಲ್ಲಿ ಸ್ನಾನಕ್ಕಾಗಿ ತಕ್ಕ ಅನುಕೂಲವಿರುವುದಿಲ್ಲ. ಇತರ ವರ್ಣಗಳವರು ಉಪಯೋಗಿಸುವ ಕೆರೆ ಬಾವಿಗಳನ್ನು ಹರಿಜನರು ಉಪಯೋಗಿಸಲು ಇತರರೊಬ್ಬರೂ ಬಿಡುವುದಿಲ್ಲ. ಹರಿಜನರಲ್ಲಿ ಬಹಳ ಮಂದಿಗಳು ಬಡವರಾಗಿರುವುದರಿಂದ ಹೆಚ್ಚು ಬಟ್ಟೆ ಬರೆಗಳನ್ನು ಕೊಂಡುಕೊಳ್ಳಲಾರರು. ಒಂದು ದೊಡ್ಡ ತಂಡಿಗೆಯಷ್ಟು ಶುದ್ಧ ನೀರಿದ್ದರೆ ಮೈಯನ್ನು ಸ್ವಚ್ಛವಾಗಿ ತೊಳೆದುಕೊಳ್ಳಬಹುದು. ಒಂದು ಸಣ್ಣ ಬಟ್ಟೆಯನ್ನು ಆ ನೀರಿನಲ್ಲಿ ಅದ್ದಿ, ಶರೀರವನ್ನೆಲ್ಲ ಚೆನ್ನಾಗಿ ತಿಕ್ಕಿ ಆನಂತರ ಇನ್ನೊಂದು ಬಟ್ಟೆಯಿಂದ ಒರಸಿಕೊಳ್ಳಬಹುದು. ಪ್ರತಿನಿತ್ಯದಲ್ಲೂ ಈ ಪ್ರಕಾರವಾಗಿ ಸ್ನಾನ ಮಾಡುವವರಿಗಿ ಬಟ್ಟೆಗಳು ಹೆಚ್ಚಾಗಿಲ್ಲದಿದ್ದರೂ ಒಂದೇ ಬಟ್ಟೆಯನ್ನು ನೀರಿನಲ್ಲದ್ದಿ ಅದರಿಂದ ತಲೆ ಮೈಗಳನ್ನು ತಿಕ್ಕಿ ಆ ಮೇಲೆ ಅದನ್ನು ಹಿಂಡಿ ಅದರಿಂದಲೇ ಮೈಯನ್ನೊರಸಿಕೊಳ್ಳುವುದು ನಮ್ಮ ದೇಶದಲ್ಲಿ ಅನೇಕ ಮಂದಿ ಈ ರೀತಿ ತುಂಡು ಬಟ್ಟೆಗಳಿಂದ ಮೈಯನ್ನೊರಸಿಕೊಳ್ಳುವರು. ಈ ವಿಚಾರವು ಹೊಸದೇನೂ ಅಲ್ಲದಿದ್ದರೂ ಪ್ರಚಾರಕರು ತಿಳುವಳಿಕೆಗಾಗಿ ಇಲ್ಲಿ ಕೊಟ್ಟಿದೆ. ಪಾಠ ಶುದ್ಧತೆಗೆ ಮುಖ್ಯವಾದ ಈ ಸ್ವಲ್ಪ ವಿಚಾರಗಳನ್ನು ದೊಡ್ಡ ಪರೀಕ್ಷೆಗಳನ್ನು ಕೊಟ್ಟಿರುವ ಇತರರೂ ಗ್ರಹಿಸಿರುವುದಿಲ್ಲ.

ಹೊಸ ರೀತಿಯ ಮೇಲೆ ಪಾಯಿಖಾನೆಯನ್ನು ಶುದ್ಧೀಕರಿಸಲು ಬುದ್ಧಿಹೀನರೂ ಸ್ವಾರ್ಥಪರರೂ ಆದ ಸವರ್ಣದವರು ಬಹಳ ಅಧ್ಯಂತರಪಡಿಸುವರು. ಈಗಿನ ದಿನಗಳಲ್ಲಿ ಪಾಯಿಖಾನೆಯನ್ನು ಶುದ್ಧೀಕರಿಸಲು ಬಹಳ ಅಸಹ್ಯವಾಗಿದೆ. ಇದಕ್ಕೆ ಅಸ್ಪೃಶ್ಯತೆಯೇ ಮೂಲಕಾರಣ. ಪಾಯಿಖಾನೆಗಳು ಕತ್ತಲೆಯಾಗಿರುತ್ತವೆ. ಅವುಗಳೊಳಗೆ ಗಾಳಿ ಬರುವುದಿಲ್ಲ. ಅದುದರಿಂದ ಅವುಗಳನ್ನು ಶುಚಿಯಾಗಿ ಗೃಡಿಸಲೆತ್ನವಿಲ್ಲ. ಇಂತಹ ಪಾಯಿಖಾನೆಗಳಿಗೆ ಹೋಗುವುದೆಂದರೆ ನರಕಕ್ಕೆ ಹೊಕ್ಕಂತಾಗುತ್ತದೆ. ಇದಕ್ಕೆ ನಮ್ಮವರ ಮೂಢ ನಂಬಿಕೆಯೇ ಕಾರಣವಾಗಿರುತ್ತದೆ. ತೋಟಗಳು ತಮ್ಮ ಪಾಯಿಖಾನೆಯನ್ನು ಸಂಪೂರ್ಣವಾಗಿ ತೊಳೆಯುವುದಕ್ಕೆ ನಮ್ಮಲ್ಲಿಯ ಅಂಧಶ್ರದ್ಧಾಳುಗಳೊಪ್ಪುವುದಿಲ್ಲ. ಪಾಯಿಖಾನೆಗಳನ್ನು ತೊಳೆದ ಕೂಡಲೇ ಪ್ರತಿನಿತ್ಯವೂ ಸ್ನಾನಮಾಡಬೇಕು. ಅವರ ಈಗಿನ ಕ್ರಮಗಳು ಅಷ್ಟು ಒಳ್ಳೆಯದಲ್ಲ. ಕಕ್ಕುಸುಗಳನ್ನು ಜಾಡಿಸುವ ಕೆಲಸದಲ್ಲಿ ನನಗೆ ಚೆನ್ನಾಗಿ ಪ್ರವೀಣತೆಯಿರುವುದರಿಂದ ಖರ್ಚು ಯಿಲ್ಲದೆ ಬಹಳ ಸುಲಭ ರೀತಿಯಿಂದ ಶುಚಿ ಮಾಡುವುದನ್ನು ಬೇಕಾದವರಿಗೆ ನಾನು ಹೇಳಿ ಕೊಡಬಲ್ಲೆ. ನನ್ನ ಕ್ರಮವು ಸುಲಭವಾಗಿರುವುದಲ್ಲದೆ ಬಹಳ ಉತ್ತಮವೂ ಆಗಿದೆ. ಕಕ್ಕುಸು ಗುಡಿಸುವಾಗ ಪ್ರತ್ಯೇಕ ಬಟ್ಟೆಯನ್ನು ಧರಿಸಬೇಕು. ನಮ್ಮ ದೇಶದಲ್ಲಿ ಚರ್ಮವನ್ನು ಹದಮಾಡುವವರಿಗೆ ಆ ಕೆಲಸವನ್ನೂ ಜೊತೆಯಾಗಿ ಮಾಡುವ ರೀತಿಗಳು ತಿಳಿಯದು. ಸತ್ತ ಜಂತುಗಳ ಚರ್ಮವನ್ನು ಜೊತೆಯಿಟ್ಟು ಮಾಡಿ ಹದ ಮಾಡುವ ಕಲಸವು ಉತ್ತಮ ರೀತಿಯಿಂದ ಪರದೇಶಗಳಲ್ಲಿ ನಡೆಯುತ್ತದೆ. ಸತ್ತ ಜಂತುಗಳ ಚರ್ಮವನ್ನು ಸುಲಿದು ತೊಳೆದು ಶುದ್ಧವಾಗಿ ಮಾಡುವವರೆ ವೃತ್ತಿಯು ಬಹಳ ಉತ್ತಮವಾಗಿರುವುದಾದರೂ, ನಮ್ಮ ದೇಶದಲ್ಲಿ ಸವರ್ಣದವರು ಈ ಕೆಲಸವನ್ನು ಮಾಡುವವರನ್ನು ಬಹಳ ನೀಚವಾಗಿ ಕಂಡು ಅವರನ್ನು ದೂರೀಕರಿಸುತ್ತಾರ ಈ ಕಾರಣದಿಂದಾಗಿ ಈ ವೃತ್ತಿಯವರಿಗೆ ಹೊಸ ಪದ್ಧತಿಯನ್ನು ತಿಳಿಯಲವಕಾಶವಿಲ್ಲವಾಗಿದೆ. ಅವರು ಹೆಮ್ಮೆಪಡುವ ವಿಚಾರಗಳು ಉತ್ಕೃಷ್ಟವಾಗಿರದಿರುವುದರಿಂದ ಕೋಟ್ಯಾಂತರ ರೂಪಾಯಿಗಳ ನಷ್ಟವು ನಮ್ಮ ದೇಶಕ್ಕಾಗುತ್ತಿದೆ. ಶ್ರೀ ಮಧುಸೂದನ ದಾಸರಂಬವರು ಈ ಕೆಲಸದಲ್ಲಿ ಬಹಳ ಪ್ರವೀಣರಿವರು. ಸವರ್ಣದವರು ದುರಭಿಮಾನದಿಂದಲೂ ಮೂಢ ನಂಬಿಕೆಯಿಂದಲೂ ಈ ಮುಖ್ಯತಮವಾದ ವ್ಯಾಪಾರವನ್ನು ಇವರ ವ್ಯಾಪಾರಿಗಾರರನ್ನೂ ಖಂಡಿಸುತ್ತಿರುವುದರಿಂದ ಪ್ರತಿ ವರ್ಷದಲ್ಲೂ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿರುವುದೆಂದು ಲಕ್ಷುಮಾಡಲಾಗಿದೆ. ಈ ಕೆಲಸವನ್ನು ನವೀನ ರೀತಿಯಿಂದ ಮಾಡಲಿಕ್ಕೆ ಸಾಧ್ಯವಾದ ಮಷ್ಟಿಗ ಹರಿಜನರಿಗೆ ಬೋಧಿಸಬೇಕು.

ಸವರ್ಣದವರಲ್ಲಿ ಒಬಳೆ ಮಂದಿ ತಾವು ತಿಂದು ಮಿಕ್ಕುಳಿದ ಎಂಜಲನ್ನು ದೂರವಾಗಿ ನಿಂತು ಬೀದಿಯಲ್ಲಿನ ತಿಂಡಿಯವರ ಕೈಗೆ ಬಿಸಾಡುತ್ತಾರ ಇದು ಅತ್ಯಂತ ನೀಚವೂ ಕ್ರೂರವೂ ಆದ ಆಚರಣೆ. ಅವರು ತಿಂದು ಮಿಕ್ಕುಳಿದ ಎಂಜಲನ್ನು ಬಿಸಾಡುವುದರಿಂದ ಅಂತಹ ಎಂಜಲನ್ನು ಹರಿಜನರು ಎಷ್ಟು ಮಾತ್ರಕ್ಕೂ ತಿನ್ನಬಾರದು. ನಮ್ಮ ದೇಶದ ಬಡತನವು ಅಂತಹುದು. ದಾರಿದ್ರ್ಯವೆ ಹೆಚ್ಚಾಗಿರುವುದರಿಂದಲೇ ಸವರ್ಣದವರ ಬೀದಿಯೆಂಜಲನ್ನು ತಿರುವೆಯವರು ಅಸಹ್ಯವಿಲ್ಲದೆ ತಿನ್ನಲಾಯಿತು. ಐಶ್ವರ್ಯವಂತರೂ, ಮಧ್ಯಮ ತ್ರಗತಿಯವರೂ ರುಚಿರುಚಿಕರವಾದ ಪದಾರ್ಥಗಳನ್ನು ತಿಂದು ಮಿಕ್ಕುಳಿದುದನ್ನು ಬಿಸಾಡುವುದರಿಂದ ಬಡವರು ತಮ್ಮ ನಾಲಿಗೆಯ ರುಚಿಗಾಗಿ ಅದನ್ನು ತಿನ್ನುವರು.

ಚರ್ಮವನ್ನು ಹದಗೊಳಿಸುವವರು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಕೂಡದು. ನಾನು ಶಾಕಹಾರಿಯಾಗಿರುವುದರಿಂದ ಯಾವ ಮಾಂಸವನ್ನೂ ತಿನ್ನಕೂಡದೆಂದೇ ನನ್ನ ಅಭಿಮತವು. ವಿನಿಲ್ಲದಿದ್ದರೂ ಸತ್ತ ವ್ರಾಣಿಗಳ ಮಾಂಸ ಹಾರವನ್ನೂ ಹಸು, ಎತ್ತುಗಳ ಮಾಂಸವನ್ನೂ ಸಂಪೂರ್ಣವಾಗಿ ವರ್ಜಿಸಬೇಕು. ಮೃತಜಂತುಗಳ ಮಾಂಸಹಾರವು ಬಹಳ ಅನಾರೋಗ್ಯಕರವು. ಸತ್ತ ಮೃಗಗಳನ್ನು ದೂರಕ್ಕೆ ನಾಗಿ ಸಲು ಗ್ರಾಮವಾಸಿಗಳು ಹರಿಜನರಿಗೆ ಕೂಲಿಕೊಡುವುದಿಲ್ಲ. ಅದನ್ನು ಅವರು ತಿನ್ನಬೇಕೆನ್ನುವರು. ಅವರು ಹಾಗ ತಿನ್ನದಿದ್ದರೆ ಪ್ರತ್ಯೇಕವಾಗಿ ಕೂಲಿ ಕೊಡಬೇಕಾಗುತ್ತದೆಂದು ನೆಪವಿ ಅವರು ಹಾಗೆ ನಿರ್ಬಂಧಪಡಿಸುವರಲ್ಲದೆ ತಿನ್ನಬಹುದೆಂದೂ ಸಹ ಹೇಳುವರೆಂದು ಡಾ। ಅಂಬೇಡ್ಕರರು ನನ್ನ ಕೂಡ ಹೇಳಿರುವರು. ಯಾವುದು ಹೇಗಿದ್ದರೂ ಹರಿಜನರು ಅವರ ಈ ಆಚಾರವನ್ನು ಖಂಡಿತವಾಗಿ ಬಿಡಲೇಬೇಕು. ಹಾಗೆ ಮಾಡಿದರೆ ಹರಿಜನರ ವಿಚಾರವಾಗಿ ಗೌರವಬುದ್ಧಿ ಹುಟ್ಟುವುದು. ಆಗ ಅಸ್ಪೃಶ್ಯತಾ ನಿವಾರಣೆಯ ಚಳವಳಿಯು ಬಹಳ ಸುಗಮವಾಗಿ ಆಗುವುದು.

ಓದಿದ್ದು, ನೋಡಿದ್ದು, ಕೇಳಿದ್ದು.

'ರಾಷ್ಟ್ರಬಂಧು'ವಿನ 'ಸುಧಾರಕ' 'ಪುರಾಣಿಕ'ರಿಗೆ ಅಸ್ಪೃಶ್ಯತಾ ನಿವಾರಣಾ ಕಾರ್ಯವು ನಡೆಯುತ್ತಿರುವುದನ್ನು ನೋಡಿ ಎದೆ ಕರಗುತ್ತಿದೆ. ಇವರ ಕಣ್ಣಾಮುಚ್ಚಾಯ ಲೇಖನಗಳಿಂದಾಗಿ ಅಸ್ಪೃಶ್ಯತಾ ನಿವಾರಣೆಯಾಗುವುದಿಲ್ಲವೆಂದು ಇವರು ತಿಳಿಯುವರೇ?

† † † † † †

'ಪುರಾಣಿಕ'ರು 'ವಿಠಿ ಟೊಪ್ಪಿ'ಯವರಿಗೆ ಸುಳ್ಳಧದಲ್ಲಿ ಹೆದರುವುದು ಅಗತ್ಯವಿಲ್ಲ. ವಿಠಿ ಟೊಪ್ಪಿಯವರೇ ಪುರಾಣಿಕರನ್ನು ಕತ್ತಲದಲ್ಲಿ ಹೆದರಿಸಿ ಬಿಟ್ಟಿರೆ ಸಾಕಷ್ಟೆ! ಪುರಾಣಿಕರ 'ಗ್ರಹಚಾರ' ಆಗ ಬಲ್ಲಿಯದಾದೀತು!

† † † † † †

ಮಹಾತ್ಮರು ಮೊನ್ನೆ ಮಾಡಿದಂತೆ ಇನ್ನೊಮ್ಮೆ "ಇಂತಿಷ್ಟು ದಿನದೊಳಗೆ ಎಲ್ಲರೂ ಉಡಲಿಕ್ಕೆ ಒಂದು ಮುಂಡನ್ನೂ ತೊಡಕ್ಕೆ ಒಂದು ತುಂಡನ್ನೂ ಉಳಿಯೋಗಿ ದಿದ್ದರೆ, (೧) ಪ್ರತಿಯೊಬ್ಬ ಶ್ರೀಮಂತನು ತನ್ನ ಆಸ್ತಿಯಲ್ಲಿ ಎಂಟನೆ ಒಂದಂಶವನ್ನಾದರೂ ಪಂಚಮರ ಪೋಷಣಗ ತೆಗೆದಿಡಿದ್ದಿರ, (೨) ಹಲವು ಹೆಣ್ಣುಮಕ್ಕಳ್ಳೆದ್ದವರು ಒಬ್ಬಳನ್ನಾದರೂ ಪಂಚಮ ತರುಣನಿಗಿ ಧಾರೆಯೆರೆಯುವೆನೆಂದು ಪ್ರತಿಜ್ಞೆಮಾಡಿದ್ದಿರ, (೩) ದಿನಕ್ಕೆ ಒಂದೂವರೆ ಆಣೆಗಿಂತ ಹೆಚ್ಚು ಕ್ರಯದ ಆಹಾರವನ್ನ ತಿನ್ನುವುದಿಲ್ಲವೆಂದು ಪ್ರತಿಜ್ಞೆಮಾಡಿದಿದ್ದರೆ, (೪) ನಾನು ದೀರ್ಘವಧಿ ಉಪವಾಸವನ್ನು ಕೈಕೊಳ್ಳುವೆನು' ಎಂತ ಪ್ರ ಟಿಸಿದರೆ, ನಮ್ಮಲ್ಲಿ ಎಷ್ಟು ಮಂದಿ ಮಹಾತ್ಮರಲ್ಲಿ ಸಹಾನುಭೂತಿ ತೋರಿಸುವರೆಂದು ಈಗ ಹೇಳಲು ಸಾಧ್ಯವಿಲ್ಲ' ಎಂದು 'ಸುಧಾರ'ರ ಮರೆಯ ರಂಗಿನ ಮಾತು. ಇವರು ಸುಧಾರಕರೇ! ಸುಧಾರಣಾ ಶತ್ರುಗಳೋ ತಿಳಿಯದಲ್ಲ!

† † † † † †

ಉಡುಪಿಯ ಶ್ರೀಕೃಷ್ಣ ದೇವಾಲಯದ ಬಾಗಿಲನ್ನು ಹರಿಜನರಿಗಾಗಿ ತೆರೆಯುವ ಸಾಧನೆಯು ನಡಯಲಿದೆಯಂತೆ— ಶ್ರೀ ಪಣಿಯಾಡಿಯವರು ಜಯದ ಶಿಖರವನ್ನು ದೂರದಿಂದಲೇ ಕಾಣುತ್ತಿರುತ್ತಾರಂತೆ ಉಡುಪಿಯ ದೇವಸ್ಥಾನದ ಬಾಗಿಲು ಅಗಲವಾದರ ಕತ್ತಲೆಯಂತಿರುವ ಸುಧಾರಕರ ಮನೋ ಮಂದಿರದ ಬಾಗಿಲು ತೆರೆಯಲ್ಪಡದಿರದ

† † † † † †

ತಾ ೧೫ನೇ ದಿನ ಮೈದೀನಿನಲ್ಲಿ ಮಹಾಜನ ಸಭೆಯು ನಡಯುತ್ತಿದ್ದ ವೇಳೆಯಲ್ಲಿ ಕಲವು ಅಂಧಶ್ರದ್ಧಾಳು (ಪುರಾಣಿಕರೋ ಸುಧಾರಕರೋ ತಿಳಿಯದು) ಅಸ್ಪೃಶ್ಯರ ಬಳಿಯಲ್ಲೇ ಕುಳಿತು ನಾನು ನೋಡಿದ್ದೆ— ಸಭಾ ವಿಸರ್ಜನೆಯಾಗಿ ಮನೆಗೆ ಹಿಂದಿರುಗುವಾಗ ಇವರು ಮೈಪಾನ್ ವೈರಾಗ್ಯವು ಹೋಗಿ "ಇದು ಎಲ್ಲಿ ಸಾಧ್ಯ?' ಎಂದು ಹೇಳಿದುದೂ ನಾನು ಕೇಳಿದ್ದೆ. ಇಂತಹವರಿದ್ದುದರಿಂದಲೇ ನಮ್ಮ ಜಿಲ್ಲೆಯು ಕುಂಭಕರ್ಣ ನಂತಾಗಿದೆ

† † † † † †

ಶ್ರೀಮತಿ ಊರ್ಮಿಳಾ ದೇವಿಯವರು ಪುರಾಣಿಕರ ತಲೆ ಬಗ್ಗಿಹೋಗುವಂತಹ ಒಂದೆರಡು ಪ್ರಶ್ನೆಗಳನ್ನಿಟ್ಟಿರಷ್ಟೆ! ಹರಿಜನೋದ್ಧಾರವಾಗುವುದೇ ಇಲ್ಲವೆಂದು ತಿಳಿದ ಈ ಅಂಧ ಶ್ರದ್ಧಾಳುಗಳು ಆ ಎದ್ದು ಏಕೆ ಉತ್ತರ ಕೊಡಲಿಲ್ಲ?

† † † † † †

ಹರಿಜನೋದ್ಧಾರದ ಧಾರ್ಮಿಕ ತತ್ವದಲ್ಲಿ ರಾಜಕೀಯ ತತ್ವವೂ ಅಡಗಿರುವುದು ಸುಧಾರಕ ಪುರಾಣಿಕರಿಗೆ ತಿಳಿದಿರುವುದೇ? ಹಾಗಾಗಿರ ಅವರು ರಾಷ್ಟ್ರಕ್ಕೆ ವಿರುದ್ಧವಾದ ದ್ವಿಮುಖ ಲೇಖನಗಳಿಂದ 'ರಾಷ್ಟ್ರ ಬಂಧು'ವನ್ನು ಕಲುಷಿತಗೊಳಿಸದಿರಲಿ!

† † † † † †

ಉಡುಪಿಯ ದೇವಸ್ಥಾನವು ಹರಿಜನರಿಗೆ ತೆರೆಯಲ್ಪಡುವ ಅದೊಂದು ಕಾಲವು ಮುಂದಿದೆ. ಎಷ್ಟು ಜನ ಪುರಾಣಿಕರು ಅದಕ್ಕೆ ವಿರುದ್ಧರಾಗಿ ಸತ್ಯಾಗ್ರಹವನ್ನಾಚರಿಸಲಿದ್ದಾರೆ ನೋಡ ಬಹುದು!

† † † † † †

ಇವರ ಕಠಿಣ ಸತ್ಯಾಗ್ರಹದ ಫಲವಾಗಿ ಒಮ್ಮೆ ಪಶ್ಚಿಮಕ್ಕೆ ತಿರುಗಿ ನಿಂತ ಶ್ರೀಕೃಷ್ಣನು ಪೂರ್ವಕ್ಕೆ ಮುಖ ತಿರುಗಿಸುವನೋ ಏನೋ! ಸನಾತನ ದೇವತೆಗಳೇ, ನೀವೇನೆನ್ನುವಿರಿ?

ದಿವ್ಯ ದೃಷ್ಟಿ.

ಮಂಗಳೂರಿಗೆ ಕಸ್ತೂರಿ ಬಾಯಿಯವರ ಆಗಮನ!

ಸಾವಿರಗಟ್ಟಲೆ ಜನರ ಸ್ವಾಗತ! ಶ್ರೀಮತಿ ಊರ್ಮಿಳಾದೇವಿಯವರ ಪೌರುಷಪೂರ್ವಕ ಭಾಷಣ!

"ಉಡುಪಿಯ ದೇವಸ್ಥಾನಗಳ ಬಾಗಿಲನ್ನು ತೆರೆಯಿರಿ!"

ಇದೇ ತಾ. ೧೮ನೇ ಆದಿತ್ಯವಾರವು ಅಖಿಲ ಭಾರತ ಅಸ್ಪೃಶ್ಯತಾ ನಿವಾರಣೆಯ ದಿನ!

ಇದೇ ತಾ. ೧೩ನೇ ದಿನ ಸಂಜೆಯ ಮೈಲಿಗೆ ಮಹಾತ್ಮಾಗಾಂಧಿಯವರ ಪತ್ನಿ ಶ್ರೀಮತಿ ಕಸ್ತೂರಿಬಾಯಿಯವರೂ, ದಿವಂಗತ ಲೋಕಮಾನ್ಯ ಪಿ. ಆರ್. ದಾಸರ ಸಹೋದರಿ ಶ್ರೀಮತಿ ಊರ್ಮಿಳಾದೇವಿಯವರೂ ಮುಲಬಾಗಿಲಿನಿಂದ ಮಂಗಳೂರಿಗೆ ಬಂದರು. ರೈಲ್ವೇ ಸ್ಟೇಷನ್ನಲ್ಲಿ ೪ ಘಂಟೆಯ ಸಮಯದಲ್ಲೇ ಸಾವಿರಾರು ಜನರು ಅವರನ್ನು ಸಂದರ್ಶಿಸಲು ಆಗಮಿಸಿದ್ದರು. ರೈಲಿನಿಂದಿಳಿದ ಅತಿಥಿಗಳು ಮೋಟಾರಿನಲ್ಲಿ ಕುಳಿತು ದೇಶಭಕ್ತ ಕಾರ್ನಾಡು ಸದಾಶಿವರಾಯರೊಡನೆ ಫಲಹಾರಕ್ಕಾಗಿ ತೆರಳಿದರು. ಸಂಜೆ ೫-೩೦ಕ್ಕೆ ಮೈದಾನದಲ್ಲಿ ಮಹಾಸಭೆಯು ಜರಗಿತು. ಕೊಂಗ್ರೆಸು ಸಂಸ್ಥೆಯು ನಿಷೇಧಿಸಲ್ಪಟ್ಟ ನಂತರ ಇದು ಮೈದಾನದಲ್ಲಿ ಜರಗಿದ ಮೊದಲನೆಯ ಪ್ರಚಂಡ ಸಭೆ. ಸ್ತ್ರೀ ಪುರುಷ ಅಬಾಲವೃದ್ಧರು ಹರಿಜನತಂದೆಯೆನ್ನಿಸಿಕೊಂಡ ಗಾಂಧಿಯನ್ನು ಕುರಿತು ಪರಸ್ಪರ ಸ್ಪೃತ್ತಿಯನ್ನು ತೋರಿಸಿದುದು ಸಭೆಯ ವೈಶಿಷ್ಟ್ಯ. ಅಧ್ಯಕ್ಷರಾದ ಶ್ರೀ. ಎ. ಬಿ. ಶೆಟ್ಟರ ಅನುಮೋದನೆಯಾದ ನಂತರ ಶ್ರೀಮತಿ ಕಸ್ತೂರಿ ಬಾಯಿಯವರು ಹಿಂದೀಯಲ್ಲಿ ಭಾಷಣ ಮಾಡಿದರು. ಅದರ ಕನ್ನಡಾನುವಾದವನ್ನು ಶ್ರೀ ಬಿ. ಲಕ್ಷ್ಮಣರೀವ ವಿದ್ಯಾರ್ಥಿಯವರು ಜನರಿಗೆ ತಿಳುಹಿಸಿದರು. ತಾನು ನಾನಾ ದೇಶಗಳನ್ನು ಸುತ್ತಿದ್ದೆ; ಅಸ್ಪೃಶ್ಯತಾ ನಿವಾರಣೆಯು ಶೀಘ್ರದಲ್ಲೇ ನಿವಾರಣೆಯಾಗಲಿದೆ. ನೊಡಲು ನಮ್ಮ ಹೃದಯವಂದಿರವು ಹರಿಜನರಿಗಾಗಿ ತೆರೆಯಲ್ಪಡದೇಕು. ಇಲ್ಲಿ ಒಂದು ದೇವಸ್ಥಾನವಾದರೂ ಹರಿಜನರಿಗಾಗಿ ತೆರೆಯಲ್ಪಡದಿರುವುದು ವಿಶೇಷ. ತನಗೆ ಮಾನಪತ್ರಗಳನ್ನರ್ಪಿಸಿದವರು ಈ ವಿಚಾರವನ್ನು ಸಾಧನೆಗೈದು ಯಶಸ್ವಿಗಳಾಗಲೆಂ ಎಂದು ಮೊದಲಾಗಿ ಮಾತೆಯವರು ಹೇಳಿದರು. ಪುಣ್ಯಹಣ್ಣು ವೃದ್ಧೆ—ಇವರ ನುಡಿಗಳನ್ನು ಕೇಳಿ ಸಭೆಯು ಪರಮಾನಂದಗೊಂಡಿತು. ಆ ಮೇಲೆ ಶ್ರೀಮತಿ ಊರ್ಮಿಳಾ ದೇವಿಯವರ ಭಾಷಣವು ಇಂಗ್ಲೀಷಿನಲ್ಲಾಯಿತು. ಇವರ ಭಾಷಣವು ಪೌಂಸ ಪೂರ್ವಕವಾಗಿತ್ತು. ಇವರ ವಾಗ್ಝರಿಯು ಪುರುಷರನ್ನು ಜರಿಯುವಂತಿತ್ತು. ಶ್ರೀಮತಿಯವರ ಭಾಷಣವನ್ನು ಶ್ರೀಯುತ ರಂಗರಾವ್ ತಲ್ಲೇಂಕೇರರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದರು. "ಅಸ್ಪೃಶ್ಯತೆ ಯೆಂಬುದು ರಾಷ್ಟ್ರಸಂಘಟನೆಗೆ ಮಹಾ ವಿಘ್ನೋಪದ್ರವವಾದುದು. ಹರ್ತಾಳವನ್ನಾಚರಿಸಲು ಅಂಗಡಿಗಾರರಿಗೆ ಹೇಳಿದರೆ ಮೊದಲು ಯಾರು ಬಾಗಿಲು ಹಾಕುತ್ತಾರೆಂದು ನೀರೀಕ್ಷಿಸುವ ಅವಮಾನವು ನಮ್ಮ ಜನರಲ್ಲಿದೆ. ಒಬ್ಬನು ಮುಚ್ಚಿದ್ದೇ ಆದರೆ—ಒಡನೆ ಎಲ್ಲರೂ ಅವನನ್ನು ಅನುಸರಿಸುವರು. ಅದೇ ಸಾಮ್ಯವು ದೇವಸ್ಥಾನ ಪ್ರವೇಶ ಸಮಸ್ಯೆಗೂ ಅನ್ವಯಿಸುತ್ತದೆ. ಈಗ ಜನರು ತಮ್ಮ ಖ್ಯಾತಿಯಲ್ಲಿ ಯಾವ ದೇವಸ್ಥಾನವು ಅಸ್ಪೃಶ್ಯರಿಗಾಗಿ ಮೊದಲು ತೆರೆದಿಡಲ್ಪಡುತ್ತದೆ ಎಂದು ನೀರೀಕ್ಷಿಸುತ್ತಿದ್ದಾರೆ. ಒಂದು ತೆರೆಯಲ್ಪಟ್ಟರೆ ಮತ್ತೆ ಎಲ್ಲವೂ ತೆರೆಯಲ್ಪಡುವುದು ಸಂಭವನೀಯವೂ ಸ್ವಭಾವಿಕವೂ ಆಗಿದೆ. ಮಂಗಳೂರಿನವರು ಅಸ್ಪೃಶ್ಯತೆಗಾಗಿ ಏನು ಮಾಡಿರುವರು? ಲೋಕಪೂಜ್ಯ ಮಹಾತ್ಮಾ ಗಾಂಧಿಯವರು ಗುರುವಯ್ಯೂರು ಸತ್ಯಾಗ್ರಹದಲ್ಲಿ ವಿಜಯಗಳಾಗುವಂತೆ ಸಮಸ್ತರೂ ಸಹಕರಿಸಬೇಕಾಗಿದೆ. ನಮ್ಮ ಹೃದಯ ವಂದಿರವು ಹರಿಜನರಿಗಾಗಿ ತೆರೆಯಲ್ಪಟ್ಟಿರೆ ಗುರುವಯ್ಯೂರಿನ ಮಂದಿರ ಬಾಗಿಲು ಅವರಿಗಾಗಿ ತೆರೆಯಲ್ಪಡುವುದು ವಿಚಿತ್ರ ಸಂಗತಿಯೇ? ಎಂದು ಮುಂತಾಗಿ ಶ್ರೀಮತಿಯವರು ಉಪದೇಶಿಸಿದರು. ತನ್ನದೆ ಸ್ತ್ರೀಯರು ತಿಳಿಯರು ಸಭೆಯ ಮಧ್ಯದಿಂದಿದ್ದು ಹೋದುದು ಒಂದು ವಿಚಿತ್ರ ಸಂಗತಿ. ಅಖಿಲ ಭಾರತ ಅಸ್ಪೃಶ್ಯತಾ ನಿವಾರಣಾ ಸಂಘದ ಸೆಕ್ರೆಟರಿಯವರಾದ ಶ್ರೀ ಅಮೃತಲಾಲ ವಿ. ಥಾಕ್ಕರರು ಭಾಷಣ ಮಾಡಿದರು. ಅವರ ಭಾಷಣವನ್ನು ಶ್ರೀ. ತಲ್ಲೇಕೇರ್ ರಂಗರಾಯರು ತಿಳಿಗನ್ನಡದಲ್ಲಿ ತರ್ಜುಮೆ ಮಾಡಿ ಹೇಳಿದರು. ಅಮೃತಲಾಲರು ಅಸ್ಪೃಶ್ಯತಾ ನಿವಾರಣೆಯ ಹಾದಿಯಲ್ಲಿ ತನ್ನ ೨೦—೨೫ ವರ್ಷಗಳ ಅನುಭವವನ್ನು ಹೇಳಿದರು. ಒರಿಸ್ಸಾದಲ್ಲಿನ ಮಧುಸೂದನರೆಂಬ ಪ್ರಜ್ಞಾವಿಗಳ ನ್ನೊಮ್ಮೆ ತಾನು ಕಂಡು ಮಾತನಾಡಿದಾಗ ಅವರು ಅಸ್ಪೃಶ್ಯತಾ ನಿವಾರಣೆಯ ಕುರಿತಾಗಿ ಪಟ್ಟು ಸಂದೇಶ, ತಾನು ಮುಂಬಾಯಿಯಲ್ಲಿ ಶಾಲಾ ವಿದ್ಯಾರ್ಥಿಯಾಗಿದ್ದಾಗ ಹರಿಜನರ ಒಂದು ಓಣಿಯಲ್ಲಿ ನಡೆದುಹೋದು ದಕ್ಕಾಗಿ ಶಾಕ ಹಿಂದೂಗಳು ತನ್ನನ್ನು ಅಪಹಾಸ್ಯ-ನಿಂದೆಗೊಳಪಡಿಸಿದ ವಿಚಿತ್ರ ಘಟನೆ ಮೊದಲಾದುವುಗಳನ್ನು ನಿವೇದಿಸಿ ಹೇಳಿದರು. ಮುಂದು ವರ್ಗುತ್ತಾ "ಇದು ಶ್ರೀಕೃಷ್ಣನ ಮಹಿಮೆಗೊಳಗಾದ ಉಡುಪಿಗೆ ಸಲಿದ ಪ್ರಸಿದ್ಧ ಊರು. ಶ್ರೀಕೃಷ್ಣನಿಗೆ ಹರಿಜನರೆಂದರೆ ದೂರದವರಲ್ಲ. ಹರಿಜನರ ಪ್ರವೇಶಕ್ಕಾಗಿ ಇಲ್ಲಿಯವರು ಆದಷ್ಟು ಬೇಗನೇ ತಮ್ಮ ದೇವಸ್ಥಾನಗಳ ಬಾಗಿಲನ್ನು ತೆರೆಯಬೇಕು. ಹರಿಜನರೆಲ್ಲಾ ಸ್ಪೃಶ್ಯಾಸ್ಪೃಶ್ಯತೆಯು ಛಿದ್ರವಾದೊಡನೆ ಅವರು ನಿಮ್ಮ ಸಾಥಿಗಳಾಗಿ ನಾವು ಉಪಯೋಗಿಸದೆ ದೇವಳಾಯಗಳ ಬಾಗಿಲುಗಳನ್ನು ಹರಿಜನರಿಗಾಗಿ ತೆರೆದಿಡಲೇ ದೇಳು. ಕೆ. ರಂಗರಾಯರು ಅಂದು ಮ್ಯಾಡಿದ ಸಾಹಸವು ಇಂದು ಫಲಪ್ರದವಾಗುತ್ತಲಿದೆ. ರಂಗರಾಯರ ಚರಿತ್ರೆಯು ನನ್ನನ್ನು ಅತ್ಯಂತ ಬೆರಗುಗೊಳಿಸಿದೆ. ಕೋಚಕ್ರಿಯರಂತಹ ಮಹಾತ್ಮಾ ಜೀಯವರು ಗುರುವಯ್ಯೂರು ದೇವಸ್ಥಾನ ಹರ್ತಾಳದಲ್ಲಿ ಜಯಶೀಲ ರಾಗುವಂತೆ ಸಮಸ್ತರೂ ಸಹಕರಿಸಬೇಕೆಂದು ಮುಂತಾಗಿ ಬಹಳ ಸ್ವಷ್ಟ ರೀತಿಯಿಂದ ಹೇಳಿದರು. ಅಧ್ಯಕ್ಷರ ಚುಟುಕು ಅಭಿವಂದನೆಯು ನಡೆದ ಮೇಲೆ ಹರಿಜನರ ಭಜನೆಯೂ ನಡೆಯಿತು. ಈ ಸಭೆಯಲ್ಲಿ ಸಬ ಇನ್ಸಪೆಕ್ಟರ್ ಆನಂದರಾಯರೂ ಪಟ್ಟಣದ ಪ್ರಮುಖ ಮುಂದಾಳುಗಳೂ ಇದ್ದರು. ಇದೇ ಸ್ವಾಗತ ಸಮಾರಂಭದ ಸಮಯದಲ್ಲಿ "ಗಾಂಧಿಕೀ ಜೈ!" ಮೊದಲಾದ ವಿಶೇಷ ಜಯಘೋಷಗಳನ್ನು ಏಟ್ಟೆಂದು ಎಕ್ಕೆದೆ ಜನಸ್ತೋಮವು ಬಾರಮುಟ್ಟ ಅಜರಿಸಿದುದು ಉತ್ತಮ ಧೃಷ್ಟೆಯ ಚಿಹ್ನೆಯಾಗಿತ್ತು. ಸಮಾರಾ ಘಂಟೆ ೭-೩೦ಕ್ಕೆ ಸಭಾ ವಿಸರ್ಜನೆಯಾಯಿತು.

ಅಸ್ಪೃಶ್ಯತಾ ನಿವಾರಣೆ ದಿನ.
